ಶನಿವಾರ, ಜನವರಿ 31, 2026 | ₹ 7.00
prajavani.net prajavani
www.prajavani.net

ದೇಗುಲಕ್ಕೆ ಭೇಟಿ
ಭಾರತ ಟಿ20 ಕ್ರಿಕೆಟ್ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರು ಶುಕ್ರವಾರ ತಿರುವನಂತಪುರದ ಅನಂತಪದ್ಮನಾಭ ದೇಗುಲಕ್ಕೆ ಭೇಟಿ ನೀಡಿದರು



ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ನೃತ್ಯ ಲಾಲಿತ್ಯ
ಬೆಂಗಳೂರಿನಲ್ಲಿ ಸಪ್ತಸ್ವರ ಆರ್ಟ್ಸ್ ಅಂಡ್ ಕ್ರಿಯೇಷನ್ಸ್ ನೃತ್ಯ ಸಂಸ್ಥೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ನೃತ್ಯ ಪ್ರದರ್ಶನ ನೀಡಿದರು


Video shot at site
Scan to chat
Scan for floor plans
FUTURE IS ONE
ನೋಟವನ್ನು ಬದಲಾಯಿಸಿ.
ನವ ನವೀನ ಡ್ಯೂಪ್ಲೆಕ್ಸ್ ಗಳ
18 ಅಡಿ ಎತ್ತರದ ಸೀಲಿಂಗ್ ಗಳ
ಭವ್ಯತೆಯನ್ನು ಕಣ್ತುಂಬಿಕೊಳ್ಳಿ
ಈ ಪ್ರಶಸ್ತಿ ಪುರಸ್ಕೃತ ಡ್ಯೂಪ್ಲೆಕ್ಸ್‌ಗಳನ್ನು ತಮ್ಮದಾಗಿಸಿಕೊಳ್ಳಿ
ಫೇಸ್- 2ರ ದರ ಹೆಚ್ಚುವಿಕೆಯ ಮುನ್ನ
ಅತ್ಯಧಿಕ ಬಾಡಿಗೆ
• ಮುಂಬರುವ ಇನ್ಫೋಸಿಸ್ ಕ್ಯಾಂಪಸ್ ಪಕ್ಕ
• ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಿಂದ ನಡಿಗೆ ದೂರ (50 acre operational campus)
• ಮುಂಬರುವ ನ್ಯೂ ಹಾರಿಜನ್ ವಿಶ್ವವಿದ್ಯಾಲಯಕ್ಕೆ ಕೂಗಳತೆ ದೂರ
ಅದ್ಭುತ ಜಾಗ
• ಎಲ್ಲಾ ಪ್ರಮುಖ ಅಂತಾರಾಷ್ಟ್ರೀಯ ಶಾಲೆಗಳಿಗೆ ಹತ್ತಿರ
• ಯೋಜಿತ ಸ್ವಿಫ್ಟ್ ಸಿಟಿಗೆ ಹತ್ತಿರ (15 ನಿಮಿಷ)
• ಪ್ರಮುಖ ಎಂಎನ್‌ಸಿಗಳಿಗೆ ಹತ್ತಿರ
AIIKYA VILLAGE
SARJAPUR
ಫೇಸ್-1 :
ಇನ್ನು ಕೆಲವೇ ಯುನಿಟ್ ಗಳು ಮಾತ್ರ ಬಾಕಿ
ಫೇಸ್-2 :
ಮೇ 2026ಕ್ಕೆ Launch
ಪ್ರಶಸ್ತಿ ಪುರಸ್ಕೃತ ಡೂಪ್ಲೆಕ್ಸ್‌ಗಳು- INTERIORS INCLUDED
2.5 BHK ರೂ.1.33 ಕೋಟಿ 1586 ಚ. ಅಡಿ
3.5 BHK ರೂ.1.51 ಕೋಟಿ 1731-1907 ಚ. ಅಡಿ
5.5 BHK ರೂ.2.34 ಕೋಟಿ 2807 ಚ. ಅಡಿ
4-way convertible ಮನೆಗಳು
18+ ಪ್ರಮುಖ ಸೌಲಭ್ಯಗಳು
EV ರೆಡಿ ಪಾರ್ಕಿಂಗ್
ಅಲೆಕ್ಸಾ ಸ್ಮಾರ್ಟ್ ಹೋಮ್
18 ಅಡಿ double height ಸೀಲಿಂಗ್ಸ್
ಹೈಡ್ರೋಪೋನಿಕ್ ಗ್ರೀನ್ಸ್
741513 1234
aiikyavillage.com
RERA No.: PRM/KA/RERA/1251/446/PR/221123/006419
A new era of design, smart & convertible homes built for the future.

prajavani.net prajavani
ಶನಿವಾರ, ಜನವರಿ 31, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 31 | ಪುಟ 20
www.prajavani.net
ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಚರಕಪ್ರೀತಿ...

ಕರ್ನಾಟಕ ಸರ್ವೋದಯ ಮಂಡಲ ವತಿಯಿಂದ ಕಲಬುರಗಿಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಪಾದಯಾತ್ರೆಯಲ್ಲಿ ಚರಕ ಹಿಡಿದು ಪಾಲ್ಗೊಂಡಿದ್ದ ಬಾಲಕ ಕಂಡಿದ್ದು ಹೀಗೆ



ಸೆನ್ಸೆಕ್ಸ್ 82,269 | ನಿಫ್ಟಿ 25,320 | $/₹ 91.93 | ಚಿನ್ನ (Std. 10g) ₹1,75,730 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹3,85,200 (ಬೆಂಗಳೂರು)

ಹುಡುಕಿದಷ್ಟೂ ಚಿನ್ನ

ಕೊಪ್ಪಳ: ಕೊಪ್ಪಳ ವೈದ್ಯಕೀಯ ವಿಜ್ಞಾನ ಸಂಸ್ಥೆ (ಕಿಮ್ಸ್) ಮುಖ್ಯ ಆಡಳಿತಾಧಿಕಾರಿ ಬಿ.ಕಲ್ಲೇಶ ಅವರಿಗೆ ಸಂಬಂಧಿಸಿದ ಒಂಬತ್ತು ಸ್ಥಳಗಳಲ್ಲಿ ಲೋಕಾಯುಕ್ತ ಪೊಲೀಸರು ಶುಕ್ರವಾರ ದಾಳಿ ನಡೆಸಿದ್ದು, ಅಪಾರ ಪ್ರಮಾಣದ ಚಿನ್ನಾಭರಣ ಹಾಗೂ ನಗದು ಪತ್ತೆಯಾಗಿದೆ.

ಮೈಸೂರು: ಮಾದಕ ವಸ್ತು ಘಟಕದ ಮೇಲೆ ದಾಳಿ

ನವದೆಹಲಿ: ಕರ್ನಾಟಕದ ಮೈಸೂರಿನಲ್ಲಿರುವ ಮಾದಕ ವಸ್ತುಗಳ ರಹಸ್ಯ ತಯಾರಿಕಾ ಪ್ರಯೋಗಾಲಯದ ಮೇಲೆ ದಾಳಿ ನಡೆಸಿದ ಮಾದಕವಸ್ತು ನಿಯಂತ್ರಣ ದಳವು ರಾಜಸ್ಥಾನದ ನಾಲ್ವರನ್ನು ಬಂಧಿಸಿ, ₹10 ಕೋಟಿ ಮೌಲ್ಯದ ಮಾದಕವಸ್ತುಗಳನ್ನು ಜಪ್ತಿ ಮಾಡಿದೆ.

ವಿವರ ಪುಟ 8

ಚಿನಕುರುಳಿ ಪ್ರಕಾಶ್ ಶೆಟ್ಟಿ



ಮುಟ್ಟಿನ ಆರೋಗ್ಯವೂ ಹಕ್ಕು

ಶಾಲೆಗಳಲ್ಲಿ ಬಾಲಕಿಯರಿಗೆ ಉಚಿತ ಸ್ಯಾನಿಟರಿ ನ್ಯಾಪ್‌ಕಿನ್ ವಿತರಣೆಗೆ ಸುಪ್ರೀಂಕೋರ್ಟ್ ಆದೇಶ



ನವದೆಹಲಿ (ಪಿಟಿಐ): ಮುಟ್ಟಿನ ಆರೋಗ್ಯದ ಹಕ್ಕು ಸಂವಿಧಾನ ನೀಡಿರುವ ಜೀವಿಸುವ ಹಕ್ಕಿನ ಭಾಗ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಸಾರಿದೆ.

ಖಾಸಗಿ ಶಾಲೆಗಳನ್ನೂ ಒಳಗೊಂಡಂತೆ ಎಲ್ಲ ಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ಮಣ್ಣಿನಲ್ಲಿ ಕರಗುವ ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ಉಚಿತವಾಗಿ ನೀಡಬೇಕು. ವಿದ್ಯಾರ್ಥಿಗಳಿಗೆ ಲಿಂಗಾಧಾರಿತವಾಗಿ ಪ್ರತ್ಯೇಕವಾದ ಸ್ವಚ್ಛ ಶೌಚಾಲಯ ಸೌಲಭ್ಯವನ್ನು ಒದಗಿಸಬೇಕು ಎಂದು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಕೋರ್ಟ್ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಆರ್. ಮಹಾದೇವನ್ ಅವರಿದ್ದ ನ್ಯಾಯಪೀಠವು ಈ ಮಹತ್ವದ ತೀರ್ಪು ಪ್ರಕಟಿಸುವ ಮೂಲಕ, ಲಿಂಗ ಸಮಾನತೆ ಮತ್ತು ಶೈಕ್ಷಣಿಕ ಸಮಾನತೆಯನ್ನು ಎತ್ತಿಹಿಡಿದಿದೆ. ಈ ತೀರ್ಪು ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಸೇರಿದಂತೆ ಎಲ್ಲ ಶಾಲೆಗಳಿಗೂ ಅನ್ವಯವಾಗಲಿದೆ ಎಂದು ನ್ಯಾಯಪೀಠ ತಿಳಿಸಿದೆ.

ನ್ಯಾಯಾಲಯದ ಈ ತೀರ್ಪು ಸರಿಯಾಗಿ ಅನುಷ್ಠಾನಗೊಳ್ಳದಿದ್ದರೆ ಖಾಸಗಿ ಶಾಲೆಗಳ ಮಾನ್ಯತೆ ರದ್ದುಗೊಳಿಸುವುದೂ ಸೇರಿದಂತೆ ಕಠಿಣ ಕ್ರಮ ಕೈಗೊಳ್ಳಲಾಗುವುದು. ಸಾರ್ವಜನಿಕ ಸಂಸ್ಥೆಗಳಲ್ಲಿ ತೀರ್ಪು ಪಾಲನೆಯಾಗದಿದ್ದಲ್ಲಿ, ಆಯಾ ರಾಜ್ಯ ಸರ್ಕಾರವನ್ನೇ ನೇರವಾಗಿ ಹೊಣೆ ಮಾಡಲಾಗುವುದು ಎಂದು ನ್ಯಾಯಪೀಠ ಸ್ಪಷ್ಟವಾಗಿ ತಿಳಿಸಿದೆ.

‘ಸಂವಿಧಾನದ 21ನೇ ವಿಧಿಯಲ್ಲಿ ಬರುವ ಜೀವಿಸುವ ಹಕ್ಕು, ಮುಟ್ಟಿನ ಆರೋಗ್ಯದ ಹಕ್ಕನ್ನೂ ಒಳಗೊಂಡಿದೆ. ಸುರಕ್ಷಿತ, ಪರಿಣಾಮಕಾರಿ ಮುಟ್ಟಿನ ನೈರ್ಮಲ್ಯ ನಿರ್ವಹಣೆಗೆ ಅಗತ್ಯವಾದ ಸೌಲಭ್ಯ ಕಲ್ಪಿಸಬೇಕು ಎಂಬುದನ್ನು ಇದು ಸಾರುತ್ತದೆ. ಇಂಥ ಕ್ರಮಗಳಿಂದ ವಿದ್ಯಾರ್ಥಿನಿಯರು ಮುಂದೆ ಲೈಂಗಿಕ ಮತ್ತು ಸಂತಾನೋತ್ಪತ್ತಿಗೆ ಸಂಬಂಧಿಸಿದಂತೆ ಉತ್ತಮ ಆರೋಗ್ಯ ಹೊಂದಲು ಸಾಧ್ಯ. ಆರೋಗ್ಯಕರ ಸಂತಾನೋತ್ಪತ್ತಿಯ ಹಕ್ಕಿನಲ್ಲಿ ಶಿಕ್ಷಣ ಮತ್ತು ಲೈಂಗಿಕ ಆರೋಗ್ಯದ ಕುರಿತ ಮಾಹಿತಿ ಪಡೆಯುವ ಹಕ್ಕೂ ಅಂತರ್ಗತವಾಗಿದೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿತು.

‘ಜೀವಿಸುವ ಮತ್ತು ಘನತೆಯ ಹಕ್ಕಿಗೆ ಶಿಕ್ಷಣದ ಹಕ್ಕು (ಆರ್‌ಟಿಇ) ವಿಶಾಲವಾದ ಚೌಕಟ್ಟನ್ನು ನೀಡುತ್ತದೆ.



ಶಿಕ್ಷಣವನ್ನು ಪಡೆಯದೆ ಇವುಗಳ ಬಗ್ಗೆ ಅರಿತುಕೊಳ್ಳಲು ಸಾಧ್ಯವಿಲ್ಲ’ ಎಂದು ಹೇಳಿತು.

‘ಯಾವುದೇ ವ್ಯಕ್ತಿಯು ಅವಮಾನ, ಬಹಿಷ್ಕಾರ ಅಥವಾ ಪ್ರತ್ಯೇಕತೆಯ ನೋವು ಅನುಭವಿಸಬಾರದು. ಇಂಥ ವಿದ್ಯಮಾನಗಳು ವ್ಯಕ್ತಿಯ ಘನತೆಗೆ ಧಕ್ಕೆ ತರುತ್ತವೆ. ಈ ಮಾತು ವಿದ್ಯಾರ್ಥಿನಿಯರಿಗೂ ಅನ್ವಯವಾಗುತ್ತದೆ. ಮುಟ್ಟಿನ ಸಂದರ್ಭದಲ್ಲಿ ನೈರ್ಮಲ್ಯಕ್ಕೆ ಅಗತ್ಯವಿರುವ ಸೌಲಭ್ಯಗಳ ಅಲಭ್ಯತೆ ಕೂಡ ಅವರ ಘನತೆಯನ್ನು ಕುಗ್ಗಿಸುತ್ತದೆ’ ಎಂದು ನ್ಯಾಯಪೀಠ ಹೇಳಿತು.

‘ಖಾಸಗೀತನ ಮತ್ತು ಘನತೆ ಎರಡೂ ಪರಸ್ಪರ ಅವಿನಾಭಾವ ಸಂಬಂಧ ಹೊಂದಿವೆ. ಖಾಸಗಿ ಹಕ್ಕಿನ ಉಲ್ಲಂಘನೆಯನ್ನು ತಡೆಯುವುದು ಮಾತ್ರವಲ್ಲದೆ ಪ್ರತಿಯೊಬ್ಬ ವ್ಯಕ್ತಿಯ ಖಾಸಗೀತನದ ರಕ್ಷಣೆಯೂ ರಾಜ್ಯಗಳ ಹೊಣೆಯಾಗಿದೆ’ ಎಂದು ಅಭಿಪ್ರಾಯಪಟ್ಟಿತು.

‘ಮುಟ್ಟಿನ ನೈರ್ಮಲ್ಯ ನಿರ್ವಹಣೆಗೆ ಸಂಬಂಧಿಸಿದ ಸೌಲಭ್ಯಗಳು ಸಿಗದಿದ್ದಾಗ ಶಾಲಾ ಹಂತದಲ್ಲಿ ಕೂಡ ಬಾಲಕಿಯರು ಸಮಾನವಾಗಿ ಪಾಲ್ಗೊಳ್ಳುವ ಹಕ್ಕಿನಿಂದ ವಂಚಿತರಾಗುತ್ತಾರೆ. ಇದರ ಪರಿಣಾಮವಾಗಿ ಜೀವನದ ಮುಂದಿನ ಹಂತಗಳಲ್ಲೂ ಅಸಮರ್ಥತೆಯನ್ನು ಎದುರಿಸಬೇಕಾಗುತ್ತದೆ’ ಎಂದು ನ್ಯಾಯಪೀಠ ಹೇಳಿತು.

‘ಸುಪ್ರೀಂ’ ನಿರ್ದೇಶನಗಳೇನು?

- ಶೌಚಾಲಯದ ಆವರಣದ ಒಳಗೆ ಸ್ಯಾನಿಟರಿ ನ್ಯಾಪ್‌ಕಿನ್ ಸುಲಭವಾಗಿ ಲಭ್ಯವಾಗುವಂತೆ ಇರಬೇಕು. ವೆಂಡಿಂಗ್ ಯಂತ್ರದ ಮೂಲಕ ಅಥವಾ ನಿರ್ದಿಷ್ಟ ಪ್ರದೇಶದಲ್ಲಿ ನ್ಯಾಪ್‌ಕಿನ್‌ಗಳನ್ನು ಇಡಬಹುದು ಅಥವಾ ಗೊತ್ತುಪಡಿಸಿದ ಅಧಿಕಾರಿಯೂ ವಿತರಿಸಬಹುದು
- ಪ್ರತಿಯೊಂದು ಶಾಲೆಯೂ ಲಿಂಗಾಧಾರಿತ ಶೌಚಾಲಯ ಸೌಲಭ್ಯ ಹೊಂದಿರಬೇಕು
- ಈಗಾಗಲೇ ಅಸ್ತಿತ್ವದಲ್ಲಿರುವ ಅಥವಾ ಹೊಸದಾಗಿ ನಿರ್ಮಿಸುವ ಶೌಚಾಲಯಗಳನ್ನು ವಿದ್ಯಾರ್ಥಿಗಳ ಅನುಕೂಲಕ್ಕೆ ತಕ್ಕಂತೆ ಮತ್ತು ಅವರ ಖಾಸಗೀತನವನ್ನು ಕಾಪಾಡುವ ರೀತಿಯಲ್ಲಿ ವಿನ್ಯಾಸಗೊಳಿಸಬೇಕು/ ನಿರ್ಮಿಸಬೇಕು/ ನಿರ್ವಹಣೆ ಮಾಡಬೇಕು
- ಶೌಚಾಲಯಗಳು ಅಂಗವಿಕಲ ಮಕ್ಕಳ ಅಗತ್ಯವನ್ನೂ ಪೂರೈಸುವಂತಿರಬೇಕು
- ಶೌಚಾಲಯಗಳಲ್ಲಿ ಕೈ ತೊಳೆಯುವ ಸೋಪು ಮತ್ತು ಎಲ್ಲಾ ಸಮಯದಲ್ಲೂ ನೀರಿನ ಸೌಲಭ್ಯ ಇರಲೇಬೇಕು



ಎನ್‌ಸಿಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಘೋಷಣೆ ಸಾಧ್ಯತೆ

ಸುನೇತ್ರಾ ಪ್ರಮಾಣ ಇಂದು?

ಮುಂಬೈ/ಪುಣೆ (ಪಿಟಿಐ): ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷದ (ಎನ್‌ಸಿಪಿ) ನಾಯಕ, ದಿವಂಗತ ಅಜಿತ್ ಪವಾರ್ ಅವರ ಪತ್ನಿ ಸುನೇತ್ರಾ ಪವಾರ್ ಅವರು ಮಹಾರಾಷ್ಟ್ರದ ನೂತನ ಉಪ ಮುಖ್ಯಮಂತ್ರಿಯಾಗಿ ಶನಿವಾರ ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆಯಿದೆ.



ಸುನೇತ್ರಾ

ಪ್ರಸ್ತುತ ರಾಜ್ಯಸಭಾ ಸದಸ್ಯೆಯಾಗಿರುವ ಸುನೇತ್ರಾ ಅವರು ರಾಜ್ಯದ ಮೊದಲ ಮಹಿಳಾ ಉಪ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಲಿದ್ದಾರೆ.

‘ಸುನೇತ್ರಾ ಅವರ ಹೆಸರನ್ನು ಅಂತಿಮಗೊಳಿಸಲು ಪಕ್ಷವು ಶನಿವಾರ ಮಧ್ಯಾಹ್ನ 2ಕ್ಕೆ ಇಲ್ಲಿನ ವಿಧಾನಭವನದಲ್ಲಿ ಶಾಸಕಾಂಗ ಪಕ್ಷದ ಸಭೆ ನಡೆಸಲಿದೆ. ಅವರ ಪ್ರಮಾಣ ವಚನ ಸ್ವೀಕಾರ ಸಮಾರಂಭ ಸಂಜೆ ನಡೆಯಲಿದೆ’ ಎಂದು ಪಕ್ಷದ ಮೂಲಗಳು ತಿಳಿಸಿವೆ. 13

ವಿಲೀನದತ್ತ ಎನ್‌ಸಿಪಿ ಬಣಗಳು?

ಅಜಿತ್ ಪವಾರ್ ಅವರ ನಿಧನದ ಬೆನ್ನಲ್ಲೇ ಎನ್‌ಸಿಪಿ ಬಣಗಳ ವಿಲೀನಕ್ಕೆ ಸಂಬಂಧಿಸಿದ ಮಾತುಗಳು ಮುನ್ನೆಲೆಗೆ ಬಂದಿವೆ. ಅಜಿತ್ ಮತ್ತು ಅವರ ಚಿಕ್ಕಪ್ಪ ಶರದ್ ಪವಾರ್ ನೇತೃತ್ವದ ಎನ್‌ಸಿಪಿಯ ಎರಡು ಬಣಗಳ ವಿಲೀನಕ್ಕೆ ಸಂಬಂಧಿಸಿದ ಮಾತುಕತೆಯು ಅಜಿತ್ ನಿಧನಕ್ಕೂ ಮುನ್ನವೇ ‘ಸಾಕಷ್ಟು ಪ್ರಗತಿ’ ಸಾಧಿಸಿತ್ತು ಎಂದು ಮೂಲಗಳು ತಿಳಿಸಿವೆ.

ಎರಡೂ ಬಣಗಳ ವಿಲೀನವು ಮಹಾರಾಷ್ಟ್ರದ ರಾಜಕೀಯದ ದಿಕ್ಕನ್ನು ಬದಲಿಸುವ ಸಾಧ್ಯತೆಯಿದೆ. ವಿಲೀನದ ಬಳಿಕ ಒಂದುಗೂಡಲಿರುವ ಎನ್‌ಸಿಪಿ ನೇತೃತ್ವವನ್ನು ಅನುಭವಿ ನಾಯಕ ಶರದ್ ಪವಾರ್ ಅವರು ವಹಿಸುವರು ಎಂದು ಎನ್‌ಸಿಪಿ (ಎಸ್‌ಪಿ) ಭಾವಿಸುತ್ತದೆ.

ಅಜಿತ್ ಅವರು ಬದುಕಿದ್ದಾಗಲೇ ವಿಲೀನದ ಮಾತುಕತೆ ಶುರುವಾಗಿತ್ತು. 13

ಉದ್ಯಮಿ ರಾಯ್ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಯಲ್ ಎಸ್ಟೇಟ್ ಕಂಪನಿಯಾದ ‘ಕಾನ್ಫಿಡೆಂಟ್ ಗ್ರೂಪ್’ ಮುಖ್ಯಸ್ಥ ಸಿ.ಜೆ.ರಾಯ್ (57) ಅವರು ಆದಾಯ ತೆರಿಗೆ ಇಲಾಖೆಯ (ಐ.ಟಿ) ಅಧಿಕಾರಿಗಳು ಕಚೇರಿಯಲ್ಲಿ ಇರುವ ಸಂದರ್ಭದಲ್ಲಿಯೇ ಶುಕ್ರವಾರ ಮಧ್ಯಾಹ್ನ 3.15ರ ಸುಮಾರಿಗೆ ಪಿಸ್ತೂಲ್‌ನಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕೇರಳದ ರಾಯ್ ಅವರು ಬೆಂಗಳೂರಿನಲ್ಲಿ ರಿಯಲ್ ಎಸ್ಟೇಟ್, ರೆಸಾರ್ಟ್, ಹೋಟೆಲ್, ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದರು. ಕೇರಳದಲ್ಲೂ ಹಲವು ಉದ್ಯಮಗಳನ್ನು ನಡೆಸುತ್ತಿದ್ದರು. ‘ಕಾನ್ಫಿಡೆಂಟ್ ಗ್ರೂಪ್’ ಕಚೇರಿ ಸೇರಿದಂತೆ ರಾಯ್ ಅವರಿಗೆ ಸೇರಿದ ವಿವಿಧ ಸ್ಥಳಗಳ ಮೇಲೆ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಕಳೆದ ಮೂರು ದಿನಗಳಿಂದ ಪರಿಶೀಲನೆ ನಡೆಸಿದ್ದರು. ಶುಕ್ರವಾರ ಬೆಳಿಗ್ಗೆಯಿಂದಲೂ ಅವರ ಕಚೇರಿಯಲ್ಲಿ ದಾಖಲೆಗಳ ಪರಿಶೀಲನಾ ಕಾರ್ಯದಲ್ಲಿ ಕೇರಳದ ಐ.ಟಿ ಅಧಿಕಾರಿಗಳು ತೊಡಗಿದ್ದರು.



ರಾಯ್

‘ಪದೇ ಪದೇ ಐ.ಟಿ ಅಧಿಕಾರಿಗಳು ದಾಳಿ ನಡೆಸುತ್ತಿದ್ದಾರೆ. ಮಾನಸಿಕವಾಗಿ ಒತ್ತಡ ಹೇರುತ್ತಿದ್ದಾರೆಂದು ನೊಂದು ತಮ್ಮ ಬಳಿಯಿದ್ದ ಪಿಸ್ತೂಲ್‌ನಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ. 9

ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ.

'ಮಹಾತ್ಮನ ಹೆಸರು ಅಳಿಸಲಾಗದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗಾಂಧೀಜಿ ಅವರು ಜನರ ಮೇಲೆ ಅಗಾಧ ಪ್ರಭಾವ ಬೀರಿದ್ದಾರೆ. ಯೋಜನೆಗಳಿಂದ ಅವರ ಹೆಸರನ್ನು ಕೈಬಿಟ್ಟರೂ ಜನರ ಮನಸ್ಸಿನಿಂದ ಅಳಿಸಲಾಗದು' ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಹೇಳಿದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ಕಸ್ತೂರಿ ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಜಂಟಿಯಾಗಿ ಶುಕ್ರವಾರ ಹಮ್ಮಿಕೊಂಡಿದ್ದ ಸರ್ವೋದಯ ದಿನಾಚರಣೆ ಕಾರ್ಯಕ್ರಮದಲ್ಲಿ ಗಾಂಧೀಜಿ ಅವರಿಗೆ ನುಡಿನಮನ ಸಲ್ಲಿಸಿದರು.

'ಮನರೇಗಾ ಯೋಜನೆ ಹೆಸರನ್ನು, ವಿಬಿ–ಜಿ ರಾಮ್ ಜಿ ಎಂದು ಬದಲಾಯಿಸಿದರೆ ಗಾಂಧೀಜಿ ಹೆಸರನ್ನು ಅಳಿಸಲು ಸಾಧ್ಯವಿಲ್ಲ. ನನ್ನನ್ನು ಸೇರಿ ಲಕ್ಷಾಂತರ ಜನರ ಹೆಸರಲ್ಲೇ ಅವರಿದ್ದಾರೆ' ಎಂದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯ, 'ಗಾಂಧಿ ಎಂದು ಹೆಸರು ಇಟ್ಟುಕೊಂಡ ತಕ್ಷಣ ಅವರ ಹಾದಿಯಲ್ಲಿ ಸಾಗಲು ಸಾಧ್ಯವಿಲ್ಲ. ಬದಲಾಗಿ, ಅವರ ವಿಚಾರ ಧಾರೆ ಅಳವಡಿಸಿಕೊಳ್ಳಬೇಕು' ಎಂದರು.

ಕಲಾವಿದ ಬಿ.ಜಿ. ಗುಜ್ಜಾರಪ್ಪ ಅವರು ಗಾಂಧೀಜಿ ರೇಖಾಚಿತ್ರಗಳನ್ನು ರಚಿಸಿದರು. ಕಸ್ತೂರಿ ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ ಟ್ರಸ್ಟಿ ಎನ್.ಆರ್. ವಿಶುಕುಮಾರ್, 'ಸುಧಾ' ವಾರ ಪತ್ರಿಕೆ ಮುಖ್ಯ ಉಪಸಂಪಾದಕಿ ರಶ್ಮಿ ಎಸ್., ಆಕಾಶವಾಣಿ ಉದ್ಘೋಷಕಿ ಬಿ.ಕೆ.ಸುಮತಿ ಉಪಸ್ಥಿತರಿದ್ದರು.

'ಗಾಂಧಿ ವ್ಯಕ್ತಿತ್ವ ಭಂಜನೆ: ಎಚ್ಚರ ಬೇಕು'

'ಮಹಾತ್ಮ ಹುತಾತ್ಮ' ಸೌಹಾರ್ದ ಸಂಕಲ್ಪ ದಿನದಲ್ಲಿ ಬರಗೂರು ರಾಮಚಂದ್ರಪ್ಪ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜಕಾರಣಕ್ಕೋಸ್ಕರ ಮಹಾತ್ಮ ಗಾಂಧಿ ಅವರನ್ನು ಅಪ್ಪಿಕೊಳ್ಳುವ, ಅವರ ವ್ಯಕ್ತಿತ್ವ ಭಂಜನೆ ಮಾಡುವ ಪಕ್ಷಗಳ ನಡೆಯನ್ನು ಎಚ್ಚರಿಕೆಯಿಂದ ನೋಡಬೇಕು' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

ಸೌಹಾರ್ದ ಕರ್ನಾಟಕವು ಸಂಸ ಬಯಲು ರಂಗಮಂದಿರದಲ್ಲಿ ಶುಕ್ರವಾರ ಆಯೋಜಿಸಿದ್ದ 'ಮಹಾತ್ಮ ಹುತಾತ್ಮ' ಸೌಹಾರ್ದ ಸಂಕಲ್ಪ ದಿನದಲ್ಲಿ ಅವರು ಆಶಯ ಭಾಷಣ ಮಾಡಿದರು.

'ಗಾಂಧಿ ಜಯಂತಿ, ಪುಣ್ಯ ಸ್ಮರಣೆ ವೇಳೆ ರಾಜಕೀಯ ನಾಯಕರು, ಪಕ್ಷಗಳು ಅವರನ್ನು ನೆನಪು ಮಾಡಿಕೊಳ್ಳುತ್ತವೆ. ಸಾಂಕೇತಿಕವಾಗಿ ಸ್ಮರಣೆ ಮಾಡುವ ಸ್ಥಿತಿಗೆ ನಾವು ತಲುಪಿದ್ದೇವೆ. ಗಾಂಧೀಜಿ ಅವರನ್ನು ಈ ರೀತಿ ನೋಡುವುದಕ್ಕಿಂತ ಅವರ ವಿಚಾರಗಳೊಂದಿಗೆ ಮುಖಾಮುಖಿ ಆಗಬೇಕಿದೆ' ಎಂದು ಅವರು ಹೇಳಿದರು.

'ಧರ್ಮ ಹಾಗೂ ರಾಷ್ಟ್ರೀಯತೆ ಎನ್ನುವುದು ಬೇರೆಯೇ. ಅವುಗಳನ್ನು ಒಂದೇ ನೆಲೆಯಲ್ಲಿ ನೋಡುವ ಕ್ರಮ ಸರಿಯಲ್ಲ. ಎರಡರ ವಿಚಾರದಲ್ಲಿ ಗಾಂಧೀಜಿ ಚಿಂತನೆ ಸ್ಪಷ್ಟವಾಗಿತ್ತು. ಸಾಮಾಜಿಕ, ಸಮಾನತೆ, ಸೌಹಾರ್ದತೆ, ಸಾಮರಸ್ಯದ ನೆಲೆಯಲ್ಲಿ ಭಾರತ ನೋಡುವ ಅವರ ವಿಚಾರ ಎಂದಿಗೂ ಪ್ರಸ್ತುತವೇ. ಅವರ ಆ ವಿಚಾರಗಳನ್ನು ಪ್ರಸ್ತುತ ನೆಲೆಯಲ್ಲಿ ನೋಡಬೇಕಿದೆ' ಎಂದರು.

ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಮಾತನಾಡಿ, 'ರಾಜಕೀಯ ನೇತಾರರು ರಾಜ್‌ಘಾಟ್‌ಗೆ ಹೋಗಿ ಗಾಂಧೀಜಿಗೆ ನಮಿಸುತ್ತಾರೆ. ಆದರೆ ಅವರ ಚಿಂತನೆಗಳನ್ನು ಎಂದಿಗೂ ತಮ್ಮ ಆಡಳಿತದಲ್ಲಿ ಅಳವಡಿಸಿಕೊಳ್ಳುವುದಿಲ್ಲ. ಇದು ಆತ್ಮವಂಚನೆ' ಎಂದರು.



ನಗರದ ಸಂಸ ಬಯಲು ರಂಗಮಂದಿರದಲ್ಲಿ ಸೌಹಾರ್ದ ಕರ್ನಾಟಕ ಆಯೋಜಿಸಿದ್ದ 'ಮಹಾತ್ಮ ಹುತಾತ್ಮ' ಸೌಹಾರ್ದ ಸಂಕಲ್ಪ ದಿನ ಕಾರ್ಯಕ್ರಮದಲ್ಲಿ ಎಚ್.ಎನ್. ನಾಗಮೋಹನ ದಾಸ್, ಬರಗೂರು ರಾಮಚಂದ್ರಪ್ಪ, ಮಾವಳ್ಳಿ ಶಂಕರ್, ಕೆ.ಆರ್. ಸಂಧ್ಯಾ ರೆಡ್ಡಿ, ಎನ್.ಆರ್. ವಿಶುಕುಮಾರ್, ಆರ್. ಮೋಹನರಾಜು ಗಾಂಧೀಜಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು —ಪ್ರಜಾವಾಣಿ ಚಿತ್ರ

ಸಾಹಿತಿ ಕೆ.ಮರುಳಸಿದ್ದಪ್ಪ, ಕೆ.ಆರ್.ಸಂಧ್ಯಾರೆಡ್ಡಿ, ದಲಿತ ಸಂಘರ್ಷ ಸಮಿತಿಯ ಮಾವಳ್ಳಿ ಶಂಕರ್, ಆರ್. ಮೋಹನರಾಜು ಉಪಸ್ಥಿತರಿದ್ದರು. ವಾರ್ತಾ ಇಲಾಖೆ ನಿವೃತ್ತ ನಿರ್ದೇಶಕ ಎನ್. ಆರ್.ವಿಶುಕುಮಾರ್ ಸೌಹಾರ್ದ ಸಂಕಲ್ಪ ಬೋಧಿಸಿದರು. ಗಾಂಧೀಜಿ ಕುರಿತು ಸುಬ್ಬು ಹೊಲೆಯಾರ್, ಆರ್.ಜಿ.ಹಳ್ಳಿ ನಾಗರಾಜ್, ಎಚ್.ಆರ್.ಸುಜಾತ ಕವನ ವಾಚಿಸಿದರು. ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು.

'ವಿಚಾರದ ಹೆಸರಲ್ಲಿ ಗಾಂಧಿ ಹತ್ಯೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಹಿಂಸೆ, ಸಹಿಷ್ಣುತೆಯನ್ನೇ ಮುಖ್ಯ ಅಸ್ತ್ರ ಮಾಡಿಕೊಂಡು ದೇಶಕ್ಕಾಗಿ ಹೋರಾಟ ಮಾಡಿದ ಮಹಾತ್ಮ ಗಾಂಧಿ ಅವರನ್ನು ವಿಚಾರಗಳ ಹೆಸರಲ್ಲಿ ಕೊಲ್ಲಲಾಗುತ್ತಿದೆ' ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಬೇಸರ ವ್ಯಕ್ತಪಡಿಸಿದರು.

ಜನಮುಖಿ ಶೋಷಿತರ ಪರವಾದ ವೇದಿಕೆ ಪುರಭವನದಲ್ಲಿ ಆಯೋಜಿಸಿದ್ದ ಗಾಂಧೀಜಿ ಅವರ 'ನನ್ನ ಸತ್ಯಾನ್ವೇಷಣೆ' ಕೃತಿಯ ಶತಮಾನೋತ್ಸವ ಹಾಗೂ ಹುತಾತ್ಮ ದಿನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ದೇಶದಲ್ಲಿ ಸಮಾನತೆ, ಸಾಮರಸ್ಯ, ವಿಭಜನೆ ಕುರಿತು ಗಾಂಧೀಜಿ ಅವರ ಚಿಂತನೆಗಳಲ್ಲಿ ಸ್ಪಷ್ಟತೆಯಿತ್ತು. ಕೆಲವೊಂದು ಬಾರಿ ತಪ್ಪು ಮಾಡಿದರೂ ಅದನ್ನು ಒಪ್ಪಿಕೊಳ್ಳುವ ಅವರ ಗುಣದಿಂದಲೇ ದೊಡ್ಡ ನಾಯಕರಾದರು. ಅವರ ವಿಚಾರ ಒಪ್ಪದೇ ಭಿನ್ನಾಭಿಪ್ರಾಯ ಇಟ್ಟುಕೊಳ್ಳುವ ಬದಲು ಅವರನ್ನು ಗುಂಡಿಕ್ಕಿ ಕೊಲ್ಲಲಾಯಿತು. ವಿಚಾರಗಳ ಹೆಸರಿನಲ್ಲಿ ಇದು ಮುಂದುವರಿದಿದೆ' ಎಂದು ಹೇಳಿದರು.

'ಆಡಳಿತವನ್ನು ಟೀಕಿಸಿದರೆ ದೇಶದ್ರೋಹಿಗಳು ಎನ್ನುವ ಪಟ್ಟ ಕಟ್ಟುವ ಮನಸ್ಥಿತಿ ಬೆಳೆದಿದೆ. ಅಸಹಿಷ್ಣುತೆಯನ್ನು ಬಿತ್ತುವ ಕೆಲಸ ನಡೆದಿದೆ. ಇದರಿಂದ ಹೊರ ಬರಲು ಗಾಂಧೀಜಿ ಅವರ ನನ್ನ ಸತ್ಯಾನ್ವೇಷಣೆ ಕೃತಿ, ಅವರ ಒಳನೋಟ, ಚಿಂತನೆಗಳು ಮಾರ್ಗಸೂಚಿಯಾಗಬಲ್ಲವು' ಎಂದರು.



ಜನಮುಖಿ ಶೋಷಿತರ ಪರವಾದ ವೇದಿಕೆ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗಾಂಧೀಜಿ ಭಾವಚಿತ್ರಕ್ಕೆ ಬಿ.ಕೆ.ಹರಿಪ್ರಸಾದ್, ಸಲೀಂ ಅಹ್ಮದ್, ವಿ.ಎಸ್.ಆರಾಧ್ಯ, ರಘುನಾಥ ನಾಯ್ಡು ಪುಷ್ಪನಮನ ಸಲ್ಲಿಸಿದರು

ವಿಧಾನ ಪರಿಷತ್‌ನ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹ್ಮದ್ ಮಾತನಾಡಿ, 'ಹೊಸ ತಲೆಮಾರಿನವರು ಗಾಂಧೀಜಿ, ಅಂಬೇಡ್ಕರ್ ಅವರನ್ನು ಮರೆಯುತ್ತಿದ್ದಾರೆ. ಅವರ ವಿಚಾರಗಳೇ ಯುವ ಸಮುದಾಯಕ್ಕೆ ಬೇಡವಾಗುತ್ತಿದೆ' ಎಂದರು.

ಬಿಎಂಟಿಸಿ ಅಧ್ಯಕ್ಷ ವಿ.ಎಸ್. ಆರಾಧ್ಯ, ಕೆಪಿಸಿಸಿ ಉಪಾಧ್ಯಕ್ಷ ಆರ್. ಮಂಜುನಾಥ್, ಕಾಂಗ್ರೆಸ್ ಮುಖಂಡ ರಘುನಾಥ ನಾಯ್ಡು, ಜನಮುಖಿ ವೇದಿಕೆ ಅಧ್ಯಕ್ಷ ನಾರಾಯಣಸ್ವಾಮಿ, ಪ್ರಧಾನ ಕಾರ್ಯದರ್ಶಿ ರಘುನಂದನ್ ಉಪಸ್ಥಿತರಿದ್ದರು.

'ವಿದ್ಯಾರ್ಥಿ ಸಂಘದ ಚುನಾವಣೆ ನಡೆಸಿ'

ಬೆಂಗಳೂರು: ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿ ಸಂಘಗಳಿಗೆ ಚುನಾವಣೆ ನಡೆಸುವ ಸಲಹೆಗೆ ಪೂರಕವಾದ ಅಭಿಪ್ರಾಯ ವ್ಯಕ್ತವಾಗಿದೆ ಎಂದು ಸ್ಟೂಡೆಂಟ್ಸ್ ಇಸ್ಲಾಮಿಕ್ ಆರ್ಗನೈಸೇಶನ್ ಆಫ್ ಇಂಡಿಯಾ (ಎಸ್‌ಐಒ) ರಾಜ್ಯ ಘಟಕ ತಿಳಿಸಿದೆ.

ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಎಸ್‌ಐಒ ಗೂಗಲ್ ಫಾರ್ಮ್ಸ್ ಮೂಲಕ ನಡೆಸಿದ ಸಮೀಕ್ಷೆಯ ವರದಿ ಬಿಡುಗಡೆ ಮಾಡಿದೆ.

'ಹೆಚ್ಚಿನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ಸಂಘದ ಚುನಾವಣೆ ಬಗ್ಗೆ ಅರಿವಿದೆ. ಆದರೆ ನಿಯಮ, ರಚನೆ, ಕಾನೂನು ಚೌಕಟ್ಟಿನ ತಿಳಿವಳಿಕೆ ಇಲ್ಲ. ಜಾಗೃತಿ ಮೂಡಿಸುವ ಅಗತ್ಯವಿದೆ' ಎಂದು ಎಸ್‌ಐಒ ರಾಜ್ಯ ಅಧ್ಯಕ್ಷ ಎಸ್. ಆದಿ ಅಲ್ ಹಸನ್, ಕಾರ್ಯದರ್ಶಿ ಮೊಹಮ್ಮದ್ ಹಯ್ಯಾನ್ ತಿಳಿಸಿದ್ದಾರೆ.

'ಲಿಂಗ್ಡೊ ಸಮಿತಿ ಶಿಫಾರಸುಗಳನ್ನು ಕಾಲಕ್ಕೆ ತಕ್ಕಂತೆ ಆಧುನೀಕರಿಸಬೇಕು. ಚುನಾವಣಾ ವೆಚ್ಚಕ್ಕೆ ಮಿತಿ ಮತ್ತು ಅಭ್ಯರ್ಥಿಗಳಿಗೆ ವಯೋಮಿತಿ ನಿಗದಿಪಡಿಸಬೇಕು' ಎಂದು ತಿಳಿಸಿದ್ದಾರೆ.

ಎಸ್‌ಐಒ ನಿಯೋಗವು ಈ ವರದಿಯನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಶರಣ ಪ್ರಕಾಶ್ ಪಾಟೀಲ, ಎಂ.ಸಿ. ಸುಧಾಕರ್, ಶಾಸಕ ರಿಜ್ವಾನ್ ಅರ್ಷದ್ ಅವರಿಗೆ ಸಲ್ಲಿಸಿದೆ.



ಮಾವ ಮಾವ ದೂರ ನಿಲ್ಲು!

ಅತಿ ಹತ್ತಿರದ ರಕ್ತಸಂಬಂಧಿಗಳಿಗೆ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಡುವುದು ನಮ್ಮಲ್ಲಿ ಸಾಮಾನ್ಯವಾದ ಸಂಗತಿ. ಆದರೆ ಇದು ಇಂತಹ ದಂಪತಿಗೆ ಹುಟ್ಟುವ ಮಕ್ಕಳ ಮೂಲಕ ಆನುವಂಶೀಯ ಕಾಯಿಲೆಗಳ ಮುಂದುವರಿಕೆಗೆ ದಾರಿ ಮಾಡುತ್ತದೆ, ಇದರಿಂದ ಭವಿಷ್ಯದ ಪೀಳಿಗೆಗಳು ದುರ್ಬಲಗೊಳ್ಳುತ್ತವೆ; ಹೀಗಾಗಿ, ಇಂತಹ ಮದುವೆ ಸಲ್ಲದು ಎನ್ನುತ್ತವೆ ವೈಜ್ಞಾನಿಕ ದೃಷ್ಟಿಕೋನವನ್ನು ಆಧರಿಸಿದ ಆಳವಾದ ಅಧ್ಯಯನಗಳು.

• ಪ್ರೊ. ಸುತ್ತೂರು ಎಸ್. ಮಾಲಿನಿ

ಮಾನವ ತನ್ನ ಅನುಕೂಲಕ್ಕೆ ತಕ್ಕಂತೆ, ಲಾಭದಾಯಕವಾದ ಸಾಮಾಜಿಕ ಮತ್ತು ಆರ್ಥಿಕ ಕಟ್ಟುಪಾಡುಗಳನ್ನು ವಿಧಿಸಿಕೊಳ್ಳುತ್ತಾನೆ. ಬಳಿಕ, ಅವು ತಂದೊಡ್ಡುವ ಸಂಕೋಲೆಗಳಲ್ಲಿ ಸಿಲುಕಿ ನರಳುತ್ತಾನೆ. ಇಂತಹ ಸಾಮಾಜಿಕ ಸಂಕೋಲೆಗಳಲ್ಲಿ ರಕ್ತಸಂಬಂಧಿಗಳ ನಡುವಿನ ವಿವಾಹವೂ ಒಂದು.

ಮುಂದುವರಿದ ವರ್ಗಗಳು ಸ್ವಗೋತ್ರ ವಿವಾಹದ ಹೆಸರಿನಲ್ಲಿ ರಕ್ತಸಂಬಂಧಿಗಳ ನಡುವಿನ ವಿವಾಹವನ್ನು ನಿರ್ಬಂಧಿಸಿವೆ. ಪುರಾಣಗಳಲ್ಲೂ ಇಂತಹ ವಿವಾಹಕ್ಕೆ ನಿರ್ಬಂಧ ಇದೆ. ಆದರೆ ಹಿಂದುಳಿದ ವರ್ಗದವರು ರಕ್ತಸಂಬಂಧಿಗಳ ನಡುವಿನ ವಿವಾಹವನ್ನು ಇಂದಿನವರೆಗೂ ನಡೆಸುತ್ತಲೇ ಬಂದಿದ್ದಾರೆ. ಇಂತಹ ವಿವಾಹವನ್ನು ಯಾಕೆ ನಿರ್ಬಂಧಿಸಬೇಕಾಗುತ್ತದೆ ಎಂಬುದರ ಹಿಂದಿನ ವೈಜ್ಞಾನಿಕ ಕಾರಣಗಳು ಹೆಚ್ಚಿನವರಿಗೆ ತಿಳಿದಿಲ್ಲ.

ಬಹುತೇಕರು ಆರ್ಥಿಕ ಮುಗ್ಗಟ್ಟಿನ ಕಾರಣದಿಂದ ರಕ್ತಸಂಬಂಧದ ವಿವಾಹಕ್ಕೆ ಒತ್ತು ನೀಡುತ್ತಾರೆ. ಉದಾಹರಣೆಗೆ, ಉತ್ತಮ ಸ್ಥಿತಿಯಲ್ಲಿರುವ ಸಹೋದರನಿಗೆ ಅಥವಾ ಆತನ ಮಗನಿಗೆ ಅಕ್ಕ ಅಥವಾ ತಂಗಿಯು ತಮ್ಮ ಮಗಳನ್ನು ಮದುವೆ ಮಾಡುವುದು ಅಥವಾ ತವರಿನ ಮೇಲಿನ ಮಮಕಾರದಿಂದ ಅಂತಹದ್ದೊಂದು ವೈವಾಹಿಕ ಸಂಬಂಧ ಬೆಳೆಸಲು ಇಚ್ಛಿಸುವುದು ಸಾಮಾನ್ಯ. ಹಾಗೆಯೇ ಕೆಲವರು ತಮ್ಮ ಶ್ರೀಮಂತಿಕೆ, ಪ್ರತಿಷ್ಠೆ ಕಾಪಾಡಿಕೊಳ್ಳಲು ರಕ್ತಸಂಬಂಧದ ವಿವಾಹಕ್ಕೆ ಆದ್ಯತೆ ನೀಡುತ್ತಾರೆ. ರಾಜಮನೆತನದವರು ತಮ್ಮ ಕ್ಷತ್ರಿಯ ರಕ್ತವು ಅಮೂಲ್ಯವಾದುದೆಂದು ತಿಳಿದು, ಅದು ಬೇರೆ ಯಾವ ವರ್ಗದ ಜನರೊಂದಿಗೂ ಮಿಶ್ರವಾಗಬಾರದೆಂಬ ಕಾರಣಕ್ಕೆ ರಕ್ತಸಂಬಂಧಿಗಳಲ್ಲೇ ವಿವಾಹ ನೆರವೇರಿಸುತ್ತಾ ಬಂದಿದ್ದಾರೆ.

ಭಾರತದಲ್ಲಿ ಮುಖ್ಯವಾಗಿ ದಕ್ಷಿಣ ಭಾರತದ ಗ್ರಾಮೀಣ ಪ್ರದೇಶದಲ್ಲಿ ರಕ್ತಸಂಬಂಧಿಗಳ ನಡುವಿನ ವಿವಾಹ ಹೆಚ್ಚು. ಇದರಿಂದ ಭವಿಷ್ಯದ ಪೀಳಿಗೆಗಳಲ್ಲಿ ಆನುವಂಶೀಯ ಕಾಯಿಲೆಗಳ ಮಟ್ಟವು ಏರಿಕೆಯಾಗುತ್ತದೆ. ಪ್ರಸಕ್ತ ತಲೆಮಾರಿಗೆ ರಕ್ತಸಂಬಂಧದ ವಿವಾಹವನ್ನು ನಿರ್ಬಂಧಿಸಿದರೆ, ಮುಂದಿನ ತಲೆಮಾರುಗಳಲ್ಲಿ ಆ ಕುಟುಂಬದಲ್ಲಿ ಆನುವಂಶೀಯ ಕಾಯಿಲೆಗಳು ಕಡಿಮೆಯಾಗುತ್ತಾ ಬರುತ್ತವೆ. ಜೊತೆಗೆ ಜನಜಾಗೃತಿ ಮೂಡಿಸುವುದರಿಂದಲೂ ಈ ಕಾಯಿಲೆಗಳ ಮುಂದುವರಿಕೆಯನ್ನು ತಡೆಗಟ್ಟಬಹುದು.

ರಕ್ತಸಂಬಂಧದ ವಿವಾಹಗಳಲ್ಲಿ ಮೂರು ಬಗೆ. ಮೊದಲನೆಯದು, ಒಡಹುಟ್ಟಿದವರ ನಡುವೆ ನಡೆಯುವ ವಿವಾಹ. ಈ ರೀತಿಯ ವಿವಾಹವು ನಾಗರಿಕ ಸಮಾಜದಲ್ಲಿ ಕಂಡುಬಾರದಿದ್ದರೂ ಕೆಲವು ಬುಡಕಟ್ಟು ಜನಾಂಗಗಳಲ್ಲಿ ಇಂದಿಗೂ ಚಾಲ್ತಿಯಲ್ಲಿದೆ. ಇದನ್ನು ನಾವು ಮೊದಲನೇ ವರ್ಗದ ರಕ್ತಸಂಬಂಧ ಎನ್ನುತ್ತೇವೆ. ಎರಡನೇ ವರ್ಗದ ರಕ್ತಸಂಬಂಧವು ಮುಖ್ಯವಾಗಿ ಹಿಂದೂಗಳು ಮತ್ತು ಮುಸ್ಲಿಮರಲ್ಲಿ ಕಂಡುಬರುತ್ತದೆ. ಹಿಂದೂಗಳಲ್ಲಿ ಸೋದರಮಾವ, ಅಂದರೆ ತಾಯಿಯ ತಮ್ಮನೊಂದಿಗೆ ಅಥವಾ ಅಣ್ಣನ ಮಕ್ಕಳ ಜೊತೆಗಿನ ವಿವಾಹವು ಸಾಮಾನ್ಯವಾದರೆ, ಮುಸ್ಲಿಮರಲ್ಲಿ ತಂದೆಯ ಅಣ್ಣ ಅಥವಾ ತಮ್ಮನ ಮಕ್ಕಳೊಂದಿಗಿನ ವಿವಾಹವು ಸಾಮಾನ್ಯವಾಗಿರುತ್ತದೆ. ಮೂರನೇ ವರ್ಗದ ರಕ್ತಸಂಬಂಧವು ಒಂದೇ ವಂಶಸ್ಥರಾದರೂ ದೂರದ ಸಂಬಂಧಿಗಳ ನಡುವೆ ನಡೆಯುತ್ತದೆ. ಇವುಗಳಲ್ಲಿ ಮೊದಲ ಹಾಗೂ ಎರಡನೇ ವರ್ಗದ ವಿವಾಹವು ಅಪಾಯಕಾರಿಯಾದುದು.

ಸಾಮಾನ್ಯವಾಗಿ ರಕ್ತಸಂಬಂಧದ ವಿವಾಹದಿಂದ ಹುಟ್ಟುವ ಮಕ್ಕಳು ಬಲಹೀನರಾಗಿದ್ದು, ಬುದ್ಧಿಮಾಂದ್ಯರಾಗಿರುತ್ತಾರೆ. ಕೆಲವು ಮಕ್ಕಳಲ್ಲಿ ಕುರುಡುತನ, ಕಿವುಡುತನ ಸಾಮಾನ್ಯವಾಗಿರುತ್ತದೆ. ಈ ವಿವಾಹದಿಂದ ಬಂಜೆತನ, ಮರುಕಳಿಸುವ ಗರ್ಭಪಾತ, ನವಜಾತ ಶಿಶುಗಳ ಮರಣ ಮತ್ತು ಅಂಗವೈಕಲ್ಯದ ಪ್ರಮಾಣವೂ ಹೆಚ್ಚಾಗಿರುತ್ತದೆ.



ರಕ್ತಸಂಬಂಧದಲ್ಲಿ ಮದುವೆಯಾದ ಹೆಚ್ಚಿನವರ ಮಕ್ಕಳು ಮೇಲ್ನೋಟಕ್ಕೆ ಆರೋಗ್ಯವಂತರಾಗಿಯೇ ಕಾಣುತ್ತಾರೆ. ಇದನ್ನು ನೋಡಿ, ಹೀಗೆ ಮದುವೆಯಾಗುವುದರಿಂದ ಹುಟ್ಟುವ ಮಕ್ಕಳಿಗೆ ತೊಂದರೆಯಾಗುತ್ತದೆ ಎನ್ನುವುದೆಲ್ಲಾ ತಪ್ಪುಕಲ್ಪನೆ ಎಂದು ತಿಳಿಯುವವರೇ ಹೆಚ್ಚು. ಆದರೆ ರಕ್ತಸಂಬಂಧದಲ್ಲಿ ಮದುವೆ ಸಲ್ಲದು ಎನ್ನುವ ಬಲವಾದ ಪ್ರತಿಪಾದನೆಯ ಹಿಂದೆ ಇರುವ ವೈಜ್ಞಾನಿಕ ಕಾರಣಗಳನ್ನು ಅರಿಯುವುದು ಬಹಳ ಮುಖ್ಯ. ಹತ್ತಿರದ ಸಂಬಂಧದಲ್ಲಿ ಮದುವೆಯಾಗುವ ದಂಪತಿಯು ಸಾಮಾನ್ಯರಂತೆ ಆರೋಗ್ಯವಾಗಿಯೇ ಇರುತ್ತಾರೆ. ಆದರೆ ಅವರಲ್ಲಿ ಒಬ್ಬರು ಅಥವಾ ಕೆಲವೊಮ್ಮೆ ಇಬ್ಬರೂ ಆನುವಂಶೀಯ ಕಾಯಿಲೆಗಳ ವಾಹಕರಾಗಿರಬಹುದು. ಅಂತಹವರಿಗೆ ಹುಟ್ಟುವ ಮಕ್ಕಳಲ್ಲಿ ಶೇಕಡ 25ರಷ್ಟು ಮಕ್ಕಳಿಗೆ ಕಾಯಿಲೆ ಬರುವ ಸಾಧ್ಯತೆ ಇರುತ್ತದೆ. ಇದನ್ನು ನಾವು 3:1 ಎಂದು ಕರೆಯುತ್ತೇವೆ. ಅಂದರೆ, ಹುಟ್ಟುವ ನಾಲ್ವರು ಮಕ್ಕಳಲ್ಲಿ ಒಂದು ಮಗು ಸಂಪೂರ್ಣ ಆರೋಗ್ಯವಂತವಾಗಿ ಇರುತ್ತದೆ. ಇಬ್ಬರು ಮಕ್ಕಳು ಕಾಯಿಲೆಗಳ ವಾಹಕರಾಗಿರುತ್ತಾರೆ ಮತ್ತು ಒಂದು ಮಗುವಿಗೆ ಅನಾರೋಗ್ಯ ಇರುತ್ತದೆ. ಉದಾಹರಣೆಗೆ, ದಂಪತಿಯು ಒಂದೇ ಮಗು ಅಥವಾ ಇಬ್ಬರು ಮಕ್ಕಳನ್ನು ಮಾಡಿಕೊಂಡರೆ, ಈ ಮೇಲಿನ ಯಾವುದಾದರೂ ವಿಧದ ಮಗು ಅವರಿಗೆ ಜನಿಸಬಹುದು. ಹೀಗಾಗಿ, ಕೆಲವು ದಂಪತಿಗಳು ಆರೋಗ್ಯವಂತ ಮಕ್ಕಳಿಗೆ ಜನ್ಮ ನೀಡುವ ಸಾಧ್ಯತೆ ಇರುತ್ತದೆ. ಆದರೆ ಆ ಮಗು ರೋಗವಾಹಕವಾಗಿದ್ದರೆ ಮುಂದಿನ ತಲೆಮಾರುಗಳಲ್ಲಿ ಆನುವಂಶೀಯ ಕಾಯಿಲೆಗಳು ಕಾಣಿಸಿಕೊಳ್ಳದೇ ಇರಲಾರವು.

ಹೀಗಾಗಿ, ರಕ್ತಸಂಬಂಧಿಗಳ ನಡುವಿನ ವಿವಾಹವನ್ನು ಉತ್ತೇಜಿಸುವುದು ಸರಿಯಲ್ಲ. ಈಗಾಗಲೇ ಕಾರಣಾಂತರಗಳಿಂದ ವಿವಾಹ ನಡೆದಿದ್ದರೆ, ಮಗುವನ್ನು ಪಡೆಯುವ ಸಂದರ್ಭ ಬಂದಾಗ ಅಂತಹ ದಂಪತಿ ತಜ್ಞವೈದ್ಯರಿಂದ ವಾಹಕ ಪರೀಕ್ಷೆಗೆ (carrier screening) ಒಳಗಾಗಬೇಕಾಗುತ್ತದೆ. ಆಗ, ಬೆಳೆಯುತ್ತಿರುವ ಭ್ರೂಣವು ಆರೋಗ್ಯವಾಗಿದೆಯೇ ಇಲ್ಲವೇ ಎನ್ನುವುದನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಒಂದುವೇಳೆ ಭ್ರೂಣದ ವರ್ಣತಂತುಗಳು ಹಾಗೂ ಡಿಎನ್‌ಎಯಲ್ಲಿ ಏನಾದರೂ ತೊಂದರೆ ಕಾಣಿಸಿಕೊಂಡ ಪಕ್ಷದಲ್ಲಿ ಆ ಭ್ರೂಣವನ್ನು ಉಳಿಸಿಕೊಳ್ಳಬೇಕೇ ಬೇಡವೇ ಎಂಬುದನ್ನು ನಿರ್ಧರಿಸಲು ಇದರಿಂದ ಸುಲಭವಾಗುತ್ತದೆ. ಇದಕ್ಕಿಂತ ಸುರಕ್ಷಿತವಾದ ವಿಧಾನವೆಂದರೆ, ವಿವಾಹಕ್ಕೆ ಮೊದಲೇ ವಾಹಕ ಪರೀಕ್ಷೆಗೆ ಒಳಪಟ್ಟು, ತಾವು ಆರೋಗ್ಯವಂತ ಮಕ್ಕಳನ್ನು ಪಡೆಯುವ ಸಾಧ್ಯತೆ ಎಷ್ಟಿದೆ ಎಂಬುದನ್ನು ಅರಿಯುವುದು. ನಂತರ ಆ ವಿವಾಹದ ಬಗ್ಗೆ ನಿರ್ಧರಿಸುವುದು.

ಒಟ್ಟಿನಲ್ಲಿ, ರಕ್ತಸಂಬಂಧಿಗಳ ನಡುವಿನ ವಿವಾಹವನ್ನು ವಿಶಾಲವಾದ ದೃಷ್ಟಿಕೋನದಿಂದ ನೋಡಿ, ಅಧಿಕೃತವಾಗಿಯೇ ನಿಷೇಧಿಸುವುದು ಒಳ್ಳೆಯದು. ಇದರಿಂದ ಆನುವಂಶೀಯ ಕಾಯಿಲೆಗಳನ್ನು ತಡೆಗಟ್ಟಿ ಸಮಾಜದ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ.

ಲೇಖಕಿ: ಮುಖ್ಯಸ್ಥೆ, ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾಲಯ


ಸಂಬಂಧ 'ಕಾಯ್ದುಕೊಳ್ಳಬೇಡಿ'!

ರಕ್ತಸಂಬಂಧದಲ್ಲಿ ಮದುವೆಯಾಗುವ ದಂಪತಿಗಳಿಗೆ ಹುಟ್ಟುವ ಮಕ್ಕಳಲ್ಲಿ ಕಾಣಿಸಿಕೊಳ್ಳುವ ಆನುವಂಶೀಯ ಕಾಯಿಲೆಗಳು ಸಮುದಾಯದಿಂದ ಸಮುದಾಯಕ್ಕೆ ಭಿನ್ನವಾಗಿದ್ದು, ಕುತೂಹಲ ಹುಟ್ಟಿಸುತ್ತವೆ. ತಲಸ್ಸೇಮಿಯ ಕಾಯಿಲೆಯು ಸಿಂಧಿ, ಪಂಜಾಬಿ, ಗುಜರಾತಿ, ಬೆಂಗಾಲಿ ಮತ್ತು ಮಹಾರಾಷ್ಟ್ರದ ಜನರಲ್ಲಿ ಹೆಚ್ಚು. ಕುಡುಗೋಲು ಕಣ ರಕ್ತಹೀನತೆ (ಸಿಕಲ್ ಸೆಲ್ ಅನೀಮಿಯಾ) ಆದಿವಾಸಿ ಜನಾಂಗದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಜಿ6ಪಿ.ಡಿ. (ಗ್ಲೂಕೋಸ್– 6 ಫಾಸ್ಫೇಟ್ ಡಿಹೈಡ್ರೋಜಿನೇಸ್) ಕಿಣ್ವ ಕೊರತೆಯು ಪಾರ್ಸಿಗಳು, ಸಿಂಧಿ, ಪಂಜಾಬಿ ಮತ್ತು ಕೆಲವು ಆದಿವಾಸಿಗಳಲ್ಲಿ ಇರುತ್ತದೆ. ಬ್ಯುಟಿರಿಲ್‌ಕೋಲಿನೆಸ್ಟಿರೇಸ್ ಎನ್ನುವ ಕಿಣ್ವದ ಕೊರತೆಯು ದಕ್ಷಿಣ ಭಾರತದ ಕುಮಟಿ ಅಥವಾ ವೈಶ್ಯರುಗಳಲ್ಲಿ ಕಂಡುಬರುತ್ತದೆ. ಇದರಿಂದಾಗಿ, ಶಸ್ತ್ರಚಿಕಿತ್ಸೆಗೆ ಕೊಡುವ ಅನಸ್ತೇಶಿಯಾದಿಂದ ಪಾರ್ಶ್ವವಾಯು ಉಂಟಾಗುವ ಸಾಧ್ಯತೆ ಹೆಚ್ಚು. ಹಾಗೆಯೇ ಸ್ತನಕ್ಯಾನ್ಸರ್ ಮತ್ತು ಅಂಡಾಶಯದ ಕ್ಯಾನ್ಸರ್ ಪಾರ್ಸಿ ಜನಾಂಗದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಮೇಪಲ್ ಸಿರಪ್ ಯೂರಿನ್ ಕಾಯಿಲೆಯು ಕಾಶ್ಮೀರಿಗರು ಮತ್ತು ಕೆಲವು ಮುಸ್ಲಿಂ ಜನಾಂಗದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಹಾಗೆಯೇ ಹುಟ್ಟಿನಿಂದಲೇ ಬರುವ ಕಿವುಡುತನವು ದಕ್ಷಿಣ ಭಾರತದ, ಮುಖ್ಯವಾಗಿ ಕೇರಳ ರಾಜ್ಯದ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ಯಹೂದಿ ಜನಾಂಗವು ವಿಶ್ವದ ಬುದ್ಧಿವಂತ ಜನಾಂಗಗಳಲ್ಲಿ ಒಂದು ಎನಿಸಿಕೊಂಡಿದೆ. ಆದರೆ ಈ ಜನಾಂಗದಲ್ಲಿ ರಕ್ತಸಂಬಂಧಿಗಳ ನಡುವಿನ ವಿವಾಹವು ಸಾಮಾನ್ಯವಾಗಿದ್ದು, ಇವರಲ್ಲಿ ಹಲವಾರು ರೀತಿಯ ಆನುವಂಶೀಯ ಕಾಯಿಲೆಗಳು ಸರ್ವೇಸಾಮಾನ್ಯವಾಗಿವೆ. ಈ ಜನಾಂಗದಲ್ಲಿ ರೋಗವಾಹಕ ವರ್ಣತಂತುಗಳನ್ನು ಹೊಂದಿದವರ ಪ್ರಮಾಣ ಸರಿಸುಮಾರು 1:5 ಅನುಪಾತದಲ್ಲಿ ಇರುವುದರಿಂದ, ಇಂತಹ ಹೆಣ್ಣು ಮತ್ತು ಗಂಡಿಗೆ ಹುಟ್ಟುವ ಮಕ್ಕಳು ನಾನಾ ರೀತಿಯ ಕಾಯಿಲೆಗಳಿಂದ ಬಳಲುತ್ತಾರೆ.

ರಸಾಸ್ವಾದ

ಸ್ನ್ಯಾಕ್ಸ್ ಸುಲಭದಲ್ಲಿ ಮಾಡಿ



• ವೇದಾವತಿ ಎಚ್.ಎಸ್.

ಮಧ್ಯಾಹ್ನ ಹೊಟ್ಟೆ ತುಂಬ ಊಟ ಮಾಡಿದ್ದರೂ ಸಂಜೆಯಾಗುತ್ತಿದ್ದಂತೆಯೇ ಯಾವುದಾದರೂ ಸ್ನ್ಯಾಕ್ಸ್‌ನತ್ತ ಮನಸ್ಸು ಸೆಳೆಯುವುದು ಸಹಜ. ಪ್ರತಿಬಾರಿಯೂ ಹೊರಗೆ ಹೋಗಿಯೇ ಅವುಗಳನ್ನು ತಿನ್ನುವುದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ. ಸುಲಭವಾಗಿ ಮನೆಯಲ್ಲೇ ಅವುಗಳನ್ನು ಮಾಡಿ ಸವಿದರೆ, ಹೊರಗೆ ತಿಂದು ಬಂದ ನಂತರ 'ಏನೇನು ಹಾಕಿದ್ದರೋ' ಎಂದು ಆತಂಕದಿಂದ ಹಲುಬುವುದೂ ತಪ್ಪುತ್ತದೆ, ಜೇಬಿಗೆ ಹೆಚ್ಚು ಹೊರೆ ಬೀಳುವುದೂ ತಪ್ಪುತ್ತದೆ. ಬನ್ನಿ, ಅಂತಹ ಎರಡು ಸ್ನ್ಯಾಕ್ಸ್ ರೆಸಿಪಿಗಳನ್ನು ಅರಿಯೋಣ.

ಜಾಲ್ ಮುರ್ರೈ/ ಜಾಲ್ ಮುರಿ

ಬೇಕಾಗುವ ಸಾಮಗ್ರಿ: ಚುರುಮುರಿ ಮಂಡಕ್ಕಿ 4 ಕಪ್, ಸೇವ್ 1/4 ಕಪ್, ಶೇಂಗಾ 1/4 ಕಪ್, ಆಲೂಗಡ್ಡೆ 1/2 ಕಪ್, ಸೌತೆಕಾಯಿ 1/2 ಕಪ್, ಹಸಿಮೆಣಸಿನಕಾಯಿ 2 ಟೀ ಚಮಚ, ಕೊತ್ತಂಬರಿ ಸೊಪ್ಪು ಸ್ವಲ್ಪ, ಟೊಮೆಟೊ 1/2 ಕಪ್, ಕ್ಯಾರೆಟ್ ತುರಿ 1/2 ಕಪ್, ಹುಣಸೆರಸ 1/4 ಕಪ್, ಸಾಸಿವೆ ಎಣ್ಣೆ 3 ಟೀ ಚಮಚ, ಜೀರಿಗೆ ಪುಡಿ 3 ಟೀ ಚಮಚ, ಉಪ್ಪು 1 ಟೀ ಚಮಚ, ಬ್ಲ್ಯಾಕ್ ಸಾಲ್ಟ್ 1 ಟೀ ಚಮಚ, ಅಮ್‌ಚೂರ್ ಪೌಡರ್ 1 ಟೀ ಚಮಚ, ಅಚ್ಚಖಾರದ ಪುಡಿ 1 ಟೀ ಚಮಚ, ಗರಂ ಮಸಾಲೆ 1 ಟೀ ಚಮಚ, ಚಿಕ್ಕದಾಗಿ ಹೆಚ್ಚಿದ ಶುಂಠಿ 1 ಟೀ ಚಮಚ.

ತಯಾರಿಸುವ ವಿಧಾನ: ಆಲೂಗಡ್ಡೆಯನ್ನು ಬೇಯಿಸಿ ಕತ್ತರಿಸಿಟ್ಟುಕೊಳ್ಳಿ. ಕ್ಯಾರೆಟ್ ತುರಿದುಕೊಳ್ಳಿ. ಟೊಮೆಟೊ, ಈರುಳ್ಳಿ, ಹಸಿಮೆಣಸಿನಕಾಯಿಯನ್ನು ಚಿಕ್ಕದಾಗಿ ಹೆಚ್ಚಿಟ್ಟುಕೊಳ್ಳಿ. ಹುಣಸೆರಸವನ್ನು ತಯಾರಿಸಿ ಮಸಾಲೆ ಪದಾರ್ಥಗಳನ್ನು ಅದರಲ್ಲಿ ಹಾಕಿ. ಅವು ಹುಣಸೆರಸದಲ್ಲಿ ಚೆನ್ನಾಗಿ ಸೇರಿಕೊಳ್ಳುತ್ತವೆ. ಬಾಣಲೆಗೆ ಮಂಡಕ್ಕಿ ಹಾಕಿ ಎರಡರಿಂದ ಮೂರು ನಿಮಿಷ ಹುರಿಯಿರಿ. ಹಾಗೇ ಶೇಂಗಾ ಬೀಜವನ್ನೂ ಹುರಿದುಕೊಳ್ಳಿ. ದೊಡ್ಡದಾದ ಪಾತ್ರೆಯಲ್ಲಿ ಹುರಿದ ಪದಾರ್ಥಗಳು ಮತ್ತು ಮಸಾಲೆ ಪದಾರ್ಥಗಳನ್ನು ಸೇರಿಸಿ. ಸಾಸಿವೆ ಎಣ್ಣೆಯನ್ನು ಸೇರಿಸಿ ನಿಧಾನವಾಗಿ ಮಿಶ್ರ ಮಾಡಿ. ನಂತರ ಸೇವ್ ಮತ್ತು ಕೊತ್ತಂಬರಿ ಸೊಪ್ಪನ್ನು ಸೇರಿಸಿ. ರುಚಿಯಾದ ಜಾಲ್ ಮುರ್ರೈ ಅಥವಾ ಜಾಲ್ ಮುರಿಯನ್ನು ಹೀಗೆ ಸುಲಭವಾಗಿ ತಯಾರಿಸಿ ಸವಿಯಿರಿ.

ಮಂಡಕ್ಕಿ ಚೂಡಾ



ಬೇಕಾಗುವ ಸಾಮಗ್ರಿ: ಮಂಡಕ್ಕಿ 250 ಗ್ರಾಂ, ಒಣಕೊಬ್ಬರಿ ಚಿಕ್ಕದಾಗಿ ಕತ್ತರಿಸಿದ್ದು 3/4 ಕಪ್, ಹುರಿಗಡಲೆ 1 ಕಪ್, ಜಜ್ಜಿದ ಬೆಳ್ಳುಳ್ಳಿ 50 ಎಸಳು, ಕರಿಬೇವು ಒಂದು ಹಿಡಿ, ಶೇಂಗಾ 3/4 ಕಪ್, ಅರಸಿನ 1 ಟೇಬಲ್ ಚಮಚ, ಜೀರಿಗೆ ಪುಡಿ 1 ಟೇಬಲ್ ಚಮಚ, ನಿಂಬೆಹಣ್ಣು 1/2, ಅಚ್ಚಖಾರದ ಪುಡಿ 1/2 ಟೇಬಲ್ ಚಮಚ, ರುಚಿಗೆ ತಕ್ಕಷ್ಟು ಉಪ್ಪು, ಎಳ್ಳು 1 ಟೇಬಲ್ ಚಮಚ, ಎಣ್ಣೆ 3/4 ಕಪ್, ಸಕ್ಕರೆ ಪುಡಿ 1 ಟೇಬಲ್ ಚಮಚ, ಸಾಸಿವೆ 1/2 ಟೇಬಲ್ ಚಮಚ.

ತಯಾರಿಸುವ ವಿಧಾನ: ಬಾಣಲೆ ಬಿಸಿ ಮಾಡಿ ಎಣ್ಣೆಯನ್ನು ಹಾಕಿಕೊಳ್ಳಿ. ಬಿಸಿಯಾದ ನಂತರ ಶೇಂಗಾ, ಹುರಿಗಡಲೆ, ಒಣಕೊಬ್ಬರಿಯನ್ನು ಒಂದೊಂದಾಗಿ ಹುರಿದು ಮಂಡಕ್ಕಿಗೆ ಸೇರಿಸಿ. ನಂತರ ಕರಿಬೇವು, ಬೆಳ್ಳುಳ್ಳಿ, ಸಾಸಿವೆ, ಎಳ್ಳನ್ನು ಅದೇ ಎಣ್ಣೆಯಲ್ಲಿ ಹಾಕಿ ಹುರಿದುಕೊಳ್ಳಿ. ನಂತರ ಒಲೆಯನ್ನು ಆರಿಸಿ ಅಚ್ಚಖಾರದ ಪುಡಿ, ಜೀರಿಗೆ ಪುಡಿ, ಅರಸಿನದ ಪುಡಿಯನ್ನು ಅವುಗಳೊಂದಿಗೆ ಸೇರಿಸಿ. ಸಕ್ಕರೆ ಪುಡಿ, ಉಪ್ಪು ಮತ್ತು ನಿಂಬೆರಸವನ್ನು ಮಂಡಕ್ಕಿಗೆ ಸೇರಿಸಿ ನಿಧಾನವಾಗಿ ಮಿಶ್ರ ಮಾಡಿ. ರುಚಿಕರವಾದ ಮಂಡಕ್ಕಿ ಚೂಡಾ ತಯಾರಾಗುತ್ತದೆ. ಒಮ್ಮೆ ತಯಾರಿಸಿ ಇಟ್ಟರೆ ತಿಂಗಳಾದರೂ ಹಾಳಾಗುವುದಿಲ್ಲ.

ಕನಸು ಬಿತ್ತಿದ ಗುಂಡಿನ ಮೊರೆತ!

ವ್ಯಕ್ತಿ ಟ್ರೆಂಡಿಂಗ್



ಸಿಮ್ರನ್ ಬಾಲಾ

• ಜಗದೀಶ

ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಈ ಬಾರಿ ನಡೆದ ಗಣರಾಜ್ಯೋತ್ಸವ ಪಥಸಂಚಲನವು ಒಂದು ವಿಶೇಷ ಕ್ಷಣಕ್ಕೆ ಸಾಕ್ಷಿಯಾಯಿತು. ದೇಶದ ಪ್ರಮುಖ ಅರೆಸೇನಾ ಪಡೆಯಾಗಿರುವ ಕೇಂದ್ರ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ಪುರುಷರ ತುಕಡಿಯನ್ನು ಇದೇ ಮೊದಲ ಬಾರಿಗೆ ತರುಣಿಯೊಬ್ಬರು ಮುನ್ನಡೆಸುವ ಮೂಲಕ ಇತಿಹಾಸ ಬರೆದರು. 26 ವರ್ಷದ ಆ ಹೆಮ್ಮೆಯ ಹೆಣ್ಣುಮಗಳು ಸಿಮ್ರನ್ ಬಾಲಾ.

ಮಹಿಳೆಯರಿರುವ ಸೇನಾ ತುಕಡಿಯ ನೇತೃತ್ವವನ್ನು ಮಹಿಳೆಯರೇ ವಹಿಸಿಕೊಳ್ಳುವುದು ಸಾಮಾನ್ಯ. ಆದರೆ 140 ಪುರುಷರಿದ್ದ ಸಿಆರ್‌ಪಿಎಫ್ ತುಕಡಿಯನ್ನು ಯುವತಿಯೊಬ್ಬರು ಮುನ್ನಡೆಸಿದ್ದನ್ನು ನೋಡಿ ದೇಶವೇ ಸಂತಸಪಟ್ಟಿತು.

ಈ ಸಾಧನೆ ಮಾಡಿದ ಸಿಮ್ರನ್ ಹುಟ್ಟಿ ಬೆಳೆದಿದ್ದು ಪದೇ ಪದೇ ಗುಂಡಿನ ಸದ್ದಿನಿಂದ ತಲ್ಲಣಿಸುವ ಗಡಿಭಾಗ ಜಮ್ಮು- ಕಾಶ್ಮೀರದಲ್ಲಿ. ಆ ಗುಂಡಿನ ಮೊರೆತವೇ ಸಿಮ್ರನ್ ಒಳಗೆ ಸೇನೆ ಸೇರುವ ಕನಸು ಬಿತ್ತಿದ್ದು. ಭಯೋತ್ಪಾದನೆಯ ಭೀತಿಯಿಂದ ನಲುಗಿಹೋಗಿದ್ದವರ ನಡುವೆ ತನ್ನ ಕನಸಿನ ಬೆನ್ನೇರಿದ ಹುಡುಗಿ, ಸೇನೆಗೆ ಸೇರುವ ಗುರಿಯನ್ನು 2023ರಲ್ಲಿ ತಲುಪಿದರು. ಕೇಂದ್ರ ಲೋಕಸೇವಾ ಆಯೋಗ ನಡೆಸುವ ಮೀಸಲು ಶಸ್ತ್ರಾಸ್ತ್ರ ಪಡೆಯ ಸಹಾಯಕ ಕಮಾಂಡೆಂಟ್ ನೇಮಕಾತಿ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆ ವರ್ಷ ಈ ಪರೀಕ್ಷೆಯಲ್ಲಿ ಜಮ್ಮು–ಕಾಶ್ಮೀರದಿಂದ ತೇರ್ಗಡೆಯಾದ ಏಕೈಕ ವ್ಯಕ್ತಿ ಸಿಮ್ರನ್. ತರಬೇತಿ ವೇಳೆ ಸಿಮ್ರನ್ ತೋರಿದ ಶಿಸ್ತು, ನಾಯಕತ್ವ ಗುಣ, ಫಿಟ್‌ನೆಸ್ ಹಾಗೂ ಆತ್ಮವಿಶ್ವಾಸ ಗಮನಾರ್ಹ ಆಗಿದ್ದವು. ಅವಕಾಶ ಕೊಟ್ಟರೆ ಮಹಿಳೆಯರು ಯಾವ ಕೆಲಸವನ್ನು ಬೇಕಾದರೂ ನಿರ್ವಹಿಸಬಲ್ಲರು ಎಂಬುದನ್ನಷ್ಟೇ ಅಲ್ಲ, ಪ್ರಬಲ ನಾಯಕತ್ವಕ್ಕೆ ಮಹಿಳೆ, ಪುರುಷ ಎಂಬ ಭೇದವಿಲ್ಲ, ಅದಕ್ಕೆ ಬೇಕಾಗಿರುವುದು ಶಿಸ್ತು ಮತ್ತು ಸಾಮರ್ಥ್ಯ ಎಂಬುದನ್ನೂ ಸಿಮ್ರನ್ ಸಾಬೀತುಪಡಿಸಿದ್ದಾರೆ. ಜಮ್ಮುವಿನ ಸರ್ಕಾರಿ ಮಹಿಳಾ ಕಾಲೇಜಿನಿಂದ ರಾಜ್ಯಶಾಸ್ತ್ರದಲ್ಲಿ ಪದವಿ ಪಡೆದಿರುವ ಸಿಮ್ರನ್, ಅಧಿಕಾರಿಯಾಗಿ ಸೇನೆಗೆ ಸೇರಿದ ರಜೌರಿ ಜಿಲ್ಲೆಯ ಮೊದಲ ವ್ಯಕ್ತಿ ಸಹ ಆಗಿದ್ದಾರೆ. ಭಯೋತ್ಪಾದನೆ ನಿಗ್ರಹ, ನಕ್ಸಲ್ ವಿರೋಧಿ ಕಾರ್ಯಾಚರಣೆ ಮತ್ತು ಆಂತರಿಕ ಭದ್ರತಾ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸಿಆರ್‌ಪಿಎಫ್‌ನಲ್ಲಿ ಛಾಪು ಮೂಡಿಸಿದ್ದಾರೆ.

ಸ್ವಚ್ಛ ಮನೆ ಸುಂದರ ಮನಸ್ಸು

ಅಚ್ಚುಕಟ್ಟಾಗಿ ಇರಿಸಿಕೊಂಡ ಮನೆಯ ವಾತಾವರಣದಿಂದ ಸಿಗುವ ನೆಮ್ಮದಿ ದೊಡ್ಡದು



• ಹರ್ಷಾ ಕಾಮತ್

ಮನೆಯ ಒಳಗೆ ಬರುತ್ತಿದ್ದಂತೆಯೇ ಸೋಫಾದ ಮೇಲೆ ಹರಡಿಕೊಂಡಿರುವ ನ್ಯೂಸ್‌ಪೇಪರ್, ಮೇಜಿನ ಮೇಲೆ ಕುಡಿದಿಟ್ಟ ಕಾಫಿ ಕಪ್, ಕುರ್ಚಿಯ ಮೇಲೆ ಬಟ್ಟೆಗಳ ರಾಶಿ, ರೂಮಿಗೆ ಹೋದರೆ ಹಾಸಿಗೆಯ ಮೇಲೆ ತಲೆದಿಂಬು ಒಂದು ಕಡೆ, ಅಸ್ತವ್ಯಸ್ತವಾದ ಹೊದಿಕೆ ಇನ್ನೊಂದು ಕಡೆ, ಬಾತ್‌ರೂಮ್‌ಗೆ ಹೋದರೆ ತೆರೆದಿಟ್ಟ ಶಾಂಪೂ ಬಾಟಲಿಗಳು, ಒಗೆಯಬೇಕಾದ ಬಟ್ಟೆಗಳ ರಾಶಿ, ಅಡುಗೆ ಮನೆಯಂತೂ ಕೇಳಲೇಬೇಡಿ. ಇದೆಲ್ಲವನ್ನೂ ನೋಡುತ್ತಿದ್ದಂತೆ ಕೋಪ ಉಕ್ಕಿ ಬರುತ್ತದೆ. ಮಾನಸಿಕ ಗೊಂದಲ, ಅಶಾಂತಿಯ ಭಾವನೆಗಳು ಸೃಷ್ಟಿಯಾಗುತ್ತವೆ. ಇದು ಬಹುತೇಕ ಮನೆಗಳಲ್ಲಿ ಸೃಷ್ಟಿಯಾಗುವಂತಹ ಸಾಮಾನ್ಯ ಪರಿಸ್ಥಿತಿ.

ಅದೇ ಮನೆಯ ಒಳಗೆ ಬಂದಾಗ ಇಡೀ ಮನೆ ಸ್ವಚ್ಛ ಸುಂದರವಾಗಿದ್ದರೆ, ವಸ್ತುಗಳು ತಮ್ಮ ಜಾಗದಲ್ಲಿ ಇದ್ದರೆ ಮಾನಸಿಕ ಉದ್ವೇಗ ಆಗುವುದಿಲ್ಲ, ಅಲ್ಲವೇ? ಇದು ಅಚ್ಚುಕಟ್ಟಾಗಿ ಇರಿಸಿಕೊಂಡ ಮನೆಯು ನಮ್ಮ ಮನಸ್ಸಿನ ಮೇಲೆ ಉಂಟು ಮಾಡುವ ಪರಿಣಾಮ. ಇದರಿಂದ, ಸ್ವಚ್ಛತೆ ಮತ್ತು ಮನಸ್ಸಿಗೆ ನೇರ ಸಂಬಂಧವಿದೆ ಎಂಬುದು ತಿಳಿಯುತ್ತದೆ.

ಮನೆಯನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದು, ಬೇಡದ ವಸ್ತುಗಳನ್ನು ಹೊರಗೆ ಹಾಕುವುದು ಎಲ್ಲ ದೃಷ್ಟಿಯಿಂದಲೂ ಉತ್ತಮ. ಮನಸ್ಸಿನ ನೆಮ್ಮದಿಗೆ ಇದೊಂದು ಥೆರಪಿ ಕೂಡ ಎಂದು ಸಂಶೋಧನೆಗಳು ಹೇಳುತ್ತವೆ. ಇತ್ತೀಚಿನ ದಿನಗಳಲ್ಲಿ ಖಿನ್ನತೆ, ಮಾನಸಿಕ ಒತ್ತಡ ಜಾಸ್ತಿ ಆಗಿರುವುದರಿಂದ, ಇದರಿಂದ ಹೊರಬರಲು ಸ್ವಚ್ಛವಾದ ಮನೆಯು ಒಂದು ಚಿಕಿತ್ಸೆಯ ರೂಪದಲ್ಲಿ ಕೆಲಸ ಮಾಡುತ್ತದೆ ಅನ್ನಬಹುದು.

ಕಸ ಗುಡಿಸುವುದು, ಒರೆಸುವುದು, ದೂಳು ತೆಗೆಯುವುದು, ಫ್ಯಾನ್, ಕಿಟಕಿ ಸ್ವಚ್ಛಗೊಳಿಸುವುದು, ಕಪಾಟನ್ನು ಸ್ವಚ್ಛ ಮಾಡಿ ಸಾಮಾನುಗಳನ್ನು ಅಚ್ಚುಕಟ್ಟಾಗಿ ಜೋಡಿಸಿ ಇಡುವುದು ಮಾನಸಿಕ ಆರೋಗ್ಯಕ್ಕೆ ಹಿತಕರ ಮಾತ್ರವಲ್ಲದೆ ನಮ್ಮ ದೈಹಿಕ ಆರೋಗ್ಯಕ್ಕೂ ಒಳ್ಳೆಯದು.

ಹೇಗೆ ಸ್ವಚ್ಛ ಮಾಡುವುದು?

ಮನೆಯ ಬೇರೆ ಕೆಲಸದ ಜೊತೆಗೆ ದಿನಾ ಒಂದೊಂದು ಜಾಗವನ್ನು ಸ್ವಚ್ಛಗೊಳಿಸಿ. ಹತ್ತು ಹದಿನೈದು ನಿಮಿಷಗಳ ಟೈಮರ್ ಇಟ್ಟು ಸ್ವಚ್ಛಗೊಳಿಸಬಹುದು ಅಥವಾ ವಾರಕ್ಕೆ ಒಮ್ಮೆಯಾದರೂ ಆಗಬಹುದು. ಮನೆಮಂದಿಯನ್ನು ಈ ಕಾರ್ಯದಲ್ಲಿ ಕೈಜೋಡಿಸುವಂತೆ ಕೇಳಿ. ಆದರೆ ಗಂಟೆಗಟ್ಟಲೆ ಅದನ್ನೇ ಮಾಡುತ್ತಾ ಕೂರಬೇಡಿ. ಮೊದಲೇ ಪ್ಲ್ಯಾನ್ ಮಾಡಿ, ಯಾವ ದಿನ ಯಾವ ಭಾಗವನ್ನು ಸ್ವಚ್ಛಗೊಳಿಸುವುದೆಂದು ನಿರ್ಧರಿಸಿ.

ಅನಗತ್ಯ ವಸ್ತುಗಳನ್ನು ಅಗತ್ಯ ಇರುವವರಿಗೆ ನೀಡಿ. ಹಳೆಯದನ್ನು ಅನೇಕ ರೀತಿ ಮರುಬಳಕೆ ಮಾಡಬಹುದು. ಪ್ರಯೋಜನಕ್ಕೆ ಬಾರದ್ದನ್ನು ಬಿಸಾಡಿ. ಮೂರು ತಿಂಗಳಿಗೊಮ್ಮೆ ಬೇಡದ್ದನ್ನು ಬಿಸಾಡಿ ಹೊಸ ವಸ್ತುಗಳನ್ನು ಅವಶ್ಯಕತೆ ಇದ್ದರೆ ಮಾತ್ರ ಕೊಂಡುಕೊಳ್ಳಿ. ವರ್ಷಕ್ಕೆ ಒಂದು ಅಥವಾ ಎರಡು ದಿನ, ಉದಾಹರಣೆಗೆ, ಹುಟ್ಟುಹಬ್ಬ ಅಥವಾ ವಾರ್ಷಿಕೋತ್ಸವದ ಸಂದರ್ಭಗಳಲ್ಲಿ ಮಾತ್ರ ಹೊಸ ವಸ್ತುಗಳನ್ನು ಖರೀದಿಸಿ.

ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಮಾಲ್‌ಗಳು ನಮ್ಮನ್ನು ಆಕರ್ಷಿಸುತ್ತವೆ. ಯೂಟ್ಯೂಬ್ ಇನ್‌ಫ್ಲುಯೆನ್ಸರ್‌ಗಳು ತೋರಿಸುವ ವಸ್ತುಗಳನ್ನು ಅಗತ್ಯವಿಲ್ಲದಿದ್ದರೂ ಕೂಡಲೇ ಖರೀದಿಸುವ ಉಮೇದು ನಮ್ಮಲ್ಲಿ ಹಲವರಿಗೆ ಇರುತ್ತದೆ. ಹೀಗಾಗಿ, ಅಂತಹವರ ಬಲೆಗೆ ಬೀಳಬೇಡಿ. ಮನೆಯಲ್ಲಿ ಸಾಮಾನುಗಳು ಕಡಿಮೆ ಇದ್ದಷ್ಟೂ ಸ್ವಚ್ಛ ಮಾಡಲು ಸುಲಭ, ಒತ್ತಡವೂ ಕಮ್ಮಿ.

ಮನಃಶಾಸ್ತ್ರಜ್ಞರು ನಡೆಸಿರುವ ಕೆಲವು ಅಧ್ಯಯನಗಳ ಪ್ರಕಾರ, ಮನೆಯನ್ನು ಸ್ವಚ್ಛ ಹಾಗೂ ವ್ಯವಸ್ಥಿತವಾಗಿ ಇಟ್ಟುಕೊಳ್ಳುವುದರಿಂದ ಸಮಯ ನಿರ್ವಹಣೆಯನ್ನು ಸಹ ಕಲಿಯುತ್ತೇವೆ. ಕೆಲಸ ಮಾಡುವ ಕೌಶಲ ಹೆಚ್ಚುತ್ತದೆ. ನಮ್ಮ ಜೀವನ ವ್ಯವಸ್ಥಿತವಾಗಿ ಇರುತ್ತದೆ. ನಾವು ಖುಷಿಯಿಂದ ಇರಲು ಸಾಧ್ಯವಾಗುತ್ತದೆ. ಮನೆಮಂದಿ ಸಹ ಖುಷಿಯಾಗಿ ಇರುತ್ತಾರೆ.

ಅಮ್ಮ ಹೇಳ್ತಾಳೆ



ಗೋಧಿ ಪಾಯಸಕ್ಕೆ ಸೇಬು ಅಥವಾ ಬಾಳೆಹಣ್ಣನ್ನು ಸಣ್ಣಗೆ ಹೆಚ್ಚಿ ಹಾಕಿದರೆ ಭಿನ್ನವಾದ ರುಚಿ ಬರುತ್ತದೆ. ಪಾಯಸ ಮಾಡಿದ ಬಳಿಕ ಕೊನೆಯಲ್ಲಿ ಹಣ್ಣಿನ ತುಣುಕುಗಳನ್ನು ಹಾಕಿ ಸ್ವಲ್ಪ ಹೊತ್ತು ಮುಚ್ಚಿಡಬೇಕು.

ನೀವೂ ಬರೆಯಬಹುದು

ಮಹಿಳೆ, ಮಕ್ಕಳು, ಕುಟುಂಬ, ಸಂಬಂಧ, ಬಾಂಧವ್ಯ, ಭಾವನಾತ್ಮಕ ಬೆಸುಗೆಯಂತಹ ಸಂಗತಿಗಳ ಬಗ್ಗೆ ನೀವು ಲೇಖನ, ಪುಟ್ಟ ಪುಟ್ಟ ಬರಹಗಳನ್ನು 'ಭೂಮಿಕಾ'ಗೆ ಕಳುಹಿಸಬಹುದು. ಬಗೆಬಗೆ ಅಡುಗೆಗಳ ರೆಸಿಪಿಯನ್ನೂ ಹಂಚಿಕೊಳ್ಳಬಹುದು. ನಮ್ಮ ಇ–ಮೇಲ್ ಐ.ಡಿ– bhoomika@prajavani.co.in

ನಗರದ ಜನರಿಗೂ ‘ಗೃಹ ಆರೋಗ್ಯ’

ಜಿಬಿಎ ವ್ಯಾಪ್ತಿಯಲ್ಲಿ ಯೋಜನೆ ಜಾರಿಗೆ ಆರೋಗ್ಯ ಇಲಾಖೆಯಿಂದ ಅಗತ್ಯ ಸಿದ್ಧತೆ

• ವರುಣ ಹೆಗಡೆ



ಬೆಂಗಳೂರು: ಮನೆ ಬಾಗಿಲಲ್ಲಿಯೇ ವಿವಿಧ ಅನಾರೋಗ್ಯ ಸಮಸ್ಯೆಗಳನ್ನು ಪತ್ತೆ ಮಾಡಿ, ಔಷಧ ವಿತರಿಸುವ ‘ಗೃಹ ಆರೋಗ್ಯ’ ಯೋಜನೆಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಗೂ ವಿಸ್ತರಿಸಲು ಆರೋಗ್ಯ ಇಲಾಖೆ ಮುಂದಾಗಿದೆ.

ಈ ಸಂಬಂಧ ಇಲಾಖೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ. ಈಗಾಗಲೇ ಆರೋಗ್ಯ ಇಲಾಖೆ ಹಾಗೂ ಜಿಬಿಎ ಅಧಿಕಾರಿಗಳು ಸಭೆ ನಡೆಸಿದ್ದು, ಗ್ರಾಮೀಣ ಭಾಗಕ್ಕೆ ಸೀಮಿತವಾಗಿದ್ದ ಈ ಯೋಜನೆಯನ್ನು ಫೆಬ್ರುವರಿ ತಿಂಗಳಲ್ಲಿ ನಗರಕ್ಕೂ ವಿಸ್ತರಿಸಲು ಕಾರ್ಯಯೋಜನೆ ರೂಪಿಸಲಾಗಿದೆ. ನಗರದ ಎಲ್ಲ ಜನರ ಆರೋಗ್ಯ ತಪಾಸಣೆ ಕಷ್ಟಸಾಧ್ಯ ಎಂಬ ಕಾರಣಕ್ಕೆ, ಆರ್ಥಿಕವಾಗಿ ದುರ್ಬಲರಾಗಿರುವ ಹಾಗೂ ಕೊಳೆಗೇರಿ ಪ್ರದೇಶದ ನಿವಾಸಿಗಳಿಗೆ ಅವರ ಮನೆ ಬಾಗಿಲಲ್ಲಿಯೇ ವಿವಿಧ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಅನಾರೋಗ್ಯ ಸಮಸ್ಯೆ ಇರುವವರಿಗೆ ಅಗತ್ಯ ಔಷಧ ಒದಗಿಸುವ ಜತೆಗೆ, ಚಿಕಿತ್ಸೆಗೂ ಕ್ರಮವಹಿಸಲಾಗುತ್ತದೆ.

ಆರಂಭಿಕ ಹಂತದಲ್ಲಿಯೇ ರೋಗ ಪತ್ತೆ ಮಾಡಿ, ಚಿಕಿತ್ಸೆ ಒದಗಿಸುವ ಉದ್ದೇಶದಿಂದ ಈ ಯೋಜನೆಯನ್ನು ಪ್ರಾಯೋಗಿಕವಾಗಿ 2024ರ ಅಕ್ಟೋಬರ್‌ನಲ್ಲಿ ಕೋಲಾರದಲ್ಲಿ ಪ್ರಾರಂಭಿಸಲಾಗಿತ್ತು. 2025ರ ಜೂನ್‌ನಲ್ಲಿ ಈ ಯೋಜನೆಯನ್ನು ರಾಜ್ಯದಾದ್ಯಂತ ವಿಸ್ತರಿಸಲಾಗಿದೆ. ಸದ್ಯ ಗ್ರಾಮೀಣ ಪ್ರದೇಶದಲ್ಲಿ ಮಾತ್ರ ಈ ಯೋಜನೆಯಡಿ ಆರೋಗ್ಯ ತಪಾಸಣೆ ನಡೆಸಲಾಗುತ್ತಿದೆ.

> **ಜಿಬಿಎ ವ್ಯಾಪ್ತಿಗೂ ಗೃಹ ಆರೋಗ್ಯ ಯೋಜನೆ ವಿಸ್ತರಿಸಲು ಮುಂದಾಗಿದ್ದೇವೆ. ಈ ಸಂಬಂಧ ಅಧಿಕಾರಿಗಳ ಜತೆಗೆ ಸಭೆ ನಡೆಸಲಾಗಿದ್ದು, ಯೋಜನೆಯಡಿ ತಪಾಸಣೆ ಜತೆಗೆ ಔಷಧವನ್ನೂ ನೀಡಲಾಗುವುದು**
> **ದಿನೇಶ್ ಗುಂಡೂರಾವ್,** ಆರೋಗ್ಯ ಸಚಿವ

ವೈದ್ಯರ ತಂಡ ಭೇಟಿ: ಯೋಜನೆಯಡಿ ವೈದ್ಯರನ್ನೊಳಗೊಂಡ ತಂಡವು 30 ವರ್ಷ ಮೇಲ್ಪಟ್ಟವರನ್ನು ತಪಾಸಣೆ ಮಾಡಲಿದೆ. ಸಮುದಾಯ ಆರೋಗ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಸಂರಕ್ಷಣಾಧಿಕಾರಿಗಳು ಹಾಗೂ ಆಶಾ ಕಾರ್ಯಕರ್ತೆಯರನ್ನು ಒಳಗೊಂಡ ತಂಡವು ಮನೆಗಳಿಗೆ ಭೇಟಿ ನೀಡಲಿದೆ. ಮಧುಮೇಹ ಮತ್ತು ಅಧಿಕ ರಕ್ತದೊತ್ತಡ ಸಮಸ್ಯೆ ಎದುರಿಸುತ್ತಿರುವವರಿಗೆ ಒಂದು ತಿಂಗಳಿಗೆ ಸಾಕಾಗುವಷ್ಟು ಮಾತ್ರೆಗಳನ್ನೂ ನೀಡಲಾಗುತ್ತದೆ. ಈ ಔಷಧವನ್ನು ಪ್ರತಿ ತಿಂಗಳು ಪರಿಶೀಲಿಸಿ, ಮುಂದುವರಿಕೆಗೆ ಅಗತ್ಯವಿರುವ ಮಾತ್ರೆಗಳನ್ನು ಒದಗಿಸಲಾಗುತ್ತದೆ. ಈ ಕಾರ್ಯಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಜತೆಗೆ ನಮ್ಮ ಕ್ಲಿನಿಕ್‌ಗಳನ್ನೂ ಬಳಸಿಕೊಳ್ಳಲಾಗುತ್ತದೆ.

‘ಸದ್ಯ ಗ್ರಾಮೀಣ ಪ್ರದೇಶದಲ್ಲಿ ಜಾರಿಯಲ್ಲಿರುವ ಈ ಯೋಜನೆಗೆ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಆರಂಭಿಕ ಹಂತದಲ್ಲಿಯೇ ರೋಗ ಪತ್ತೆಗೆ ಯೋಜನೆ ಸಹಕಾರಿಯಾಗಿದೆ. ಸಾಂಕ್ರಾಮಿಕವಲ್ಲದ ರೋಗಗಳ ಬಗ್ಗೆ ಹಾಗೂ ನಿಯಮಿತ ಆರೋಗ್ಯ ತಪಾಸಣೆ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ನಗರ ಪ್ರದೇಶದಲ್ಲಿ ಯೋಜನೆ ವಿಸ್ತರಣೆಗೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ’ ಎಂದು ಆರೋಗ್ಯ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

14 ರೋಗಗಳ ಪತ್ತೆ

ಗೃಹ ಆರೋಗ್ಯ ಯೋಜನೆಯಡಿ ಸಾಂಕ್ರಾಮಿಕವಲ್ಲದ 14 ರೋಗಗಳ ಪತ್ತೆಗೆ ತಪಾಸಣೆ ಮಾಡಲಾಗುತ್ತದೆ. ಮಧುಮೇಹ, ಅಧಿಕ ರಕ್ತದೊತ್ತಡ, ಬಾಯಿ, ಸ್ತನ ಹಾಗೂ ಗರ್ಭಕಂಠದ ಕ್ಯಾನ್ಸರ್, ಮಾನಸಿಕ ಅಸ್ವಸ್ಥತೆ, ಮೂತ್ರಪಿಂಡ ಸಮಸ್ಯೆ, ಶ್ವಾಸಕೋಶ ಕಾಯಿಲೆ, ರಕ್ತಹೀನತೆ, ಕಣ್ಣಿನ ಸಮಸ್ಯೆ ಸೇರಿ ವಿವಿಧ ಅನಾರೋಗ್ಯ ಸಮಸ್ಯೆಗಳನ್ನು ಪತ್ತೆ ಮಾಡಲಾಗುತ್ತದೆ.

ಈ ಯೋಜನೆಯಡಿ ಹೆಚ್ಚಿನ ಚಿಕಿತ್ಸೆಯನ್ನೂ ಒದಗಿಸಲಾಗುತ್ತದೆ. ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ನಮ್ಮ ಕ್ಲಿನಿಕ್‌ನ ವೈದ್ಯಾಧಿಕಾರಿಗಳು ಶಂಕಿತ ಪ್ರಕರಣಗಳನ್ನು ದೃಢಪಡಿಸಿ, ಹೆಚ್ಚಿನ ಚಿಕಿತ್ಸೆಗೆ ಶಿಫಾರಸು ಮಾಡುತ್ತಾರೆ.

ನೀಲನಕ್ಷೆ ಸಿದ್ಧ • ಶಾಸಕ ಶರತ್ ಬಚ್ಚೇಗೌಡ ಮಾಹಿತಿ

ಹೊಸಕೋಟೆವರೆಗೆ ಮೆಟ್ರೊ

ಪ್ರಜಾವಾಣಿ ವಾರ್ತೆ


ಹೊಸಕೋಟೆ: ಬೆಂಗಳೂರಿನ ಕೃಷ್ಣರಾಜಪುರದಿಂದ ಹೊಸಕೋಟೆವರೆಗೂ ‘ನಮ್ಮ ಮೆಟ್ರೊ’ ಗುಲಾಬಿ ಮಾರ್ಗ ವಿಸ್ತರಣೆಗೆ ನೀಲನಕ್ಷೆ ಬಹುತೇಕ ಪೂರ್ಣಗೊಂಡಿದೆ. ಬಿಎಂಆರ್‌ಸಿಎಲ್ ಕಾರ್ಯ ಸಿದ್ಧತಾ ವರದಿ ಸಿದ್ಧಪಡಿಸಿದೆ.

ಹೊಸಕೋಟೆಗೆ ಒಟ್ಟು 16.3 ಕಿ.ಮೀ. ಉದ್ದದ ಮೆಟ್ರೊ ಮಾರ್ಗದಲ್ಲಿ 11 ನಿಲ್ದಾಣಗಳು ನಿರ್ಮಾಣಗೊಳ್ಳಲಿವೆ. ಈ ಮಾರ್ಗದಲ್ಲಿ ಡಬಲ್ ಡೆಕ್ಕರ್ ಮೆಟ್ರೊ ಸಂಚರಿಸಲಿದೆ.

ಕೋಲಾರ, ಚಿಂತಾಮಣಿ ಹಾಗೂ ಮಾಲೂರು ಜನತೆ ಬೆಂಗಳೂರಿಗೆ ತೆರಳಲು ಹೊಸಕೋಟೆ ರಸ್ತೆಯನ್ನು ಅವಲಂಬಿಸಿದ್ದಾರೆ. ಹೊಸಕೋಟೆವರೆಗೂ ಮೆಟ್ರೊ ಮಾರ್ಗ ಶುರುವಾದರೆ ಸಂಚಾರ ದಟ್ಟಣೆ ಕಡಿಮೆಯಾಗಲಿದೆ.

ಹೊಸಕೋಟೆಗೆ ಮೆಟ್ರೊ ಕಾರಿಡಾರ್ ಬೇಕು ಎಂಬ ಜನರ ಬಹಳ ದಿನಗಳ ಕನಸು ಶೀಘ್ರ ನನಸಾಗಲಿದೆ ಎಂದು ಶಾಸಕ ಶರತ್ ಬಚ್ಚೇಗೌಡ ಶುಕ್ರವಾರ ‘ಪ್ರಜಾವಾಣಿ’ಯೊಂದಿಗೆ ಮಾಹಿತಿ ಹಂಚಿಕೊಂಡರು. ಶೀಘ್ರದಲ್ಲಿಯೇ ಯೋಜನೆಯ ಸಮಗ್ರ ಮಾಹಿತಿ ಒದಗಿಸುವುದಾಗಿ ಅವರು ಹೇಳಿದರು.

ಒಪ್ಪಿಗೆ: ಮೆಟ್ರೊ ಯೋಜನೆಯ ಬಗ್ಗೆ ಸದನಲ್ಲಿಯೂ ಧ್ವನಿ ಎತ್ತಲಾಗಿತ್ತು. ಕೆ.ಆರ್.ಪುರಂನಿಂದ ಹೊಸಕೋಟೆವರೆಗಿನ ಮೆಟ್ರೊ ಗುಲಾಬಿ ಮಾರ್ಗಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಒಪ್ಪಿಗೆ ನೀಡಿದ್ದಾರೆ. ಸದ್ಯ ಮಾರ್ಗದ ಸಿದ್ಧತೆ ನೀಲನಕ್ಷೆ ರೂಪಿಸಲಾಗಿದ್ದು, ಮಾರ್ಗದ ವಿಸ್ತರಣೆ ಘೋಷಣೆಯೊಂದೇ ಬಾಕಿ ಉಳಿದಿದೆ ಎಂದರು.



ಎಲ್ಲೆಲ್ಲಿ ನಿಲ್ದಾಣ?

ಕೆ.ಆರ್.ಪುರ, ಐಟಿಐ ಭವನ, ಟಿ.ಸಿ ಪಾಳ್ಯ, ಭಟ್ಟರಹಳ್ಳಿ ಜಂಕ್ಷನ್, ಮೇಡಹಳ್ಳಿ ಜಂಕ್ಷನ್, ಆವಲಹಳ್ಳಿ, ಬೂದಿಗೆರೆ ಕ್ರಾಸ್, ಕಾಟಂನಲ್ಲೂರು ಗೇಟ್, ಹೊಸಕೋಟೆ ಟೋಲ್ ಪ್ಲಾಜಾ, ಕೆಇಬಿ ಸರ್ಕಲ್, ಹೊಸಕೋಟೆ ಸರ್ಕಾರಿ ಆಸ್ಪತ್ರೆ ಸೇರಿದಂತೆ 11 ನಿಲ್ದಾಣ ಗುರುತಿಸಲಾಗಿದೆ ಎಂದು ಶಾಸಕರು ತಿಳಿಸಿದರು.

ಮೆಟ್ರೊ: ಸೈಕಲ್‌ಗೆ ಉಚಿತ ಪಾರ್ಕಿಂಗ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಮ್ಮ ಮೆಟ್ರೊ ನಿಲ್ದಾಣಗಳಲ್ಲಿ ಸೈಕಲ್ ಪಾರ್ಕಿಂಗ್ ಮಾಡಲು ವಿಧಿಸುತ್ತಿದ್ದ ಗಂಟೆಗೆ ₹ 1 ಹಾಗೂ ದಿನಕ್ಕೆ ₹ 10 ಶುಲ್ಕವನ್ನು ಬಿಎಂಆರ್‌ಸಿಎಲ್ ತೆಗೆದು ಹಾಕಿದೆ. ಸೈಕಲ್‌ಗಳನ್ನು ಉಚಿತವಾಗಿ ಪಾರ್ಕಿಂಗ್ ಮಾಡಲು ಅವಕಾಶ ನೀಡುವ ಮೂಲಕ ಪರಿಸರ ಸ್ನೇಹಿ ಸಂಚಾರಕ್ಕೆ ಪ್ರೋತ್ಸಾಹ ನೀಡಲು ನಿರ್ಧರಿಸಿದೆ.

ಸೈಕಲ್ ಪಾರ್ಕಿಂಗ್‌ಗಾಗಿ ಬಿಡ್ ಕರೆಯಲಾಗಿದೆ. ಹೊಸ ಆಪರೇಟರ್ ಆಯ್ಕೆ ಪೂರ್ಣಗೊಂಡ ನಂತರ 9 ಮೆಟ್ರೊ ನಿಲ್ದಾಣಗಳಲ್ಲಿ ಉಚಿತವಾಗಿ ಸೈಕಲ್ ಪಾರ್ಕಿಂಗ್ ಸೌಲಭ್ಯ ಜಾರಿಗೆ ಬರುತ್ತದೆ. ಹಸಿರು ಮಾರ್ಗದಲ್ಲಿ ಮಾದಾವರ, ಪೀಣ್ಯ ಇಂಡಸ್ಟ್ರಿ ಮತ್ತು ಜೆ.ಪಿ. ನಗರ, ಹಳದಿ ಮಾರ್ಗದಲ್ಲಿ ಬಿ.ಟಿ.ಎಂ. ಲೇಔಟ್, ಎಲೆಕ್ಟ್ರಾನಿಕ್ ಸಿಟಿ, ರಾಗಿಗುಡ್ಡ ಮತ್ತು ಜಯದೇವ ಆಸ್ಪತ್ರೆ ನಿಲ್ದಾಣ, ನೇರಳೆ ಮಾರ್ಗದಲ್ಲಿ ಮೈಸೂರು ರಸ್ತೆ ಮತ್ತು ಬೈಯಪ್ಪನಹಳ್ಳಿಯಲ್ಲಿ ಈ ವ್ಯವಸ್ಥೆ ಅನುಷ್ಠಾನಗೊಳ್ಳಲಿದೆ.

ನಮ್ಮ ಮೆಟ್ರೊ 65 ನಿಲ್ದಾಣಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಇದೆ. ಇಲ್ಲಿ ಸೈಕಲ್‌ಗಳನ್ನು ಉಚಿತವಾಗಿ ನಿಲ್ಲಿಸಲು ಅವಕಾಶ ನೀಡುವಂತೆ ಹಿಂದೆಯೇ ಗುತ್ತಿಗೆದಾರರಿಗೆ ಸೂಚನೆ ನೀಡಲಾಗಿದೆ. ಹಾಗಾಗಿ ಕಳೆದ ಆರು ತಿಂಗಳಿನಿಂದ ಸೈಕಲ್‌ಗಳಿಗೆ ಉಚಿತ ಪಾರ್ಕಿಂಗ್ ದೊರೆಯುತ್ತಿದೆ. ಇನ್ನು ಮುಂದೆ ಪಾರ್ಕಿಂಗ್‌ಗೆ ಟೆಂಡರ್ ಕರೆಯುವಾಗ ಅಧಿಕೃತವಾಗಿಯೇ ಸೈಕಲ್‌ಗಳಿಗೆ ಉಚಿತವಾಗಿ ಪಾರ್ಕಿಂಗ್ ನೀಡುವ ಷರತ್ತು ಇರಲಿದೆ ಎಂದು ಬಿಎಂಆರ್‌ಸಿಎಲ್ ಉಪಪ್ರಧಾನ ವ್ಯವಸ್ಥಾಪಕ (ಸಂಪರ್ಕ) ಆರ್. ಮುನಿವೀರೇಗೌಡ ಮಾಹಿತಿ ನೀಡಿದ್ದಾರೆ.

‘ದಿನದಿಂದ ದಿನಕ್ಕೆ ವಾಹನಗಳ ಸಂಖ್ಯೆ ಹೆಚ್ಚುತ್ತಿದೆ. ಹಾಗಾಗಿ ಮೆಟ್ರೊ ನಿಲ್ದಾಣಗಳ ಪಾರ್ಕಿಂಗ್ ಸ್ಥಳದಲ್ಲಿ ನಿಲ್ಲಿಸುವ ವಾಹನಗಳ ಸಂಖ್ಯೆ ಅದರಲ್ಲಿಯೂ ದ್ವಿಚಕ್ರ ವಾಹನಗಳು ಅಧಿಕವಾಗುತ್ತಿವೆ. ಸೈಕಲ್‌ಗಳಿಗಾಗಿ ಪ್ರತ್ಯೇಕ ವ್ಯವಸ್ಥೆ ಇರುವಲ್ಲಿ ಮಾತ್ರವಲ್ಲ, ಇಂಥ ಕಡೆಗಳಲ್ಲಿಯೂ ಸೈಕಲ್ ನಿಲ್ಲಿಸಲು ಜಾಗವಿದ್ದಲ್ಲಿ ಉಚಿತವಾಗಿ ನೀಡಲಾಗುತ್ತಿದೆ. ವಿದ್ಯಾರ್ಥಿಗಳು ಸೈಕಲ್ ಬಳಸುತ್ತಿದ್ದಾರೆ. ಉಳಿದವರು ಕೂಡಾ ಸೈಕಲ್ ಬಳಸುವಂತಾಗಬೇಕು. ಪರಿಸರ ಮಾಲಿನ್ಯ ಕಡಿಮೆಯಾಗಬೇಕು ಎಂಬುದು ನಮ್ಮ ಉದ್ದೇಶ’ ಎಂದು ವಿವರಿಸಿದ್ದಾರೆ.

ಕಪ್ಪಣ್ಣ ಸಾಂಸ್ಕೃತಿಕ ಪ್ರಶಸ್ತಿಗೆ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೆಂಟರ್ ಸ್ಟೇಜ್ ಸಂಸ್ಥೆಯು ರಂಗ ಸಂಘಟಕ ಶ್ರೀನಿವಾಸ ಕಪ್ಪಣ್ಣ ಅವರ ಹೆಸರಿನಲ್ಲಿ ನೀಡುವ 2026ನೇ ಸಾಲಿನ ಸೆಂಟರ್ ಸ್ಟೇಜ್–ಕಪ್ಪಣ್ಣ ಸಾಂಸ್ಕೃತಿಕ ಪ್ರಶಸ್ತಿಗೆ ಇಬ್ಬರನ್ನು ಆಯ್ಕೆ ಮಾಡಲಾಗಿದೆ.


ಗಣೇಶ್

ಶಿವಮೊಗ್ಗದ ನಟ, ನಿರ್ದೇಶಕ ಎಂ.ಗಣೇಶ್ ಅವರನ್ನು ಕಪ್ಪಣ್ಣ ಸಾಂಸ್ಕೃತಿಕ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಯು ₹50 ಸಾವಿರ ನಗದು, ಪ್ರಶಸ್ತಿ ಫಲಕ ಒಳಗೊಂಡಿದೆ.


ಶಕೀಲ್ ಅಹಮದ್

ವಿಜಯಪುರದ ಶಕೀಲ್ ಅಹಮದ್ ಅವರನ್ನು ಕಪ್ಪಣ್ಣ ಸಾಂಸ್ಕೃತಿಕ ಯುವ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಯು ₹25 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ.

ಫೆ.13ರ ಸಂಜೆ 6ಕ್ಕೆ ನಗರದ ನಯನ ಸಭಾಂಗಣದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಸಂಸ್ಥೆ ಅಧ್ಯಕ್ಷ ಟಿ.ಎಸ್.ನಾಗಾಭರಣ ಅವರು ತಿಳಿಸಿದ್ದಾರೆ.

ಕಲಾ ವಿನ್ಯಾಸಕ ವಿಠ್ಠಲ ರಾವ್‌ಗೆ ರಂಗ ಗೌರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೊಟ್ಟವಾಡಿ ನಂಜುಂಡಸ್ವಾಮಿ ಗೆಳೆಯರ ಬಳಗ ನೀಡುವ 2025ನೇ ಸಾಲಿನ ‘ರಂಗ ಗೌರವ’ಕ್ಕೆ ಕಲಾ ವಿನ್ಯಾಸಕ ಹಾಗೂ ರಂಗ ಸಂಘಟಕ ಬಿ.ವಿಠ್ಠಲ ರಾವ್ (ಅಪ್ಪಯ್ಯ) ಆಯ್ಕೆಯಾಗಿದ್ದಾರೆ.

ಈ ರಂಗ ಗೌರವವು ₹10 ಸಾವಿರ ನಗದು ಒಳಗೊಂಡಿದೆ. ನಾಟಕಕಾರ ಹಾಗೂ ರಂಗ ಸಂಘಟಕರಾಗಿ, ರಂಗಭೂಮಿಯ ಕಲಾವಿದರಿಗೆ ವೈದ್ಯಕೀಯ ನೆರವು ನೀಡುತ್ತಿದ್ದ ತೊಟ್ಟವಾಡಿ ನಂಜುಂಡಸ್ವಾಮಿ ಅವರ ಸ್ಮರಣಾರ್ಥ ಈ ರಂಗ ಗೌರವ ನೀಡಲಾಗುತ್ತಿದೆ.


ವಿಠ್ಠಲ ರಾವ್

ಫೆಬ್ರುವರಿ11ರಂದು ಸಂಜೆ 5 ಗಂಟೆಗೆ ಕನ್ನಡ ಭವನದ ನಯನ ಸಭಾಂಗಣದಲ್ಲಿ ರಂಗ ಗೌರವ ಸನ್ಮಾನ ಕಾರ್ಯಕ್ರಮನ್ನು ಹಮ್ಮಿಕೊಳ್ಳಲಾಗಿದೆ ಎಂದು ತೊಟ್ಟವಾಡಿ ನಂಜುಂಡಸ್ವಾಮಿ ಗೆಳೆಯರ ಬಳಗದ ಸಂಚಾಲಕ ಗುಂಡಣ್ಣ ಚಿಕ್ಕಮಗಳೂರು ಅವರು ತಿಳಿಸಿದ್ದಾರೆ.

ಅಪರಾಧ ತಡೆಗಾಗಿ ಬೈಕ್ ರ್‍ಯಾಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಮಾನವೀಯ ದಿನದ ಪ್ರಯುಕ್ತ ಹ್ಯುಮಾನಿಟಿ ಕಾಲ್ಸ್ ಟ್ರಸ್ಟ್ ಹಮ್ಮಿಕೊಂಡಿದ್ದ ಅಪರಾಧ ತಡೆ ಮಾಸಾಚರಣೆ ಭಾಗವಾಗಿ ಬೈಕ್ ರ್‍ಯಾಲಿ ನಡೆಯಿತು.

ಸಮುದಾಯದ ಜವಾಬ್ದಾರಿ, ಅಪರಾಧ ತಡೆಗಟ್ಟುವಿಕೆ ಮತ್ತು ಸುರಕ್ಷಿತ ಚಾಲನೆ ಉತ್ತೇಜಿಸುವ ಬಗ್ಗೆ ಜಾಗೃತಿ ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ ಕೇಂಬ್ರಿಡ್ಜ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಸಿಐಟಿ) ವಿದ್ಯಾರ್ಥಿಗಳು, ಬಿಯುಸಿ-ಇಂಡಿಯಾ ರೈಡರ್ಸ್ ಮತ್ತು ಬೆಂಗಳೂರು ನಗರ ಪೊಲೀಸರೊಂದಿಗೆ ಭಾಗವಹಿಸಿದ್ದರು.

ಇದೇ ಸಮಯದಲ್ಲಿ ‘ಅಖಿಲ ಭಾರತ ಮತ್ತು ನೇಪಾಳ ಅಂತರ ರಾಷ್ಟ್ರೀಯ ಜಾಗೃತಿ ರ್‍ಯಾಲಿ’ಗೆ ಚಾಲನೆ ನೀಡಲಾಯಿತು. ಮಾನವೀಯ ಮೌಲ್ಯಗಳ ಅಳವಡಿಕೆ ಮತ್ತು ಸುರಕ್ಷತಾ ಚಾಲನಾ ಸಂಸ್ಕೃತಿ ಬೆಳೆಸುವುದರ ಬಗ್ಗೆ ಸಂದೇಶಗಳನ್ನು ಹೊತ್ತು ಸಾಗಿತು. ಹ್ಯುಮಾನಿಟಿ ಕಾಲ್ಸ್ ಟ್ರಸ್ಟ್ ಅಧ್ಯಕ್ಷ ಸುಜ್ಞಾನ್ ಮನು ನೇತೃತ್ವ ವಹಿಸಿದ್ದರು.


ಸೀಮಾಂತ್ ಕುಮಾರ್ ಸಿಂಗ್ ಅವರಿಗೆ ಅತ್ಯುತ್ತಮ ನಾಯಕತ್ವ ಮತ್ತು ಸಮುದಾಯ ಕಲ್ಯಾಣಕ್ಕಾಗಿ ವಿಶೇಷ ಗೌರವ ನೀಡಲಾಯಿತು

45 ದಿನ ಭಾರತದ ಹಲವು ರಾಜ್ಯಗಳು ಮತ್ತು ನೇಪಾಳಕ್ಕೆ ರ್‍ಯಾಲಿ ಸಾಗಿತು.

ಸಂಚಾರ ಅವಧಿಯಲ್ಲಿ ಪ್ರಮುಖ ನಗರಗಳಿಗೆ ಭೇಟಿ ನೀಡಿ ಜನರಲ್ಲಿ ಜಾಗೃತಿ ಮೂಡಿಸಲಾಯಿತು. ಸರ್ಕಾರಿ ಕಚೇರಿಗಳಿಗೂ ಭೇಟಿ ನೀಡಲಾಯಿತು. ವಿವಿಧ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಸಂವಾದ ಏರ್ಪಡಿಸಲಾಯಿತು.

ಕೇಂಬ್ರಿಡ್ಜ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾರ್ಯಕ್ರಮದಲ್ಲಿ ಬೆಂಗಳೂರು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್, ಹೆಚ್ಚುವರಿ ಪೊಲೀಸ್ ಕಮಿಷನರ್ ರಮೇಶ್ ಬಾನೋತ್, ಉಪ ಪೊಲೀಸ್ ಕಮಿಷನರ್ (ವೈಟ್‌ಫೀಲ್ಡ್) ಪರಶುರಾಮ್, ಸಹಾಯಕ ಪೊಲೀಸ್ ಕಮಿಷನರ್ (ವೈಟ್‌ಫೀಲ್ಡ್) ರೀನಾ ಸುವರ್ಣ ಮತ್ತು ಕೆ.ಆರ್.ಪುರಂ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ರಾಮಮೂರ್ತಿ, ಹ್ಯುಮಾನಿಟಿ ಕಾಲ್ಸ್ ಟ್ರಸ್ಟ್ ಅಧ್ಯಕ್ಷ ಸುಜ್ಞಾನ್ ಮನು, ಕಾರ್ಯದರ್ಶಿ ಅಪೂರ್ವ ಡಿ.ಆರ್., ಸಿಐಟಿ ಅಧ್ಯಕ್ಷ ಡಿ.ಕೆ. ಮೋಹನ್, ಸಿಇಒ ನಿತಿನ್ ಮೋಹನ್ ಪಾಲ್ಗೊಂಡಿದ್ದರು.

ಸಿಐಟಿ ವಿದ್ಯಾಸಂಸ್ಥೆ, ಕ್ಯಾಪ್ಟನ್ ಬಿ.ಬಿ. ರಘುನಾಥ್, ಮಾಸ್ಟರ್ ಲಿಖಿತ್, ಶಿಶು ಮಂದಿರ್‌ಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕರ್ನಾಟಕಕ್ಕೆ ಗೆಲುವು

ಬೆಂಗಳೂರು: ಆತಿಥೇಯ ಕರ್ನಾಟಕ ತಂಡವು ಶುಕ್ರವಾರ ನಡೆದ ಖೇಲೊ ಇಂಡಿಯಾ– ಅಸ್ಮಿತಾ 13 ವರ್ಷದೊಳಗಿನ ಬಾಲಕಿಯರ ಫುಟ್‌ಬಾಲ್ ಲೀಗ್ (ದಕ್ಷಿಣ ವಲಯ) ಪಂದ್ಯದಲ್ಲಿ 13–0 ಗೋಲುಗಳಿಂದ ಪುದುಚೇರಿ ತಂಡವನ್ನು ಮಣಿಸಿತು. ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಕರ್ನಾಟಕ ಪರ ರುಕ್ಷಾನಾ ಮತ್ತು ಸುಭಾತ್ರಾ ತಲಾ ಐದು ಗೋಲು ಗಳನ್ನು ದಾಖಲಿಸಿದರು. ಮತ್ತೊಂದು ಪಂದ್ಯದಲ್ಲಿ ಕೇರಳ 4–0ಯಿಂದ ಆಂಧ್ರಪ್ರದೇಶ ತಂಡವನ್ನು ಸೋಲಿಸಿತು.

ಚಿಟಿಕೆ ಸುದ್ದಿ

ಸೂಕ್ತ ತನಿಖೆಗೆ ಆಗ್ರಹ

ಬೆಂಗಳೂರು: ಮಹಾರಾಷ್ಟ್ರದ ಉಪಮುಖ್ಯಮಂತ್ರಿಯಾಗಿದ್ದ ಅಜಿತ್ ಪವಾರ್ ಅವರು ವಿಮಾನ ದುರಂತದಲ್ಲಿ ಮೃತಪಟ್ಟ ಪ್ರಕರಣದ ಬಗ್ಗೆ ಸೂಕ್ತ ತನಿಖೆಯಾಗಬೇಕು ಎಂದು ರಾಷ್ಟ್ರವಾದಿ ಕಾಂಗ್ರೆಸ್ ಪಕ್ಷದ ಕರ್ನಾಟಕ ಘಟಕ ಶುಕ್ರವಾರ ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎನ್‌ಸಿಪಿ ರಾಜ್ಯ ಘಟಕದ ಅಧ್ಯಕ್ಷ ಹೂಡಿ ಪ್ರದೀಪ್ ಕುಮಾರ್, 'ವಿಮಾನ ದುರಂತದ ಹಿಂದೆ ರಾಜಕೀಯ ಹುನ್ನಾರದ ಶಂಕೆ ಇದೆ' ಎಂದರು.

ಅಜಿತ್ ಪವಾರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.

'ದಲಿತರನ್ನೇ ಗುರಿ ಮಾಡಲಾಗುತ್ತಿದೆ'

ಬೆಂಗಳೂರು: 'ಕಾಂಗ್ರೆಸ್ ಸರ್ಕಾರದಲ್ಲಿ ದಲಿತರನ್ನೇ ಗುರಿ ಮಾಡಲಾಗುತ್ತಿದೆ. ಯಾವುದೇ ಕಾರಣಕ್ಕೂ ಇಂತಹ ಷಡ್ಯಂತ್ರಗಳಿಗೆ ಅವಕಾಶ ನೀಡುವುದಿಲ್ಲ' ಎಂದು ಮಾಜಿ ಸಂಸದ ಎಲ್.ಹನುಮಂತಯ್ಯ ಎಚ್ಚರಿಕೆ ನೀಡಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು 'ವಿರೋಧ ಪಕ್ಷದ ನಾಯಕರು, ದಲಿತ ನಾಯಕರ ವಿರುದ್ಧ ದಲಿತರನ್ನೇ ಎತ್ತಿ ಕಟ್ಟುವುದು ನಡೆಯುತ್ತಿದೆ ಮತ್ತು ದಲಿತ ನಾಯಕರನ್ನು ಗುರಿಯಾಗಿಸಿಕೊಂಡು ಅವರನ್ನು ಅಧಿಕಾರದಿಂದ ಇಳಿಸುವ ಸಂಚು ನಡೆಯುತ್ತಿದೆ' ಎಂದರು.

ಮಾಜಿ ಸಚಿವ ಎಂ. ಶಿವಣ್ಣ, ಮಾಜಿ ಶಾಸಕ ಜಿ.ಎಸ್. ನಂಜುಂಡಸ್ವಾಮಿ, ಕಾಂಗ್ರೆಸ್ ಮುಖಂಡ ಗೌತಮ್ ಕೆ.ವಿ. ಉಪಸ್ಥಿತರಿದ್ದರು.

ಬಿಬಿಸಿ: ಭೂಮಿಗೆ ಪರಿಹಾರ ದರ ನಿಗದಿ

ಯಲಹಂಕ ಹೋಬಳಿಯ ವೆಂಕಟಾಲ ಗ್ರಾಮದಲ್ಲಿ ಎಕರೆಗೆ ₹15.60 ಕೋಟಿ • 'ಸಂಧಾನಿತ ಪರಿಹಾರ ದರ'ಕ್ಕೆ ಆಕ್ಷೇಪ

• ಕೆ.ಎಸ್.ಸುನಿಲ್

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಹತ್ವಾಕಾಂಕ್ಷೆಯ ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಪೆರಿಫೆರಲ್ ರಿಂಗ್ ರಸ್ತೆ- 1, ಬಿಬಿಸಿ) ಯೋಜನೆಗೆ ಸ್ವಾಧೀನ ಪಡಿಸಿಕೊಳ್ಳುವ ಭೂಮಿಗೆ ಪರಿಹಾರ ದರ ನಿಗದಿಪಡಿಸಲಾಗಿದೆ.

ಯೋಜನೆಗೆ ಭೂಮಿ ಬಿಟ್ಟು ಕೊಡುವ ಮಾಲೀಕರು ಪ್ರಾಧಿಕಾರದ 'ಸಂಧಾನಿತ ಪರಿಹಾರ ದರ'ಕ್ಕೆ ಆಕ್ಷೇಪ ವ್ಯಕ್ತಪಡಿಸಿದರೆ, 'ಭೂಮಿಗೆ ಉತ್ತಮ ದರ ನೀಡಲಾಗುತ್ತಿದೆ' ಎಂದು ಬಿಡಿಎ ಸಮರ್ಥಿಸಿಕೊಂಡಿದೆ. ಉದಾಹರಣೆಗೆ ಯಲಹಂಕ ಹೋಬಳಿಯ ಕೋಗಿಲು ಗ್ರಾಮದ 19 ಗುಂಟೆ ಜಾಗಕ್ಕೆ ಸಂಧಾನಿತ ಮೊತ್ತ ₹2.56 ಕೋಟಿ ನಿಗದಿಪಡಿಸಿದ್ದರೆ, ಬೆಂಗಳೂರು ಉತ್ತರ ತಾಲ್ಲೂಕಿನ ಯಲಹಂಕ ಹೋಬಳಿಯ ವೆಂಕಟಾಲ ಗ್ರಾಮದಲ್ಲಿ ಪ್ರತಿ ಎಕರೆಗೆ ₹15.60 ಕೋಟಿ ದರ ನಿಗದಿಯಾಗಿದೆ.

ಕೆ.ಆರ್.ಪುರ ತಾಲ್ಲೂಕಿನ ಕೊತ್ತನೂರಿನಲ್ಲಿ ಎಕರೆಗೆ ₹14.54 ಕೋಟಿ ನಗದು ಪರಿಹಾರ ನಿಗದಿಪಡಿಸಲಾಗಿದೆ. ಭೂಸ್ವಾಧೀನ ಕಾಯ್ದೆ 1894ರ ಅನ್ವಯ ಲಭ್ಯವಾಗಿರುವ ಸಾಮಾನ್ಯ ಐ ತೀರ್ಪಿನ ನಗದು ಪರಿಹಾರಕ್ಕಿಂತ ಹಲವು ಪಟ್ಟು ಜಾಸ್ತಿ ಪರಿಹಾರ ನೀಡಲಾಗುತ್ತಿದೆ ಎಂದು ಪ್ರಾಧಿಕಾರದ ಅಧಿಕಾರಿಗಳು ಹೇಳಿದ್ದಾರೆ.

20 ಗುಂಟೆಗಿಂತ ಒಳಗೆ ಭೂಮಿ ಕಳೆದುಕೊಳ್ಳುವವರಿಗೆ ನಗದು ಪರಿಹಾರ ಮಾತ್ರ ನೀಡಲಾಗುತ್ತದೆ. 20 ಗುಂಟೆಗಿಂತ ಹೆಚ್ಚು ಭೂಮಿ ಕಳೆದುಕೊಳ್ಳುವ ಭೂ ಮಾಲೀಕರು ಮಾರುಕಟ್ಟೆ ದರದಲ್ಲಿ ನಗರ ಭಾಗದಲ್ಲಿ ಎರಡು ಪಟ್ಟು ಹಾಗೂ ಗ್ರಾಮೀಣ ಪ್ರದೇಶದಲ್ಲಿ ಮೂರು ಪಟ್ಟು ನಗದು ಪರಿಹಾರ ಅಥವಾ ವರ್ಗಾಯಿಸಬಹುದಾದ ಹಕ್ಕು (ಟಿಡಿಆರ್) ಅಥವಾ ನೆಲ ವಿಸ್ತೀರ್ಣ ಅನುಪಾತ (ಎಫ್‌ಎಆರ್) ಅಥವಾ ಶೇ 35ರಷ್ಟು ವಾಣಿಜ್ಯ ಭೂಮಿಯನ್ನು ಪಡೆಯಬಹುದು.

ಒಂದು ವೇಳೆ ವಾಣಿಜ್ಯ ಭೂಮಿ ಬೇಡ, ವಸತಿ ಪ್ರದೇಶದಲ್ಲಿ ಜಾಗ ಬೇಕು ಎಂದರೆ ಪ್ರಾಧಿಕಾರ ನಿರ್ಮಿಸುತ್ತಿರುವ ನೂತನ ಬಡಾವಣೆಗಳಲ್ಲಿ ಶೇ 40ರಷ್ಟು ಜಾಗ ನೀಡಲಾಗುತ್ತದೆ.

ಸಂಧಾನಿತ ಭೂ ಪರಿಹಾರ ಮೊತ್ತಕ್ಕೆ ಮೀರದ ಸಮಾನಾಂತರ ಮೌಲ್ಯವುಳ್ಳ ಡಾ.ಕೆ.ಶಿವರಾಮ ಕಾರಂತ ವಸತಿ ಬಡಾವಣೆ ಅಥವಾ ಪಿಆರ್‌ಆರ್-1ರ ಸುತ್ತಮುತ್ತಲಿನ ವಸತಿ ಬಡಾವಣೆಗಳಲ್ಲಿ ವಸತಿ ನಿವೇಶನ ಪರಿಹಾರ ನೀಡಲಾಗತ್ತದೆ. 65:35ರ ಅನುಪಾತದಡಿ ಎಕರೆಯೊಂದಕ್ಕೆ 8,345 ಚದರ ಅಡಿ ಅಭಿವೃದ್ಧಿ ಪಡಿಸಿದ ವಾಣಿಜ್ಯ ನಿವೇಶನ ನೀಡಲಾಗುತ್ತದೆ.

ಭೂಸ್ವಾಧೀನಕ್ಕೆ ಒಳಪಡುವ ಭೂಮಿ ಕೃಷಿ ಭೂಮಿಯಾಗಿದ್ದಲ್ಲಿ ಕೃಷಿಯೇತರ ಭೂಮಿಯನ್ನಾಗಿ ಪರಿವರ್ತಿಸುವ ಶುಲ್ಕ, ಅಭಿವೃದ್ಧಿ ಶುಲ್ಕ ಹಾಗೂ ಇತರೆ ಶುಲ್ಕವನ್ನು ಪ್ರಾಧಿಕಾರ ಪಾವತಿಸಿಕೊಳ್ಳಲಿದೆ. ನಂತರ ಕೃಷಿ ಭೂಮಿಗೆ ಅಭಿವೃದ್ಧಿ ಹೊಂದಿದ ವಸತಿ ಉದ್ದೇಶದ ನಿವೇಶನದ ದರದಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಮಾರ್ಗಸೂಚಿ ದರಗಳ ಅನುಸಾರ ಟಿಡಿಆರ್ ನೀಡುತ್ತದೆ.

ಪರಿಹಾರ ದರಕ್ಕೆ ವಿರೋಧ

ಬಿಬಿಸಿ ಯೋಜನೆಗೆ ಸ್ವಾಧೀನ ಪಡಿಸಿಕೊಳ್ಳುತ್ತಿರುವ ಭೂಮಿಗೆ ಬಿಡಿಎ ಕಡಿಮೆ ದರ ನಿಗದಿ ಮಾಡಿದೆ. ಜಮೀನು ಕಳೆದುಕೊಂಡ ರೈತರಿಗೆ ಪುನರ್ವಸತಿ ಸೌಲಭ್ಯ ಕಲ್ಪಿಸುತ್ತಿಲ್ಲ ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಮತ್ತು ಪಿಆರ್‌ಆರ್ ರೈತ ಹಾಗೂ ನಿವೇಶನದಾರರ ಸಂಘದ ಆರೋಪಿಸಿದೆ.

'ಕೇಂದ್ರ ಸರ್ಕಾರದ ಎಲ್‌ಎಆರ್‌ಆರ್ ಕಾಯ್ದೆ 2013 ಜಾರಿಯಲ್ಲಿದ್ದರೂ ಅದನ್ನು ಬದಿಗಿಟ್ಟು, ಬಿಡಿಎ ತನ್ನದೇ ಖಾಸಗಿ ಪ್ಯಾಕೇಜ್ ಘೋಷಿಸಿದೆ. ವೆಂಕಟಾಲದಲ್ಲಿ ಮಾರುಕಟ್ಟೆ ಮೌಲ್ಯ ಎಕರೆಗೆ ₹ 56 ಕೋಟಿ ಇದೆ. ಆದರೆ, ಪ್ರಾಧಿಕಾರ ಎಕರೆಗೆ ₹15.60 ಕೋಟಿ ನಿಗದಿ ಮಾಡಿದೆ. ಕೇಂದ್ರದ ಕಾಯ್ದೆಯಡಿ ಪರಿಹಾರಕ್ಕೆ ಆದಾಯ ತೆರಿಗೆ ವಿನಾಯಿತಿ ಇದೆ. ಆದರೆ, ಬಿಡಿಎ ಈ ಬಗ್ಗೆ ಪತ್ರದಲ್ಲಿ ಎಲ್ಲಿಯೂ ಉಲ್ಲೇಖಿಸಿಲ್ಲ' ಎಂದು ವರ್ತೂರು ರೈತ ಜಗದೀಶ್ ರೆಡ್ಡಿ ಬೇಸರ ವ್ಯಕ್ತಪಡಿಸಿದ್ದಾರೆ.

ಬಿಬಿಸಿ ಯೋಜನೆಗೆ ಸ್ವಾಧೀನಪಡಿಸಿಕೊಳ್ಳುವ ಭೂಮಿಗೆ ಉತ್ತಮ ದರವನ್ನು ನೀಡಲಾಗುತ್ತಿದೆ. ಈ ವಿಚಾರದಲ್ಲಿ ರೈತರಿಗೆ ಅನ್ಯಾಯವಾಗದ ಕಾರಣ ವದಂತಿಗಳಿಗೆ ಕಿವಿಗೊಡಬಾರದು

ಎಲ್.ಕೆ.ಅತೀಕ್, ಬಿಬಿಸಿ ವಿಶೇಷ ಉದ್ದೇಶದ ಘಟಕದ (ಎಸ್‌ಪಿವಿ) ಅಧ್ಯಕ್ಷ

ಗ್ರಾಮವಾರು ಎಕರೆಗೆ ನಿಗದಿಪಡಿಸಿರುವ ದರ (ಕೋಟಿಗಳಲ್ಲಿ)

ಗ್ರಾಮ	ದರ
ದಾಸನಪುರ ಹೋಬಳಿ	
ಮಾದನಾಯಕನಹಳ್ಳಿ	4.24
ಹನುಮಂತಸಾಗರ	3
ಕುದುರೆಗೆರೆ	3.30
ಯಶವಂತಪುರ ಹೋಬಳಿ	
ಚಿಕ್ಕಬಾಣಾವರ	2.34
ಹೆಸರಘಟ್ಟ ಹೋಬಳಿ	
ಸೋಲದೇವನಹಳ್ಳಿ	3.30
ಕೆಂಪಾಪುರ	3.30
ಕಾಳತಮ್ಮನಹಳ್ಳಿ	3.30
ಮಾವಳ್ಳಿಪುರ	3.30
ಯಲಹಂಕ ಹೋಬಳಿ	
ಲಿಂಗರಾಜುಪುರ	3.30
ಜಾರಕಬಂಡೆ ಕಾವಲ್	5.40
ರಾಮಗೊಂಡನಹಳ್ಳಿ	4.32
ಆವಲಹಳ್ಳಿ (ಹಾರೋಹಳ್ಳಿ)	6.50
ಹಾರೋಹಳ್ಳಿ	6.50
ವೆಂಕಟಾಲ	15.60
ವಡೇರಪುರ	7.20
ಚೊಕ್ಕನಹಳ್ಳಿ	11
ಜಾಲ ಹೋಬಳಿ	
ಕಟ್ಟಿಗೇನಹಳ್ಳಿ	5.50
ಕೆ.ಆರ್.ಪುರ ಹೋಬಳಿ	
ನಗರೇಶ್ವರ ನಾಗೇನಹಳ್ಳಿ	7.68
ಕೊತ್ತನೂರು	14.64
ನಾಗೊಂಡನಹಳ್ಳಿ	9.20
ಹಗದೂರು	12.70
ವರ್ತೂರು ಹೋಬಳಿ	
ಬೆಳ್ಳಂದೂರು ಅಮಾನಿಕೆರೆ	9.20
ಕಾಚಮಾರನಹಳ್ಳಿ	5.40
ಸೂಲಿಕುಂಟೆ	5.55
ಕೊಡತಿ	5.40
ಬಿದರಹಳ್ಳಿ ಹೋಬಳಿ	
ಬೈರತಿ	6.50
ಚಿಕ್ಕಗುಬ್ಬಿ	6.60
ದೊಡ್ಡಗುಬ್ಬಿ	6.72
ಬಿಳಿಶಿವಾಲೆ	6,60
ಹಿರಂಡಹಳ್ಳಿ	5.97
ಚೀಮಸಂದ್ರ	8.25
ಆವಲಹಳ್ಳಿ (ಬಂಡಾಪುರ)	10.29
ದೊಡ್ಡಬನಹಳ್ಳಿ	5.52
ಕನ್ನಮಂಗಲ	7.44
ಶೀಗೇಹಳ್ಳಿ	6.30
ಕುಂಬೇನ ಅಗ್ರಹಾರ	5.18
ಸರ್ಜಾಪುರ ಹೋಬಳಿ	
ಚಿಕ್ಕನಾಗಮಂಗಲ	3.90
ಆವಲಹಳ್ಳಿ	4.08
ಹುಸ್ಕೂರು	4.11
ಅತ್ತಿಬೆಲೆ ಹೋಬಳಿ	
ಹೆಬ್ಬಗೋಡಿ	4.80
ಕಮ್ಮಸಂದ್ರ	2.50


ಸುದ್ದಿ 2 ನಿಮಿಷ

ಬಿಜೆಪಿ ಸರ್ಕಾರದ ವಿರುದ್ಧ ಯಾವ ಪುರಾವೆ ಇತ್ತು: ಕೆ.ಸುಧಾಕರ್ ಪ್ರಶ್ನೆ

ಚಿಕ್ಕಬಳ್ಳಾಪುರ: 'ಈ ಹಿಂದೆ ಬಿಜೆಪಿ ಸರ್ಕಾರದ ವಿರುದ್ಧ ಕಾಂಗ್ರೆಸ್‌ನವರು ಶೇ 40ರಷ್ಟು ಕಮಿಷನ್ ಎಂದು ಸುಳ್ಳು ಆರೋಪ ಮಾಡಿದ್ದರು. ಆಗ ಇವರ ಬಳಿ ಯಾವ ಪುರಾವೆ ಇತ್ತು' ಎಂದು ಸಂಸದ ಡಾ.ಕೆ.ಸುಧಾಕರ್ ಪ್ರಶ್ನಿಸಿದರು.

ನಗರದಲ್ಲಿ ಶುಕ್ರವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿ, 'ಗುತ್ತಿಗೆದಾರರ ಸಂಘದ ಅಧ್ಯಕ್ಷರೇ ಸರ್ಕಾರದ ವಿರುದ್ಧ ಕಮಿಷನ್ ಆರೋಪ ಮಾಡಿದ್ದಾರೆ. ಹೀಗಿದ್ದರೂ ಸಚಿವರು ಸಾಕ್ಷ್ಯಾಧಾರಗಳು ಇಲ್ಲ ಎಂದು ಸಮರ್ಥಿಸಿಕೊಳ್ಳುತ್ತಿದ್ದಾರೆ. ಈ ಹಿಂದೆ, ಇದೇ ಗುತ್ತಿಗೆದಾರರ ಸಂಘವು ಬಿಜೆಪಿ ಸರ್ಕಾರದ ವಿರುದ್ಧ ಆರೋಪ ಮಾಡಿತ್ತು. ಆಗ ಯಾವ ಸಚಿವರು, ಅಧಿಕಾರಿಗಳು ಕಮಿಷನ್ ಪಡೆದಿದ್ದಾರೆ ಎನ್ನುವ ಪುರಾವೆ ಇದ್ದವು' ಎಂದು ಪ್ರಶ್ನಿಸಿದರು.

'ರಾಜಕೀಯ ತೆವಲಿಗೆ 'ಪೇ ಸಿ.ಎಂ' ಎಂದು ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ವಿರುದ್ಧ ಪೋಸ್ಟರ್ ಅಂಟಿಸಿದರು. ಆದರೆ ಈಗ ಗುತ್ತಿಗೆದಾರರ ಸಂಘದ ಆರೋಪಗಳಿಗೆ ಪುರಾವೆ ಇಲ್ಲ ಎನ್ನುತ್ತಾರೆ' ಎಂದು ಹೇಳಿದರು.



'ನಾನು ಕಾಂಗ್ರೆಸ್‌ನಲ್ಲಿದ್ದ ವೇಳೆ ಅಂದೇ ಎಚ್.ಡಿ.ಕುಮಾರಸ್ವಾಮಿ ಅವರು ಇದು ಎತ್ತಿನಹೊಳೆ ಯಲ್ಲ ಹಣದ ಹೊಳೆ ಎಂದಿದ್ದರು. ಅವರ ಮಾತು ಸತ್ಯವಾಗುತ್ತಿದೆ. ಕೋಲಾರ, ಚಿಕ್ಕಬಳ್ಳಾಪುರಕ್ಕೆ ಈ ಯೋಜನೆ ರೂಪಿಸಲಾಗಿತ್ತು. ಸಾವಿರಾರು ಕೋಟಿ ವೆಚ್ಚವಾದರೂ ಇನ್ನೂ ಈ ಜಿಲ್ಲೆಗಳಿಗೆ ನೀರು ಬಂದಿಲ್ಲ' ಎಂದು ಹೇಳಿದರು.

ಬಸ್ ತಂಗುದಾಣ ಉದ್ಘಾಟನೆ

ಬೆಂಗಳೂರು: 'ಕನ್ನಡವೇ ನಮ್ಮ ಉಸಿರು, ನಮ್ಮ ಜೀವ. ರಾಜ್ಯದ ಜನತೆಯ ಜೀವನಮಟ್ಟ ಸುಧಾರಿಸುವುದೇ ನಮ್ಮ ಗುರಿ' ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದರು.

ಸರ್ವಜ್ಞ ನಗರ ವಿಧಾನಸಭಾ ಕ್ಷೇತ್ರದ ಮಾರುತಿ ಸೇವಾ ನಗರದ ಬಾಣಸವಾಡಿ ಮುಖ್ಯರಸ್ತೆಯಲ್ಲಿ ಶುಕ್ರವಾರ ನೂತನ ಬಸ್ ತಂಗುದಾಣ ಉದ್ಘಾಟಿಸಿ ಅವರು ಮಾತನಾಡಿದರು.

'ವರನಟ ಡಾ. ರಾಜಕುಮಾರ್ ಅವರ ಅಭಿಮಾನಿ ನಾನು. ಅವರ ಹೆಸರಿನ ಬಸ್ ತಂಗುದಾಣ ಉದ್ಘಾಟಿಸುತ್ತಿರುವುದು ಹೆಮ್ಮೆಯ ಸಂಗತಿ' ಎಂದರು. 'ಕಾಚರಕನಹಳ್ಳಿಯಲ್ಲಿ ಕೆರೆ ಅಭಿವೃದ್ಧಿ, ಕ್ರೀಡಾಂಗಣ ಮತ್ತು ಆಸ್ಪತ್ರೆ ನಿರ್ಮಾಣ ಕಾರ್ಯಗಳು ನಡೆಯುತ್ತಿವೆ. ಮುಂದಿನ ದಿನಗಳಲ್ಲಿ ಸರ್ವಜ್ಞರ ಬೃಹತ್ ಪ್ರತಿಮೆ ಸ್ಥಾಪಿಸಲಾಗುವುದು. ನಾಗರಿಕರಿಗೆ ಸಕಲ ಸೌಕರ್ಯ ಒದಗಿಸಲು ಶ್ರಮಿಸುತ್ತಿದ್ದೇವೆ. ಅಭಿವೃದ್ಧಿ ಹೆಸರಿನಲ್ಲಿ ರಾಜಕೀಯ ಮಾಡುವುದಿಲ್ಲ' ಎಂದು ಹೇಳಿದರು.

ಡಾ. ರಾಜಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಸಾ.ರಾ. ಗೋವಿಂದು ಮಾತನಾಡಿ, 'ಕನ್ನಡಕ್ಕೆ ಸೇವೆ ಸಲ್ಲಿಸಿರುವ ಮಹನೀಯರ ನೆನಪನ್ನು ಶಾಶ್ವತಗೊಳಿಸುವ ಕೆಲಸಗಳು ಸಾಗುತ್ತಿರುವುದು ಶ್ಲಾಘನೀಯ' ಎಂದರು. ಸಂಘದ ಸದಸ್ಯರಾದ ಡಿ.ಕೆ. ರಾಜು, ವೆಂಕಟೇಶ್, ಅಮರ್, ಮುರಳಿ ಹಾಗೂ ಕಾಂಗ್ರೆಸ್ ಮುಖಂಡ ರಘು ದೇವರಾಜ್ ಉಪಸ್ಥಿತರಿದ್ದರು.

ಬೆಟ್ಟಹಲಸೂರು–ರಾಜಾನುಕುಂಟೆ: ರೈಲ್ವೆ ಯೋಜನೆಗೆ ವಿರೋಧ

ಭೂಸ್ವಾಧೀನ ಕೈಬಿಡಲು ರೈತರ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಟ್ಟಹಲಸೂರಿನಿಂದ ರಾಜಾನುಕುಂಟೆ ನಡುವೆ ರೈಲು ಮಾರ್ಗ ನಿರ್ಮಾಣ ಮಾಡುವ ವಿಶೇಷ ಯೋಜನೆಗೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ವಿರೋಧ ವ್ಯಕ್ತಪಡಿಸಿರುವ ರೈತರು, ಭೂಸ್ವಾಧೀನ ಪ್ರಕ್ರಿಯೆ ಕೈಬಿಡುವಂತೆ ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಜ್ಯ ಘಟಕದ ಅಧ್ಯಕ್ಷ ಅರಳಾಪುರ ಮಂಜೇಗೌಡ, 'ದೇವನಹಳ್ಳಿಯಲ್ಲಿರುವ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಸಿಂಗನಾಯಕನಹಳ್ಳಿ, ತಿಮ್ಮಸಂದ್ರ, ಬೆಟ್ಟಹಲಸೂರು ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ರೈಲ್ವೆ ಯೋಜನೆಗೆ ಭೂಸ್ವಾಧೀನ ಮಾಡಲಾಗುತ್ತಿದೆ. ಇದನ್ನು ಸಣ್ಣ ಮತ್ತು ಅತಿ ಸಣ್ಣ ರೈತರು ವಿರೋಧಿಸಿದ್ದು, ತಮ್ಮ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಹೊಸ ರೈಲು ಮಾರ್ಗದ ಪ್ರಸ್ತಾವನೆ ಅವೈಜ್ಞಾನಿಕವಾಗಿದ್ದು, ಇದರಿಂದ ಯಾವುದೇ ಉಪಯೋಗವಾಗುವುದಿಲ್ಲ. ಈ ಯೋಜನೆಯನ್ನು ರದ್ದು ಮಾಡಬೇಕು' ಎಂದು ಒತ್ತಾಯಿಸಿದರು.



ರೈತ ಮುಖಂಡರು ಪ್ರೆಸ್ ಕ್ಲಬ್ ಆವರಣದಲ್ಲಿ ತರಕಾರಿಗಳನ್ನು ಇರಿಸಿ ಭೂಸ್ವಾಧೀನಕ್ಕೆ ವಿರೋಧ ವ್ಯಕ್ತಪಡಿಸಿದರು

'ಯೋಜನೆಗೆ ಸಂಬಂಧಿಸಿದ ಕಾರ್ಯಗಳಿಗಾಗಿ ಅಧಿಕಾರಿಗಳು ನಿಗದಿತ ಯೋಜನಾ ಪ್ರದೇಶಕ್ಕೆ ಭೇಟಿ ನೀಡಿದಲ್ಲಿ, ಹೋರಾಟ ತೀವ್ರಗೊಳಿಸಲಾಗುವುದು' ಎಂದು ಎಚ್ಚರಿಕೆ ನೀಡಿದರು.

ಸಂಘದ ಕಾರ್ಯದರ್ಶಿ ಬೆಟ್ಟಹಲಸೂರು ನಂಜುಂಡಪ್ಪ, 'ಈ ಯೋಜನೆ ಸಂಬಂಧ ಭೂಸ್ವಾಧೀನ ಪ್ರಕ್ರಿಯೆ ಕೈಗೊಂಡರೆ ನೂರಾರು ರೈತರು ಬೀದಿಪಾಲಾಗುತ್ತಾರೆ. ಈಗಾಗಲೇ ಸಂಕಷ್ಟದಲ್ಲಿರುವ ರೈತರನ್ನು ಇನ್ನಷ್ಟು ಸಂಕಷ್ಟಕ್ಕೆ ನೂಕಬಾರದು. ರಾಜ್ಯದಾದ್ಯಂತ ಹಲವು ರೈಲ್ವೆ ಯೋಜನೆಗಳು ಎರಡು ಮೂರು ದಶಕಗಳಿಂದ ಬಾಕಿ ಉಳಿದಿದ್ದು, ರೈಲ್ವೆ ಅಧಿಕಾರಿಗಳು ಆ ಯೋಜನೆಗಳನ್ನು ಜಾರಿಗೆ ತರಲು ನಿರಾಸಕ್ತಿ ತೋರುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ನಂಜುಂಡಪ್ಪ ಕಡತನಮಲೆ, ರಾಜ್ಯ ಸಂಚಾಲಕ ಮಾವಳ್ಳಿಪುರ ಧನರಾಜ್ ಹಾಗೂ ರೈತ ಮುಖಂಡರು ಉಪಸ್ಥಿತರಿದ್ದರು.

'ಅಡಿಕೆ: ಆತುರದ ನಿರ್ಧಾರ ಬೇಡ'

ಪುತ್ತೂರು: 'ವೈಜ್ಞಾನಿಕ ಪರೀಕ್ಷೆ ನಡೆಸದೆ, ಕೆಲವು ಶೈಕ್ಷಣಿಕ ಸಂಸ್ಥೆಗಳ ಸಂಶೋಧನೆಯ ಆಧಾರದಲ್ಲಿ ಅಡಿಕೆಯ ಬಗ್ಗೆ ಆತುರದ ನಿರ್ಧಾರಕ್ಕೆ ಬರಬಾರದು. ವೈಜ್ಞಾನಿಕ ಸಂಶೋಧನೆ ನಡೆಸಿ, ಫಲಿತಾಂಶವನ್ನು ಸಾರ್ವಜನಿಕರ ಮುಂದಿಡುವಂತೆ ಪ್ರತಿ ರಾಜ್ಯದ ಸರ್ಕಾರವನ್ನು ಒತ್ತಾಯಿಸಬೇಕು' ಎಂದು ಕ್ಯಾಂಪ್ಕೊ ನಿರ್ದೇಶಕ ಮುರಳಿಕೃಷ್ಣ ನುಡಿದರು.

ಶುಕ್ರವಾರ ಇಲ್ಲಿ ನಡೆದ 'ಅರೆಕಾನಟ್ ಚಾಲೆಂಜ್: ಟರ್ನಿಂಗ್ ಪಾಲಿಸಿ ಇನ್‌ಟು ಇಂಪ್ಯಾಕ್ಟ್ ಇನ್ ದ ಸೌತ್ ಈಸ್ಟ್ ಏಷ್ಯಾ ರೀಜನ್' ವೆಬಿನಾರ್‌ನಲ್ಲಿ ಅವರು ಮಾತನಾಡಿದರು.

'ಅಡಿಕೆಯನ್ನು ಆಯುರ್ವೇದ ಔಷಧ ಪದ್ಧತಿಯಲ್ಲಿ ಬಳಕೆ ಮಾಡಲಾಗುತ್ತಿದೆ. ಅಡಿಕೆ ಬಗ್ಗೆ ಯಾವುದೇ ಅಭಿಪ್ರಾಯಕ್ಕೆ ಬರುವ ಮುನ್ನ ಇದನ್ನು ಗಮನಿಸಬೇಕು' ಎಂದು ಒತ್ತಾಯಿಸಿದರು.



ಸಿಎಂಸಿಎಯಿಂದ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ 'ಬೆಂಗಳೂರು ಸಂಚಾರ ಪೊಲೀಸ್ ದಿನಾಚರಣೆ'ಯಲ್ಲಿ ಕಾನ್‌ಸ್ಟೆಬಲ್‌ವೊಬ್ಬರಿಗೆ ವಿದ್ಯಾರ್ಥಿಗಳು ಗುಲಾಬಿ ಹೂವು ನೀಡಿದರು

ಸರಣಿ ಅಪಘಾತ: 3 ವಾಹನ ಜಖಂ

ಚಂದಾಪುರ(ಆನೇಕಲ್): ತಾಲ್ಲೂಕಿನ ಚಂದಾಪುರ ಸೂರ್ಯಸಿಟಿ ಪೊಲೀಸ್ ಠಾಣೆ ವ್ಯಾಪ್ತಿಯ ಚಂದಾಪುರ ರೈಲ್ವೆ ಸೇತುವೆ ಬಳಿ ಶುಕ್ರವಾರ ಸರಣಿ ಅಪಘಾತ ಸಂಭವಿಸಿದ್ದು, ಮೂರು ವಾಹನಗಳು ಜಖಂಗೊಂಡಿವೆ. ಇಬ್ಬರು ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಚಂದಾಪುರದಿಂದ ಅತ್ತಿಬೆಲೆಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಲಾರಿಯೊಂದು ಎರಡು ಕಾರುಗಳಿಗೆ ಮತ್ತು ಬಸ್‌ಗೆ ಡಿಕ್ಕಿ ಹೊಡೆದಿದೆ. ಏಕಾಏಕಿ ಡಿಕ್ಕಿ ಹೊಡೆದಿದ್ದರಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿ ಪ್ರಯಾಣಿಸುತ್ತಿದ್ದ ಇತರೆ ವಾಹನಗಳ ಸಂಚಾರಕ್ಕೂ ತೊಂದರೆ ಆಯಿತು. ಒಂದು ಗಂಟೆಗೂ ಹೆಚ್ಚು ಕಾಲ ಸಂಚಾರ ಅಸ್ತವ್ಯಸ್ತವಾಗಿತ್ತು. ಕಿ.ಮೀ.ಗಟ್ಟಲೇ ವಾಹನಗಳು ನಿಂತಿದ್ದವು. ಲಾರಿ ಚಾಲಕನನ್ನು ಚಂದಾಪುರ ಸೂರ್ಯಸಿಟಿ ಪೊಲೀಸರು ಬಂಧಿಸಿ, ಲಾರಿಯನ್ನು ವಶಪಡಿಸಿಕೊಂಡಿದ್ದಾರೆ.

ಪೈ, ರಾಮಲಿಂಗಾರೆಡ್ಡಿ ಸಮರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಿ ಮೋಹನ್‌ದಾಸ್ ಪೈ ಮತ್ತು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ನಡುವೆ ಸಾಮಾಜಿಕ ಜಾಲತಾಣದಲ್ಲಿ ಸಮರ ನಡೆದಿದೆ.

'ಬಸ್‌ಗಳ ಕೊರತೆ ಬಹಳಷ್ಟಿದೆ. ದಯವಿಟ್ಟು ಖಾಸಗಿ ಬಸ್‌ಗಳಿಗೆ ಅವಕಾಶ ನೀಡಿ' ಎಂದು ಮೋಹನ್‌ದಾಸ್ ಪೈ 'ಎಕ್ಸ್' ಖಾತೆಯಲ್ಲಿ ತಿಳಿಸಿದ್ದರು. ಅದಕ್ಕೆ ದೀರ್ಘವಾಗಿ ಪ್ರತಿಕ್ರಿಯೆ ನೀಡಿರುವ ರಾಮಲಿಂಗಾರೆಡ್ಡಿ, 'ಕರ್ನಾಟಕದಲ್ಲಿ ಅತ್ಯಧಿಕ ಬಸ್‌ಗಳು ದಕ್ಷತೆಯಿಂದ ಕಾರ್ಯನಿರ್ವಹಿಸುತ್ತಿವೆ. ಗುಜರಾತ್ ಸೇರಿದಂತೆ ಬಿಜೆಪಿ ನೇತೃತ್ವದ ಸರ್ಕಾರ ಇರುವ ರಾಜ್ಯಗಳಲ್ಲಿ ಇಂಥ ಸಾರಿಗೆ ವ್ಯವಸ್ಥೆ ಇದ್ದರೆ ತೋರಿಸಿ' ಎಂದು ಸವಾಲು ಹಾಕಿದ್ದಾರೆ.

ಅಶ್ವಿನ್ ಮಹೇಶ್ ಅವರು ಎಕ್ಸ್ ಖಾತೆಯಲ್ಲಿ ಬಸ್‌ಗಳ ಕೊರತೆ ಬಗ್ಗೆ ಬರೆದುಕೊಂಡಿದ್ದರು. '10 ಸಾವಿರಕ್ಕಿಂತ ಅಧಿಕ ಬಸ್‌ಗಳ ಕೊರತೆ ಇದೆ. ಎರಡು ವರ್ಷಗಳಲ್ಲಿ ಇದು 11 ಸಾವಿರಕ್ಕೆ ತಲುಪಿದೆ. ಬಿಎಂಟಿಸಿ ನಾಲ್ಕು ಸಾವಿರ ಬಸ್‌ಗಳನ್ನು ಹೊಸ ಯೋಜನೆಯಡಿ ಸೇರ್ಪಡೆ ಮಾಡಿದರೂ ಅರ್ಧದಷ್ಟೂ ಕೊರತೆ ನೀಗುವುದಿಲ್ಲ. ಅಲ್ಲದೇ, ಹಿಂದಿನ ಕ್ರಮಗಳನ್ನು ನೋಡಿದರೆ ಎರಡು ವರ್ಷಗಳಲ್ಲಿ ನಾಲ್ಕು ಸಾವಿರ ಬಸ್‌ಗಳು ಸೇರ್ಪಡೆಯಾಗಲಿವೆ ಎಂದು ಭಾವಿಸಲು ಸಾಧ್ಯವಿಲ್ಲ' ಎಂದಿದ್ದರು.



ರಾಮಲಿಂಗಾರೆಡ್ಡಿ



ಮೋಹನ್‌ದಾಸ್

ಇದನ್ನು ಉಲ್ಲೇಖಿಸಿ ಮೋಹನ್‌ದಾಸ್ ಪೈ ಅವರು ರಾಮಲಿಂಗಾರೆಡ್ಡಿ ಅವರಿಗೆ ಟ್ಯಾಗ್ ಮಾಡಿ ಪ್ರತಿಕ್ರಿಯಿಸಿದ್ದರು. 'ಕಳೆದ ಮೂರು ವರ್ಷಗಳಿಂದ ಬಸ್‌ಗಳ ಕೊರತೆ ಮತ್ತು ಸಾರ್ವಜನಿಕ ಸಾರಿಗೆಯ ಕೊರತೆ ಇದೆ. (ಇದಕ್ಕೂ ಮೊದಲು) ದಯವಿಟ್ಟು ಖಾಸಗಿ ಬಸ್‌ಗಳು ಸೇವೆಯನ್ನು ಒದಗಿಸಲು ಅನುಮತಿ ನೀಡಬೇಕು. ಸಚಿವರಾಗಿ ನೀವು ಪಿಎಸ್‌ಯು (ಸಾರ್ವಜನಿಕ ವಲಯದ ಉದ್ಯಮ) ಮಾತ್ರ ಕೆಲಸ ಮಾಡುತ್ತದೆ ಎಂಬ ಮೌಢ್ಯ ಭಾವವನ್ನು ಹೊಂದಿದ್ದೀರಿ. ಸಾರ್ವಜನಿಕ ಸಾರಿಗೆ ಒದಗಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದೀರಿ. ಯಾರು ಒದಗಿಸಿದರೂ ಜನರಿಗೆ ಸಾರ್ವಜನಿಕ ಸಾರಿಗೆಯ ಅಗತ್ಯವಿದೆ' ಎಂದು ತಿಳಿಸಿದ್ದರು.

ಅದಕ್ಕೆ ಉತ್ತರ ನೀಡಿರುವ ಸಚಿವರು, 'ನಿಮ್ಮೊಂದಿಗೆ ಮುಖಾಮುಖಿ ಚರ್ಚೆ ಮಾಡಲು ನಮ್ಮ ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರು ಸಾಕು. ನೀವು ಸಾಮಾಜಿಕ ಜಾಲತಾಣದಲ್ಲೇ ಇರುತ್ತೀರಾ? ಇಲ್ಲ ಚರ್ಚೆಗೆ ಬರಲು ಸಿದ್ಧರಿದ್ದೀರಾ' ಎಂದು ಪ್ರಶ್ನಿಸಿದ್ದಾರೆ.

'ನಿಮ್ಮ ದೃಷ್ಟಿಕೋನ ಕೇವಲ ಪಕ್ಷಪಾತವಲ್ಲ. ಅದು ಮೂಢನಂಬಿಕೆ ಆಗಿದೆ. ಬ್ಯಾಲೆನ್ಸ್‌ಶೀಟ್ ಮೂಲಕ ಸಾರ್ವಜನಿಕ ಸೇವೆಯನ್ನು ನೀವು ನೋಡುತ್ತೀರಿ. ನಾವು 1.5 ಕೋಟಿ ಜನರನ್ನು ನೋಡುತ್ತೇವೆ. 'ಶಕ್ತಿ' ಯೋಜನೆ ಮೂಲಕ 650 ಕೋಟಿ ಬಾರಿ ಮಹಿಳೆಯರು ಉಚಿತವಾಗಿ ಪ್ರಯಾಣಿಸಿದ್ದಾರೆ. ಇದು ಚಲನಶೀಲ ಮತ್ತು ಆರ್ಥಿಕ ಸಬಲೀಕರಣ' ಎಂದು ಹೇಳಿದ್ದಾರೆ.

'ಸಾಮಾಜಿಕ ಸೇವೆಯ ಸಮತೋಲನ ಕಾಯ್ದುಕೊಂಡಿದ್ದೇವೆ. ಗ್ರಾಮೀಣ ವಿದ್ಯಾರ್ಥಿಗಳು ಮತ್ತು ನಾಗರಿಕರಿಗೆ ಬಸ್ ಖಚಿತಪಡಿಸಿದ್ದೇವೆ. ಇದರಿಂದ ಶೇ 30ರಷ್ಟು ಮಾರ್ಗಗಳು ನಷ್ಟದಲ್ಲಿ ಇವೆ. ಶೇ 30ರಷ್ಟು ಮಾರ್ಗಗಳು ಲಾಭ–ನಷ್ಟವಿಲ್ಲದೇ ಕಾರ್ಯನಿರ್ವಹಣೆಯಲ್ಲಿವೆ. ಉಳಿದ ಶೇ 40ರಷ್ಟು ಮಾರ್ಗಗಳಲ್ಲಿ ಲಾಭ ಗಳಿಸುತ್ತಿದ್ದೇವೆ. ಶೇ 98ರಷ್ಟು ಹಳ್ಳಿಗಳಿಗೆ ಬಸ್ ಸಂಪರ್ಕ ಕಲ್ಪಿಸಿದ್ದೇವೆ' ಎಂದು ತಿಳಿಸಿದ್ದಾರೆ.

'ಬಿಜೆಪಿಯ ಅಧಿಕಾರದ ಅವಧಿಯಲ್ಲಿ ಬಸ್ ಖರೀದಿ, ಸಿಬ್ಬಂದಿ ನೇಮಕಾತಿ ಮಾಡದೇ ನಿಗಮಗಳು ಹಾಳಾಗುವಂತೆ ಮಾಡಿದಾಗ ನೀವು ಒಂದೇ ಒಂದು ಪ್ರಶ್ನೆಯನ್ನು ಎತ್ತಿಲ್ಲ. ಜನಪರ ಸರ್ಕಾರವನ್ನು ಪ್ರಶ್ನೆ ಮಾಡುತ್ತಿದ್ದೀರಿ. ರಾಜ್ಯದಲ್ಲಿ 26,054 ಬಸ್‌ಗಳು ಕಾರ್ಯ ನಿರ್ವಹಿಸುತ್ತಿವೆ. 2 ವರ್ಷಗಳಲ್ಲಿ 5,800 ಹೊಸ ಬಸ್‌ಗಳ ಸೇರ್ಪಡೆ ಮಾಡಿದ್ದೇವೆ. 2026ರ ಕೊನೆಯ ವೇಳೆಗೆ 2,000ಕ್ಕೂ ಅಧಿಕ ಬಸ್‌ಗಳು ಸೇರ್ಪಡೆಗೊಳ್ಳಲಿವೆ' ಎಂದು ಮಾಹಿತಿ ನೀಡಿದ್ದಾರೆ.

'ಇಂಡಿಯಾ ಡಿಜಿಟಲ್ ಶೃಂಗಸಭೆ'

ಪ್ರಜಾವಾಣಿ ವಾರ್ತೆ

ಯಲಹಂಕ: ಅನ್ವೇಷಣಾ ಕಾಯ್ದೆಯಡಿ ರಾಜ್ಯದಲ್ಲಿ ಹೊಸ ತಂತ್ರಜ್ಞಾನಗಳ ಸಂಶೋಧನೆ ಮತ್ತು ಅಭಿವೃದ್ಧಿಗೆ ಪೂರಕವಾಗುವಂತೆ ನಿಯಂತ್ರಣಾತ್ಮಕ ಪ್ರಯೋಗಾತ್ಮಕ ವೇದಿಕೆಯನ್ನು (ರೆಗ್ಯುಲೇಟರಿ ಸ್ಯಾಂಡ್‌ಬಾಕ್ಸ್) ರೂಪಿಸುವ ಗುರಿ ಹೊಂದಲಾಗಿದೆ ಎಂದು ಐಟಿ–ಬಿಟಿ ಇಲಾಖೆಯ ಕಾರ್ಯದರ್ಶಿ ಎನ್. ಮಂಜುಳಾ ತಿಳಿಸಿದರು.

ಥಣಿಸಂದ್ರ ಮುಖ್ಯರಸ್ತೆಯ ಭಾರತೀಯ ಸಿಟಿಯಲ್ಲಿ ಇಂಟರ್ನೆಟ್ ಮತ್ತು ಮೊಬೈಲ್ ಅಸೋಸಿಯೇಷನ್ ಆಫ್ ಇಂಡಿಯಾ(ಐಎಎಂಎಐ) ಆಯೋಜಿಸಿರುವ 20ನೇ ಆವೃತ್ತಿಯ 'ಇಂಡಿಯಾ ಡಿಜಿಟಲ್ ಶೃಂಗಸಭೆ'ಯನ್ನು (ಐಡಿಎಸ್-2026) ಉದ್ಘಾಟಿಸಿ ಅವರು ಮಾತನಾಡಿದರು.

ಐಎಎಂಎಐ ಅಧ್ಯಕ್ಷ ಹಾಗೂ ಬಿಲ್‌ಡೆಸ್ಕ್ ಸಹ-ಸಂಸ್ಥಾಪಕ ಶ್ರೀನಿವಾಸು ಮಾತನಾಡಿ, 'ಎಐ ಅನ್ನು ಜವಾಬ್ದಾರಿಯುತವಾಗಿ ಹಾಗೂ ಪಾರದರ್ಶಕವಾಗಿ ಅಳವಡಿಸುವುದೇ ಇಂದಿನ ಪ್ರಮುಖ ಸವಾಲು' ಎಂದು ಅಭಿಪ್ರಾಯಪಟ್ಟರು.

ಐಎಎಂಎಐ ಅಧ್ಯಕ್ಷ ಡಾ.ಸುಭೋರೇ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಐಡಿಎಸ್ ಅನ್ನು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ಹಾಗೂ 'ಮೇಕ್ ಇನ್ ಇಂಡಿಯಾ' ಸಹಯೋಗದೊಂದಿಗೆ ಆಯೋಜಿಸಲಾಗಿದೆ.

ವಿದ್ಯಾರ್ಥಿಗಳಿಗೆ ಮಹಾಪುರುಷರ ಪುಸ್ತಕ

ವಿಧಾನ ಪರಿಷತ್ ಪ್ರಶ್ನೋತ್ತರ

ಬೆಂಗಳೂರು: ಮಹಾಪುರುಷರ ತತ್ವ ಸಿದ್ಧಾಂತಗಳು, ಅವರ ಜೀವನದ ಆದರ್ಶಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿ, ರಾಜ್ಯದ ಎಲ್ಲ ಶಾಲೆ–ಕಾಲೇಜುಗಳ ಮಕ್ಕಳಿಗೆ ವಿತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಡಾ. ಧನಂಜಯ ಸರ್ಜಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, '32 ಮಹಾಪುರುಷರ ಜಯಂತಿ ಕಾರ್ಯಕ್ರಮಗಳನ್ನು ರಾಜ್ಯಮಟ್ಟದಲ್ಲಿ ಆಯೋಜಿಸಲಾಗುತ್ತಿದೆ. ಅವರ ಜೀವನದ ಪುಸ್ತಕಗಳನ್ನು ಶಿಕ್ಷಣ ಇಲಾಖೆಯ ಮೂಲಕ ವಿತರಿಸಲಾಗುತ್ತದೆ' ಎಂದರು.

ರಸಗೊಬ್ಬರದ ಕೊರತೆ ಇಲ್ಲ

'ಪ್ರಸಕ್ತ ಸಾಲಿನಲ್ಲಿ ರಸಗೊಬ್ಬರ ಕೊರತೆ ಇಲ್ಲ. 2025ರ ಅಕ್ಟೋಬರ್‌ನಿಂದ 2026ರ ಜನವರಿವರೆಗೆ 12.46 ಲಕ್ಷ ಟನ್ ರಸಗೊಬ್ಬರದ ಬೇಡಿಕೆ ಇದ್ದು, ಈವರೆಗೆ 21.89 ಲಕ್ಷ ಟನ್ ಪೂರೈಕೆಯಾಗಿದೆ. ಇದರಲ್ಲಿ 11.71 ಲಕ್ಷ ಟನ್ ಮಾರಾಟವಾಗಿದ್ದು, 10.18 ಲಕ್ಷ ಮೆಟ್ರಿಕ್ ಟನ್ ದಾಸ್ತಾನಿದ್ದು, ರಸ ಗೊಬ್ಬರದ ಕೊರತೆಯಿರುವುದಿಲ್ಲ' ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಬಿಜೆಪಿಯ ಕೆ.ವಿವೇಕಾನಂದ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಅಕ್ರಮ ದಾಸ್ತಾನು, ಕಾಳಸಂತೆ ಮಾರಾಟಗಾರರ ಮೇಲೆ 530 ಪ್ರಕರಣ ದಾಖಲಿಸಿ, 4,174 ಟನ್‌ನಷ್ಟು ಗೊಬ್ಬರವನ್ನು ಜಪ್ತಿ ಮಾಡಲಾಗಿದೆ' ಎಂದರು.

2,443 ರೈತರ ಕುಟುಂಬಕ್ಕೆ ಪರಿಹಾರ

ರಾಜ್ಯದಲ್ಲಿ 2023ರಿಂದ 2025ರ ಡಿಸೆಂಬರ್ ಅಂತ್ಯದವರೆಗೆ ಒಟ್ಟು 2,846 ರೈತರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳು ದಾಖಲಾಗಿವೆ. ಇವುಗಳ ಪರಿಶೀಲನೆ ನಡೆಸಿ, 2,443 ರೈತರ ಕುಟುಂಬಕ್ಕೆ ಪರಿಹಾರ ನೀಡಲಾಗಿದೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ಬಿಜೆಪಿಯ ಹಣಮಂತ ನಿರಾಣಿ ಅವರು ಪ್ರಶ್ನೆಗೆ ಉತ್ತರಿಸಿದ ಅವರು, ಮಿನಿ ಆಹಾರ, ಪಾರ್ಕ್‌ಗಳ ಸ್ಥಾಪನೆ, ರೈತಶಕ್ತಿ ಮತ್ತು ಮುಖ್ಯಮಂತ್ರಿಯವರ ನೈಸರ್ಗಿಕ ಕೃಷಿ ಯೋಜನೆಗಳನ್ನು ಮುಂದುವರಿಸಿಲ್ಲ ಎಂದರು.

ನಗರದಲ್ಲಿ ಇಂದು

ಜಿನಸಹಸ್ರಾಷ್ಟ ನಾಮಾರ್ಚನೆ: ಆಯೋಜನೆ: ವಿಶ್ವಶಾಂತಿ ಯುವಸೇನಾ ಸಮಿತಿ, ಸ್ಥಳ: ರವಿಶಂಕರ ಗುರೂಜಿ ಆಶ್ರಮದ ವೇದ ವಿಜ್ಞಾನ ಮಹಾವಿದ್ಯಾಪೀಠ ಶಾಲೆ ಕ್ರೀಡಾಂಗಣ, ಕನಕಪುರ ರಸ್ತೆ, ಬೆಳಿಗ್ಗೆ 9

'ಎಲ್ಲರಿಗೂ ಆರೋಗ್ಯ' ಶೀರ್ಷಿಕೆಯಡಿ ಬೆಂಗಳೂರು ವಾಕಥಾನ್: ಆಯೋಜನೆ: ಸಮರ್ಥನಂ ಟ್ರಸ್ಟ್, ಸ್ಥಳ: ಕಿತ್ತೂರು ರಾಣಿ ಚನ್ನಮ್ಮ ಕ್ರೀಡಾಂಗಣ, ಜಯನಗರ, ಬೆಳಿಗ್ಗೆ 9

ಪ್ರೊ.ಜಿ. ಅಶ್ವತ್ಥನಾರಾಯಣ ಅಭಿನಂದನಾ ಸಮಾರಂಭ ಮತ್ತು ಗೌರವ ಗ್ರಂಥ ಬಿಡುಗಡೆ: ಸಾನ್ನಿಧ್ಯ: ಸ್ವಾಮಿ ವೀರೇಶಾನಂದ ಸರಸ್ವತಿ, ಅತಿಥಿ: ವೂಡೇ ಪಿ. ಕೃಷ್ಣ, ಅಧ್ಯಕ್ಷತೆ: ಬಾಬು ಕೃಷ್ಣಮೂರ್ತಿ, ಆಯೋಜನೆ: ಪ್ರೊ.ಜಿ. ಅಶ್ವತ್ಥನಾರಾಯಣ ಅಭಿನಂದನಾ ಸಮಾರಂಭ, ಸ್ಥಳ: ಪ್ರೊ.ಬಿ.ವಿ. ನಾರಾಯಣ ರಾವ್ ಸಭಾಂಗಣ, ವಿಜಯ ಪದವಿಪೂರ್ವ ಕಾಲೇಜು, ಜಯನಗರ 4ನೇ ಬಡಾವಣೆ, ಬೆಳಿಗ್ಗೆ 10

'ವಿಜಯೋತ್ಸವ' ವಾರ್ಷಿಕ ಕಲಾ ಮತ್ತು ಕ್ರೀಡಾ ಬಹುಮಾನ ವಿತರಣೆ ಸಮಾರಂಭ: ಅತಿಥಿಗಳು: ರಮೇಶ್ ಎಂ., ರಾಘವೇಂದ್ರ ಆಚಾರ್ಯ, ಕೃಷ್ಣ ನಾಯ್ಕ್, ಅಧ್ಯಕ್ಷತೆ: ಸ್ವಾಮಿ ಎಂ.ಎ., ಆಯೋಜನೆ ಹಾಗೂ ಸ್ಥಳ: ರಾಜಧಾನಿ ಪದವಿಪೂರ್ವ ಮತ್ತು ಪದವಿ ಕಾಲೇಜು, ಮಹದೇವಪುರ, ಬೆಳಿಗ್ಗೆ 10.30




ವಿಧುಶೇಖರ ಭಾರತಿ ಸ್ವಾಮೀಜಿ

ವಿವೇಕದೀಪ್ತಿ ಸಮಾರಂಭ: ಸಾನ್ನಿಧ್ಯ: ವಿಧುಶೇಖರ ಭಾರತಿ ಸ್ವಾಮೀಜಿ, ಉಪಸ್ಥಿತಿ: ಶಂಕರ ಭಾರತಿ ಸ್ವಾಮೀಜಿ, ಬ್ರಹ್ಮಾನಂದ ಭಾರತಿ ಸ್ವಾಮೀಜಿ, ಆಯೋಜನೆ: ವೇದಾಂತ ಭಾರತಿ, ಸ್ಥಳ: ಕೃಷ್ಣವಿಹಾರ, ಅರಮನೆ ಮೈದಾನ, ಬೆಳಿಗ್ಗೆ 11

ನಾದಬ್ರಹ್ಮ ತ್ಯಾಗರಾಜ ಸ್ವಾಮಿಗಳ ಆರಾಧನಾ ಮಹೋತ್ಸವದ ಪ್ರಯುಕ್ತ ಸಂಗೀತ ಕಾರ್ಯಕ್ರಮ: ಜಾನಕಿ ಮತ್ತು ಶಿಷ್ಯವೃಂದ, ಅತಿಥಿಗಳು: ಆರ್.ಕೆ. ಪದ್ಮನಾಭ, ರೇವತಿ ಕಾಮತ್, ಆಯೋಜನೆ ಹಾಗೂ ಸ್ಥಳ: ಗೀತಾಮಂದಿರ ಟ್ರಸ್ಟ್, ಶ್ರೀರಾಮಪುರ, ಬೆಳಿಗ್ಗೆ 11

ದೃಷ್ಟಿ ಚೇತನ ಕಾವ್ಯಯಾನ: ಉದ್ಘಾಟನೆ: ಅಶೋಕ ರೆಡ್ಡಿ, ಅಧ್ಯಕ್ಷತೆ: ಬಿ.ವಿ. ಮಲ್ಲಿಕಾರ್ಜುನಯ್ಯ, ಅತಿಥಿ: ಪ್ರಫುಲ್ಲ ಮುಖಿ, ಆಯೋಜನೆ: ಕರ್ನಾಟಕ ಅಂಧರ ಸಾಹಿತ್ಯ ಪರಿಷತ್ತು, ಸ್ಥಳ: ಕರ್ನಾಟಕ ಅಂಧರ ಕ್ಷೇಮಾಭ್ಯುದಯ ಸಂಸ್ಥೆ, ಶೇಷಾದ್ರಿಪುರ,



ಕವಿ ದಿನ ಪ್ರಯುಕ್ತ ದ.ರಾ.ಬೇಂದ್ರೆ ಅವರ ಕಾವ್ಯ ಕುರಿತು ಉಪನ್ಯಾಸ: ಅತಿಥಿ: ಸಿ.ಆರ್. ಗೋಪಾಲಸ್ವಾಮಿ, ಉಪನ್ಯಾಸ: ಎಸ್.ಆರ್. ವಿಜಯಶಂಕರ, ಅತಿಥಿ: ವಿವೇಕ್ ಸುಬ್ಬಾರೆಡ್ಡಿ, ಅಧ್ಯಕ್ಷತೆ: ಮಂಜುನಾಥ ಬಿ. ಗೌಡ, ಆಯೋಜನೆ: ಬೆಂಗಳೂರು ವಕೀಲರ ಸಾಹಿತ್ಯ ಒಕ್ಕೂಟ, ಸ್ಥಳ: ಸಿಟಿ ಸಿವಿಲ್ ಕೋರ್ಟ್ ಆವರಣ, ಮಧ್ಯಾಹ್ನ 1.30

ನಾಕುತಂತಿ ಷಷ್ಠಿಪೂರ್ತಿ ಸಮಾರೋಪ ಸಮಾರಂಭ: ಅತಿಥಿಗಳು: ನಾ. ಸೋಮೇಶ್ವರ, ಜಿ.ಬಿ. ಹರೀಶ, ನರೇಂದ್ರಕುಮಾರ್ ಎಸ್.ಎಸ್., ಅಧ್ಯಕ್ಷತೆ: ಎಂ.ಎಸ್. ನರಸಿಂಹಮೂರ್ತಿ, ಆಯೋಜನೆ: ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಕರ್ನಾಟಕ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4

ಬೇಂದ್ರೆ–ಭಾವಸಂಗಮ: ಅತಿಥಿಗಳು: ಸಂಜೀವ ಕುಮಾರ್ ಮಹಾಜನ್, ಗಿರೀಶ್ ರಾವ್ ಹತ್ವಾರ್ (ಜೋಗಿ), ಅಧ್ಯಕ್ಷತೆ: ಜಗದೀಶ ಕುಮಾರ್ ಜಿ., ಆಯೋಜನೆ: ಭಾರತ್ ಎಲೆಕ್ಟ್ರಾನಿಕ್ಸ್ ಲಲಿತಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 5.30

ಬೆಳಿಗ್ಗೆ 11.30

ಸೆಂಟ್ರಲ್ ಕಮಾಂಡ್ ಸೆಂಟರ್ ಉದ್ಘಾಟನೆ: ಜಿ. ಪರಮೇಶ್ವರ, ಉಪಸ್ಥಿತಿ: ತುಷಾರ್ ಗಿರಿನಾಥ್, ಎಂ.ಎ. ಸಲೀಂ, ಕೆ.ವಿ. ಶರತ್ ಚಂದ್ರ, ಉಪಸ್ಥಿತಿ: ಅಲೋಕ್ ಕುಮಾರ್, ಆಯೋಜನೆ ಹಾಗೂ ಸ್ಥಳ: ಕರ್ನಾಟಕ ಕಾರಾಗೃಹ ಮತ್ತು ಸುಧಾರಣಾ ಸೇವಾ ಪ್ರಧಾನ ಕಚೇರಿ, ಗಾಂಧಿನಗರ, ಸಂಜೆ 4



ಸಂತೋಷ್ ಹೆಗ್ಡೆ


ತರಂಗ್ ಸಾಧನಾ ಸಂಭ್ರಮ, 20ನೇ ವರ್ಷದ ವಾರ್ಷಿಕೋತ್ಸವ ಹಾಗೂ ಶ್ರೀತರಂಗ್ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಸಂತೋಷ್ ಹೆಗ್ಡೆ, ಅತಿಥಿಗಳು: ವಿಜಯಕುಮಾರ್ ಎ. ಪಾಟೀಲ, ಎ.ಎಸ್. ಪೊನ್ನಣ್ಣ, ಅತಿಥಿಗಳು: ವಿವೇಕ್ ಸುಬ್ಬಾರೆಡ್ಡಿ, ಎಂ.ಟಿ. ನಾಣಯ್ಯ, ಎಚ್.ವಿ. ಪ್ರವೀಣ್ ಗೌಡ, ಅಶೋಕ್, ಗಿರೀಶ್ ಕುಮಾರ್ ಸಿ.ಎಸ್., ಕೆ. ಕಲ್ಯಾಣ್, ಶ್ವೇತಾ ರವಿಶಂಕರ್, ಮುರಳೀಧರ, ಆಯೋಜನೆ: ತರಂಗ್ ಕ್ರಿಯೇಟರ್ಸ್, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಸ್ಕೌಟ್ಸ್ ಮತ್ತು ಗೈಡ್ಸ್ ಆವರಣ, ಮಹಾರಾಣಿ ಕಾಲೇಜು ಪಕ್ಕ, ಸಂಜೆ 4.30

'ಸಂಕ್ರಮಣ' ನೃತ್ಯೋತ್ಸವ: 'ಶ್ರೀನಿವಾಸ ಕಲ್ಯಾಣ' ನೃತ್ಯ ರೂಪಕ ಪ್ರದರ್ಶನ ಮತ್ತು ನೃತ್ಯ ವೈಭವ, ನಿರ್ದೇಶನ: ಮಂಜುಳಾ ಪರಮೇಶ್, ಸಹ ನಿರ್ದೇಶನ: ಶಾಲಿನಿ ಪರಮೇಶ್, ಮಾಲಿನಿ ಪರಮೇಶ್, ಆಯೋಜನೆ: ಸಪ್ತಸ್ವರ ಆರ್ಟ್ಸ್ ಆ್ಯಂಡ್ ಕ್ರಿಯೇಷನ್ಸ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 5

ವಿಶ್ವಕರ್ಮ ಜನಜಾಗೃತಿ ಸಮಾವೇಶ: ಸಾನ್ನಿಧ್ಯ: ಶಿವಸುಜ್ಞಾನತೀರ್ಥ ಸ್ವಾಮೀಜಿ, ನೀಲಕಂಠಾಚಾರ್ಯ ಸ್ವಾಮೀಜಿ, ಬುದ್ಧಾತ್ಮಾನಂದ ಸರಸ್ವತಿ ಸ್ವಾಮೀಜಿ, ಸುಜ್ಞಾನಮೂರ್ತಿ ಸ್ವಾಮೀಜಿ, ಸುಬ್ಬರಾಯಾಚಾರ್ ಸ್ವಾಮೀಜಿ, ವೀರಂ ಬೊಟ್ಲಯ್ಯ, ಅತಿಥಿಗಳು: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಚಂದ್ರಶೇಖರ ಕಂಬಾರ, ದಿನೇಶ್ ಗುಂಡೂರಾವ್, ಜಮೀರ್ ಅಹ್ಮದ್‌ಖಾನ್, ರಾಮಲಿಂಗಾರೆಡ್ಡಿ, ಪಿ.ಸಿ. ಮೋಹನ್, ತೇಜಸ್ವಿ ಸೂರ್ಯ, ಉದಯ್ ಗರುಡಾಚಾರ್, ಎ.ಆರ್. ಸಪ್ತಗಿರಿಗೌಡ, ರಘು ಆಚಾರ್, ಕೆ.ಪಿ. ನಂಜುಂಡಿ, ಟಿ.ಎ. ಶರವಣ, ವಿಶ್ವಕರ್ಮ ರಾಷ್ಟ್ರಮಟ್ಟದ ಸೇವಾರತ್ನ ಪ್ರಶಸ್ತಿ: ರಘು ಆಚಾರ್, ಮಧುರ ಮೂರ್ತಿ, ಎ. ರಾಜೇಶ್, ಕಾವ್ಯ ವಿ., ರಾಕೇಶ್ ಎನ್. ನಿಡಗುಂದಿ, ಶ್ರೇಷ್ಠ ಸಾಧನೆ ಸೇವಾ ರತ್ನ ಪ್ರಶಸ್ತಿ: ಕೆ. ವಸಂತಕುಮಾರ್, ಆಯೋಜನೆ: ವಿಶ್ವಕರ್ಮ ಸೇವಾ ಸಮಿತಿ, ಸ್ಥಳ: ಟೌನ್‌ಹಾಲ್, ಜೆ.ಸಿ.ರಸ್ತೆ, ಸಂಜೆ 5 (ಬೆಳಿಗ್ಗೆ 7.30ರಿಂದ ಸಂಜೆ 4ರವರೆಗೆ ನಗರ್ತಪೇಟೆಯ ಕಾಳಿಕಾಂಬ ಕಮಠೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಭಗವಾನ್ ವಿಶ್ವಕರ್ಮ ಬ್ರಹ್ಮರಥೋತ್ಸವ)

ಪಾವಗಡ ಪ್ರಕಾಶರಾವ್ ಅವರಿಂದ ಕವಿ ಲಕ್ಷ್ಮೀಶರ 'ಜೈಮಿನಿ ಭಾರತ' ಉಪನ್ಯಾಸ ಮಾಲಿಕೆ: ಅತಿಥಿ: ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಆಯೋಜನೆ: ಡಾ.ಪಾವಗಡ ಪ್ರಕಾಶರಾಯರ ಅಮೃತ ಮಹೋತ್ಸವ ಸಮಿತಿ, ಸ್ಥಳ: ಪತ್ತಿ ಸಭಾಂಗಣ, ಶ್ರೀರಾಮಮಂದಿರ, ಎನ್.ಆರ್. ಕಾಲೊನಿ, ಸಂಜೆ 5.45

ಪಂಡಿತ್ ಅರ್ಜುನ್‌ಸಾ ನಾಕೋಡ ಅವರ ಸ್ಮರಣಾರ್ಥ 'ಸ್ಮೃತಿ' ಅಹೋರಾತ್ರಿ ಸಂಗೀತ: ಭಾಗವಹಿಸುವ ಕಲಾವಿದರು: ವೆಂಕಟೇಶ್ ಕುಮಾರ್, ಯೋಗೇಶ್ ಸಂಶಿ, ಪತ್ರಿ ಸತೀಶ್ ಕುಮಾರ, ಗಿರಿಧರ ಉಡುಪ, ಪ್ರಣಮಿತಾ ರಾಯ್, ಅನಿರುದ್ಧ ಐತಾಳ್, ಷಡ್ಜ ಗೋಡ್ಖಿಂಡಿ, ಸುಮಂತ ಮಂಜುನಾಥ, ಅಂಕುಶ ಎನ್. ನಾಯಕ, ರಘುನಾಥ ನಾಕೋಡ, ವಿಶ್ವನಾಥ ನಾಕೋಡ, ರಾಜೇಂದ್ರ ನಾಕೋಡ, ರವಿಕಿರಣ ನಾಕೋಡ, ವ್ಯಾಸಮೂರ್ತಿ ಕಟ್ಟಿ, ನರೇಂದ್ರ ನಾಯಕ್, ಅರ್ಜುನ್ ಕುಮಾರ್, ಆಯೋಜನೆ: ರೇಣುಕಾ ಸಂಗೀತ ಸಭಾ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ರಾತ್ರಿ 9.30ರಿಂದ



61ನೇ ನಾದಜ್ಯೋತಿ ಸಂಗೀತ ಸಂಭ್ರಮ: ಯುಗಳ ಗಾಯನ: ಎಸ್. ಐಶ್ವರ್ಯ, ಎಸ್. ಸೌಂದರ್ಯ, ಪಿಟೀಲು: ವಿ. ನಳಿನ ಮೋಹನ್, ಮೃದಂಗ: ಫಣೀಂದ್ರ ಭಾಸ್ಕರ್, ಘಟ: ಸಚಿನ್ ದೇವಿ ಪ್ರಸಾದ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6

18ನೇ ವಾರ್ಷಿಕೋತ್ಸವ: ಕರ್ನಾಟಕ ಶಾಸ್ತ್ರೀಯ ಗಾಯನ: ಎಂ.ಬಿ. ಹರಿಹರನ್, ಎಸ್. ಅಶೋಕ್, ಆಯೋಜನೆ ಹಾಗೂ ಸ್ಥಳ: ಶ್ರೀದೇವಿ ಭೂದೇವಿ ಸಮೇತ ವೈಕುಂಠನಾರಾಯಣ ಸ್ವಾಮಿ ದೇವಸ್ಥಾನ, ಶಾನುಭೋಗ ನಾಗಪ್ಪ ಲೇಔಟ್, ಬಿಳೇಕಹಳ್ಳಿ, ಸಂಜೆ 6 (ಬೆಳಿಗ್ಗೆ 8ಕ್ಕೆ ಮಹಾಮೃತ್ಯುಂಜಯ ಹೋಮ)

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..

nagaradalli_indu@prajavani.co.in

ಲಕ್ಷ್ಮೀದೇವಿನಗರಕ್ಕೆ ಬಸ್ ಸಂಚಾರವೇ ಇಲ್ಲ

ಜನವಸತಿ ಪ್ರದೇಶದಲ್ಲಿ ಪ್ರಯಾಣಿಕರ ಪರದಾಟ • ಬಸ್ ಸಂಚಾರ ಮತ್ತೆ ಆರಂಭಿಸಲು ಸ್ಥಳೀಯರ ಆಗ್ರಹ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಲಕ್ಷ್ಮೀದೇವಿನಗರ, ವಿಧಾನಸೌಧ ಲೇಔಟ್‌ಗೆ ಸಂಚರಿಸುತ್ತಿದ್ದ ಬಿಎಂಟಿಸಿ ಬಸ್‌ಗಳು ರದ್ದಾಗಿದ್ದು, ಜನರು ನಗರಕ್ಕೆ ಬರಲು ಪರದಾಡುವಂತಾಗಿದೆ. ಕೆಲವು ವರ್ಷಗಳ ಹಿಂದೆ 8 ಬಸ್‌ಗಳ ಸಂಚಾರವಿದ್ದ ಈ ಊರಿಗೆ ಕಳೆದ ಒಂದೂವರೆ ತಿಂಗಳಿನಿಂದ ಒಂದೂ ಬಸ್ ಇಲ್ಲದಂತಾಗಿದೆ.

ವಿಧಾನಸೌಧನಗರ, ಲಕ್ಷ್ಮೀದೇವಿ ನಗರ ಮೂಲಕ ಶಿವಾಜಿನಗರ, ಮೆಜೆಸ್ಟಿಕ್ ಕೆಂಪೇಗೌಡ ಬಸ್ ನಿಲ್ದಾಣ, ಕೆ.ಆರ್. ಮಾರುಕಟ್ಟೆಗೆ 8 ಬಸ್‌ಗಳು ದಿನದಲ್ಲಿ 24 ಟ್ರಿಪ್ ಸಂಚರಿಸುತ್ತಿದ್ದವು. ಕೊನೆ ಬಸ್ ಲಕ್ಷ್ಮೀದೇವಿನಗರದಲ್ಲಿಯೇ ರಾತ್ರಿ ಇದ್ದು, ಬೆಳಿಗ್ಗೆ ಅಲ್ಲಿಂದ ಹೊರಡುತ್ತಿತ್ತು. ಕೋವಿಡ್ ಸಮಯದಲ್ಲಿ ಬಸ್‌ಗಳ ಸಂಖ್ಯೆ ಕಡಿಮೆ ಮಾಡಲಾಗಿತ್ತು. ಎರಡು ಬಸ್‌ಗಳಷ್ಟೇ ಸಂಚರಿಸುತ್ತಿದ್ದವು. ಕೋವಿಡ್ ಮುಗಿದ ಬಳಿಕವೂ ಬಸ್‌ಗಳ ಸಂಖ್ಯೆ ಹೆಚ್ಚಾಗಲಿಲ್ಲ.

'ಡಿಸೆಂಬರ್ ಮೊದಲ ವಾರದಿಂದ ಯಾವುದೇ ಬಸ್‌ಗಳು ಬರುತ್ತಿಲ್ಲ. ಈ ಬಗ್ಗೆ ಬಿಎಂಟಿಸಿ ಸಾರಿಗೆ ನಿಯಂತ್ರಣಾಧಿಕಾರಿಯ ಗಮನಕ್ಕೆ ತಂದೆವು. ಸರಿಪಡಿಸುವುದಾಗಿ ಭರವಸೆ ನೀಡಿ ಹೋಗಿದ್ದ ಅಧಿಕಾರಿಗೆ ವರ್ಗಾವಣೆಯಾಯಿತು. ಆ ನಂತರ ಬಂದ ಸಾರಿಗೆ ನಿಯಂತ್ರಣಾಧಿಕಾರಿ ಭೇಟಿ ನೀಡಿ ಹೋಗಿದ್ದಾರೆ. ರಸ್ತೆ ಸರಿಯಿಲ್ಲ. ಬಸ್ ಸಂಚರಿಸಲು ಕಷ್ಟವಾಗುವಷ್ಟು ಕಿರಿದಾಗಿದೆ ಎಂದು ಅವರು ನಿಡಿದ್ದಾರೆ. ಎರಡೂವರೆ ದಶಕಗಳಿಂದ ಅದೇ ರಸ್ತೆಯಲ್ಲಿ ಬಸ್‌ಗಳು ಸಂಚರಿಸಿವೆ. ಆಗ ಸಮಸ್ಯೆಯಾಗಲಿಲ್ಲ. ಈಗ ಯಾಕೆ ನೆಪ ಹೇಳುತ್ತಿದ್ದಾರೆ ಎಂದು ಸ್ಥಳೀಯರಾದ ಸಂತೋಷ್ ಕುಮಾರ್ ಎಸ್. ಪ್ರಶ್ನಿಸಿದರು.

16 ವರ್ಷಗಳಿಂದ 79ಜೆ ಮಾರ್ಗದಲ್ಲಿ ಬಸ್‌ಗಳು ಸಂಚರಿಸುತ್ತಿದ್ದವು. 79ಜೆ1 ಮತ್ತು 79ಜೆ2 ಬಸ್‌ಗಳು ಶಿವಾಜಿನಗರದಿಂದ ಮಹಾಲಕ್ಷ್ಮೀ ಬಡಾವಣೆ, ಕಂಠೀರವ ಸ್ಟುಡಿಯೊ, ಸೋನಾಲ್ ಗಾರ್ಮೆಂಟ್, ಮೂಲಕ ಲಕ್ಷ್ಮೀದೇವಿನಗರ ವಿಧಾನಸೌಧ ಬಡಾವಣೆಗೆ ಬರುತ್ತಿದ್ದವು. ಕಳೆದ ಆಗಸ್ಟ್‌ನಿಂದ ಬಸ್‌ನ ಚಾಲಕ/ನಿರ್ವಾಹಕರು ಸರಿಯಾದ ಸಮಯಕ್ಕೆ ಬಾರದೇ ಇದ್ದಿದ್ದರಿಂದ ಬಸ್‌ಗಾಗಿ ಕಾಯುವವರ ಸಂಖ್ಯೆ ಕಡಿಮೆಯಾಗಿತ್ತು. ಇದೇ ಬಸ್ ಅನ್ನು ಡಿಸೆಂಬರ್ 30ರಂದು 252ಜೆ ಎಂದು ಮಾರ್ಗ ಬದಲಾಯಿಸಿ ಲಗ್ಗೆರೆಯಿಂದ ಸಂಚರಿಸುವಂತೆ ಮಾಡಲಾಗಿದೆ. ಈ ಬಗ್ಗೆ ಅಧಿಕಾರಿಗಳಿಗೆ ತಿಳಿಸಿದರೂ ಪ್ರಯೋಜನವಾಗಿಲ್ಲ ಎಂದು ಅವರು ದೂರಿದರು.

ಕೆ.ಆರ್. ಮಾರುಕಟ್ಟೆಯಿಂದ ಲಕ್ಷ್ಮೀದೇವಿ ನಗರದಿಂದ ಸಂಚರಿಸುತ್ತಿದ್ದ 77ಎ, 77ಎ2, ಕೆಬಿಎಸ್‌ಗೆ ಸಂಚರಿಸುತ್ತಿದ್ದ 98 ಎಫ್, 80ಬಿ ಬಸ್‌ಗಳನ್ನು ಮೊದಲೇ ಸ್ಥಗಿತಗೊಳಿಸಿದ್ದರು. ಈಗ 79ಜೆ ಬಸ್‌ಗಳೂ ಬಾರದೇ ಇರುವುದರಿಂದ ಮಹಿಳೆಯರಿಗೆ, ಕೆಲಸಕ್ಕೆ ಹೋಗುವವರಿಗೆ, ಅಂಗವಿಕಲರಿಗೆ, ವೃದ್ಧರಿಗೆ ಸಮಸ್ಯೆಯಾಗಿದೆ. ಕರ್ನಾಟಕ ಕೊಳೆಗೇರಿ ಮಂಡಳಿ ನಿರ್ಮಿಸಿರುವ 2 ಸಾವಿರಕ್ಕೂ ಅಧಿಕ ವಸತಿ ಸಮುಚ್ಚಯ ಇಲ್ಲಿವೆ. ಇಲ್ಲಿನ ಬಡವರು ಬಸ್ ಇಲ್ಲದೇ ತೊಂದರೆಗೆ ಈಡಾಗಿದ್ದಾರೆ ಎಂದು ಅಂಗವಿಕಲರೂ ಆಗಿರುವ ಸ್ಥಳೀಯ ನಿವಾಸಿ ರಾಜಣ್ಣ ಅಸಹಾಯಕತೆ ತೋಡಿಕೊಂಡರು.

ಬಸ್‌ಗೆ ಜನರ ಕೊರತೆ ಇರಲಿಲ್ಲ. ಸಮಯಪಾಲನೆ ಮಾಡದೇ ಜನರನ್ನು ಬಸ್ ಚಾಲಕರು ಸತಾಯಿಸಿದ್ದರು. ಸೋನಾಲ್ ಗಾರ್ಮೆಂಟ್‌ನಿಂದ ಲಕ್ಷ್ಮೀದೇವಿ ನಗರದವರೆಗೆ ಸುಮಾರು 200 ಮೀಟರ್ ದೂರದಲ್ಲಿ ರಸ್ತೆಯ ಬದಿಯಲ್ಲಿ ಲಾಜಿಸ್ಟಿಕ್ ಕಂಪನಿಗಳ ಲಾರಿಗಳು ನಿಲ್ಲುತ್ತಿರುವುದರಿಂದ ಸರಾಗ ಸಂಚಾರಕ್ಕೆ ತೊಂದರೆಯಾಗುತ್ತಿತ್ತು. ಅಷ್ಟಕ್ಕೇ ಬಸ್‌ಗಳ ಸಂಚಾರ ಸ್ಥಗಿತಗೊಳಿಸಿದ್ದು ಸರಿಯಲ್ಲ ಎಂದು ಲಕ್ಷ್ಮೀದೇವಿ ನಗರದ ರಾಜ್‌ಕುಮಾರ್ ತಿಳಿಸಿದರು.

ವಸತಿ ಪ್ರದೇಶಕ್ಕೇ ಬಸ್‌ಗಳಿಲ್ಲದಂತಾಗಿದೆ. ಇಲ್ಲಿನ ಜನರು ಬಸ್ ಹಿಡಿಯಲು ಕಂಠೀರವ ಸ್ಟುಡಿಯೊ, ಲಗ್ಗೆರೆ ಇಲ್ಲವೇ ನಂದಿನಿ ಲೇಔಟ್‌ಗೆ ಹೋಗಬೇಕು. ಯಾವ ಕಡೆಗೆ ಹೋದರೂ ಎರಡರಿಂದ ಎರಡೂವರೆ ಕಿ.ಮೀ. ದೂರ ಇದೆ. ಬಿಎಂಟಿಸಿ ಬಸ್‌ಗಳು ಮೊದಲಿನಂತೆ ಲಕ್ಷ್ಮೀದೇವಿನಗರಕ್ಕೆ ಬರುವಂತೆ ಮಾಡಬೇಕು ಎಂದು ಸ್ಥಳೀಯರಾದ ಮಲ್ಲಿಕಾರ್ಜುನ ಒತ್ತಾಯಿಸಿದರು.

'ರಸ್ತೆ ಸರಿ ಇಲ್ಲ'

ಲಕ್ಷ್ಮೀದೇವಿನಗರಕ್ಕೆ ಹೋಗುವ ರಸ್ತೆ ಕಿರಿದಾಗಿತ್ತು. ಹಿಂದೆ ವಾಹನದಟ್ಟಣೆ ಅಷ್ಟಾಗಿ ಇಲ್ಲದ ಸಮಯದಲ್ಲಿ ಬಸ್‌ಗಳು ಹೋಗುತ್ತಿದ್ದವು. ಕೆಲವು ವರ್ಷಗಳ ಈಚೆಗೆ ಬಸ್‌ಗಳು ಹಲವು ಬಾರಿ ಅರ್ಧಗಂಟೆಗೂ ಹೆಚ್ಚು ಸಮಯ ಈ ದಟ್ಟಣೆಯಲ್ಲಿ ಸಿಲುಕುತ್ತಿದ್ದವು. ಲಕ್ಷ್ಮೀದೇವಿನಗರ, ವಿಧಾನಸೌಧ ಬಡಾವಣೆಯಿಂದ ಸಂಚರಿಸುವ ಪ್ರಯಾಣಿಕರ ಸಂಖ್ಯೆಯೂ ಬಹಳ ಕಡಿಮೆ ಇತ್ತು. ಎಲ್ಲ ಸಾಧಕ ಬಾಧಕಗಳನ್ನು ಪರಿಶೀಲಿಸಿದ ಬಳಿಕ ಬಸ್ ಮಾರ್ಗ ಬದಲಾವಣೆ ಮಾಡಲಾಗಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದರು.





ಲಕ್ಷ್ಮೀದೇವಿನಗರದಲ್ಲಿ ಬಸ್‌ನ ವೇಳಾಪಟ್ಟಿಯ ಫಲಕ ಮಾತ್ರ ಇದೆ (ಎಡಚಿತ್ರ). ಕೆಲವು ತಿಂಗಳ ಹಿಂದೆ ಕಿರಿದಾದ ರಸ್ತೆಯಲ್ಲಿ ಸಂಚರಿಸುತ್ತಿದ್ದ ಬಸ್

ಉದ್ಯಮ ಸಮಾವೇಶ: ಕನೇರಿ ಸ್ವಾಮೀಜಿ ವಿರುದ್ಧ ಘೋಷಣೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಮಠಾಧೀಶರ ವಿರುದ್ಧ ಅಶ್ಲೀಲ ಪದ ಬಳಕೆ: ಆರೋಪ
- ಕಾರ್ಯಕ್ರಮದಲ್ಲಿ ಗೊಂದಲದ ವಾತಾವರಣ

ಬೆಂಗಳೂರು: ನಗರದ ಅರಮನೆ ಮೈದಾನದಲ್ಲಿ ನಡೆಯುತ್ತಿರುವ ವೀರಶೈವ ಲಿಂಗಾಯತ ಜಾಗತಿಕ ಉದ್ಯಮ ಸಮಾವೇಶದಲ್ಲಿ ಮಹಾರಾಷ್ಟ್ರ ಕನೇರಿ ಮಠದ ಅದೃಶ್ಯ ಕಾಡಸಿದ್ಧೇಶ್ವರ ಸ್ವಾಮೀಜಿ ಅವರ ವಿರುದ್ಧ ಧಿಕ್ಕಾರ ಕೂಗಿದ ಘಟನೆ ಶುಕ್ರವಾರ ನಡೆಯಿತು.

ಅಂತರರಾಷ್ಟ್ರೀಯ ಲಿಂಗಾಯತ ಯೂತ್ ಫೋರಂ ಆಯೋಜಿಸಿರುವ ಸಮಾವೇಶದಲ್ಲಿ ಸಾವಯವ ಕೃಷಿ ಕುರಿತು ಉಪನ್ಯಾಸ ನೀಡಲು ಸ್ವಾಮೀಜಿ ಬಂದಿದ್ದರು. ಅವರು ಭಾಷಣ ಆರಂಭಿಸುತ್ತಿದ್ದಂತೆ ಕೆಲವರು ಸ್ವಾಮೀಜಿ ವಿರುದ್ಧ ಘೋಷಣೆ ಕೂಗಿದರು.

ಈ ವೇಳೆ ಸ್ವಾಮೀಜಿ ಭಾಷಣ ಮುಂದುವರಿಸಿ ಸರ್ವಜ್ಞರ ವಚನವೊಂದನ್ನು ಉಲ್ಲೇಖಿಸಿದರು. ಆಗ ಧಿಕ್ಕಾರ ಘೋಷಣೆ ಜೋರಾಯಿತು.

ಪ್ರತಿಭಟನೆಗೆ ಮುಂದಾದವರನ್ನು ಹೊರಕ್ಕೆ ಹೋಗುವಂತೆ ಸಂಘಟಕರು ಹಾಗೂ ಪೊಲೀಸರು ಸೂಚಿಸಿದರು. ಆದರೂ ಘೋಷಣೆ ಕೂಗುವುದು ನಿಲ್ಲಿಸಲಿಲ್ಲ. ಆಗ ಗೊಂದಲದ ವಾತಾವರಣ ಸೃಷ್ಟಿಯಾಯಿತು.

'ಸ್ವಾಮೀಜಿ ಅವರು ಬಸವ ಅನುಯಾಯಿಗಳನ್ನು ತಾಲಿಬಾನಿಗಳು ಎಂದು ಕರೆದಿದ್ದಾರೆ. ಲಿಂಗಾಯತ ಮಠಾಧೀಶರ ವಿರುದ್ಧ ಅಶ್ಲೀಲ ಪದಗಳನ್ನು ಬಳಸಿದ್ದಾರೆ. ಅಂತಹವರನ್ನು ಸಮಾವೇಶಕ್ಕೆ ಕರೆಯಬೇಡಿ ಎಂದು ತಿಳಿಸಿದರೂ ಏಕೆ ಆಹ್ವಾನಿಸಿದ್ದೀರಿ' ಎಂದು ಪ್ರತಿಭಟನಾನಿರತರು ಪ್ರಶ್ನಿಸಿದರು.

ಕೊನೆಗೆ 20ಕ್ಕೂ ಹೆಚ್ಚು ಮಂದಿಯನ್ನು ವೇದಿಕೆ ಮುಂಭಾಗದಿಂದ ಹೊರಕ್ಕೆ ಕಳುಹಿಸಿದ ನಂತರ ಕಾರ್ಯಕ್ರಮ ಮುಂದುವರಿಯಿತು. ಅದೃಶ್ಯ ಕಾಡಸಿದ್ಧೇಶ್ವರ ಸ್ವಾಮೀಜಿ ಅವರು ಕೃಷಿ ಕುರಿತ ಭಾಷಣವನ್ನು ಮುಗಿಸಿದರು.

'ಮೊದಲೇ ತೀರ್ಮಾನಿಸಿದಂತೆ ಅದೃಶ್ಯ ಕಾಡಸಿದ್ಧೇಶ್ವರ ಸ್ವಾಮೀಜಿ ಅವರನ್ನು ಕೃಷಿ ಕುರಿತಾಗಿ ಮಾತನಾಡಲು ಆಹ್ವಾನಿಸಿದ್ದೆವು. ಅವರು ಆಗಮಿಸಿ ಅದೇ ವಿಷಯದ ಕುರಿತು ಮಾತನಾಡುತ್ತಿದ್ದರು. ಕೆಲವರು ವಿರೋಧ ವ್ಯಕ್ತಪಡಿಸಿದ್ದು ಕಂಡು ಬಂದಿತು. ಅಂತಹವರನ್ನು ಹೊರಕ್ಕೆ ಕಳುಹಿಸಲಾಯಿತು' ಎಂದು ಸಂಘಟಕರೊಬ್ಬರು ತಿಳಿಸಿದರು.

ಅದೃಶ್ಯ ಕಾಡಸಿದ್ಧೇಶ್ವರ ಸ್ವಾಮೀಜಿ ಮೂರು ತಿಂಗಳ ಹಿಂದೆ ಅವಹೇಳನಕಾರಿಯಾಗಿ ಮಾತನಾಡಿದ್ದರು ಎಂದು ವಿಜಯಪುರ ಜಿಲ್ಲೆಯಿಂದ ಗಡಿಪಾರು ಮಾಡಲಾಗಿತ್ತು. ಈ ವಿಚಾರ ಕೋರ್ಟ್ ಮೆಟ್ಟಿಲೇರಿತ್ತು. ಕೋರ್ಟ್ ಕೂಡ ಸಂಯಮದಿಂದ ಮಾತನಾಡುವಂತೆ ಸ್ವಾಮೀಜಿ ಅವರಿಗೆ ಸೂಚಿಸಿತ್ತು.

ಎರಡು ತಾಸು ವಿಮಾನ ಹಾರಾಟ ಸ್ಥಗಿತ • ಭದ್ರತಾ ಸಿಬ್ಬಂದಿ ತಪಾಸಣೆ

ಬಾಂಬ್ ಇವೆ ಎಂದ ಪ್ರಯಾಣಿಕ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಪ್ರತ್ಯೇಕ ಪ್ರದೇಶಕ್ಕೆ ಒಯ್ದು ವಿಮಾನ ತಪಾಸಣೆ
- ಸಿದ್ಧ ಉಡುಪು ವ್ಯಾಪಾರಿ ಬಂಧನ; ಠಾಣಾ ಜಾಮೀನಿನಡಿ ಬಿಡುಗಡೆ

ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಗುರುವಾರ ಅಹಮದಾಬಾದ್‌ಗೆ ತೆರಳುತ್ತಿದ್ದ ಇಂಡಿಗೊ ವಿಮಾನದ ಪ್ರಯಾಣಿಕರೊಬ್ಬರು ವಿಮಾನ ಏರುವ ಸಮಯದಲ್ಲಿ ತನ್ನ ಬಳಿ ಎರಡು ಬಾಂಬ್ ಇವೆ ಎಂದು ತಮಾಷೆಗಾಗಿ ಹೇಳಿದ್ದನ್ನು ಗಂಭೀರವಾಗಿ ಪರಿಗಣಿಸಿದ ಭದ್ರತಾ ಸಿಬ್ಬಂದಿ ತಪಾಸಣೆಗೆ ಮುಂದಾದ ಕಾರಣ ಆತಂಕ ಸೃಷ್ಟಿಯಾಗಿತ್ತು. ಅಲ್ಲದೇ ವಿಮಾನ ಸಂಚಾರಕ್ಕೆ ತೀವ್ರ ವ್ಯತ್ಯಯ ಉಂಟಾಯಿತು.

ಇಂಡಿಗೊ ವಿಮಾನ ಸಂಖ್ಯೆ 6ಇ-586ಕ್ಕೆ ಅಂತಿಮ ಬೋರ್ಡಿಂಗ್ ನಡೆಯುತ್ತಿದ್ದ ವೇಳೆ ಗೇಟ್ ಸಂಖ್ಯೆ 30ರ ಬಳಿ ಪ್ರಯಾಣಿಕರೊಬ್ಬರು ತನ್ನ ಬಳಿ ಎರಡು ಸಣ್ಣ ಬಾಂಬ್‌ಗಳಿವೆ ಎಂದು ಹೇಳಿದ್ದಾರೆ. ಇದನ್ನು ಗಂಭೀರವಾಗಿ ಪರಿಗಣಿಸಿದ ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ತಕ್ಷಣವೇ ಭದ್ರತಾ ತಪಾಸಣೆಗೆ ಮುಂದಾಯಿತು.

ವಿಮಾನದಲ್ಲಿದ್ದ ಪ್ರಯಾಣಿಕರನ್ನು ಕೆಳಗಿಳಿಸಿದ ನಂತರ ಏರ್‌ಬಸ್ ಎ-320 ವಿಮಾನವನ್ನು ಪ್ರತ್ಯೇಕ ಐಸೊಲೇಷನ್ ಪ್ರದೇಶಕ್ಕೆ ಕೊಂಡೊಯ್ಯಲಾಯಿತು. ಬಾಂಬ್ ಪತ್ತೆ ದಳಗಳು ವಿಮಾನ ಹಾಗೂ ಸರಕು ಸಾಮಗ್ರಿಗಳನ್ನು ಸಂಪೂರ್ಣವಾಗಿ ಪರಿಶೀಲಿಸಿದವು. ಈ ವೇಳೆ ಯಾವುದೇ ಸ್ಫೋಟಕ ವಸ್ತುಗಳು ಪತ್ತೆಯಾಗಲಿಲ್ಲ. ಇದರಿಂದ ಎಲ್ಲರೂ ನಿಟ್ಟುಸಿರು ಬಿಟ್ಟರು. ಆದರೆ, ಈ ಘಟನೆಯಿಂದ ವಿಮಾನ ಟೇಕ್ ಆಫ್ ಆಗಲು ಸುಮಾರು ಎರಡು ತಾಸು ವಿಳಂಬವಾಯಿತು.

ಈ ಘಟನೆ ಇಂಡಿಗೊ ಸಂಸ್ಥೆಯ ಬೆಳಗಿನ ವೇಳಾಪಟ್ಟಿಯ ಮೇಲೂ ಪರಿಣಾಮ ಬೀರಿತು. ಬಾಂಬ್ ಕುರಿತು ಹಗುರವಾಗಿ ಮಾತನಾಡಿದ ಆರೋಪದಡಿ ಬೆಂಗಳೂರಿನ 52 ವರ್ಷ ವಯೋಮಾನದ ಸಿದ್ಧ ಉಡುಪು ವ್ಯಾಪಾರಿಯನ್ನು ಪೊಲೀಸರು ಬಂಧಿಸಿದರು.

ಅಪರಾಧ ಸುದ್ದಿ

ನಂತರ ಠಾಣಾ ಜಾಮೀನಿನಡಿ ಬಿಡುಗಡೆ ಮಾಡಲಾಗಿದೆ. ವಿಮಾನದ ಭದ್ರತೆಯನ್ನು ಅಪಾಯಕ್ಕೆ ಒಡ್ಡಿದ ಆರೋಪದಡಿ ಭಾರತೀಯ ವಿಮಾನ ಕಾಯ್ದೆಯಡಿ ಪ್ರಯಾಣಿಕನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

'ಭದ್ರತಾ ವಿಚಾರದಲ್ಲಿ ಭಾರತದಲ್ಲಿ ಶೂನ್ಯ ಸಹಿಷ್ಣುತೆ ನೀತಿ ಜಾರಿಯಲ್ಲಿದೆ. ಈ ಹಿಂದೆ, ದೆಹಲಿಯಲ್ಲಿ ಹಾಗೂ ಗೋವಾದಲ್ಲಿ ನಡೆದ ಇಂತಹ ಘಟನೆಗಳು ಗಂಟೆಗಟ್ಟಲೇ ವಿಮಾನ ಸಂಚಾರ ವ್ಯತ್ಯಯಕ್ಕೆ ಕಾರಣವಾಗಿದ್ದವು. ಕೆಲ ಪ್ರಯಾಣಿಕರನ್ನು ಬ್ಲ್ಯಾಕ್‌ಲಿಸ್ಟ್‌ಗೆ ಕೂಡ ಸೇರಿಸಲಾಗಿತ್ತು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

24 ವರ್ಷದಿಂದ ತಲೆಮರೆಸಿಕೊಂಡಿದ್ದ ವ್ಯಕ್ತಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಯಾಲಯದ ವಿಚಾರಣೆಗೆ ಹಾಜರಾಗದೇ ಕಳೆದ 24 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಜಯನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಬನ್ನೇರುಘಟ್ಟ ರಸ್ತೆಯ ಹೊಸ ಸಂಪಂಗಿ ರಾಮನಗರದ 9ನೇ ಕ್ರಾಸ್ ನಿವಾಸಿ ಮಹಾಲಿಂಗಂ ಬಂಧಿತ ಆರೋಪಿ.

2002ರ ಸೆ.18ರಂದು ಮಧ್ಯಾಹ್ನ 12.45ರ ಸುಮಾರಿಗೆ ಜಯನಗರದ ನಾಲ್ಕನೇ ಬ್ಲಾಕ್‌ನ ಮನೆಗೆ ನುಗ್ಗಿ ಚಾಕು ತೋರಿಸಿ ಮೂವರು ಆರೋಪಿಗಳು, ನಗದು, ಚಿನ್ನಾಭರಣ, ಕ್ಯಾಮೆರಾ ಸೇರಿದಂತೆ ಬೆಲೆಬಾಳುವ ವಸ್ತುಗಳನ್ನು ಕಳ್ಳತನ ಮಾಡಿದ್ದರು. ಘಟನೆ ಸಂಬಂಧ ಮಹೇಶ್ ಅಲಿಯಾಸ್ 'ಡೇರಿ' ಮಹೇಶ್, ಮಹಾಲಿಂಗಂ ಹಾಗೂ ಪರಶುರಾಮ್ ಅವರನ್ನು ಬಂಧಿಸಿದ್ದರು. ಅದಾದ ಮೇಲೆ ಪ್ರಕರಣದ ತನಿಖೆ ನಡೆಸಿದ್ದ ಪೊಲೀಸರು, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಆರೋಪಿಗಳ ಪೈಕಿ, ಮಹಾಲಿಂಗಂ ಎಂಬಾತ ನ್ಯಾಯಾಲಯದಿಂದ ಜಾಮೀನು ಪಡೆದು ಜೈಲಿನಿಂದ ಹೊರಬಂದಿದ್ದ. ಅದಾದ ಮೇಲೆ ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿದ್ದ ಎಂದು ಪೊಲೀಸರು ಹೇಳಿದರು.

'ಖಚಿತ ಮಾಹಿತಿ ಆಧರಿಸಿ ಆರೋಪಿಯಿದ್ದ ಸ್ಥಳವನ್ನು ಪತ್ತೆಮಾಡಿ ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

ವಿದ್ಯಾರ್ಥಿಗೆ ಥಳಿತ: ಶಿಕ್ಷಕಿ ವಿರುದ್ಧ ಎಫ್‌ಐಆರ್

ಬೆಂಗಳೂರು: ಹೋಂವರ್ಕ್ ಮಾಡಿಲ್ಲವೆಂದು ನಾಲ್ಕನೇ ತರಗತಿಯ ವಿದ್ಯಾರ್ಥಿಗೆ ಶಿಕ್ಷಕಿಯೊಬ್ಬರು ಬಾಸುಂಡೆ ಬರುವಂತೆ ಥಳಿಸಿದ್ದು, ಈ ಸಂಬಂಧ ನಂದಿನಿ ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಂದಿನಿ ಲೇಔಟ್ ವೀಣಾ ವಿದ್ಯಾ ಸಂಸ್ಥೆಯ ಶಿಕ್ಷಕಿ ಆಂಗ್ಲಿನ್ ಎಂಬುವವರ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ಹೇಳಿದರು.

ಮಹಾರಾಷ್ಟ್ರದಲ್ಲಿ ಕೆಲಸ ಮಾಡುತ್ತಿದ್ದ ಲಕ್ಷ್ಮಿ ಅವರು ತಮ್ಮ ಮಗನನ್ನು ಹಾಸ್ಟೆಲ್‌ನಲ್ಲಿ ವ್ಯಾಸಂಗಕ್ಕೆ ಬಿಟ್ಟಿದ್ದರು. ಇತ್ತೀಚೆಗೆ ಮಗನನ್ನು ನೋಡಲು ಬಂದಾಗ, ಆತನ ಕೈ ಮತ್ತು ದೇಹದ ವಿವಿಧ ಭಾಗಗಳಲ್ಲಿ ಬಾಸುಂಡೆ ಗುರುತುಗಳು ಕಂಡು ಬಂದಿದ್ದವು.

'ಈ ವಿಚಾರವನ್ನು ಪೋಷಕರಿಗೆ ತಿಳಿಸಿದರೆ ಕುತ್ತಿಗೆ ಹಿಸುಕುವುದಾಗಿ ಶಿಕ್ಷಕಿ ಬೆದರಿಕೆ ಹಾಕಿದ್ದರು. ಹೀಗಾಗಿ ತಾನು ಏನೂ ಹೇಳಿಕೊಂಡಿಲ್ಲ' ಎಂದು ತಾಯಿಯ ಬಳಿ ವಿದ್ಯಾರ್ಥಿ ಹೇಳಿಕೊಂಡಿದ್ದ. ಬಳಿಕ ಬಾಲಕನ ತಾಯಿ ಠಾಣೆಗೆ ದೂರು ನೀಡಿದ್ದಾರೆ. ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಒಂಬತ್ತು ದಿನದಲ್ಲಿ 23,356 ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಕಮುಖ ಸಂಚಾರ ರಸ್ತೆಗಳಲ್ಲಿ ವಿರುದ್ಧವಾಗಿ ಚಾಲನೆ ಮಾಡಿದ ದ್ವಿಚಕ್ರ ವಾಹನ ಸವಾರರು ಹಾಗೂ ವಾಹನ ಚಾಲಕರ ವಿರುದ್ಧ ಕಾರ್ಯಾಚರಣೆ ಮುಂದುವರಿಸಿರುವ ಸಂಚಾರ ಪೊಲೀಸರು, ಒಂಬತ್ತು ದಿನಗಳಲ್ಲಿ 23,356 ಪ್ರಕರಣಗಳನ್ನು ದಾಖಲಿಸಿದ್ದಾರೆ.

ರಸ್ತೆ ಅಪಘಾತಗಳನ್ನು ತಡೆಗಟ್ಟುವ ಉದ್ದೇಶದಿಂದ ಜ.21ರಿಂದ 29ರವರೆಗೆ ನಡೆದ ವಿಶೇಷ ಕಾರ್ಯಾಚರಣೆಯಲ್ಲಿ, ಸಂಚಾರ ನಿಯಮ ಉಲ್ಲಂಘಿಸಿದವರ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ. ಸಾರ್ವಜನಿಕರ ಸುರಕ್ಷಿತ ಸಂಚಾರವನ್ನು ಗಮನದಲ್ಲಿ ಇಟ್ಟುಕೊಂಡು ನಿರಂತರವಾಗಿ ವಿಶೇಷ ಕಾರ್ಯಾಚರಣೆ ನಡೆಸಲಾಗುವುದು ಎಂದು ಪೊಲೀಸರು ಹೇಳಿದರು.

ಚಿಟಿಕೆ ಸುದ್ದಿ

ನಾಯಿ ದಾಳಿ ಮಹಿಳೆಗೆ ಗಂಭೀರ ಗಾಯ

ಬೆಂಗಳೂರು: ನಗರದ ಎಚ್‌ಎಸ್‌ಆರ್ ಲೇಔಟ್‌ನ ಟೀಚರ್ಸ್ ಕಾಲೊನಿಯಲ್ಲಿ ಸಾಕು ನಾಯಿ ದಾಳಿ ನಡೆಸಿದ್ದು, ಮಹಿಳೆ ಗಂಭೀರವಾಗಿ ಗಾಯಗೊಂಡಿದ್ದಾರೆ. ಅವರ ಮುಖ ಮತ್ತು ಕತ್ತಿನ ಭಾಗದಲ್ಲಿ ಗಾಯಗಳಾಗಿವೆ. ಜ.26ರಂದು ಬೆಳಿಗ್ಗೆ ಈ ಘಟನೆ ನಡೆದಿದೆ.

ಪ್ರತಿದಿನದಂತೆ ಮನೆಯ ಎದುರು ಮಹಿಳೆ ವಾಕಿಂಗ್‌ಗೆ ತೆರಳಿದ್ದರು. ಅವರ ಪಕ್ಕದ ಮನೆಯ ಸಾಕು ನಾಯಿ ಏಕಾಏಕಿ ದಾಳಿ ನಡೆಸಿತ್ತು. ಮಹಿಳೆಯನ್ನು ರಕ್ಷಿಸಲು ಮುಂದಾದ ವ್ಯಕ್ತಿಯ ಮೇಲೆಯೂ ನಾಯಿ ದಾಳಿ ನಡೆಸಿದೆ ಎಂದು ಮೂಲಗಳು ಹೇಳಿವೆ.

ದಾಳಿ ನಡೆಸಿದ ನಾಯಿಯು ಅಮರೇಶ್ ರೆಡ್ಡಿ ಎಂಬುವವರಿಗೆ ಸೇರಿದ್ದು, ನಾಯಿಯನ್ನು ಸರಿಯಾಗಿ ಮನೆಯ ಒಳಗೆ ಕಟ್ಟಿಹಾಕದೇ ಹೊರಕ್ಕೆ ಬಿಟ್ಟಿದ್ದಾರೆ ಎಂಬ ದೂರಿದೆ. ಗಾಯಗೊಂಡಿರುವ ಮಹಿಳೆಯ ಪತಿ ಎಚ್.ಎಸ್.ಆರ್ ಲೇಔಟ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ರ‍್ಯಾಪಿಡ್, ಬ್ಲಿಟ್ಝ್ ಚೆಸ್ ಇಂದಿನಿಂದ

ಬೆಳ್ತಂಗಡಿ (ದಕ್ಷಿಣ ಕನ್ನಡ): ಕರ್ನಾಟಕ ರಾಜ್ಯ ಚೆಸ್ ಸಂಸ್ಥೆಯ ಸಹಯೋಗದಲ್ಲಿ ನಗರದ ರಾವ್ಸ್ ಚೆಸ್ ಕಾರ್ನರ್ ಆಯೋಜಿಸಿರುವ ಫಿಡೆ ರೇಟೆಡ್ 'ಎಸ್‌ಡಿಎಂ–ಆರ್‌ಸಿಸಿ ರೋಟೊ ಲಾಯರ್ಸ್' ಅಂತರರಾಷ್ಟ್ರೀಯ ರ‍್ಯಾಪಿಡ್ ಮತ್ತು ಬ್ಲಿಟ್ಝ್ ಚೆಸ್ ಟೂರ್ನಿ ಜ.31 ಮತ್ತು ಫೆ.1ರಂದು ಎಸ್‌ಡಿಎಂ ಕಲಾಭವನದಲ್ಲಿ ನಡೆಯಲಿದೆ.

187 ವಿಭಾಗಗಳಲ್ಲಿ ಒಟ್ಟು ₹2.5 ಲಕ್ಷ ಬಹುಮಾನ ಮೊತ್ತ ಇರುವ ಟೂರ್ನಿಯ ಮುಕ್ತ ವಿಭಾಗದ ಚಾಂಪಿಯನ್‌ಗೆ ₹35 ಸಾವಿರ ಮತ್ತು ಟ್ರೋಫಿ ಸಿಗಲಿದೆ.

ನಿಧನ ವಾರ್ತೆ

ಗೌರಿ ಹೆಗಡೆ ಕೆರೆಮನೆ



ಹೊನ್ನಾವರ: ತಾಲ್ಲೂಕಿನ ಗುಣವಂತೆಯ ಕೆರೆಮನೆ ನಿವಾಸಿ, ಯಕ್ಷಗಾನ ಕಲಾವಿದರಾಗಿದ್ದ ದಿ.ಕೆರೆಮನೆ ಶಂಭು ಹೆಗಡೆ ಅವರ ಪತ್ನಿ ಗೌರಿ ಹೆಗಡೆ (83) ಶುಕ್ರವಾರ ನಿಧನರಾದರು.

ಅವರಿಗೆ ಪುತ್ರ, ಯಕ್ಷಗಾನ ಕಲಾವಿದ ಕೆರೆಮನೆ ಶಿವಾನಂದ ಹೆಗಡೆ ಹಾಗೂ ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ಗುಣವಂತೆಯಲ್ಲಿ ನೆರವೇರಿತು.

ಅರಚಾಡಿ–ಎಗರಾಡಿದ ಇನ್‌ಸ್ಪೆಕ್ಟರ್ ಎಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಕರಣವೊಂದರಲ್ಲಿ ಆರೋಪಿ ಪರವಾಗಿ ವರದಿ ಸಲ್ಲಿಸಲು ₹4 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ ಲೋಕಾಯುಕ್ತ ಪೊಲೀಸರ ಬಲೆಗೆ ಸಿಕ್ಕಿಬಿದ್ದಿದ್ದ ಕೆ.ಪಿ.ಅಗ್ರಹಾರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಗೋವಿಂದರಾಜು ಅವರು, ಬಂಧನದ ವೇಳೆ ಕೂಗಾಡಿ–ಎಗರಾಡುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಚಾಮರಾಜಪೇಟೆಯ ಸಿಎಆರ್ ಮೈದಾನದಲ್ಲಿ ತಮ್ಮನ್ನು ಲೋಕಾಯುಕ್ತ ಪೊಲೀಸ್ ಸಿಬ್ಬಂದಿ ಬಂಧಿಸಿದಾಗ ಗೋವಿಂದರಾಜು ಅವರು ಸಿನಿಮೀಯ ರೀತಿಯಲ್ಲಿ, ಭಾರಿ ರೋಷಾವೇಶ ತೋರಿದ್ದಾರೆ. ತಮ್ಮನ್ನು ಹಿಡಿದವರಿಂದ ತಪ್ಪಿಸಿಕೊಳ್ಳಲು ಭಾರಿ ಪ್ರಯತ್ನ ನಡೆಸಿದ್ದಾರೆ. ಆದರೆ ಲೋಕಾಯುಕ್ತ ಸಿಬ್ಬಂದಿಯ ಸಂಖ್ಯಾಬಲವೇ ಅಧಿಕವಾಗಿದ್ದ ಕಾರಣ, ಅವರ ಯತ್ನ ವಿಫಲವಾಗಿದೆ.

'ಸಾಮಾನ್ಯವಾಗಿ ನಾವು ಇಂತಹ ಕಾರ್ಯಾಚರಣೆಗಳಲ್ಲಿ ವಿಡಿಯೊ ಮಾಡಿಕೊಳ್ಳುವುದಿಲ್ಲ. ಆದರೆ, ಆರೋಪಿಯು ವಿಚಿತ್ರವಾಗಿ ವರ್ತಿಸಿದ ಕಾರಣಕ್ಕೆ ವಿಡಿಯೊ ಚಿತ್ರೀಕರಿಸಿದೆವು' ಎಂದು ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದ ಸಿಬ್ಬಂದಿ ಒಬ್ಬರು ಮಾಹಿತಿ ನೀಡಿದರು.

ಪ್ರಚೋದನಾತ್ಮಕ ಪೋಸ್ಟ್: ಇಬ್ಬರ ಬಂಧನ

ಬ್ರಹ್ಮಾವರ (ಉಡುಪಿ): ದ್ವೇಷ, ಅಶಾಂತಿ ಉಂಟುಮಾಡುವ ಉದ್ದೇಶದಿಂದ ಸಾಮಾಜಿಕ ಜಾಲತಾಣದಲ್ಲಿ ಪ್ರಚೋದನಾತ್ಮಕ ಪೋಸ್ಟ್‌ಗಳನ್ನು ಹರಡಿದ ಆರೋಪದಡಿ ಇಲ್ಲಿನ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಅಪರಾಧ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ.

ವಾರಂಬಳ್ಳಿ ಮೂಡುಗರಡಿಯ ಸಂತೋಷ ಕುಮಾರ್ ಶೆಟ್ಟಿ (56), ಕೋಟೇಶ್ವರದ ಕೆ. ನಾಗರಾಜ (62) ಬಂಧಿತರು.



ಕೆ.ನಾಗರಾಜ



ಸಂತೋಷ ಶೆಟ್ಟಿ

ಬ್ರಹ್ಮಾವರದ ಸಬ್‌ಇನ್‌ಸ್ಪೆಕ್ಟರ್ ಅಶೋಕ ಮಾಳಾಬಗಿ, ಸುದರ್ಶನ್ ದೊಡ್ಡಮನಿ ಹಾಗೂ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿದರು.

ಪಾಕ್ ಡ್ರೋನ್ ಹಿಮ್ಮೆಟ್ಟಿಸಿದ ಸೇನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಶಸ್ತ್ರಾಸ್ತ್ರ, ನಿಷೇಧಿತ ವಸ್ತು ಪತ್ತೆಹಚ್ಚಲು ಶೋಧ ಕಾರ್ಯಾಚರಣೆ
- ಗಡಿಯಲ್ಲಿ ಡ್ರೋನ್‌ಗಳ ಬಳಕೆ ಹೆಚ್ಚಳ: ಭದ್ರತೆಗೆ ಸವಾಲು

ಶ್ರೀನಗರ: ಉತ್ತರ ಕಾಶ್ಮೀರದ ಕುಪ್ವಾಡ ಜಿಲ್ಲೆಯ ಕೆರನ್ ವಲಯದ ಗಡಿ ನಿಯಂತ್ರಣ ರೇಖೆ (ಎಲ್‌ಒಸಿ) ಸಮೀಪ ಗುರುವಾರ ರಾತ್ರಿ ಪಾಕಿಸ್ತಾನದ ಡ್ರೋನ್‌ಗಳು ಹಾರಾಟ ನಡೆಸಿದ್ದು, ಭಾರತೀಯ ಸೇನೆಯು ಗುಂಡು ಹಾರಿಸುವ ಮೂಲಕ ಹಿಮ್ಮೆಟ್ಟಿಸಿದೆ.

'ಈ ವಲಯದಲ್ಲಿ ಶಸ್ತ್ರಾಸ್ತ್ರ ಅಥವಾ ನಿಷೇಧಿತ ವಸ್ತುಗಳನ್ನು ಬೀಳಿಸಲಾಗಿದೆಯೇ ಎಂಬುದನ್ನು ಪತ್ತೆಹಚ್ಚಲು ಶೋಧ ಕಾರ್ಯಾಚರಣೆಯನ್ನೂ ನಡೆಸಲಾಗಿದೆ. ಗಡಿ ನಿಯಂತ್ರಣ ರೇಖೆಯುದ್ದಕ್ಕೂ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ. ಒಳನುಸುಳುವಿಕೆ ಹಾಗೂ ಡ್ರೋನ್ ಚಟುವಟಿಕೆ ಬಗ್ಗೆ ಗುಪ್ತಚರ ಇಲಾಖೆ ಮಾಹಿತಿ ನೀಡಿರುವುದರಿಂದ ಯೋಧರನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಕೆರನ್ ವಲಯವು ಒಳನುಸುಳುವಿಕೆಗೆ ಸಂಬಂಧಿಸಿದಂತೆ ಸೂಕ್ಷ್ಮ ಪ್ರದೇಶವಾಗಿದೆ. ಭೂ–ಆಧಾರಿತ ಒಳನುಸುಳುವಿಕೆ ವಿರೋಧಿ ವ್ಯವಸ್ಥೆಯನ್ನು ತಪ್ಪಿಸಲು ಗಡಿಯಾಚೆಯಿಂದ ಡ್ರೋನ್‌ಗಳ ಬಳಕೆ ಹೆಚ್ಚಾಗಿದೆ. ಇದು ಅವರ ತಂತ್ರಗಳಲ್ಲಿನ ಬದಲಾವಣೆಯನ್ನು ತೋರಿಸುತ್ತದೆ' ಎಂದು ಹೇಳಿದ್ದಾರೆ.

ಜಮ್ಮು ಮತ್ತು ಕಾಶ್ಮೀರದ ಎಲ್‌ಒಸಿ, ಅಂತರರಾಷ್ಟ್ರೀಯ ಗಡಿಯಲ್ಲಿ (ಐ.ಬಿ) ಡ್ರೋನ್‌ಗಳ ಬಳಕೆ ಹೆಚ್ಚಾಗಿರುವುದು ಹೊಸ ಹಾಗೂ ಸಂಕೀರ್ಣ ಭದ್ರತಾ ಸವಾಲು ಎದುರಾಗಿರುವುದನ್ನು ಎತ್ತಿ ತೋರಿಸುತ್ತದೆ. ಭಾರತವು ಪಾಕಿಸ್ತಾನದೊಂದಿಗೆ 3,323 ಕಿ.ಮೀ. ಉದ್ದದ ಗಡಿಯನ್ನು ಹಂಚಿಕೊಂಡಿದೆ. ಅದರಲ್ಲಿ 221 ಕಿ.ಮೀ. ಐ.ಬಿ ಮತ್ತು 740 ಕಿ.ಮೀ. ಎಲ್‌ಒಸಿ ಜಮ್ಮು ಮತ್ತು ಕಾಶ್ಮೀರದಲ್ಲಿದೆ.

ಕ್ರಿಕೆಟ್: ರವಿಶಂಕರ್ ವಿದ್ಯಾಮಂದಿರ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀ ಶ್ರೀ ರವಿಶಂಕರ್ ವಿದ್ಯಾಮಂದಿರ (ಬೆಂಗಳೂರು ಪೂರ್ವ) ಶಾಲಾ ತಂಡವು ಬಿ.ಟಿ. ರಾಮಯ್ಯ ಶೀಲ್ಡ್‌ಗಾಗಿ ನಡೆದ ಕೆಎಸ್‌ಸಿಎ 16 ವರ್ಷದೊಳಗಿನವರ ಏಕದಿನ ಕ್ರಿಕೆಟ್ ಟೂರ್ನಿಯ (ಡಿವಿಷನ್–2) ಚಾಂಪಿಯನ್ ಆಗಿ ಹೊರಹೊಮ್ಮಿತು.

ವಿದ್ಯಾರಣ್ಯಪುರದ ಬಿಇಎಲ್ ಕ್ರಿಕೆಟ್ ಮೈದಾನದಲ್ಲಿ ಶುಕ್ರವಾರ ನಡೆದ ಫೈನಲ್ ಪಂದ್ಯದಲ್ಲಿ, ಕೆ.ಸಾಯಿ ಶ್ರವಣ್ ರೆಡ್ಡಿ (37ಕ್ಕೆ4) ಹಾಗೂ ಅತೀಕ್ಷ್ ಸಿಂಗ್ (28ಕ್ಕೆ3) ಅವರ ಪರಿಣಾಮಕಾರಿ ಬೌಲಿಂಗ್ ಬಲದಿಂದ ವಿದ್ಯಾಮಂದಿರ ತಂಡವು 13 ರನ್‌ಗಳಿಂದ 'ದಿ ಸ್ಪೋರ್ಟ್ಸ್ ಸ್ಕೂಲ್' ತಂಡವನ್ನು ಮಣಿಸಿತು.

ಸಂಕ್ಷಿಪ್ತ ಸ್ಕೋರು: ಶ್ರೀ ಶ್ರೀ ರವಿಶಂಕರ್ ವಿದ್ಯಾಮಂದಿರ: 50 ಓವರ್‌ಗಳಲ್ಲಿ 175 (ಆರವ್ ಶ್ರೀವಾಸ್ತವ 27, ಪಾರ್ಥ ಬಿ.ಎನ್. 33; ಪಿ.ರುಷಿಕೇಶ್ 22ಕ್ಕೆ2, ಸಾಯಿ ಆರೂಷ್ ಎಸ್. 38ಕ್ಕೆ2). ದಿ ಸ್ಪೋರ್ಟ್ಸ್ ಸ್ಕೂಲ್: 44.1 ಓವರ್‌ಗಳಲ್ಲಿ 162 (ಎಸ್.ಲಕ್ಷಿತ್ ಕುಮಾರ್ 60, ಎನ್.ಮಯೂರ್ 20; ಕೆ.ಸಾಯಿ ಶ್ರವಣ್ ರೆಡ್ಡಿ 37ಕ್ಕೆ4, ಅತೀಕ್ಷ್ ಸಿಂಗ್ 28ಕ್ಕೆ3).



ಬಿ.ಟಿ.ರಾಮಯ್ಯ ಶೀಲ್ಡ್ ವಿಜೇತ ಶ್ರೀ ಶ್ರೀ ರವಿಶಂಕರ್ ವಿದ್ಯಾಮಂದಿರ (ಬೆಂಗಳೂರು ಪೂರ್ವ) ಶಾಲಾ ತಂಡ. (ಕುಳಿತವರು) ಎಡದಿಂದ; ಪಾರ್ಥ ಬಿ.ಎನ್, ತೇಜಸ್ವಿ ಶರ್ಮಾ (ನಾಯಕ), ಇ.ಅಶೋಕ್ (ಕೋಚ್), ಗೀತಾ ಜಿ. (ಉಪ ಪ್ರಾಂಶುಪಾಲರು), ರೇಷ್ಮಾ ಗಣೇಶ್ (ಪ್ರಾಂಶುಪಾಲರು), ಗಣೇಶ್ ಸುಂದರ್ (ಕ್ರೀಡಾ ನಿರ್ದೇಶಕರು), ದೀಪಾ ವಿ. (ಶೈಕ್ಷಣಿಕ ಮುಖ್ಯಸ್ಥರು), ಕಿಶೋರ್ ಕುಮಾರ್ ಆರ್.ಬಿ. (ಕೋಚ್), ಕೆ.ಸಾಯಿ ಶ್ರವಣ್ ರೆಡ್ಡಿ (ಉಪನಾಯಕ) ಹಾಗೂ ಚಾನ್ಯಾಂಕ್ ಎನ್.ರೆಡ್ಡಿ. (ನಿಂತವರು) ಅತೀಕ್ಷ್ ಸಿಂಗ್, ವೇದಾಂತ್ ಸಂಗಪ್ಪ ಬೆಳ್ಳಂಕಿ, ಅಂಶ್ ಶುಕ್ಲಾ, ಹರ್ಷ ಜಿ. ರೆಡ್ಡಿ, ವಿಹಾನ್ ರಾವ್ ಪಿ., ಎನ್ ಅರ್ಷದ್, ರುಶೀಲ್ ಪಿ. ರೆಡ್ಡಿ, ಆರವ್ ಶ್ರೀವಾಸ್ತವ, ವೇದಿಶ್ ಡಿ. ರೆಡ್ಡಿ, ದೈವಿಕ್ ಶರ್ಮಾ, ಸುದೀಪ್ ಬಿ. ಹಾಗೂ ಅಂಶ್ ಸಿಂಗ್.

ಪಾಲನಜೋಗಹಳ್ಳಿ ಬಳಿ ವಿಮಾನ ಮಾದರಿ ಡ್ರೋನ್ ಪತ್ತೆ

ದೊಡ್ಡಬಳ್ಳಾಪುರ: ಎಂಜಿನಿಯರಿಂಗ್ ವಿದ್ಯಾರ್ಥಿಗಳು ಪರೀಕ್ಷಾರ್ಥವಾಗಿ ತಯಾರಿಸಿದ ವಿಮಾನ ಮಾದರಿಯ ಡ್ರೋನ್ ಪಾಲನಜೋಗಹಳ್ಳಿಯ ಮನೆ ಬಳಿ ಬಿದ್ದಿದೆ.

ಹಾರುತ್ತಾ ಬಂದ ಡ್ರೋನ್ ಏಕಾಏಕಿ ನಗರದ ಹೊರವಲಯದ ಪಾಲನಜೋಗಹಳ್ಳಿಯ 10ನೇ ಕ್ರಾಸ್ ಬಳಿ ಬಿದ್ದಿದೆ. ಡ್ರೋನ್ ಕಂಡು ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ದೊಡ್ಡಬಳ್ಳಾಪುರ ಗ್ರಾಮಾಂತರ ಠಾಣೆ ಪೊಲೀಸರು ಡ್ರೋನ್ ವಶಕ್ಕೆ ಪಡೆದಿದ್ದಾರೆ.

ತಜ್ಞರಿಂದ ಪರಿಶೀಲನೆ ನಡೆಸಲಾಗಿದೆ. ಡ್ರೋನ್‌ಗೆ ಬಳಸುವ ರೀತಿಯಲ್ಲಿ ಬ್ಯಾಟರಿಗಳು ಸೇರಿದಂತೆ ಎಲೆಕ್ಟ್ರಿಕ್ ವೈರ್‌ಗಳಿಂದ ತುಂಬಿದೆ ಎನ್ನಲಾಗಿದೆ.

ಎಂಜಿನಿಯರಿಂಗ್ ವಿದ್ಯಾರ್ಥಿಗಳು ತಯಾರಿಸಿ, ಪರೀಕ್ಷಾರ್ಥವಾಗಿ ಹಾರಿಸಿದ ವೇಳೆ, ಸಂಪರ್ಕ ಕಡಿತಗೊಂಡು ಬಿದ್ದಿರಬಹುದು ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.



ಪೊಲೀಸರು ವಶಕ್ಕೆ ಪಡೆದ ಡ್ರೋನ್

ಗ್ರಾಮದಲ್ಲಿ ಓಡಾಡಿದ ಕಾಡಾನೆ

ರಾಮನಗರ: ತಾಲ್ಲೂಕಿನ ಚನ್ನಮಾನಹಳ್ಳಿಯಲ್ಲಿ ಕಾಡಾನೆಯೊಂದು ಮಧ್ಯ ರಾತ್ರಿ ಓಡಾಡಿ ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿಸಿದೆ.

ಆಹಾರ ಅರಸಿ ರಾತ್ರಿ ಬಂದಿರುವ ಕಾಡಾನೆಯು ಮನೆಗಳ ಸುತ್ತಮುತ್ತ ಶಬ್ದ ಮಾಡುತ್ತಿತ್ತು. ಎಚ್ಚರಗೊಂಡ ಜನ ಕೂಡಲೇ ಅರಣ್ಯ ಇಲಾಖೆಯ ಆನೆ ಕಾರ್ಯಪಡೆಯ ಸಹಾಯವಾಣಿಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ.

ತಾಲ್ಲೂಕಿನ ಚಿಕ್ಕಮಣ್ಣುಗುಡ್ಡೆ ಅರಣ್ಯಕ್ಕೆ ಬಂದಿದ್ದ ಮೂರು ಕಾಡಾನೆಗಳ ಪೈಕಿ, ಒಂದು ಕಾಡಾನೆಯು ಚನ್ನಮಾನಹಳ್ಳಿ ಕಡೆಗೆ ಬಂದಿದೆ. ಕಾರ್ಯಾಚರಣೆ ನಡೆಸಿ ಆನೆಯನ್ನು ಮರಳಿ ಕಾಡಿಗೆ ಓಡಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಂಬೈ ರೇಸ್

ಟೈಮ್ ಅಂಡ್ ಟೈಡ್ ಗೆಲ್ಲುವ ನಿರೀಕ್ಷೆ

ಡಾ. ಎಸ್.ಸಿ.ಜೈನ್ ಸ್ಪ್ರಿಂಟರ್ಸ್ ಚಾಂಪಿಯನ್‌ಷಿಪ್ ಶನಿವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಟೈಮ್ ಅಂಡ್ ಟೈಡ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಎಕ್ಲಾ ಚೋಲೊ 7, ಜೆಟ್ ಟೈಫೂನ್ 1, ಶೀ ಈಸ್ ಎ ಟೀಸರ್ 4
2ನೇ ರೇಸ್: ಮ್ಯಾಟಿಸ್ಸಿ 2, ಜಫೆರಾನೊ 3, ಬುಗಟ್ಟಿ 1
3ನೇ ರೇಸ್: ಗನ್‌ಫೈರ್ 5, ಶಡಾಯ್ 6, ಸ್ಪೆಕ್ಟ್ರಾ 7
4ನೇ ರೇಸ್: ಎಕಟಾರಿನ 5, ಕೆಸ್ಸಿನಿ 7, ಹ್ಯಾರಿಸನ್ 1
5ನೇ ರೇಸ್: ಟೈಮ್ ಅಂಡ್ ಟೈಡ್ 4, ಮಿಸ್ ಅಮೆರಿಕನ್ ಪೀ 9, ಶಂಭಾಲ 3
6ನೇ ರೇಸ್: ಅಲ್ಗಾನ್‌ಕ್ವಿನ್ 1, ವಿಸ್ಪರ್ 4, ಅಜಾಲಿಯ 10
7ನೇ ರೇಸ್: ಸ್ಕಂಧ 3, ಜೈಸಲ್ಮೇರ್ 9, ಹ್ಯಾವೆನ್ಸ್ ರಿಧಮ್ 2

ಉತ್ತಮ ಬೆಟ್: ಮ್ಯಾಟಿಸಿ

ಜಾಕ್‌ಪಾಟ್‌ಗೆ	ಟ್ರಿಬಲ್
3,4,5,6,7	4,5,6

ಕೆಎಸ್‌ಸಿಎ ವಲಯಗಳಿಗೆ ಚೇರ್ಮನ್ ನೇಮಕ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಆರು ವಲಯಗಳಿಗೆ ಶುಕ್ರವಾರ ಚೇರ್ಮನ್‌ರನ್ನು ನೇಮಕ ಮಾಡಲಾಗಿದೆ.

ಎಲ್. ಎಂ. ಪ್ರಕಾಶ್ (ತುಮಕೂರು), ಟಿ ರವೀಂದ್ರ (ಮೈಸೂರು), ನಾಗೇಂದ್ರ ಕೆ ಪಂಡಿತ್ (ಶಿವಮೊಗ್ಗ), ಅಲ್ತಾಫ್ ನವಾಜ್ ಕಿತ್ತೂರ (ಧಾರವಾಡ), ಡಾ. ಶ್ರೀಕಾಂತ್ ರೈ (ಮಂಗಳೂರು) ಮತ್ತು ಚಂದ್ರಶೇಖರ್ ಮೈಲಾರ (ರಾಯಚೂರು) ಅವರನ್ನು ನೇಮಕ ಮಾಡಲಾಗಿದೆ ಎಂದು ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಜಿ. ಜಗದೀಶ್ ಅವರ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಕೆ

'ಪಿಟಿಸಿಎಲ್ ಕಾಯ್ದೆ ಅನ್ಯಾಯ ಸರಿಪಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಗಳಿಗೆ ಸರ್ಕಾರ ಮಂಜೂರು ಮಾಡಿದ ಜಮೀನು ರಕ್ಷಿಸುವ ಉದ್ದೇಶದಿಂದ ಜಾರಿಗೆ ತಂದಿರುವ ಕರ್ನಾಟಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ತಿದ್ದುಪಡಿ ಕಾಯ್ದೆಯ (ಪಿಟಿಸಿಎಲ್) ಗೊಂದಲದಿಂದ ಆಗುತ್ತಿರುವ ಅನ್ಯಾಯ ಸರಿಪಡಿಸಬೇಕು' ಎಂದು ಒತ್ತಾಯಿಸಲಾಗಿದೆ.

ಪಿಟಿಸಿಎಲ್ ಕಾಯ್ದೆ ಭೂಮಿ ವಂಚಿತರ ಹೋರಾಟ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಮಂಜುನಾಥ್ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಜಿ. ಜಗದೀಶ್ ಅವರ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಯಿತು.

2023ರಲ್ಲಿ ತಿದ್ದುಪಡಿ ಮಾಡಿದ ಬಳಿಕ ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ ನ್ಯಾಯಾಲಯ, ಹೈಕೋರ್ಟ್, ಸುಪ್ರೀಂ ಕೋರ್ಟ್‌ನಲ್ಲಿ ಪಿಟಿಸಿಎಲ್ ಕಾಯ್ದೆ ವಿರುದ್ಧವಾಗಿ ಆಗುತ್ತಿರುವ ಆದೇಶಗಳನ್ನು ತಡೆಯಲು ಕಠಿಣ ಕಾನೂನು ರೂಪಿಸಿ ನ್ಯಾಯ ಒದಗಿಸಬೇಕು. ಪಿಟಿಸಿಎಲ್ ಕಾಯ್ದೆ ಕಲಂ 3(1)ಬಿ ಅಡಿ ಬರುವ ಜಮೀನುಗಳು ಸರ್ಕಾರದಿಂದ ಮಂಜೂರಾಗಿದ್ದರೂ, ಕಾಯ್ದೆ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ವಜಾ ಮಾಡಿ ಗೊಂದಲ ಸೃಷ್ಟಿಸುತ್ತಿದ್ದಾರೆ. ಈ ಎಲ್ಲ ಜಮೀನುಗಳ ಬಗ್ಗೆ ಸ್ಪಷ್ಟಪಡಿಸಿ ತಿದ್ದುಪಡಿ ಮಾಡಬೇಕು ಎಂದು ಆಗ್ರಹಿಸಿದರು.

ಎಲ್ಲ ಕೋರ್ಟ್‌ಗಳಲ್ಲಿ ಶೇ 90ರಷ್ಟು ಸರ್ಕಾರಿ ವಕೀಲರು ಸರಿಯಾಗಿ ವಾದ ಮಂಡಿಸುತ್ತಿಲ್ಲ. ಇದರಿಂದ ಹಿನ್ನಡೆಯಾಗುತ್ತಿದೆ. ಅವರ ಮೇಲೆ ಶಿಸ್ತು ಕ್ರಮ ಜರುಗಿಸಬೇಕು ಎಂದರು.

ಬಿ.ಎಂ.ವೆಂಕಟೇಶ್, ಜಗದೀಶ್, ಚಂದ್ರಣ್ಣ, ಈಶ್ವರಪ್ಪ, ಚನ್ನಕೇಶವ್ ಇದ್ದರು.



ಪಿಟಿಸಿಎಲ್ ಕಾಯ್ದೆ ತಿದ್ದುಪಡಿಯಿಂದ ಆಗುತ್ತಿರುವ ಅನ್ಯಾಯ ಸರಿಪಡಿಸುವಂತೆ ಜಿಲ್ಲಾಧಿಕಾರಿ ಜಿ.ಜಗದೀಶ್ ಅವರಿಗೆ ಮನವಿ ಸಲ್ಲಿಸಲಾಯಿತು

‘ಭಾಷಣ: ವಸಾಹತುಶಾಹಿ ಪಳೆಯುಳಿಕೆ’

ರಾಜ್ಯಪಾಲರ ಭಾಷಣ: ಪುನರ್ ಪರಿಶೀಲನೆ ಅಗತ್ಯ

●ರಾಜ್ಯಪಾಲರಿಂದ ಸುಳ್ಳು ಹೇಳಿಸಬೇಕಾ– ಚರ್ಚೆಯಾಗಬೇಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಸಾಹತುಶಾಹಿಯ ಪಳೆಯುಳಿಕೆಯಂತಿರುವ ರಾಜ್ಯಪಾಲರ ಭಾಷಣವನ್ನು ವಾರ್ಷಿಕ ಪ್ರಕ್ರಿಯೆಯಾದ ಜಂಟಿ ಅಧಿವೇಶನದಲ್ಲಿ ಓದುವ ಕುರಿತು ಪುನರ್ ಪರಿಶೀಲನೆಯಾಗಬೇಕು. ಈ ಕುರಿತು ಚರ್ಚೆಯಾಗಬೇಕು’ ಎಂದು ಬಿಜೆಪಿಯ ಎಸ್. ಸುರೇಶ್ ಕುಮಾರ್ ಹೇಳಿದರು.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಕುರಿತು ಮಾತನಾಡಿದ ಅವರು, ‘ಇದು ನನ್ನ ವೈಯಕ್ತಿಕ ಅಭಿಪ್ರಾಯ. ರಾಜ್ಯ ಸರ್ಕಾರ ಕೆಟ್ಟ ಆಡಳಿತ ನೀಡಿದ್ದರೂ ಅತ್ಯಂತ ಉತ್ತಮ ಸರ್ಕಾರ ಎಂದು ರಾಜ್ಯಪಾಲರ ಮೂಲಕ ಹೇಳಿಸುವ ಸಂಪ್ರದಾಯ ಕೊನೆಯಾಗಬೇಕು. ರಾಜ್ಯಪಾಲರಿಗೆ ಇಂತಹ ಸುಳ್ಳುಗಳನ್ನು ಹೇಳಲು ಇಷ್ಟವಿಲ್ಲದಿದ್ದರೂ ಸಿದ್ಧಪಡಿಸಿದ ಭಾಷಣ ಅವರಿಂದ ಮಾಡಿಸಬೇಕಾ ಎನ್ನುವ ಚರ್ಚೆಯ ಅಗತ್ಯವಿದೆ’ ಎಂದು ಹೇಳಿದರು.

‘ನನ್ನ ಸರ್ಕಾರ ಎಂದು ಓದುವ ರಾಜ್ಯಪಾಲರ ಭಾಷಣವನ್ನು ಖಂಡಿಸುತ್ತೇನೆ. ಈ ವಿಚಾರದಲ್ಲಿ ಸಂವಿಧಾನದ ತಿದ್ದುಪಡಿಯಾಗಬೇಕೆಂದು ನೆರೆಯ ರಾಜ್ಯದ ಮುಖ್ಯಮಂತ್ರಿ ಹೇಳಿದ್ದಾರೆ. ನ್ಯಾ.ರಾಮಾಜೋಯಿಸ್ ಅವರು ರಾಜ್ಯಪಾಲರ ಭಾಷಣ ನಿಲ್ಲಿಸಬೇಕು ಎಂದಿದ್ದರು. ಸಂವಿಧಾನ ರಚಿಸುವಾಗ ಮುಂದೆ ಇಂತಹ ಸಂಘರ್ಷ ಬರಲಿದೆ ಅಂತ ಯಾರೂ ಭಾವಿಸಿರಲಿಲ್ಲ. ರಾಜ್ಯಪಾಲರು ಸರ್ಕಾರ ಸಿದ್ಧಪಡಿಸಿದ ಭಾಷಣ ಓದಲಿಲ್ಲವೆಂದರೆ ಜಾಹೀರಾತು ಮೂಲಕ ಸರ್ಕಾರ ಎಲ್ಲವನ್ನೂ ಹೇಳುತ್ತದೆ. ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ರಾಷ್ಟ್ರಮಟ್ಟದಲ್ಲಿ ಚರ್ಚೆಯಾಗಬೇಕು. ಕರ್ನಾಟಕದಿಂದಲೇ ಚರ್ಚೆ ಆರಂಭವಾಗಲಿ’ ಎಂದು ಸಲಹೆ ನೀಡಿದರು.

‘ರಾಜ್ಯಪಾಲರ ಕೈಯಲ್ಲಿ ನನ್ನ ಸರ್ಕಾರ ಅಂತ ಭಾಷಣ ಮಾಡಿಸಿದರೆ ಸಾಲದು, ಹೊರಗಿನ ಜನರೂ ನನ್ನ ಸರ್ಕಾರ ಅಂತ ಅಲೋಚಿಸುವಂತಾಗಬೇಕು. ಹಾಗಾಗಿ, ನಾವು ರಾಜ್ಯಪಾಲರಿಗೆ ವಂದನೆ ಸಲ್ಲಿಸುತ್ತೇವೆ. ಅವರ ಭಾಷಣಕ್ಕಲ್ಲ’ ಎಂದರು.



ವಿಧಾನಸಭೆಯ ಕಾರ್ಯಕಲಾಪದಲ್ಲಿ ಸುರೇಶ್ ಕುಮಾರ್ ಮಾತನಾಡಿದರು

ಮುಖ್ಯಾಂಶಗಳು

- ಕೆಟ್ಟ ಆಡಳಿತ ನೀಡಿದ್ದರೂ ಅತ್ಯಂತ ಉತ್ತಮ ರಾಜ್ಯ ಸರ್ಕಾರ ಎನ್ನಬೇಕೇ?
- ಇದು ರಾಷ್ಟ್ರಮಟ್ಟದಲ್ಲಿ ಚರ್ಚೆಯಾಗಬೇಕಾದ ವಿಷಯ–ಸುರೇಶ್ ಕುಮಾರ್ ಪ್ರತಿಪಾದನೆ

ಬೆಲೆ ಏರಿಕೆ ಬಿಜೆಪಿ–ಕಾಂಗ್ರೆಸ್ ವಾಗ್ವಾದ

‘ರಾಜ್ಯ ಸರ್ಕಾರ ಪ್ರತಿ ಸಾಮಗ್ರಿಯ ಬೆಲೆ ಏರಿಕೆ ಮಾಡಿದೆ. ಮರಣಪ್ರಮಾಣ ಪತ್ರ ಸೇರಿದಂತೆ ಎಲ್ಲ ಸೇವೆಗಳ ಶುಲ್ಕವನ್ನೂ ಏರಿಸಿದೆ’ ಎಂದ ಸುರೇಶ್‌ಕುಮಾರ್ ಅವರು, ಒಂದೊಂದೆ ದರ ಪಟ್ಟಿ ಓದುತ್ತಿದ್ದಂತೆ ‘ಏರಿಕೆ ಆಗಿದೆ, ಆಗಿದೆ’ ಎಂದು ಬಿಜೆಪಿ–ಜೆಡಿಎಸ್ ಸದಸ್ಯರು ಧ್ವನಿಗೂಡಿಸಿದರು.

ಆಗ ಮಧ್ಯ ಪ್ರವೇಶಿಸಿದ ಸಚಿವ ಪ್ರಿಯಾಂಕ್ ಖರ್ಗೆ ‘ಪೆಟ್ರೋಲ್–ಡೀಸೆಲ್ ಮೇಲಿನ ಬೆಲೆ ಏರಿಕೆಯ ಬಗ್ಗೆಯೂ ಪ್ರಸ್ತಾಪಿಸಬೇಕು. ಕೇಂದ್ರ ಸರ್ಕಾರವೇ ಎಲ್ಲ ವಸ್ತುಗಳ ದರ ನಿರ್ಧಾರ ಮಾಡುತ್ತದೆ. ಬಿಜೆಪಿ ಆಡಳಿತದಲ್ಲಿ ದರ ಏರಿಕೆ ಗಗನಕ್ಕೇರಿದೆ’ ಎಂದರು. ಅದಕ್ಕೆ ಧ್ವನಿಗೂಡಿಸಿದ ಸಚಿವ ರಾಮಲಿಂಗಾರೆಡ್ಡಿ, ‘ನೀರು, ಗಾಳಿ ಎರಡಕ್ಕೆ ಮಾತ್ರ ಜಿಎಸ್‌ಟಿ ಹಾಕಿಲ್ಲ’ ಎಂದು ಕುಟುಕಿದರು. ಅದಕ್ಕೆ ಬಿಜೆಪಿಯ ಸುನೀಲ್‌ಕುಮಾರ್, ದೊಡ್ಡನಗೌಡ ಪಾಟೀಲ ಅವರು, ‘ಪ್ರಿಯಾಂಕ್ ವಿಶ್ವಮಾನವರು. ಅವರು ದೇಶದ ಬಗ್ಗೆ ಚರ್ಚೆ ಮಾಡಲು ಪಾರ್ಲಿಮೆಂಟ್‌ಗೆ ಹೋಗಲಿ’ ಎಂದು ಕಾಲೆಳೆದರು.

ಬಿಜೆಪಿ ಭ್ರಷ್ಟಾಚಾರದಿಂದ ಕಾಂಗ್ರೆಸ್‌ಗೆ ಲಾಭ: ಯತ್ನಾಳ

‘ಹಿಂದಿನ ಅವಧಿಯ ಬಿಜೆಪಿ ಭ್ರಷ್ಟಾಚಾರದಿಂದ ದೀರ್ಘಾವಧಿ ಆಡಳಿತ ನೀಡಲು ಸಾಧ್ಯವಾಗಲಿಲ್ಲ. ಹಾಗಾಗಿ ಕಾಂಗ್ರೆಸ್ ಅಧಿಕಾರಕ್ಕೆ ಬಂತು’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಬಿಜೆಪಿಯ ರಾಜ್ಯ ನಾಯಕರು ಮೋದಿ ಜಪ ಮಾಡಿದರೆ ಸಾಲದು ಅದೇ ರೀತಿ ಆಡಳಿತ ನೀಡಬೇಕಿತ್ತು. ನರೇಂದ್ರ ಮೋದಿ ಅವರ ಆಡಳಿತ ಮಾದರಿಯನ್ನು ರಾಜ್ಯದಲ್ಲಿ ಅಳವಡಿಸಿಕೊಳ್ಳಲು ಬಿಜೆಪಿ ವಿಫಲವಾಯಿತು. 40 ಪರ್ಸೆಂಟ್ ಕಮಿಷನ್ ಎನ್ನುವ ಆರೋಪ ಮಾಡಿದ ಗುತ್ತಿಗೆದಾರರ ಸಂಘದ ಹೇಳಿಕೆಯನ್ನೇ ಬಳಸಿಕೊಂಡು ಕಾಂಗ್ರೆಸ್ ಚುನಾವಣಾ ಲಾಭ ಪಡೆಯಿತು ಎಂದರು. ನಾಗಮೋಹನ್‌ದಾಸ್ ಆಯೋಗದ ವರದಿ ಏನಾಯಿತು? ಈ ಸರ್ಕಾರದಲ್ಲಿ ಶೇ 100ರಷ್ಟು ಭ್ರಷ್ಟಾಚಾರ ಇದೆ ಎನ್ನುವುದನ್ನು ಒಪ್ಪಲು ಸಾಧ್ಯವಿಲ್ಲ. ಈಗಿನ ಸರ್ಕಾರದಲ್ಲೂ ಪರ್ಸೆಂಟೇಜ್ ನಡೆಯುತ್ತಿದೆ ಎಂದು ಗುತ್ತಿಗೆದಾರರು ಆರೋಪಿಸಿದ್ದಾರೆ. ಬಿಜೆಪಿ ಏಕೆ ಹೋರಾಟ ಮಾಡುತ್ತಿಲ್ಲ ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಸ್ಥಿತಿಯ ಚರ್ಚೆ ಮಾಡಲಿ: ವಿಜಯೇಂದ್ರ

ಲೋಕಸಭೆಯಲ್ಲಿ 415 ಸಂಸದರನ್ನು ಹೊಂದಿದ್ದ ಕಾಂಗ್ರೆಸ್ 2024ರ ಲೋಕಸಭಾ ಚುನಾವಣೆಯಲ್ಲಿ ಕೇವಲ 99 ಸ್ಥಾನಗಳಿಗೆ ತೃಪ್ತಿ ಪಡುವ ಸ್ಥಿತಿ ನಿರ್ಮಾಣವಾಗಿದೆ. ಇಂಥ ಹೀನಾಯ ಪರಿಸ್ಥಿತಿ ಕುರಿತು ಆ ಪಕ್ಷ ಒಂದು ಕ್ಷಣ ಯೋಚಿಸಬೇಕು ಎಂದು ಬಿಜೆಪಿಯ ಬಿ.ವೈ.ವಿಜಯೇಂದ್ರ ಹೇಳಿದರು.

ರಾಜ್ಯದಿಂದ ಜಿಎಸ್‌ಟಿ ತೆರಿಗೆ ಮೂಲಕ ಕೇಂದ್ರಕ್ಕೆ ಎಷ್ಟು ಮೊತ್ತ ಹೋಗಿದೆ ಎಂಬ ಬಗ್ಗೆ ಸಾಕಷ್ಟು ಚರ್ಚೆಗಳು ಆಗಿವೆ. ಯುಪಿಎ ಸರ್ಕಾರದ ಅವಧಿ ಮತ್ತು ಎನ್‌ಡಿಎ ಅವಧಿಯಲ್ಲಿ ಕರ್ನಾಟಕಕ್ಕೆ ನೀಡಿದ ಮೊತ್ತದ ಕುರಿತು ಚರ್ಚೆಯಾಗಬೇಕು ಎಂದರು. 2014ರಿಂದ 2025ರ ಅವಧಿಯಲ್ಲಿ ನರೇಂದ್ರ ಮೋದಿ ಹಾಗೂ ಕೇಂದ್ರದ ವಿರುದ್ಧ ಒಂದು ಭ್ರಷ್ಟಾಚಾರದ ಆರೋಪ ಮಾಡಲು ಕಾಂಗ್ರೆಸ್‌ಗೆ ಸಾಧ್ಯವಾಗಿಲ್ಲ ಎಂದು ಹೇಳಿದರು.

ತುಂಗಾಭದ್ರಾ ಮಂಡಳಿಯು ತುಂಗಾಭದ್ರಾ ಜಲಾಶಯದ ರೈತರ ಹಿತದೃಷ್ಟಿಯಿಂದ ಮೇ- 2026ರ ಒಳಗೆ ಹೊಸ ಕ್ರೆಸ್ಟ್‌ಗೇಟ್‌ಗಳ ಅಳವಡಿಕೆಗೆ ಕ್ರಮ ಕೈಗೊಂಡಿದ್ದರೂ ಕರ್ನಾಟಕ ಸರ್ಕಾರ ₹10 ಕೋಟಿ ಹಣ ತಡೆಹಿಡಿದಿರುವುದು ಆಘಾತಕಾರಿ ಸಂಗತಿ ಎಂದರು.

‘ಕುವೆಂಪು ಸ್ಮಾರಕ: ಕುಟುಂಬದಿಂದ ಹೆಚ್ಚಿನ ಬೇಡಿಕೆ’

ಬೆಂಗಳೂರು: ‘ಮೈಸೂರಿನಲ್ಲಿರುವ ಕುವೆಂಪು ನಿವಾಸ ‘ಉದಯ ರವಿ’ಯನ್ನು ಸ್ಮಾರಕವನ್ನಾಗಿಸಲು ಸರ್ಕಾರ ಸಿದ್ಧವಿದೆ. ಆ ನಿವಾಸವನ್ನು ನೀಡಲು ಅವರ ಕುಟುಂಬದವರು ಹೆಚ್ಚಿನ ಹಣ ಹಾಗೂ ಕೆಲವು ಬೇಡಿಕೆಗಳನ್ನಿರಿಸಿದ್ದಾರೆ. ಅದನ್ನು ಪರಿಶೀಲಿಸಲಾಗುತ್ತಿದೆ’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಪ್ರತಾಪ್ ಸಿಂಹ ನಾಯಕ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘2018–19ನೇ ಸಾಲಿನ ಆಯವ್ಯಯದಲ್ಲಿ ‘ಉದಯ ರವಿ’ಯನ್ನು ರಾಷ್ಟ್ರ ಕವಿ ಸ್ಮಾರಕವಾಗಿ ರಕ್ಷಿಸಿ, ಅಭಿವೃದ್ಧಿಪಡಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದ್ದರು. ಮಹಾಕವಿಯ ದರ್ಶನವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವುದು ಸ್ಮಾರಕದ ಉದ್ದೇಶ’ ಎಂದರು.

‘ಈ ಘೋಷಣೆಯ ನಂತರ, ಕುವೆಂಪು ಅವರ ಮಗಳು ತಾರಿಣಿ ಚಿದಾನಂದ ಅವರು ‘ಉದಯ ರವಿ’ಯನ್ನು ಹಸ್ತಾಂತರಿಸಲು ಮೊದಲು ₹5 ಕೋಟಿ, ನಂತರ ₹10 ಕೋಟಿ, ₹15 ಕೋಟಿ ಬೇಡಿಕೆ ಇರಿಸಿದ್ದರು. ಜನವರಿ 13ರಂದು, ಉದಯ ರವಿಗೆ ಭೇಟಿ ನೀಡಿ ತಾರಿಣಿ ಚಿದಾನಂದ ಹಾಗೂ ಅಳಿಯ ಪ್ರೊ. ಕೆ. ಚಿದಾನಂದ ಗೌಡ ಅವರ ಜೊತೆ ಮಾತನಾಡಿದೆ. ಅವರು ಹಣದ ಜೊತೆಗೆ, ಮುಂದೆ ಮನೆ, ಹಿಂದೆ ನಿವೇಶನ ಸೇರಿದಂತೆ ಕೆಲವು ಬೇಡಿಕೆಗಳನ್ನು ಇರಿಸಿದ್ದಾರೆ. ಮುಖ್ಯಮಂತ್ರಿಯವರೊಂದಿಗೆ ಈ ಬಗ್ಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಅವರಿಗೆ ತಿಳಿಸಿದ್ದೇನೆ’ ಎಂದರು.

ಚಟಿಕೆ ಸುದ್ದಿ

ಸುಳ್ಳು ಪೋಸ್ಟ್: ಬಿಜೆಪಿ ‘ಎಕ್ಸ್’ ಖಾತೆ ವಿರುದ್ಧ ದೂರು

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಕಾಂಗ್ರೆಸ್ ಮುಖಂಡರ ಬಗ್ಗೆ ಸುಳ್ಳು ಹಾಗೂ ಅವಹೇಳನ ಕಾರಿಯಾಗಿ ಪೋಸ್ಟ್ ಮಾಡಿರುವ ಆರೋಪದಡಿ ಬಿಜೆಪಿ ರಾಜ್ಯ ಘಟಕದ ‘ಎಕ್ಸ್’ ಖಾತೆ ವಿರುದ್ಧ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ವಕೀಲರ ಘಟಕವು ಸೈಬರ್ ಅಪರಾಧ ಠಾಣೆಗೆ ಶುಕ್ರವಾರ ದೂರು ನೀಡಿದೆ.



ದೂರು ಆಧರಿಸಿ ಸೈಬರ್ ಠಾಣೆಯ ಪೊಲೀಸರು ಎನ್‌ಸಿಆರ್ (ಗಂಭೀರವಲ್ಲದ) ಪ್ರಕರಣ ದಾಖಲು ಮಾಡಿಕೊಂಡಿದ್ದಾರೆ.

ಬಿಜೆಪಿ ‘ಎಕ್ಸ್’ ಖಾತೆಯಲ್ಲಿ ಜ.29ರಂದು ಪೋಸ್ಟ್ ಹಾಕಲಾಗಿತ್ತು. ಯಾವುದೇ ಸಾಕ್ಷ್ಯಾಧಾರಗಳಿಲ್ಲದೇ ತಿರುಚಿದ ಫೋಟೊ ಹಂಚಿಕೊಳ್ಳುವ ಮೂಲಕ ಸಾಂವಿಧಾನಿಕ ಹುದ್ದೆಯಲ್ಲಿ ಇರುವ ನಾಯಕರ ಫೋಟೊಗಳನ್ನು ದುರುದ್ದೇಶ ಪೂರ್ವಕವಾಗಿ ಬಳಸಿಕೊಳ್ಳಲಾಗಿದೆ. ಇದರಿಂದ ಸಮಾಜದಲ್ಲಿ ಗೊಂದಲ, ಅಶಾಂತಿ ಸೃಷ್ಟಿಗೆ ಯತ್ನಿಸಲಾಗುತ್ತಿದೆ. ಹೀಗಾಗಿ, ಬಿಜೆಪಿ ‘ಎಕ್ಸ್’ ಖಾತೆಯ ನಿರ್ವಾಹಕರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೆಪಿಸಿಸಿಯ ವಕೀಲರ ಘಟಕದ ಪದಾಧಿಕಾರಿಗಳು ದೂರಿನಲ್ಲಿ ಮನವಿ ಮಾಡಿದ್ದಾರೆ.

ಟೀಕೆ ಮಿತಿ ಮೀರಿದ್ದಕ್ಕೆ ದೂರು: ಡಿಕೆಶಿ

ಬೆಂಗಳೂರು: ‘ವಿರೋಧ ಪಕ್ಷಗಳು ಟೀಕೆ ಮಾಡುವುದು ಸ್ವಾಗತಾರ್ಹ. ಆದರೆ ಅದಕ್ಕೂ ಮಿತಿ ಇದೆ. ಮಿತಿ ಮೀರಿದಾಗ ಕಾನೂನು ಮೊರೆ ಹೋಗಬೇಕಾಗುತ್ತದೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಡಿ.ಕೆ.ಶಿವಕುಮಾರ್ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಚಿತ್ರ ಬಳಸಿಕೊಂಡು ‘ಸ್ಕ್ಯಾಮ್ ಲಾರ್ಡ್ಸ್’ ಎಂಬ ಪೋಸ್ಟರ್ ಅನ್ನು ಬಿಜೆಪಿ ಸಾಮಾಜಿಕ ಜಾಲತಾಣ ಘಟಕವು ಹಂಚಿಕೊಂಡಿತ್ತು. ಅದರ ವಿರುದ್ಧ ಕೆಪಿಸಿಸಿಯು ಸೈಬರ್ ಪೊಲೀಸರಿಗೆ ದೂರು ನೀಡಿತ್ತು.

ಸುದ್ದಿಗಾರರು ಈ ಬಗ್ಗೆ ಪ್ರಶ್ನೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, ‘ಟೀಕೆ ವಿಚಾರದಲ್ಲಿ ವಿರೋಧ ಪಕ್ಷಗಳು ಕಾನೂನನ್ನು ದುರುಪಯೋಗ ಪಡಿಸಿಕೊಳ್ಳುತ್ತಿವೆ. ಹೀಗಾಗಿ ದೂರು ನೀಡಲಾಗಿದೆ. ಕಾನೂನಿಗೆ ವಿರುದ್ಧವಾಗಿ ನಡೆದುಕೊಳ್ಳಬೇಡಿ ಎಂದು ನಮ್ಮ ತಂಡದವರಿಗೂ ಸೂಚನೆ ನೀಡಿದ್ದೇನೆ’ ಎಂದರು.

‘ಸದನದ ಶಿಸ್ತು ಇದ್ದಿದ್ದರೆ ಐಎಎಸ್ ಆಗುತ್ತಿದ್ದೆ’

ಬೆಂಗಳೂರು: ವಿಧಾನಸಭಾ ಕಲಾಪ ಬೆಳಿಗ್ಗೆ 9ರಿಂದ ರಾತ್ರಿಯವರೆಗೂ ನಡೆಸಲಾಗುತ್ತಿದೆ. ಶಾಲಾ ದಿನಗಳಲ್ಲೇ ಇಷ್ಟು ಸಮಯ ಓದಿದ್ದರೆ ಐಎಎಸ್, ಐಪಿಎಸ್ ತೇರ್ಗಡೆಯಾಗಬಹುದಿತ್ತು ಎಂದು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಹೇಳಿದರು.



ಭೈರತಿ ಸುರೇಶ್

ವಿಧಾನಸಭೆಯಲ್ಲಿ ಶುಕ್ರವಾರ ಕಲಾಪ ಆರಂಭವಾದಾಗ ಸಭಾಧ್ಯಕ್ಷ ಯು.ಟಿ. ಖಾದರ್ ಅವರು, ಸಮಯಕ್ಕೆ ಸರಿಯಾಗಿ ಹಾಜರಾದ ಶಾಸಕರ ಪಟ್ಟಿ ಓದಿದರು. ಆಗ ಎದ್ದು ನಿಂತ ಸುರೇಶ್ ಅವರು ‘ಬಹುತೇಕ ಸಚಿವರು, ಶಾಸಕರು ಸಮಯಕ್ಕೆ ಸರಿಯಾಗಿ ಸದನಕ್ಕೆ ಬರುತ್ತಿದ್ದಾರೆ. ಈ ಶಿಸ್ತು ಶಾಲಾ ದಿನಗಳಲ್ಲೇ ರೂಢಿಸಿಕೊಳ್ಳಬೇಕಿತ್ತು. ಒಳ್ಳೆಯ ಸ್ಥಾನ ಸಿಗುತ್ತಿತ್ತು’ ಎಂದರು.

‘ಈಗ ಐಎಎಸ್, ಐಪಿಎಸ್ ಅಧಿಕಾರಿಗಳನ್ನು ನಿಯಂತ್ರಿಸುತ್ತಿದ್ದೀರಲ್ಲ. ಸಾಕು ಬಿಡಿ’ ಎಂಬ ಸಭಾಧ್ಯಕ್ಷ ಖಾದರ್ ಹೇಳಿದರು.

ಮಂಡ್ಯ ಜಿಲ್ಲೆಯಲ್ಲಿ ಪರೋಪಜೀವಿ ಉತ್ಪಾದನಾ ಪ್ರಯೋಗಾಲಯ

ಬೆಂಗಳೂರು: ತೆಂಗಿನ ಬೆಳೆಗೆ ಬಿಳಿ ನೊಣ ಮತ್ತು ಕಪ್ಪು ತಲೆ ಕಂಬಳಿ ಹುಳುಗಳ ನಿಯಂತ್ರಣಕ್ಕಾಗಿ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಪರೋಪ ಜೀವಿಗಳನ್ನು ಉತ್ಪಾದಿಸಿ ರೈತರಿಗೆ ವಿತರಿಸುವ ಪ್ರಯೋಗ ಶಾಲೆ ಸ್ಥಾಪಿಸಲಾಗುವುದು ಎಂದು ತೋಟಗಾರಿಕೆ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ವಿಧಾನಸಭೆಗೆ ತಿಳಿಸಿದರು.

ಕಾಂಗ್ರೆಸ್‌ನ ರಮೇಶ್ ಬಂಡಿಸಿದ್ದೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಈ ಯೋಜನೆಗೆ ಪಿಎಂ–ಆರ್‌ಕೆವಿವೈ ಡಿಪಿಆರ್ ಯೋಜನೆಯಡಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಹೇಳಿದರು.

ಮಂಡ್ಯ ಜಿಲ್ಲೆಯಲ್ಲಿ ಒಟ್ಟು 74,735 ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆಯಲಾಗುತ್ತಿದೆ. ಬಿಳಿ ನೊಣದಿಂದ 36,268 ಹೆಕ್ಟೇರ್ ಮತ್ತು ಕಪ್ಪುತಲೆ ಹುಳುವಿನಿಂದ 5,888 ಹೆಕ್ಟೇರ್ ಪ್ರದೇಶವು ಬಾಧೆಗೊಳಗಾಗಿದೆ ಎಂದು ಹೇಳಿದರು.

ಕೀಟ ಬಾಧೆಯಿಂದ ಹಾನಿಗೊಳಗಾದ ರೈತರಿಗೆ ಪ್ರತಿ ಹೆಕ್ಟೇರ್‌ಗೆ ₹35,000ರಂತೆ ಎರಡು ವರ್ಷಗಳ ಅವಧಿಗೆ, ಮೊದಲ ವರ್ಷ ₹17,500 ಮತ್ತು ಎರಡನೇ ವರ್ಷ ₹17,500 ರಂತೆ ಸಹಾಯಧನ ನೀಡಲಾಗುತ್ತದೆ. ರಾಜ್ಯದಲ್ಲಿರುವ 25 ಪ್ರಯೋಗ ಶಾಲೆಗಳಲ್ಲಿ ಗೋನಿಯೋಜಸ್ ಎಂಬ ಪರೋಪ ಜೀವಿಗಳು ಹಾಗೂ ಐಸಿರಿಯಾ ಜೈವಿಕ ಕೀಟನಾಶಕವನ್ನು ಉತ್ಪಾದನೆ ಮಾಡಿ ಉಚಿತವಾಗಿ ವಿತರಿಸಲಾಗುತ್ತಿದೆ. ಈ ವರ್ಷ ₹1.40 ಕೋಟಿ ಅನುದಾನ ನಿಗದಿಯಾಗಿದೆ. ಮಂಡ್ಯ ಜಿಲ್ಲೆಗೆ ₹18 ಲಕ್ಷ ನೀಡಲಾಗುವುದು ಎಂದರು.

‘ರಬ್ಬರ್‌ಗೆ ಬೆಂಬಲ ಬೆಲೆಗೆ ಶಿಫಾರಸು’

ರಬ್ಬರ್‌ಗೆ ಬೆಂಬಲ ನೀಡುವ ಬಗ್ಗೆ ಕೇಂದ್ರ ರಬ್ಬರ್ ಮಂಡಳಿಗೆ ಶಿಫಾರಸು ಮಾಡಲಾಗುವುದು ಎಂದು ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹೇಳಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಭಾಗೀರಥಿ ಮುರುಳ್ಯ ಪ್ರಶ್ನೆಗೆ ಉತ್ತರ ನೀಡಿದ ಅವರು, ‘ವಾಣಿಜ್ಯ ಬೆಳೆಯಾದ ರಬ್ಬರ್ ಬೆಲೆ ನಿಗದಿ ಮತ್ತು ಬೆಂಬಲ ಬೆಲೆ ನೀಡುವ ಬಗ್ಗೆ ರಬ್ಬರ್ ಮಂಡಳಿ ಮತ್ತು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ವ್ಯಾಪ್ತಿಗೆ ಬರುತ್ತದೆ. ಆದ್ದರಿಂದ, ಬೆಂಬಲ ಬೆಲೆ ನಿಗದಿಪಡಿಸುವ ಮತ್ತು ಕೃಷಿ ಹವಾಮಾನ ಆಧಾರಿತ ವಿಮೆ ಸೌಲಭ್ಯ ಒದಗಿಸುವ ಬಗ್ಗೆ ಕೇಂದ್ರವೇ ತೀರ್ಮಾನ ತೆಗೆದುಕೊಳ್ಳಬೇಕು. ನಾವು ಅವರಿಗೆ ಶಿಫಾರಸು ಮಾಡುತ್ತೇವೆ’ ಎಂದರು.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ: ಭರಪೂರ ವಾದ–ಪ್ರತಿವಾದ

ಚರ್ಚೆಯ ಹಳಿಗೆ ಮರಳಿದ ವಿಧಾನ ಪರಿಷತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಾವುದೇ ಚರ್ಚೆ ನಡೆಯದೆ ಎರಡು ದಿನಗಳ ಕಲಾಪ ಮುಗಿಸಿದ್ದ ವಿಧಾನ ಪರಿಷತ್ತು ಶುಕ್ರವಾರ ರಾಜ್ಯಪಾಲರ ಕರ್ತವ್ಯ, ಒಕ್ಕೂಟ ವ್ಯವಸ್ಥೆ, ಹಣಕಾಸು ಹಂಚಿಕೆ ಕುರಿತು ವಾದ–ಪ್ರತಿವಾದಗಳಿಗೆ ವೇದಿಕೆಯಾಯಿತು.

ಮಂಗಳವಾರದ ಕಲಾಪದ ವೇಳೆ ತಾವು ಅರ್ಧಕ್ಕೆ ನಿಲ್ಲಿಸಿದ್ದ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯನ್ನು ಕಾಂಗ್ರೆಸ್‌ನ ಐವನ್ ಡಿಸೋಜ ಶುಕ್ರವಾರ ಮುಂದುವರೆಸಿದರು.

‘ಕೇಂದ್ರ ಸರ್ಕಾರದ ವಿರುದ್ಧ ಟೀಕೆ ಮಾಡಲು ರಾಜ್ಯಪಾಲರ ಭಾಷಣವನ್ನು ರಾಜ್ಯ ಸರ್ಕಾರ ಬಳಸಿಕೊಂಡಿದೆ ಎಂದು ಆರೋಪಿಸಲಾಗುತ್ತಿದೆ. ಆದರೆ, ಕರ್ನಾಟಕದ ಸಂದರ್ಭದಲ್ಲಿಯೇ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಈ ಹಿಂದೆ ಹಲವು ಬಾರಿ ಕೇಂದ್ರವನ್ನು ಟೀಕಿಸಿದ್ದಾರೆ. ಹೀಗಾಗಿ ನರೇಗಾ ಕುರಿತಾಗಿ ಕೇಂದ್ರದ ನಡೆಯನ್ನು ಟೀಕಿಸುವುದು ಅಪರಾಧವೇನೂ ಇಲ್ಲ’ ಎಂದರು.

‘ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರವು ರಾಜ್ಯಕ್ಕೆ ಅನ್ಯಾಯ ಮಾಡುತ್ತಲೇ ಇದೆ. ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಕ್ಕೆ ಅನ್ಯಾಯವಾದಾಗ ರಾಜ್ಯಪಾಲರು ಸರ್ಕಾರದ ಮುಖ್ಯಸ್ಥರಾಗಿ ಈ ಬಗ್ಗೆ ದನಿ ಎತ್ತಬೇಕಾದುದು ಅವರ ಕರ್ತವ್ಯ. ಲೋಕಸಭೆ–ರಾಜ್ಯಸಭೆ ಯಲ್ಲಿ ರಾಜ್ಯವನ್ನು ಪ್ರತಿನಿಧಿಸುವ ಸಂಸದರಿಗೂ ಇಂಥದ್ದೇ ಗುರುತರ ಹೊಣೆ ಇದೆ. ಆದರೆ ರಾಜ್ಯದ ಸಂಸದರು ಒಮ್ಮೆಯೂ ರಾಜ್ಯಕ್ಕಾಗುತ್ತಿರುವ ಅನ್ಯಾಯದ ಬಗ್ಗೆ ಮಾತನಾಡಿಲ್ಲ. ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರವು ದನಿ ಎತ್ತಲೇಬೇಕಾಗುತ್ತದೆ’ ಎಂದು ಪ್ರತಿಪಾದಿಸಿದರು.

ಚರ್ಚೆಯಲ್ಲಿ ಭಾಗಿಯಾದ ಛಲವಾದಿ ನಾರಾಯಣಸ್ವಾಮಿ, ‘ರಾಷ್ಟ್ರಪತಿ ಅವರ ಅಂಕಿತದ ಬಳಿಕ ಜಾರಿಗೆ ಬಂದಿರುವ ಕಾಯ್ದೆಯ ವಿರುದ್ಧದ ಅಂಶಗಳು ಭಾಷಣದಲ್ಲಿ ಇದ್ದವು. ಅದನ್ನು ಓದಿದರೆ ರಾಷ್ಟ್ರಪತಿಗೆ ಅಗೌರವ ತೋರಿದಂತಾಗುತ್ತಿತ್ತು. ಹೀಗಾಗಿ ರಾಜ್ಯಪಾಲರು ಆ ಅಂಶಗಳನ್ನು ಓದಿಲ್ಲ’ ಎಂದರು.

ಕಾಂಗ್ರೆಸ್‌ನ ಕೆ.ಶಿವಕುಮಾರ್, ‘ಅಟಲ್ ಬಿಹಾರಿ ವಾಜಪೇಯಿ ಅವರ ಸರ್ಕಾರದಲ್ಲಿ ಸಂವಿಧಾನದ ಪರಿಷ್ಕರಣೆ ಆಗಬೇಕು ಎಂದು ಪ್ರಸ್ತಾಪಿಸಲಾಗಿತ್ತು. ಆಗಿನ ರಾಷ್ಟ್ರಪತಿ ಕೆ.ಆರ್. ನಾರಾಯಣ್ ಅವರು, ‘ಸಂವಿಧಾನವು ವಿಫಲವಾಗಿದೆಯೇ ಅಥವಾ ನಾವು ಅದನ್ನು ವಿಫಲಗೊಳಿಸುತ್ತಿದ್ದೇವೆಯೇ’ ಎಂದು ಆಕ್ಷೇಪ ಎತ್ತಿದ್ದರು. ಹೀಗಿದ್ದೂ ಸಂಸತ್ತಿನ ಜಂಟಿ ಅಧಿವೇಶನದಲ್ಲಿ ಸರ್ಕಾರದ ಭಾಷಣವನ್ನು ಪೂರ್ತಿ ಓದಿದ್ದರು. ರಾಜ್ಯಪಾಲರೂ ಹೀಗೇ ಮಾಡಬಹುದಿತ್ತು. ಅದರಿಂದ ರಾಷ್ಟ್ರಪತಿ ಅವರಿಗೆ ಅವಮಾನವೇನೂ ಆಗುತ್ತಿರಲಿಲ್ಲ’ ಎಂದು ಪಟ್ಟು ಹಾಕಿದರು.



ವಿಧಾನ ಪರಿಷತ್ತಿನಲ್ಲಿ ಶುಕ್ರವಾರ ಛಲವಾದಿ ನಾರಾಯಣಸ್ವಾಮಿ ಮತ್ತು ಎನ್‌.ಎಸ್. ಬೋಸರಾಜು ಮಧ್ಯೆ ನಡೆದ ಚರ್ಚೆಯ ಕ್ಷಣ –ಪ್ರಜಾವಾಣಿ ಚಿತ್ರ

‘ಜಿಎಸ್‌ಟಿ ಸಭೆಗೆ ಯಾರು ಹೋಗಬೇಕು...’

ಐವನ್ ಡಿಸೋಜ ಅವರು, ‘ಕೇಂದ್ರ ಸರ್ಕಾರವು ರಾಜ್ಯದಿಂದ ₹1.60 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹಿಸಿದ್ದರೂ ನಮಗೆ ಅದರಲ್ಲಿ ಅತ್ಯಂತ ಕಡಿಮೆ ಪಾಲು ದೊರೆಯುತ್ತಿದೆ’ ಎನ್ನುತ್ತಿದ್ದಂತೆ, ಆಕ್ಷೇಪ ಎತ್ತಿದ ಬಿಜೆಪಿಯ ಎಚ್. ವಿಶ್ವನಾಥ್, ‘ನಿಮ್ಮ ಮುಖ್ಯಮಂತ್ರಿ ಜಿಎಸ್‌ಟಿ ಸಭೆಗೆ ಒಮ್ಮೆಯೂ ಹಾಜರಾಗಿಲ್ಲ. ಸಭೆಗೆ ಹಾಜರಾಗದೆ, ಇಲ್ಲಿ ಆರೋಪ ಮಾಡುವುದರಲ್ಲಿ ಅರ್ಥವಿಲ್ಲ’ ಎಂದರು.

ಸಚಿವ ಪ್ರಿಯಾಂಕ್ ಖರ್ಗೆ, ‘ಜಿಎಸ್‌ಟಿ ಮಂಡಳಿ ಸಭೆಗೆ ಮುಖ್ಯಮಂತ್ರಿಯೇ ಹಾಜರಾಗಬೇಕು ಎಂಬ ನಿಯಮವಿಲ್ಲ. ಮುಖ್ಯಮಂತ್ರಿ ತಮ್ಮ ಪರವಾಗಿ ಸಮರ್ಥ ಸಚಿವರನ್ನು ನಿಯೋಜಿಸಬಹುದು. ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಬಸವರಾಜ ಬೊಮ್ಮಾಯಿ ಅವರನ್ನು ಜಿಎಸ್‌ಟಿ ಮಂಡಳಿ ಸಭೆಗೆ ನಿಯೋಜನೆ ಮಾಡಿದ್ದರು. ಅದೇ ರೀತಿ ಸಿದ್ದರಾಮಯ್ಯ ಅವರು ಸಚಿವ ಕೃಷ್ಣ ಬೈರೇಗೌಡ ಅವರನ್ನು ನಿಯೋಜನೆ ಮಾಡಿದ್ದಾರೆ’ ಎಂದು ತಿರುಗೇಟು ನೀಡಿದರು. ವಿಶ್ವನಾಥ್ ಅವರು ಸುಮ್ಮನೆ ಕುಳಿತರು.

ಸಂಘಪ್ಪ–ನುಂಗಪ್ಪ ಕತೆ

ನರೇಗಾ ಯೋಜನೆ ಅಡಿ ಬಿಡುಗಡೆಯಾದ ಎಲ್ಲ ಹಣವೂ ನುಂಗಪ್ಪಗಳ ಜೇಬಿಗೆ ಹೋಗುತ್ತಿತ್ತು. ನುಂಗಪ್ಪಗಳ ಹಾವಳಿಗೆ ಕಡಿವಾಣ ಹಾಕಬೇಕೆಂದೇ ವಿಬಿ ಜಿ ರಾಮ್ ಜಿ ಜಾರಿಗೆ ತರಲಾಗಿದೆ. ಗಾಂಧೀಜಿ ಅವರ ರಾಮ ರಾಜ್ಯವನ್ನು ನನಸು ಮಾಡಲು ಜಿ ರಾಮ್ ಜಿ ಬಂದಿದ್ದಾನೆ. ಇದಕ್ಕೆ ಸಂಘಪ್ಪನನ್ನು ಏಕೆ ಪ್ರಶ್ನಿಸಬೇಕು. ಪತ್ರಿಕೆಗಳಿಗೆ ಗಾಂಧೀಜಿ–ಸಂಘಪ್ಪನ ಜಾಹೀರಾತು ನೀಡಲು ಸರ್ಕಾರ ಹಣ ವೆಚ್ಚ ಮಾಡುತ್ತಿದೆ.

ಛಲವಾದಿ ನಾರಾಯಣಸ್ವಾಮಿ, ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕ

ನೀವು ಹೇಳಿದ ನುಂಗಪ್ಪಗಳ ಕತೆ ನಿಜವೇ ಆಗಿದ್ದರೆ ನರೇಗಾ ಅಡಿ ಕೋಟ್ಯಂತರ ಆಸ್ತಿಗಳ ಸೃಜನೆ ಆಗುತ್ತಿರಲಿಲ್ಲ. ನರೇಗಾದಿಂದ ಏನೆಲ್ಲಾ ಅನುಕೂಲವಾಗಿದೆ ಎಂಬುದರ ಬಗ್ಗೆ ಒಂದು ಪವರ್ ಪಾಯಿಂಟ್ ಪ್ರೆಸೆಂಟೇಷನ್ ನೀಡಲಿದ್ದೇನೆ. ದಯವಿಟ್ಟು ಬನ್ನಿ. ಪತ್ರಿಕೆ ನಡೆಸುವುದು ಸುಲಭವಲ್ಲ. ಹಲವು ರಾಜಕಾರಣಿಗಳು ಪತ್ರಿಕೆ ಆರಂಭಿಸಿ, ಬಾಗಿಲು ಹಾಕಿಕೊಂಡು ಹೋಗಿದ್ದಾರೆ. ಜಾಹೀರಾತುಗಳು ಇಲ್ಲದೆ ಪತ್ರಿಕೆಗಳು ಹೇಗೆ ನಡೆಯಬೇಕು? ಇಂತಹ ಜಾಹೀರಾತುಗಳು ಇನ್ನಷ್ಟು ಬರಬೇಕು.

ಕೆ.ಶಿವಕುಮಾರ್, ಕಾಂಗ್ರೆಸ್ ಸದಸ್ಯ

ಸಾಕ್ಷ್ಯ ನೀಡಿದರೆ ರಾಜೀನಾಮೆ: ತಿಮ್ಮಾಪುರ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ ಹಾಗೂ ಹಣ ಪಡೆದಿರುವ ಬಗ್ಗೆ ಸಾಕ್ಷ್ಯಾಧಾರ ನೀಡಿದರೆ ಆ ಕ್ಷಣವೇ ನಾನು ರಾಜೀನಾಮೆ ನೀಡುತ್ತೇನೆ’ ಎಂದು ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಅವರು ಪ್ರತಿಪಕ್ಷಕ್ಕೆ ಸವಾಲು ಹಾಕಿದರು. ‘ನನ್ನ ಮೇಲಿನ ಆರೋಪ ರಾಜಕೀಯ ಪ್ರೇರಿತವಾಗಿದ್ದು, ನನ್ನನ್ನು ತೇಜೋವಧೆ ಮಾಡಲಾಗುತ್ತಿದೆ. ಇದರಿಂದ ನನಗೆ ತೀವ್ರ ನೋವಾಗಿದೆ’ ಎಂದು ಹೇಳಿದರು.

ವಿಧಾನಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಬಿಜೆಪಿಯ ಎನ್. ರವಿಕುಮಾರ್, ಭಾರತಿ ಶೆಟ್ಟಿ, ನವೀನ್, ಜೆಡಿಎಸ್‌ನ ಟಿ.ಎ. ಶರವಣ ಅವರು ‘ಅಬಕಾರಿ ಇಲಾಖೆಯಲ್ಲಿ ಸಿಎಲ್–2, ಸಿಎಲ್–7 ಮತ್ತು ಸಿಎಲ್–9ಗಳಿಗೆ ನಿಯಮಾನುಸಾರ ಪರವಾನಗಿ ನೀಡುವ ಬದಲು ದರಪಟ್ಟಿ ನಿಗದಿಪಡಿಸುತ್ತಿರುವುದರಿಂದ ರಾಜ್ಯದ ಬೊಕ್ಕಸಕ್ಕೆ ನಷ್ಟ ಉಂಟಾಗುತ್ತಿರುವ, ಇಲಾಖೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಬಗ್ಗೆ’ ನಿಯಮ 330ರಡಿ ಚರ್ಚಿಸಿದ ವಿಷಯಕ್ಕೆ ಅವರು ಉತ್ತರ ನೀಡಿದರು.

‘ಪರವಾನಗಿ ನೀಡಲು ಆನ್‌ಲೈನ್‌ನಲ್ಲಿ ಸಮಯ ನಿಗದಿ ಮಾಡಲಾಗಿದೆ. ಇಲಾಖೆಯಲ್ಲಿ ಎಲ್ಲ ರೀತಿಯಲ್ಲೂ ವ್ಯವಸ್ಥೆಯನ್ನು ಸುಧಾರಿಸಲು ಕ್ರಮ ಕೈಗೊಳ್ಳಲಾಗಿದೆ. ಪರವಾನಗಿ ನೀಡುವ ವಿಷಯ ಸಚಿವರವರೆಗೆ ಬರುವುದೇ ಇಲ್ಲ’ ಎಂದು ತಿಮ್ಮಾಪುರ ಹೇಳಿದರು.

‘ಐದು ವರ್ಷ ಒಂದೇ ಕಡೆ ಇರುವವರನ್ನು ಬೇರೆಡೆಗೆ ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಮಾಡಲಾಗಿದೆ. 48 ಗಂಟೆಗಳಲ್ಲಿ ಯಾವುದೇ ಸಮಸ್ಯೆ ಇಲ್ಲದೆ ಈ ಪ್ರಕ್ರಿಯೆ ನಡೆದಿದೆ. ನನ್ನ ಮೇಲೆ ದೂರು ನೀಡಿರುವ ವೈನ್ ಮರ್ಚೆಂಟ್ಸ್ ಸಂಘದ ನೋಂದಣಿಯೇ ರದ್ದಾಗಿದೆ’ ಎಂದರು.

‘ವೈನ್ ಮರ್ಚೆಂಟ್ಸ್ ಸಂಘದ ಲಕ್ಷ್ಮೀನಾರಾಯಣ ಹೇಳಿಕೆ ಆಧರಿಸಿ ಅಬಕಾರಿ ಸಚಿವರ ಮೇಲೆ ವಿರೋಧ ಪಕ್ಷದವರು ಇಷ್ಟೊಂದು ಆರೋಪ ಮಾಡುವುದು ಸರಿಯಲ್ಲ. ಅಬಕಾರಿ ಸಚಿವರು ಇಲಾಖೆಯಲ್ಲಿ ಸಾಕಷ್ಟು ಬದಲಾವಣೆ ತಂದಿದ್ದಾರೆ. ಅವರ ಉತ್ತರಕ್ಕೆ ಸರ್ಕಾರ ಬೆಂಬಲವಾಗಿ ನಿಂತಿದೆ’ ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ ಅವರು ಸರ್ಕಾರದ ಪರವಾಗಿ ಹೇಳಿಕೆ ನೀಡಿದರು.

‘ಅಬಕಾರಿ ಇಲಾಖೆ ಉಪ ಆಯುಕ್ತ ₹25 ಲಕ್ಷ ಪಡೆದುಕೊಂಡಿರುವುದು, ಸಚಿವರು ಸೇರಿದಂತೆ ಯಾರಿಗೆಲ್ಲ ಲಂಚ ನೀಡಲಾಗುತ್ತದೆ ಎಂದು ಹೇಳಿರುವುದು ಸಾಕ್ಷಿ ಅಲ್ಲವೇ? ಇದೆಲ್ಲರ ನೈತಿಕ ಹೊಣೆ ಹೊತ್ತು ತಿಮ್ಮಾಪುರ ರಾಜೀನಾಮೆ ನೀಡಬೇಕು’ ಎಂದು ಛಲವಾದಿ ನಾರಾಯಣ ಸ್ವಾಮಿ ಆಗ್ರಹಿಸಿದರು. ರವಿಕುಮಾರ್, ನವೀನ್, ಪ್ರತಾಪ್‌ಸಿಂಹ ನಾಯಕ್ ಸೇರಿದಂತೆ ಬಿಜೆಪಿ ಸದಸ್ಯರು ತಿಮ್ಮಾಪುರ ರಾಜೀನಾಮೆಗೆ ಆಗ್ರಹಿಸಿ ಸಭಾಪತಿ ಪೀಠದ ಮುಂದೆ ಧರಣಿ ನಡೆಸಿದರು. ಆಡಳಿತ ಹಾಗೂ ಪ್ರತಿಪಕ್ಷದ ಸದಸ್ಯರ ನಡುವೆ ವಾಗ್ವಾದ ನಡೆಯಿತು. ಸಭಾಪತಿ, ಕಲಾಪವನ್ನು ಸೋಮವಾರಕ್ಕೆ ಮುಂದೂಡಿದರು.

‘ಎರಡು ವರ್ಷದಲ್ಲಿ 5,500 ಲೈಸೆನ್ಸ್’

‘ಅಬಕಾರಿ ಇಲಾಖೆಯಲ್ಲಿ ಎರಡು ವರ್ಷದಲ್ಲಿ ಹೊಸ 5,500 ಲೈಸೆನ್ಸ್‌ಗಳನ್ನು ನೀಡಲಾಗಿದೆ. ಇಷ್ಟು ಕಡಿಮೆ ಅವಧಿಯಲ್ಲಿ ಇಷ್ಟೊಂದು ಲೈಸೆನ್ಸ್ ನೀಡಿರುವುದರ ಅಂಕಿ–ಅಂಶವನ್ನು ಅಬಕಾರಿ ಸಚಿವರೇ ನೀಡಿದ್ದಾರೆ. ಈ ಸಂಖ್ಯೆಯನ್ನು ‘ದರಪಟ್ಟಿ’1ಕ್ಕೆ ಹೋಲಿಸಿದರೆ, ವೈನ್ ಮರ್ಚೆಂಟ್ಸ್ ಸಂಘದವರು ಹೇಳಿರುವ ₹6 ಸಾವಿರ ಕೋಟಿ ಅವ್ಯವಹಾರಕ್ಕೆ ಪುರಾವೆಯಾಗುತ್ತದೆ’ ಎಂದು ಬಿಜೆಪಿಯ ಕೆ.ಎಸ್. ನವೀನ್ ದೂರಿದರು.

‘ಈ ಆರೋಪ ಕುರಿತು ಸಚಿವರನ್ನು ತನಿಖೆಗೆ ಒಳಪಡಿಸಬೇಕು. ನೈತಿಕ ಹೊಣೆ ಹೊತ್ತು ಅವರು ರಾಜೀನಾಮೆ ನೀಡಿ, ತನಿಖೆಗೆ ಸಹಕರಿಸಬೇಕು’ ಎಂದು ಆಗ್ರಹಿಸಿದರು.

‘ಪ್ರತಿಯೊಂದು ಪರವಾನಗಿ ನವೀಕರಣಕ್ಕೆ ಹಣ ನಿಗದಿಯಾಗಿದೆ. ಅಲ್ಲದೆ, ಸಾವಿರಾರು ರೂಪಾಯಿಯನ್ನು ಪ್ರತಿ ತಿಂಗಳು ‘ಮಾಮೂಲಿ’ ನೀಡಬೇಕು. ಇದೆಲ್ಲ ಭ್ರಷ್ಟಾಚಾರ ಅಲ್ಲವೇ’ ಎಂದು ಬಿಜೆಪಿಯ ಎನ್. ರವಿಕುಮಾರ್ ಪ್ರಶ್ನಿಸಿದರು.

‘ರಾಜಭವನಕ್ಕೆ ಕನ್ನಡದ ಹೆಸರಿರಲಿ’

ಬೆಂಗಳೂರು: ‘ರಾಜಭವನ’ವನ್ನು ‘ಲೋಕಭವನ’ ಎಂದು ಮರುನಾಮಕರಣ ಮಾಡುವ ಕೇಂದ್ರ ಸರ್ಕಾರದ ಕ್ರಮಕ್ಕೆ ತಡೆ ಒಡ್ಡಬೇಕು ಮತ್ತು ‘ರಾಜ್ಯಭವನ’ ಎಂದು ಬದಲಿಸಬೇಕು ಎಂದು ಜಾಗೃತ ಕರ್ನಾಟಕ ಸಂಘಟನೆಯು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

‘ಕೇಂದ್ರ ಸರ್ಕಾರದ ನಡೆಯು ಒಂದು ಆಡಳಿತಾತ್ಮಕ ಕ್ರಮ ಎಂದಷ್ಟೇ ಮೇಲ್ನೋಟಕ್ಕೆ ಕಾಣುತ್ತದೆ. ಆದರೆ, ಹಿಂದಿ ಆಡಳಿತ ಭಾಷೆಯಲ್ಲದ ರಾಜ್ಯಗಳ ಮೇಲೆ ಹಿಂದಿ ಭಾಷೆಯನ್ನು ಹೇರುವ ಕ್ರಮ ಇದಾಗಿದೆ. ಹೀಗಾಗಿ ಇದನ್ನು ವಿರೋಧಿಸಬೇಕಿದೆ’ ಎಂದಿದೆ.

‘ಕೇಂದ್ರದ ಈ ಹಿಂದಿ ಹೇರಿಕೆಗೆ ರಾಜ್ಯ ಸರ್ಕಾರವು ತನ್ನ ಆಕ್ಷೇಪಣೆಯನ್ನು ಅಧಿಕೃತವಾಗಿ ದಾಖಲಿಸಬೇಕು. ರಾಜ್ಯಪಾಲರ ನಿವಾಸ ಮತ್ತು ಕಚೇರಿ ಸಂಕೀರ್ಣವು ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿದೆ. ಅದರ ನಿರ್ವಹಣೆ ಮತ್ತು ವೆಚ್ಚ ಎಲ್ಲವನ್ನೂ ರಾಜ್ಯವೇ ಭರಿಸುತ್ತಿದೆ. ಮರುನಾಮಕರಣದ ಅಗತ್ಯ ಇದ್ದಲ್ಲಿ, ‘ರಾಜ್ಯಭವನ’ ಎಂಬ ಕನ್ನಡದ ಹೆಸರನ್ನು ಪರಿಗಣಿಸಬೇಕು’ ಎಂದು ಒತ್ತಾಯಿಸಿದೆ.

ಬಳ್ಳಾರಿಯ ಅವ್ವಂಬಾವಿಯಲ್ಲಿ ನಡೆದಿದ್ದ ಘರ್ಷಣೆ, ಸಾವು ಪ್ರಕರಣ

ಜನಾರ್ದನ ರೆಡ್ಡಿ–ನಾಗೇಂದ್ರ ಜಟಾಪಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಳ್ಳಾರಿಯ ಅವ್ವಂಬಾವಿಯಲ್ಲಿ ಇದೇ ತಿಂಗಳ ಆರಂಭದಲ್ಲಿ ನಡೆದಿದ್ದ ಘರ್ಷಣೆ, ಸಾವು ಪ್ರಕರಣ ಕುರಿತ ಚರ್ಚೆ ಕಾಂಗ್ರೆಸ್‌ನ ಬಿ.ನಾಗೇಂದ್ರ ಹಾಗೂ ಬಿಜೆಪಿ ಸಹ ಸದಸ್ಯ ಜಿ. ಜನಾರ್ದನ ರೆಡ್ಡಿ ನಡುವೆ ವಾಗ್ವಾದಕ್ಕೆ ತಿರುಗಿತು.

ವಿಧಾನಸಭೆಯಲ್ಲಿ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಕುರಿತು ಮಾತನಾಡಿದ ನಾಗೇಂದ್ರ, ಬಳ್ಳಾರಿಯಲ್ಲಿ ಜ.17ರಂದು ನಡೆದ ಬಿಜೆಪಿ ಪ್ರತಿಭಟನಾ ಸಮಾವೇಶದಲ್ಲಿ ಶ್ರೀರಾಮುಲು ಕಾಂಗ್ರೆಸ್ ಶಾಸಕ, ಕಾರ್ಯಕರ್ತರನ್ನು ನಾಶ ಮಾಡುವ ಮಾತನಾಡಿದ್ದಾರೆ. ‘ಅಧಿಕಾರ ಇದೆ ಎಂದು ಪೊಲೀಸರು ಈಗ ಭರತ್ ರೆಡ್ಡಿಯನ್ನು ರಕ್ಷಿಸಿರಬಹುದು. ಮುಂದೆ ನಮಗೆ ಅಧಿಕಾರ ಸಿಗುತ್ತದೆ. ಆಗ ಪಾತಾಳದಲ್ಲಿದ್ದರೂ ಭರತ್ ರೆಡ್ಡಿಯನ್ನು ಬಿಡುವುದಿಲ್ಲ. 2028ಕ್ಕೆ ನಾವು ಗೆಲ್ಲುವುದು ಶತಃಸಿದ್ಧ. ಆಗ ನಿನ್ನ ರಕ್ಷಣೆಗೆ ಯಾರು ಬರುತ್ತಾರೆ ನೋಡೋಣ’ ಎಂದು ಸವಾಲು ಎಸೆದಿದ್ದಾರೆ. ಬಿಜೆಪಿ ನಾಯಕರ ವರ್ತನೆ ಬಳ್ಳಾರಿಯ ಶಾಂತಿ ಸುವ್ಯವಸ್ಥೆಗೆ ಮಾರಕ’ ಎಂದು ಟೀಕಿಸಿದರು.

‘ಜನಾರ್ದನ ರೆಡ್ಡಿ ಅವರು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಗೃಹ ಸಚಿವರ ವಿರುದ್ಧ ಸಲ್ಲದ ಟೀಕೆ ಮಾಡಿದ್ದಾರೆ. ಪ್ರಕರಣವನ್ನು ಸರ್ಕಾರ ಉತ್ತಮವಾಗಿ ನಿಭಾಯಿಸಿದೆ. ತನಿಖೆ ನಡೆಯುತ್ತಿದೆ. ಮಹರ್ಷಿ ವಾಲ್ಮೀಕಿ ಅವರ ಬ್ಯಾನರ್ ಹರಿದುಹಾಕಿದ್ದಲ್ಲದೆ, ಭಾವಚಿತ್ರವನ್ನು ಕಾಲಿನಿಂದ ತುಳಿದಿದ್ದಾರೆ. ಘರ್ಷಣೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತ ಪ್ರಾಣ ಕಳೆದುಕೊಂಡಿದ್ದಾನೆ. ಜನಾರ್ದನ ರೆಡ್ಡಿ ನೂರು ಸುಳ್ಳು ಹೇಳಿ ಸತ್ಯವೆಂದು ನಂಬಿಸುತ್ತಿದ್ದಾರೆ. ಸರ್ಕಾರವನ್ನು ಸಮರ್ಥಿಸಿಕೊಳ್ಳುವುದು ನಮ್ಮ ಕೆಲಸ. ಮತ್ತೆ ಬಳ್ಳಾರಿ ರಿಪಬ್ಲಿಕ್ ಮಾಡಲು ಹೊರಟ ಅವರ ಪ್ರಯತ್ನ ತಡೆಯುವ ಶಕ್ತಿ ಕಾಂಗ್ರೆಸ್‌ಗೆ ಇದೆ. ಅವರ ಸವಾಲು ಸ್ವೀಕರಿಸುತ್ತೇವೆ’ ಎಂದರು. ಅವರ ಮಾತಿಗೆ ಕೆರಳಿದ ಜನಾರ್ದನ ರೆಡ್ಡಿ, ‘ಘಟನೆಯ ಎಲ್ಲ ವಿಡಿಯೊ ನನ್ನ ಬಳಿ ಇವೆ. ಶಾಸಕ ಭರತ್ ರೆಡ್ಡಿ ಬೆಂಬಲಿಗರ ವರ್ತನೆ, ಅವರ ಗನ್‌ಮ್ಯಾನ್‌ಗಳ ಕೃತ್ಯ, ಕೆಲ ಪೊಲೀಸರ ವರ್ತನೆ ಖಂಡಿಸಿದ್ದೇವೆ. ಆರೋಪಿ ಭರತ್ ಬಂಧನಕ್ಕೆ ಆಗ್ರಹಿಸಿದ್ದೇವೆ. ಸತ್ಯವನ್ನು ಹೇಳಿದರೆ ಕಾಂಗ್ರೆಸ್ ನಾಯಕರು, ಸರ್ಕಾರ ಸಹಿಸುವುದಿಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಾಗೇಂದ್ರ ಬೆಂಬಲಕ್ಕೆ ಕಾಂಗ್ರೆಸ್ ಸದಸ್ಯರು, ರೆಡ್ಡಿ ಬೆಂಬಲಕ್ಕೆ ಬಿಜೆಪಿ–ಜೆಡಿಎಸ್ ಸದಸ್ಯರು ನಿಂತರು. ಸಭಾಧ್ಯಕ್ಷ ಯು.ಟಿ.ಖಾದರ್ ವಿಷಯಾಂತರದ ಮೂಲಕ ಗದ್ದಲ ಶಮನಗೊಳಿಸಿದರು.

‘ಎರಡೂವರೆ ವರ್ಷ ನೀವೇ ಇರಿ, ಡಿಕೆಶಿ ಬೇಡ’

ಬೆಂಗಳೂರು: ‘ನೀವೇ ಇನ್ನೂ ಎರಡೂವರೆ ವರ್ಷ ಮುಖ್ಯಮಂತ್ರಿಯಾಗಿ ಮುಂದುವರೆಯಿರಿ. ಡಿ.ಕೆ. ಶಿವಕುಮಾರ್ ಆ ಸ್ಥಾನಕ್ಕೆ ಬರುವುದು ಬೇಡ. ಬಳ್ಳಾರಿ ಜಿಲ್ಲೆಯ ಒಳಿತಿಗಾಗಿ ಉತ್ತಮ ಅಧಿಕಾರಿಗಳನ್ನು ನಿಯೋಜಿಸಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬಿಜೆಪಿಯ ಜಿ.ಜನಾರ್ದನ ರೆಡ್ಡಿ ಮನವಿ ಮಾಡಿದರು. ‘ಗಣಿ ವಿಚಾರವಾಗಿ ನೀವು ನನ್ನ ವಿರುದ್ಧ ಪಾದಯಾತ್ರೆ ನಡೆಸಿ ಹೋರಾಟ ಮಾಡಿದ್ದೀರಿ. ವಿರೋಧಪಕ್ಷದ ನಾಯಕರಾಗಿ ನಿಮ್ಮ ಕೆಲಸ ಮಾಡಿದ್ದೀರಿ. ನಾನು ಜೈಲಿಗೆ ಹೋದೆ. ಆ ಬಳಿಕ ಆಯ್ಕೆ ಆಗಿ ಬಂದೆ. ಎಲ್ಲವೂ ನನ್ನ ಹಣೆ ಬರಹ’ ಎಂದರು.

‘ಬಳ್ಳಾರಿಯಲ್ಲಿ ಇತ್ತೀಚೆಗೆ ನಡೆದ ಪ್ರಕರಣದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡೆದುಕೊಂಡ ರೀತಿ ನೋಡಿದರೆ, ಮುಖ್ಯಮಂತ್ರಿ ಸ್ಥಾನಕ್ಕೆ ಏರಲು ಭಗವಂತ ಅವರಿಗೆ ಅವಕಾಶ ಮಾಡಿಕೊಡಬಾರದು’ ಎಂದು ಕಿಡಿಕಾರಿದರು.

‘ನನ್ನ ಮನೆ ಸುಟ್ಟು ಹಾಕುತ್ತೇನೆ, ನನ್ನನ್ನು ಕೊಂದು ಹಾಕುತ್ತೇನೆ ಎಂದು ಹೇಳಿದ ಶಾಸಕ ಭರತ್ ರೆಡ್ಡಿಯನ್ನು ಶಿವಕುಮಾರ್ ಸಮರ್ಥಿಸಿಕೊಂಡರು. ಅವರ ಜತೆ ನಿಲ್ಲುವುದಾಗಿ ಹೇಳಿದರು. ಅಲ್ಲದೇ, ನಿಮಗೆ ರಕ್ಷಣೆಗೆ ಬೇಕಿದ್ದರೆ ಟ್ರಂಪ್ ಬಳಿ ಹೋಗಿ, ಇರಾನ್‌ನಿಂದ ರಕ್ಷಣೆ ಪಡೆಯಿರಿ, ಬಿಜೆಪಿಯ 1500 ಕಾರ್ಯಕರ್ತರನ್ನು ರಕ್ಷಣೆ ಇಟ್ಟುಕೊಳ್ಳಿ ಎಂದು ಹೇಳಿದ್ದಾರೆ. ಜವಾಬ್ದಾರಿಯುತ ಸ್ಥಾನದಲ್ಲಿ ಇರುವ ವ್ಯಕ್ತಿ ಆಡುವ ಮಾತಾ ಇದು’ ಎಂದು ರೆಡ್ಡಿ ಪ್ರಶ್ನಿಸಿದರು.

‘ನನ್ನ ಮೇಲೆ ಗುಂಡು ಹಾರಿಸಿದ ಪ್ರಕರಣದ ಬಗ್ಗೆ ಸಿಬಿಐ ತನಿಖೆ ಅಥವಾ ನ್ಯಾಯಾಧೀಶರಿಂದ ತನಿಖೆ ನಡೆಸಬೇಕು. ಸಾಧ್ಯವಿಲ್ಲ ಎಂದಾದರೆ ನಾನೇ ಸುಪ್ರೀಂ ಕೋರ್ಟ್ ಮೆಟ್ಟಿಲು ಹತ್ತುತ್ತೇನೆ’ ಎಂದರು.



ಜನಾರ್ದನ ರೆಡ್ಡಿ

ಸಚಿವರಿಂದ ಭೂಕಬಳಿಕೆ: ಬಿ.ಪಿ.ಹರೀಶ್ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾವಣಗೆರೆ ಜಿಲ್ಲೆಯಲ್ಲಿ ದುಷ್ಟರು ಮತ್ತು ಶ್ರೀಮಂತರ ಕೂಟ ಸರ್ಕಾರಿ ಆಸ್ತಿಯನ್ನು ಕಬಳಿಸುತ್ತಿದ್ದು, ಹಳ್ಳ–ಕೊಳ್ಳಗಳನ್ನೂ ಬಿಡುತ್ತಿಲ್ಲ. ಇದನ್ನು ತಡೆಯುವವರೇ ಇಲ್ಲ ಎಂದು ಬಿಜೆಪಿಯ ಬಿ.ಪಿ.ಹರೀಶ್ ವಿಧಾನಸಭೆಯಲ್ಲಿ ದೂರಿದರು.

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಕುರಿತು ಮಾತನಾಡಿದ ಅವರು, ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಅವರ ಕುಟುಂಬದವರು ಸುಮಾರು 550 ಎಕರೆ ಕಂದಾಯ ಭೂಮಿಯನ್ನು ಒತ್ತುವರಿ ಮಾಡಿದ್ದಾರೆ ಎಂದು ಆರೋಪಿಸಿದರು.

ಹರಿಹರ ತಾಲ್ಲೂಕಿನ ಚಿಕ್ಕಬಿದರಿ ಹಾಗೂ ಹರಪನಹಳ್ಳಿ ತಾಲ್ಲೂಕಿನ ದುಗ್ಗಾವತಿ, ಕಡತಿ ಗ್ರಾಮಗಳಲ್ಲಿ ಶಾಮನೂರು ಶುಗರ್ಸ್ ಮತ್ತು ಸ್ಯಾಮ್ಸನ್ ಡಿಸ್ಟಿಲರೀಸ್ ಸುತ್ತಮುತ್ತ ನೂರಾರು ಎಕರೆ ಭೂಮಿಯನ್ನು ರೈತರಿಗೆ ಮೋಸ ಮಾಡಿ ತಮ್ಮ ಹೆಸರಿಗೆ ಮಾಡಿಕೊಂಡಿದ್ದಾರೆ. ಚಿಕ್ಕಬಿದರಿ ಗ್ರಾಮದಲ್ಲಿ ಬಯೋಫರ್ಟಿಲೈಸರ್ ಕಾರ್ಖಾನೆಗೆಂದು ಕೆಐಎಡಿಬಿ ಮೂಲಕ 100 ಎಕರೆ ಜಮೀನು ಸ್ವಾಧೀನ ಪಡಿಸಿಕೊಂಡರು. ಆದರೆ, ಈವರೆಗೆ ರೈತರಿಗೆ ಪರಿಹಾರ ನೀಡಿಲ್ಲ ಎಂದು ದೂರಿದರು.

ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ ದುಗ್ಗಾವತಿ ಗ್ರಾಮದಲ್ಲಿ ಕಾರ್ಖಾನೆ ಸ್ಥಾಪಿಸಲು 122 ಎಕರೆ ಜಮೀನನ್ನು ರೈತರಿಗೆ ಮಾಹಿತಿ ನೀಡದೆ, ಬೆಂಗಳೂರಿನ ಕೆಐಎಡಿಬಿ ಕಚೇರಿಯಲ್ಲಿ ರೈತರ ನಕಲಿ ಸಹಿಗಳನ್ನು ಹಾಕಿಸುವ ಮೂಲಕ ಸ್ವಾಧೀನಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಆರೋಪಿಸಿದರು.

‘ಈ ಕುರಿತು ಮುಖ್ಯಕಾರ್ಯದರ್ಶಿಯವರಿಗೆ ಪತ್ರ ಬರೆದರೂ ಏನೂ ಆಗಿಲ್ಲ. ಭೂಅತಿಕ್ರಮಣವನ್ನು ತಡೆಯುವ ಶಕ್ತಿ ಜಿಲ್ಲಾ ಆಡಳಿತಕ್ಕೆ ಇಲ್ಲವೇ? ಮುಖ್ಯಮಂತ್ರಿಗಳ ಅಭಯ ಇದೆ ಎಂದು ಜಿಲ್ಲಾ ಉಸ್ತವಾರಿ ಸಚಿವರು ಬೇಕಾದದ್ದನ್ನು ಮಾಡುತ್ತಿದ್ದಾರೆಯೆ’ ಎಂದು ಪ್ರಶ್ನಿಸಿದರು.

ಮಾತು ಮುಗಿಸಿದ ಹರೀಶ್ ಅವರು ತಮ್ಮ ಬಳಿಯಿದ್ದ ಗೃಹ ಸಚಿವ ಜಿ.ಪರಮೇಶ್ವರ ಅವರಿಗೆ ದಾಖಲೆಗಳನ್ನು ಕಳುಹಿಸಿದರು. ಈ ವೇಳೆ ಸದನದಲ್ಲಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಇರಲಿಲ್ಲ.

ವಾಕ್ ಸ್ವಾತಂತ್ರ್ಯಕ್ಕೂ ಮಿತಿಯಿದೆ...

ವಾಟ್ಸ್ ಆ್ಯಪ್ ಗ್ರೂಪ್‌ಗಳ ಅಶ್ಲೀಲತೆ ಪ್ರಸರಣಕ್ಕೆ ಹೈಕೋರ್ಟ್ ಕಿಡಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ‘ಭಜರಂಗಿ ಗೋ ಕಳ್ಳರು’ ಹೆಸರಿನಲ್ಲಿ ವಾಟ್ಸ್ ಆ್ಯಪ್ ಗ್ರೂಪ್
- ಹಿಂದೂ ದೇವತೆಗಳ ಅವಹೇಳನ ಆರೋಪ

ಬೆಂಗಳೂರು: ‘ಭಜರಂಗಿ ಗೋ ಕಳ್ಳರು’ ಹೆಸರಿನಲ್ಲಿ ವಾಟ್ಸ್ ಆ್ಯಪ್ ಗ್ರೂಪ್ ರಚಿಸಿ ಅದರಲ್ಲಿ, ಹಿಂದೂ ದೇವತೆಗಳು ಮತ್ತು ರಾಜಕೀಯ ನಾಯಕರನ್ನು ಅಶ್ಲೀಲವಾಗಿ ಬಿಂಬಿಸಿ ಧಾರ್ಮಿಕ ಭಾವನೆಗಳನ್ನು ಕೆರಳಿಸಿದ ಆರೋಪದಡಿಯ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಲು ನಿರಾಕರಿಸಿರುವ ಹೈಕೋರ್ಟ್, ‘ವಾಕ್ ಸ್ವಾತಂತ್ರ್ಯದ ಹೆಸರಿನಲ್ಲಿ ಎಲ್ಲವನ್ನೂ ಸಹಿಸಲಾಗುವುದಿಲ್ಲ’ ಎಂದು ಕಿಡಿ ಕಾರಿದೆ.

‘ನನ್ನ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಬೇಕು’ ಎಂದು ಕೋರಿ ಬೆಳ್ತಂಗಡಿ ತಾಲ್ಲೂಕು ಕುಪ್ಪೆಟ್ಟಿ ಕರಾಯ ಗ್ರಾಮದ ಸಿರಾಜುದ್ದೀನ್ (30) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ತಿರಸ್ಕರಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತು ಆದೇಶಿಸಿದೆ.

‘ಅರ್ಜಿದಾರರ ವಿರುದ್ಧದ ಆರೋಪಗಳಲ್ಲಿ ಧಾರ್ಮಿಕ ಭಾವನೆಗಳನ್ನು ಕೆರಳಿಸುವ ಮತ್ತು ಕೋಮು ಸಾಮರಸ್ಯ ಭಂಗಗೊಳಿಸುವ ಪ್ರವೃತ್ತಿ ಮೇಲ್ನೋಟಕ್ಕೆ ಕಂಡು ಬರುತ್ತಿದೆ. ತನಿಖಾಧಿಕಾರಿಯು ಗ್ರೂಪ್‌ನ ಎಲ್ಲ ಅಡ್ಮಿನ್‌ಗಳ ವಿರುದ್ಧ ಏಕರೂಪವಾಗಿ ಮುಂದುವರಿಯಲು ನಿರ್ಲಕ್ಷ್ಯ ತೋರಿದಂತೆ ಕಾಣುತ್ತಿದೆ’ ಎಂದು ಕಳವಳ ವ್ಯಕ್ತಪಡಿಸಿದೆ. ‘ಗ್ರೂಪ್‌ನ ವ್ಯಾಪ್ತಿ ಮತ್ತು ಅದರ ಅಡ್ಮಿನ್ ಹೊಣೆಗಾರಿಕೆಗಳೆಲ್ಲವೂ ನೇರವಾಗಿ ಡೊಮೇನ್‌ಗೆ ಸೇರುವ ವಿಷಯಗಳಾಗಿವೆ. ಹಾಗಾಗಿ, ಇಂತಹ ವಾಟ್ಸ್ ಆ್ಯಪ್ ಗ್ರೂಪ್‌ಗಳ ಸದಸ್ಯರು ಅಶ್ಲೀಲ ಚಿತ್ರಗಳ ಪ್ರಸರಣಕ್ಕೆ ಅವಕಾಶ ನೀಡುವ ಕುಕೃತ್ಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರೆ, ಅವರನ್ನೂ ವಿಚಾರಣೆಗೆ ಒಳಪಡಿಸಬೇಕು. ಆದಾಗ್ಯೂ, ತನಿಖಾ ಹಂತದಲ್ಲಿ ಈ ಕೋರ್ಟ್ ಯಾವುದೇ ಹೆಚ್ಚಿನ ಅವಲೋಕನ ಮಾಡುವುದು ಅನಗತ್ಯ’ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

‘ಈ ರೀತಿಯ ಗುರುತರ ಅಪರಾಧದ ತನಿಖೆಯನ್ನು ಮಧ್ಯದಲ್ಲೇ ತಡೆಯಲು ಸಾಧ್ಯವಿಲ್ಲ. ಅಪರಾಧವು ಐದು ವರ್ಷಗಳಷ್ಟು ಹಳೆಯದಾಗಿರುವುದರಿಂದ ತನಿಖಾಧಿಕಾರಿ ಯಾವುದೇ ವಿಳಂಬಕ್ಕೆ ಅವಕಾಶ ನೀಡದೆ ತನಿಖೆಯನ್ನು ಬೇಗ ಮುಕ್ತಾಯಗೊಳಿಸಬೇಕು’ ಎಂದು ಪ್ರಾಸಿಕ್ಯೂಷನ್‌ಗೆ ತಾಕೀತು ಮಾಡಿದೆ. ಪ್ರಾಸಿಕ್ಯೂಷನ್ ಪರ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ವಾದ ಮಂಡಿಸಿದ್ದರು.



> **ಸಂವಿಧಾನದ 25 ಮತ್ತು 26ನೇ ವಿಧಿಗಳ ಮೂಲಕ ಖಾತರಿಪಡಿಸಲಾದ ಧಾರ್ಮಿಕ ಸ್ವಾತಂತ್ರ್ಯದ ಹಕ್ಕು ಸಾರ್ವಜನಿಕ ಸುವ್ಯವಸ್ಥೆ, ನೈತಿಕತೆ, ಆರೋಗ್ಯಕ್ಕೆ ಒಳಪಟ್ಟಿರುತ್ತದೆ ಎಂಬುದನ್ನು ಮರೆಯಬಾರದು**
> **ನ್ಯಾಯಮೂರ್ತಿ ಎಂ.ನಾಗಪ್ರಸನ್ನ**

ಪ್ರಕರಣವೇನು?

‘ಸಿರಾಜುದ್ದೀನ್ ಸಾಮಾಜಿಕ ಜಾಲತಾಣಗಳಲ್ಲಿ ಹಿಂದೂ ದೇವತೆಗಳ ಚಿತ್ರಗಳನ್ನು ಅಶ್ಲೀಲವಾಗಿ, ಅವಮಾನಕರ ರೀತಿಯಲ್ಲಿ ಚಿತ್ರಿಸಿ ಪ್ರಸಾರ ಮಾಡುತ್ತಿದ್ದಾರೆ. ಈ ರೀತಿಯ ವಾಟ್ಸ್ ಆ್ಯಪ್ ಗ್ರೂಪ್‌ಗಳು ಸಮಾಜದಲ್ಲಿ ಗಲಭೆ ಸೃಷ್ಟಿಸುವ ಷಡ್ಯಂತ್ರ ಹೊಂದಿವೆ. ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಕೋರಿ ಬೆಳ್ತಂಗಡಿಯ ಕಡಿರುದ್ಯಾವರ ಗ್ರಾಮದ ಕೆ.ಜಯರಾಜ್ ಸಾಲಿಯಾನ 2020ರ ಜನವರಿ 25ರಂದು ಸೆನ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಈ ದೂರಿನ ಅನ್ವಯ ಮಂಗಳೂರು ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ‘ಎಫ್‌ಐಆರ್ ಮತ್ತು ಬೆಳ್ತಂಗಡಿ ಜೆಎಂಎಫ್‌ಸಿ ಕೋರ್ಟ್‌ನಲ್ಲಿರುವ ನ್ಯಾಯಿಕ ಪ್ರಕ್ರಿಯೆ ರದ್ದುಗೊಳಿಸಬೇಕು’ ಎಂದು ಅರ್ಜಿದಾರರು ಕೋರಿದ್ದರು.

ಸಿದ್ದೇಶ್ವರ ಮಹಾರಥೋತ್ಸವ

ಪ್ರಜಾವಾಣಿ ಚಿತ್ರ: ಭರತ್ ಕಂದಕೂರ



ಕೊಪ್ಪಳ ತಾಲ್ಲೂಕಿನ ಅಳವಂಡಿಯಲ್ಲಿ ಶುಕ್ರವಾರ ನಡೆದ ಸಿದ್ಧೇಶ್ವರ ಮಹಾರಥೋತ್ಸವದಲ್ಲಿ ಪಾಲ್ಗೊಂಡಿದ್ದ ಜನಸ್ತೋಮ

ಆಯುಷ್ಮಾನ್ ಭಾರತ್ ಯೋಜನೆ ಸಂತಾನ ಚಿಕಿತ್ಸೆ ಸೇರ್ಪಡೆ

ಬೆಂಗಳೂರು: ಮಕ್ಕಳಾಗದ ದಂಪತಿಗಳಿಗೆ ಸಂತಾನ ಚಿಕಿತ್ಸೆಗಳನ್ನು ‘ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನಾರೋಗ್ಯ ಯೋಜನೆ–ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆಯಡಿ’ ತರಲಾಗಿದೆ.

ಈ ಸಂಬಂಧ ಆರೋಗ್ಯ ಇಲಾಖೆ ಆದೇಶ ಹೊರಡಿಸಿದ್ದು, ಈ ಆದೇಶ ಒಂದು ವರ್ಷ ಮಾತ್ರ ಜಾರಿಯಲ್ಲಿ ಇರಲಿದೆ. ಯೋಜನೆಯಡಿ ಬಿಪಿಎಲ್ ಕುಟುಂಬದ 120 ದಂಪತಿಗೆ ಮಾತ್ರ ಈ ಚಿಕಿತ್ಸೆಗೆ ಅನುಮೋದನೆ ದೊರೆತಿದೆ. ‘ಅಸಿಸ್ಟೆಡ್ ರಿಪ್ರೊಡಕ್ಟಿವ್ ಟೆಕ್ನಾಲಜಿ’ (ಎಆರ್‌ಟಿ) ಮೂಲಕ ದಂಪತಿಗಳಿಗೆ ಸಂತಾನ ಚಿಕಿತ್ಸೆ ನೀಡಲಾಗುತ್ತದೆ. ಖಾಸಗಿ ವ್ಯವಸ್ಥೆಯಡಿ ಈ ಚಿಕಿತ್ಸೆ ದುಬಾರಿಯಾಗಿರುವುದರಿಂದ ಯೋಜನೆಯಡಿ ಸೇರ್ಪಡೆ ಮಾಡಲಾಗಿದೆ. ಐವಿಎಫ್ ಸೇರಿ ವಿವಿಧ ವಿಧಾನಗಳ ಮೂಲಕ ಆಯ್ದ ದಂಪತಿಗೆ ಈ ಚಿಕಿತ್ಸೆ ನೀಡಲಾಗುತ್ತದೆ ಎಂದು ತಿಳಿಸಲಾಗಿದೆ.

ಜಿಲ್ಲಾ ಆಸ್ಪತ್ರೆಗಳು, ವೈದ್ಯಕೀಯ ಕಾಲೇಜುಗಳು, ಸ್ವಾಯತ್ತ ಆರೋಗ್ಯ ಸಂಸ್ಥೆಗಳು ಹಾಗೂ ಯೋಜನೆಯಡಿ ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಒದಗಿಸಲಾಗುತ್ತದೆ ಎಂದು ಆದೇಶ ಹೇಳಿದೆ.

2 ಸಾವಿರ ಹುದ್ದೆಗಳ ಭರ್ತಿಗೆ ಸಮ್ಮತಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶ
- ಅತಿಥಿ ಉಪನ್ಯಾಸಕರ ನೇಮಕ: ಪ್ರತ್ಯೇಕ ಪ್ರಸ್ತಾವನೆಗೆ ಸೂಚನೆ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು, ಸರ್ಕಾರಿ ಪಾಲಿಟೆಕ್ನಿಕ್ ಸೇರಿದಂತೆ ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿ ಖಾಲಿ ಇರುವ 2,000 ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಆರ್ಥಿಕ ಇಲಾಖೆ ಅನುಮತಿ ನೀಡಿದೆ.

ಪ್ರಥಮ ದರ್ಜೆ ಕಾಲೇಜುಗಳಲ್ಲಿ ವಿವಿಧ ವಿಷಯಗಳ 826, ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ 941 ಹುದ್ದೆಗಳು, ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ 186 ಹಾಗೂ ಬೆಂಗಳೂರಿನ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯದಲ್ಲಿ 47 ಬೋಧಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಉನ್ನತ ಶಿಕ್ಷಣ ಇಲಾಖೆ ಪ್ರಸ್ತಾವ ಸಲ್ಲಿಸಿತ್ತು.

ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಜತೆಗೆ, ಅಗತ್ಯವಿದ್ದರೆ ಹೊಸ ಹುದ್ದೆಗಳನ್ನು ಸೃಜಿಸುವ ಹಾಗೂ ಅಂತಹ ಹುದ್ದೆಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವ ಕುರಿತು ಪ್ರತ್ಯೇಕ ಪ್ರಸ್ತಾವನೆ ಸಲ್ಲಿಸಲು ಆರ್ಥಿಕ ಇಲಾಖೆ ಸೂಚಿಸಿದೆ.

ಬಸ್‌ಗಳಲ್ಲಿ ತಂಬಾಕು ಜಾಹೀರಾತು ನಿರ್ಬಂಧ

ಬೆಂಗಳೂರು: ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಕೆಕೆಆರ್‌ಟಿಸಿ, ಬಿಎಂಟಿಸಿ ಬಸ್‌ಗಳಲ್ಲಿ ಮತ್ತು ಬಸ್ ನಿಲ್ದಾಣಗಳಲ್ಲಿ ತಂಬಾಕು ಉತ್ಪನ್ನಗಳ ಜಾಹೀರಾತುಗಳನ್ನು ನಿರ್ಬಂಧಿಸುವಂತೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ನಾಲ್ಕು ನಿಗಮಗಳ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚನೆ ನೀಡಿದ್ದಾರೆ.

ತಂಬಾಕು ಉತ್ಪನ್ನಗಳ ಸೇವನೆಗೆ ಪ್ರಚೋದನೆ ನೀಡುವ ನೇರ ಅಥವಾ ಪರೋಕ್ಷವಾದ ಯಾವುದೇ ಜಾಹೀರಾತುಗಳನ್ನು ಮುಂದೆ ಪ್ರಚಾರ ಮಾಡಬಾರದು. ಈಗಾಗಲೇ ಅಂಥ ಜಾಹೀರಾತು ಅಳವಡಿಸಿದ್ದರೆ ಅವುಗಳನ್ನು ತೆರವುಗೊಳಿಸಲು ಸಮಯ ನಿಗದಿ ಮಾಡಿ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದ್ದಾರೆ.

ಪಂಕಜ್ ಕುಮಾರ್ ಪಾಂಡೆ ವರ್ಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಹುದ್ದೆಯಲ್ಲಿದ್ದ ಪಂಕಜ್ ಕುಮಾರ್ ಪಾಂಡೆ ಅವರನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ (ಇ–ಆಡಳಿತ) ಇಲಾಖೆಯ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಬೆಂಗಳೂರು ಜಲಮಂಡಳಿಯ ಅಧ್ಯಕ್ಷ ವಿ.ರಾಮ್ ಪ್ರಸಾತ್ ಮನೋಹರ್ ಅವರಿಗೆ ಕೆಪಿಟಿಸಿಎಲ್‌ನ ವ್ಯವಸ್ಥಾಪಕ ನಿರ್ದೇಶಕ ಹುದ್ದೆಯ ಹೆಚ್ಚುವರಿ ಹೊಣೆ ನೀಡಿ ಸರ್ಕಾರವು ಆದೇಶಿಸಿದೆ.

ಕೆಪಿಟಿಸಿಎಲ್ ವ್ಯವಸ್ಥಾಪಕ ಹುದ್ದೆಯಲ್ಲಿದ್ದ ಅವಧಿಯಲ್ಲಿ ಪಾಂಡೆ ಅವರು ಹಲವು ಅಧಿಕೃತ ಸಭೆಗಳಿಗೆ ಗೈರುಹಾಜರಾಗಿದ್ದರು. ಈ ಬಗ್ಗೆ ನೋಟಿಸ್ ನೀಡಿ, ವಿವರಣೆ ಪಡೆಯಿರಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಖ್ಯ ಕಾರ್ಯದರ್ಶಿಗೆ ಸೂಚಿಸಿದ್ದರು. ಅದರಂತೆ ಮುಖ್ಯ ಕಾರ್ಯದರ್ಶಿ ನೀಡಿದ್ದ ನೋಟಿಸ್‌ಗೆ ಅವರು ವಿವರಣೆ ನೀಡಿದ್ದರು. ಅದರ ಬೆನ್ನಲ್ಲೇ, ತಮ್ಮ ಇಲಾಖೆಯಲ್ಲಿ ಮುಖ್ಯಮಂತ್ರಿ ಅವರ ಮಗ ಡಾ.ಯತೀಂದ್ರ ಸಿದ್ದರಾಮಯ್ಯ ಅವರ ಹಸ್ತಕ್ಷೇಪ ಹೆಚ್ಚುತ್ತಿದೆ ಎಂದು ಬೇಸರಗೊಂಡಿದ್ದ ಕೆ.ಜೆ.ಜಾರ್ಜ್ ಅವರು ಇಂಧನ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ ಎಂಬ ಸುದ್ದಿ ಹರಿದಾಡಿತ್ತು. ಈ ವಿಷಯ ವಿಧಾನ ಸಭೆಯಲ್ಲೂ ಚರ್ಚೆಗೆ ಕಾರಣವಾಗಿತ್ತು. ಈ ವದಂತಿಯನ್ನು ಜಾರ್ಜ್ ಅವರು ನಿರಾಕರಿಸಿದ್ದರು.

ಹಾಸ್ಟೆಲ್‌ಗೆ ‘ಆರೋಗ್ಯ ಬಂಧು’

ರಾಜ್ಯದಲ್ಲೇ ಮೊದಲು • ಇಂದಿನಿಂದ ದಾವಣಗೆರೆ ಜಿಲ್ಲೆಯಲ್ಲಿ ಅನುಷ್ಠಾನ

• ರಾಮಮೂರ್ತಿ ಪಿ.

ದಾವಣಗೆರೆ: ಸರ್ಕಾರಿ ವಸತಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳ ಆರೋಗ್ಯವನ್ನು ನಿಯಮಿತವಾಗಿ ಪರೀಕ್ಷಿಸಿ ಚಿಕಿತ್ಸೆ ನೀಡಲು ಇಲ್ಲಿನ ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯಿತಿ ವತಿಯಿಂದ ‘ವಿದ್ಯಾರ್ಥಿ ಆರೋಗ್ಯಬಂಧು’ ಎಂಬ ವಿಶೇಷ ಯೋಜನೆ ರೂಪಿಸಲಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಆರೋಗ್ಯ ಇಲಾಖೆಗಳ ಸಹಯೋಗದಲ್ಲಿ ರಾಜ್ಯದಲ್ಲೇ ಮೊದಲ ಬಾರಿಗೆ ಜಿಲ್ಲೆಯಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ವಿವಿಧ ಇಲಾಖೆಗಳ ವಸತಿಯುತ ಶಾಲೆಗಳ ವಿದ್ಯಾರ್ಥಿಗಳು ಈ ಯೋಜನೆಯ ಫಲಾನುಭವಿಗಳಾಗಲಿದ್ದಾರೆ. ಯೋಜನೆಯಡಿ ಜಿಲ್ಲೆಯಲ್ಲಿ ಪ್ರತಿ ತಿಂಗಳು 20,000 ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ ನಡೆಯಲಿದೆ.

ಸರ್ಕಾರಿ ವಸತಿ ನಿಲಯಗಳಲ್ಲಿರುವ, ಪ್ರಾಥಮಿಕ ಶಿಕ್ಷಣದಿಂದ ಸ್ನಾತ್ತಕೋತ್ತರ ಪದವಿವರೆಗೆ ಕಲಿಯುತ್ತಿರುವ ಎಲ್ಲ ವಿದ್ಯಾರ್ಥಿಗಳಿಗೂ ಈ ಯೋಜನೆಯ ನೆರವು ದೊರೆಯಲಿದೆ.

ಹೀಗಿರುತ್ತದೆ ಪ್ರಕ್ರಿಯೆ: ಪ್ರತಿ ತಿಂಗಳು ಪ್ರಾಥಮಿಕ ಆರೋಗ್ಯ ಕೇಂದ್ರ (ಪಿಎಚ್‌ಸಿ) ‘ನಮ್ಮ ಕ್ಲಿನಿಕ್’ ಸೇರಿದಂತೆ ವಸತಿ ನಿಲಯಗಳ ಸಮೀಪದ ಸರ್ಕಾರಿ ಆಸ್ಪತ್ರೆಗಳ ವೈದ್ಯರು, ಸಿಬ್ಬಂದಿ ಹಾಸ್ಟೆಲ್‌ಗೆ ತೆರಳಿ ವಿದ್ಯಾರ್ಥಿಗಳ ಆರೋಗ್ಯ ಪರೀಕ್ಷಿಸಿ, ಔಷಧ ನೀಡಲಿದ್ದಾರೆ.

ಯೋಜನೆಯ ಭಾಗವಾಗಿ ಪ್ರತಿ ವಿದ್ಯಾರ್ಥಿಗೆ ‘ಆರೋಗ್ಯ ಕಾರ್ಡ್’ ವಿತರಿಸಲಾಗುತ್ತಿದೆ. ಇದರಲ್ಲಿ ವಿದ್ಯಾರ್ಥಿಯ ಸಂಪೂರ್ಣ ವಿವರವನ್ನು ದಾಖಲಿಸಲಾಗುತ್ತಿದೆ. ಪ್ರತಿ ತಿಂಗಳು ಆರೋಗ್ಯ ಪರಿಶೀಲಿಸಿದಾಗ ವೈದ್ಯಾಧಿಕಾರಿ, ವಾರ್ಡನ್ ಹಾಗೂ ವಿದ್ಯಾರ್ಥಿಯು ಆ ಕಾರ್ಡ್‌ನಲ್ಲಿ ಸಹಿ ಮಾಡುವುದನ್ನು ಕಡ್ಡಾಯಗೊಳಿಸಲಾಗಿದೆ.

ವಿದ್ಯಾರ್ಥಿಯ ರಕ್ತದ ಗುಂಪು, ಎತ್ತರ, ತೂಕ, ಕುಟುಂಬದ ಆರೋಗ್ಯ ಹಿನ್ನೆಲೆ, ನೀರು, ಆಹಾರದಿಂದ ಅಥವಾ ಔಷಧಿಯಿಂದ ಉಂಟಾಗುವ ಅಲರ್ಜಿ, ರಕ್ತದೊತ್ತಡ ಪ್ರಮಾಣ, ಮಧುಮೇಹ, ಮನೋರೋಗ ಸೇರಿದಂತೆ ಇನ್ನಿತರ ಆರೋಗ್ಯ ಸಮಸ್ಯೆಗಳ ಬಗ್ಗೆ ಆರೋಗ್ಯ ಕಾರ್ಡ್‌ನಲ್ಲಿ ನಮೂದಿಸಲಾಗುತ್ತದೆ.

‘ಆರೋಗ್ಯ ಸಮಸ್ಯೆ ಎದುರಿಸುತ್ತಿರುವ ವಿದ್ಯಾರ್ಥಿಗಳನ್ನು ಗುರುತಿಸಿ, ಕಾಯಿಲೆ ಕುರಿತು ಅಧಿಕ ಕಾಳಜಿ ವಹಿಸಲು ಈ ಯೋಜನೆ ಸಹಕಾರಿಯಾಗಲಿದೆ’ ಎನ್ನುತ್ತಾರೆ ಜಿಲ್ಲಾ ಪಂಚಾಯಿತಿ ಸಿಇಒ ಗಿತ್ತೆ ಮಾಧವ ವಿಠ್ಠಲರಾವ್.

ಯೋಜನೆಯ ಭಾಗವಾಗಿ ಪ್ರತ್ಯೇಕ ಪೋರ್ಟಲ್ ರೂಪಿಸಲಾಗಿದ್ದು, ಪ್ರತಿ ವಿದ್ಯಾರ್ಥಿಯೂ ತನಗೆ ನೀಡಿದ ವಿಶೇಷ ಗುರುತಿನ ಸಂಖ್ಯೆಯನ್ನು ನಮೂದಿಸಿ ಆನ್‌ಲೈನ್ ಮೂಲಕವೂ ಆರೋಗ್ಯದ ಸ್ಥಿತಿಗತಿಯನ್ನು ಪರಿಶೀಲಿಸಿಕೊಳ್ಳಬಹುದು.


ಜನವರಿ 12ರಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಹಾಗೂ ಜಿಲ್ಲೆಯ ಶಾಸಕರು ವಿದ್ಯಾರ್ಥಿಗಳಿಗೆ ಆರೋಗ್ಯ ಕಾರ್ಡ್ ವಿತರಿಸಿ ಯೋಜನೆಗೆ ಸಾಂಕೇತಿಕವಾಗಿ ಚಾಲನೆ ನೀಡಿದ್ದಾರೆ. ವೈದ್ಯರು ಹಾಗೂ ಸಿಬ್ಬಂದಿ ಜ.31ರಿಂದ ಸರ್ಕಾರಿ ವಸತಿ ನಿಲಯಗಳಿಗೆ ಭೇಟಿ ನೀಡಿ ಆರೋಗ್ಯ ಪರೀಕ್ಷೆ ಕಾರ್ಯ ಆರಂಭಿಸಲಿದ್ದಾರೆ.

> ಜಿಲ್ಲೆಯಲ್ಲಿ ಈ ಯೋಜನೆ ಅನುಷ್ಠಾನಗೊಳ್ಳುತ್ತಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿರುವ ಸರ್ಕಾರವು, ಯೋಜನೆಯನ್ನು ರಾಜ್ಯದಾದ್ಯಂತ ವಿಸ್ತರಿಸುವ ಭರವಸೆ ನೀಡಿದೆ
> **ಜಿ.ಎಂ. ಗಂಗಾಧರಸ್ವಾಮಿ** ಜಿಲ್ಲಾಧಿಕಾರಿ, ದಾವಣಗೆರೆ

> ಪ್ರತಿ ಶನಿವಾರ, ಭಾನುವಾರ ವೈದ್ಯರು ಹಾಸ್ಟೆಲ್‌ಗಳಿಗೆ ತೆರಳಿ ವಿದ್ಯಾರ್ಥಿಗಳ ಆರೋಗ್ಯ ಪರೀಕ್ಷಿಸುವರು. ಕೆಲಸಕ್ಕೆ ಅಡ್ಡಿಯಾಗದಂತೆ ಸಮಯ ಹೊಂದಾಣಿಕೆ ಮಾಡಲಾಗುತ್ತದೆ
> **ಗಿತ್ತೆ ಮಾಧವ ವಿಠ್ಠಲರಾವ್,** ಸಿಇಒ, ಜಿಲ್ಲಾ ಪಂಚಾಯಿತಿ

ಆರೋಗ್ಯ ಕಾರ್ಡ್‌ನಲ್ಲಿ ಮಾಹಿತಿ

ಆರೋಗ್ಯ ಕಾರ್ಡ್‌ನಲ್ಲಿ ಸಂವಿಧಾನದ ಮಹತ್ವ, ಡಿಜಿಟಲ್ ಅರೆಸ್ಟ್, ಆನ್‌ಲೈನ್ ಗೇಮಿಂಗ್, ಸೈಬರ್ ಅಪರಾಧ, ಲೈಂಗಿಕ ದೌರ್ಜನ್ಯಗಳ ಬಗ್ಗೆ ಅರಿವು ಮೂಡಿಸುವ ಬರಹಗಳಿವೆ. ಅಲ್ಲದೆ, ಬಾಲ್ಯವಿವಾಹ, ಪೋಕ್ಸೊ ತಡೆ ಕಾಯ್ದೆ, ಬಾಲ ಕಾರ್ಮಿಕ ಪದ್ಧತಿ, ಪೌಷ್ಟಿಕ ಆಹಾರದ ಬಗ್ಗೆಯೂ ಮಾಹಿತಿ ನೀಡಲಾಗಿದೆ. ಎಸ್‌ಎಸ್‌ಎಲ್‌ಸಿ ಬಳಿಕ ವಿದ್ಯಾರ್ಥಿಗಳು ಆಯ್ದುಕೊಳ್ಳಬಹುದಾದ ವಿವಿಧ ಕೋರ್ಸ್‌ಗಳ ಬಗ್ಗೆಯೂ ವಿವರಿಸಲಾಗಿದೆ. ಸಹಾಯವಾಣಿ ಸಂಖ್ಯೆಗಳು, ತುರ್ತು ಸಂಪರ್ಕ ಸಂಖ್ಯೆಗಳನ್ನು ನಮೂದಿಸಲಾಗಿದೆ.



ವಿದ್ಯಾರ್ಥಿ ಆರೋಗ್ಯ ಬಂಧು ಕಾರ್ಡ್‌ನ ಮುಖಪುಟ

ಸಂವಿಧಾನದೆಡೆಗೆ ವಿದ್ಯಾರ್ಥಿಗಳ ದಿಟ್ಟ ಹೆಜ್ಜೆ

ಸಂವಿಧಾನವೇ ಬೆಳಕು

Curated by DH DECCAN HERALD | ಪ್ರಜಾವಾಣಿ


‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಆಯೋಜಿಸಿದ್ದ ‘ಸಂವಿಧಾನವೇ ಬೆಳಕು–ನಡಿಗೆ’ಯಲ್ಲಿ ಕಿರಣ್ ಸುಂದರರಾಜನ್, ರವೀಂದ್ರ ಭಟ್ಟ, ಎಸ್‌.ಎಂ. ಜಯಕರ, ಎಚ್‌. ಕಾಂತರಾಜ ಮತ್ತು ವಿದ್ಯಾರ್ಥಿಗಳು ಹೆಜ್ಜೆ ಹಾಕಿದರು ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂವಿಧಾನದ ಮಹತ್ವವನ್ನು ತಿಳಿದುಕೊಂಡು ನೂರಾರು ವಿದ್ಯಾರ್ಥಿಗಳು, ಯುವಜನರು ‘ಸಂವಿಧಾನ’ದ ಕಡೆಗೆ ದಿಟ್ಟ ಹೆಜ್ಜೆ ಇಟ್ಟರು. ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿಯ ರಸ್ತೆಗಳಲ್ಲಿ ಸಾಗಿ ಅರಿವಿನ ಬೆಳಕು ಪಸರಿಸಿದರು.

‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ ಪತ್ರಿಕಾ ಸಮೂಹವು ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಸಹಯೋಗ ಹಾಗೂ ಬೆಂಗಳೂರು ವಿಶ್ವ-ವಿದ್ಯಾಲಯದ ಸಹಕಾರದಲ್ಲಿ ‘ಸಂವಿಧಾನವೇ ಬೆಳಕು–ಹೆಜ್ಜೆಯಿಡು ಬೆಂಗಳೂರು’ ಅಭಿಯಾನದಡಿ ಶುಕ್ರವಾರ ಹಮ್ಮಿಕೊಂಡಿದ್ದ ‘ಸಂವಿಧಾನ’ ಕುರಿತ ವಿಚಾರ ಸಂಕಿರಣ ಹಾಗೂ ವಾಕಥಾನ್ ಇದಕ್ಕೆ ಸಾಕ್ಷಿಯಾಯಿತು.

ಬೆಳಿಗ್ಗೆಯೇ ವಿದ್ಯಾರ್ಥಿಗಳು ಜ್ಞಾನಭಾರತಿ ಆವರಣದಲ್ಲಿ ಇರುವ ವೆಂಕಟಗಿರಿ ಗೌಡ ಸಭಾಂಗಣದಲ್ಲಿ ಬಂದು ಸೇರಿದರು. ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ, ಹಿರಿಯ ವಕೀಲ ಎಚ್‌. ಕಾಂತರಾಜ, ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಎಸ್.ಎಂ. ಜಯಕರ, ‘ಪ್ರಜಾವಾಣಿ’ಯ ಕಾರ್ಯನಿ-ರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರು ಆಡಿದ ಸಂವಿಧಾನದ ಬಗೆಗಿನ ನುಡಿಗಳನ್ನು ಆಲಿಸಿದರು.

‘ಸಂವಿಧಾನವೇ ಬೆಳಕು– ಹೆಜ್ಜೆಯಿಡು ಬೆಂಗಳೂರು’ ಸಂವಿಧಾನ ನಡಿಗೆಯಲ್ಲಿ ಉತ್ಸಾಹದಿಂದ ಹೆಜ್ಜೆ ಹಾಕಿದರು. ಹಸಿರು ಹೊದ್ದಿರುವ, ಜ್ಞಾನ ದೀವಿಗೆಯ ಬೆಳಕು ಚೆಲ್ಲುವ ವಿಶ್ವವಿದ್ಯಾಲಯದ ವಾತಾವರಣದಲ್ಲಿ ಸಂವಿಧಾನದ ಜಾಗೃತಿಯ ಕಂಪು ಹರಡಿದರು. ವಾಕಥಾನ್ ಮುಗಿಸಿ ಬಂದವರಿಗೆ ಪ್ರಮಾಣಪತ್ರ ವಿತರಿಸಲಾಯಿತು.

ಎಚ್‌. ಕಾಂತರಾಜ ಮಾತನಾಡಿ, ‘ಯಾವ ಹಕ್ಕುಗಳು ಇಲ್ಲದೇ ಸಮಾಜದಲ್ಲಿ ಸಹಜವಾಗಿ ಜೀವನ ಮಾಡಲು ಸಾಧ್ಯವಿಲ್ಲವೋ, ಅವು ಮೂಲಭೂತ ಹಕ್ಕುಗಳು. ಎಲ್ಲರಿಗೂ ಎಲ್ಲ ಸ್ವಾತಂತ್ರ್ಯಗಳು ಇರಬೇಕು. ಅದು ಇನ್ನೊಬ್ಬರಿಗೆ ತೊಂದರೆಯನ್ನುಂಟು ಮಾಡಬಾರದು ಎಂಬುದೇ ಸಂವಿಧಾನದ ತತ್ವ’ ಎಂದರು.

‘ಈ ದೇಶ ಕೆಲವರಿಗಷ್ಟೇ ಸೇರಿದ್ದಲ್ಲ, ಅದು ಎಲ್ಲರಿಗೂ ಸೇರಿದ್ದು ಎಂದು ಹೇಳಿದ ಕಾರಣಕ್ಕೆ ಮಹಾತ್ಮ ಗಾಂಧೀಜಿ ಅವರನ್ನು ಹತ್ಯೆ ಮಾಡಲಾಯಿತು. ಇದೇ ಆಶಯವನ್ನು ಡಾ. ಬಿ.ಆರ್. ಅಂಬೇಡ್ಕರ್ ಬರೆದಿರುವ ಸಂವಿಧಾನ ಹೊಂದಿದೆ. ಎಲ್ಲ ಕಾನೂನುಗಳ ತಾಯಿ ನಮ್ಮ ಸಂವಿಧಾನ. ಸಂವಿಧಾನಕ್ಕೆ ವಿರುದ್ಧವಾಗಿ ವಿಧಾನ ಸಭೆಯಲ್ಲಾಗಲಿ, ಸಂಸತ್ತಿನಲ್ಲಾಗಲಿ ಶಾಸನಗಳನ್ನು ಮಾಡಲು ಸಾಧ್ಯವಿಲ್ಲ’ ಎಂದು ತಿಳಿಸಿದರು.

‘ಮತದಾನದ ಹಕ್ಕಿನ ಮೂಲಕ ನಮಗೆ ಬೇಕಾದವರನ್ನು ಆಯ್ಕೆ ಮಾಡುವ, ಸಂವಿಧಾನಕ್ಕೆ ವಿರುದ್ಧವಾಗಿರುವ ಸರ್ಕಾರಗಳನ್ನು ಸೋಲಿಸುವ ಅವಕಾಶ ಸಿಕ್ಕಿದೆ. ಮತದಾನದ ಹಕ್ಕು ಒಂದು ವರ. ಅದನ್ನು ಸರಿಯಾಗಿ ಬಳಸದೇ ಇದ್ದರೆ ಅದುವೇ ಶಾಪವಾಗಲಿದೆ’ ಎಂದು ಕಾಂತರಾಜ ಎಚ್ಚರಿಸಿದರು.

‘ಜಾತಿ, ಧರ್ಮಗಳ ಹೆಸರಲ್ಲಿ ಆಗುವ ತಾರತಮ್ಯಗಳು ಇನ್ನೂ ಕಡಿಮೆಯಾಗಿಲ್ಲ. ಎಲ್ಲರಿಗೂ ಸಮಾನ ಅವಕಾಶ ಸಿಗಬೇಕು ಎಂಬ ಆಶಯ ಈಡೇರಿಲ್ಲ. ಇದಕ್ಕೆ ಕಾರಣ ಏನು ಎಂದು ಪತ್ತೆ ಹಚ್ಚಿ ಸರಿಪಡಿಸಬೇಕು. ಸಂವಿಧಾನ ನೀಡಿರುವ ಸೌಲಭ್ಯಗಳನ್ನು ಪಡೆಯಬೇಕು. ಸಿಗದೇ ಇದ್ದರೆ ಅದಕ್ಕೆ ಹೋರಾಟ ಮಾಡಲು ಸಂವಿಧಾನದ ಅರಿವು ಇರಬೇಕು. ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯ, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ತತ್ವದಡಿ ಮುನ್ನಡೆಯಬೇಕು’ ಎಂದು ಸಲಹೆ ನೀಡಿದರು.

ಕುಲಪತಿ ಎಸ್.ಎಂ. ಜಯಕರ ಮಾತನಾಡಿ ‘ಇಂದು ಸಂವಿಧಾನದ ನಡಿಗೆ ಎಂದು ಹೆಜ್ಜೆ ಹಾಕಿದ್ದೇವೆ. ಇದು ಇಲ್ಲಿಗೆ ನಿಲ್ಲಬಾರದು. ನಮ್ಮ ಜೀವನವೇ ಸಂವಿಧಾನದ ಕಡೆಗೆ ಸಾಗಬೇಕು. ಸಂವಿಧಾನಕ್ಕೆ ಬದ್ಧವಾಗಿ ಬದುಕಬೇಕು’ ಎಂದು ಪ್ರತಿಪಾದಿಸಿದರು.

ಜೀವನದಲ್ಲಿ ಯಾವ ಗ್ರಂಥ ಓದದೇ ಇದ್ದರೂ ಸಂವಿಧಾನ ಗ್ರಂಥವನ್ನು ಎಲ್ಲರೂ ಓದಿ ತಿಳಿದುಕೊಳ್ಳಬೇಕು. ಸಂವಿಧಾನವು ಜ್ಞಾನಿಗಳಿಗೆ, ವಕೀಲರಿಗೆ ಸಂಬಂಧಿಸಿದ್ದು ಎಂಬ ಭಾವನೆಯಿಂದ ಹೊರಬಂದು ಎಲ್ಲರೂ ಅರಿವು ಮೂಡಿಸಿಕೊಳ್ಳಬೇಕು ಎಂದರು.

ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟಡ್‌ನ ಮುಖ್ಯ ಕಾರ್ಯಾಚರಣೆ ಅಧಿಕಾರಿ ಕಿರಣ್ ಸುಂದರರಾಜನ್ ಉಪಸ್ಥಿತರಿದ್ದರು.

‘ಸಂವಿಧಾನ ಒಪ್ಪಿಕೊಳ್ಳದವರಿಂದಲೇ ತೊಂದರೆ’

‘ಎರಡು ರೀತಿಯ ಜನರು ಸಂವಿಧಾನಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಾರೆ. ಒಂದು ನಮ್ಮ ಸಂವಿಧಾನದ ಬಗ್ಗೆ ಏನೂ ಅರಿವಿಲ್ಲದೇ ಇರುವವರು, ಇನ್ನೊಂದು ಸಂವಿಧಾನದ ಬಗ್ಗೆ ಎಲ್ಲಾ ಗೊತ್ತಿದ್ದು, ಒಪ್ಪಿಕೊಳ್ಳದೇ ಇರುವವರು. ಮೊದಲನೇ ವರ್ಗಕ್ಕೆ ಸಂವಿಧಾನದ ಜಾಗೃತಿ ಮೂಡಿಸುವ ಮೂಲಕ ಸರಿಪಡಿಸಬಹುದು. ಎರಡನೇ ವರ್ಗದಿಂದಲೇ ತೊಂದರೆಯಾಗುತ್ತಿದ್ದು, ಹಾಗಾಗದಂತೆ ನೋಡಿಕೊಳ್ಳಬೇಕು’ ಎಂದು ಎಚ್‌. ಕಾಂತರಾಜ ಪ್ರತಿಪಾದಿಸಿದರು.

‘ಸಾಮಾಜಿಕ ನ್ಯಾಯದ ಬಗ್ಗೆ ನಮ್ಮ ಸಂವಿಧಾನದಲ್ಲಿ ಇರುವಷ್ಟು ಅಂಶಗಳು ಮತ್ಯಾವ ದೇಶದ ಸಂವಿಧಾನದಲ್ಲೂ ಇಲ್ಲ. ಪ್ರಸ್ತಾವನೆಯ ಆಶಯ, ಮೂಲಭೂತ ಹಕ್ಕುಗಳ ಆಶಯ ಹಾಗೂ ಮೂಲಭೂತ ತತ್ವಗಳ ಆಶಯವೂ ಅದೇ ಆಗಿದೆ. ಇದರ ಜೊತೆಗೆ ನಮ್ಮ ಕರ್ತವ್ಯಗಳೇನು ಎಂಬುದನ್ನು ವಿವರಿಸುವ ಮೂಲಕ ಜವಾಬ್ದಾರಿಯನ್ನೂ ಸಂವಿಧಾನ ತಿಳಿಸಿದೆ’ ಎಂದು ವಿವರಿಸಿದರು.

An Initiative by:

SOCIAL WELFARE DEPARTMENT
For the Educational, Social & Economic Upliftment of Scheduled Castes

In Association with:

ನಿಧನ ವಾರ್ತೆ

ಡಾ.ಟಿ.ಎಂ.ಕೇಶವ


ಡಾ. ಟಿ.ಎಂ. ಕೇಶವ

ಗದಗ: ಲಕ್ಕುಂಡಿ ಉತ್ಖನನದ ನಿರ್ದೇಶಕರಾಗಿದ್ದ ಡಾ.ಟಿ.ಎಂ.ಕೇಶವ (77) ಅವರು ಬೆಂಗಳೂರಿನ ಆಸ್ಪತ್ರೆಯಲ್ಲಿ ಶುಕ್ರವಾರ ನಿಧನರಾದರು.

ಕೇಂದ್ರ ಪುರಾತತ್ವ ಇಲಾಖೆಯಲ್ಲಿ ಉನ್ನತ ಅಧಿಕಾರಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದ ಡಾ.ಟಿ.ಎಂ. ಕೇಶವ ಅವರು, ಪುರಾತತ್ವ ಕ್ಷೇತ್ರದಲ್ಲಿ ಅಪಾರ ಅನುಭವ ಮತ್ತು ಜ್ಞಾನವನ್ನು ಹೊಂದಿದ್ದರು.


ಟಿ.ಎಂ. ಕೇಶವ ಅವರ ಮಾರ್ಗದರ್ಶನದಿಂದ ಲಕ್ಕುಂಡಿ ಉತ್ಖನನ ಕಾರ್ಯಕ್ಕೆ ವೈಜ್ಞಾನಿಕ ದೃಷ್ಟಿಕೋನ ಮತ್ತು ಶಿಸ್ತು ದೊರಕಿತ್ತು ಎಂದು ಅವರು ತಿಳಿಸಿದ್ದಾರೆ.

ಶನಿವಾರ(ಜ.31) ಲಕ್ಕುಂಡಿಯ ಉತ್ಖನನ ಸ್ಥಳದಲ್ಲಿ ಕೇಶವ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಗುವುದು ಎಂದು ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಶರಣು ಗೋಗೇರಿ ತಿಳಿಸಿದ್ದಾರೆ.

ಹುಡುಕಿದಷ್ಟೂ ಚಿನ್ನಾಭರಣ

ಕಿಮ್ಸ್ ಮುಖ್ಯ ಆಡಳಿತಾಧಿಕಾರಿ ಮನೆಯಲ್ಲಿ ಅಪಾರ ಸಂಪತ್ತು

ಪ್ರಜಾವಾಣಿ ವಾರ್ತೆ


ಕಲ್ಲೇಶ

ಕೊಪ್ಪಳ: ಕೊಪ್ಪಳ ವೈದ್ಯಕೀಯ ವಿಜ್ಞಾನ ಸಂಸ್ಥೆ (ಕಿಮ್ಸ್) ಮುಖ್ಯ ಆಡಳಿತಾಧಿಕಾರಿ ಬಿ.ಕಲ್ಲೇಶ ಅವರಿಗೆ ಸಂಬಂಧಿಸಿದ ಒಂಬತ್ತು ಸ್ಥಳಗಳಲ್ಲಿ ಲೋಕಾಯುಕ್ತ ಪೊಲೀಸರು ಶುಕ್ರವಾರ ದಾಳಿ ನಡೆಸಿದ್ದು, ಅಪಾರ ಪ್ರಮಾಣದ ಚಿನ್ನಾಭರಣ ಹಾಗೂ ನಗದು ಪತ್ತೆಯಾಗಿದೆ.

ಕೊಪ್ಪಳ, ಧಾರವಾಡ, ರಾಯಚೂರು, ಹಾವೇರಿ, ಗದಗ ಹಾಗೂ ವಿಜಯನಗರ ಜಿಲ್ಲೆಗಳ 30ಕ್ಕೂ ಹೆಚ್ಚು ಲೋಕಾಯುಕ್ತ ಅಧಿಕಾರಿಗಳು ಹಾಗೂ ಸಿಬ್ಬಂದಿ ದಾಳಿ ನಡೆಸಿದ್ದು, ಬೆಳಗಿನ ಜಾವದಿಂದ ರಾತ್ರಿ ತನಕ ಪರಿಶೀಲನೆ ನಡೆಸಿದರು. ಕಲ್ಲೇಶ ಅವರ ಮನೆ, ಭಾಗ್ಯನಗರದಲ್ಲಿರುವ ನವಚೇತನ ಶಾಲೆ, ಕಿಮ್ಸ್ ಕಚೇರಿ ಹಾಗೂ ಸಂಬಂಧಿಕರ ಮನೆ ಮೇಲೆ ದಾಳಿ ನಡೆದಿದೆ.

ಈ ವೇಳೆ ₹28.24 ಲಕ್ಷ ಮೌಲ್ಯದ ಏಳು ನಿವೇಶನಗಳು, ಕನಿಷ್ಠ ₹10 ಕೋಟಿ ಬೆಲೆಬಾಳುವ ಮನೆ, ಶಾಲೆ ಮತ್ತು ಹಾಸ್ಟೆಲ್ ಕಟ್ಟಡ, ₹3.23 ಕೋಟಿ ಮೌಲ್ಯದ 31.25 ಎಕರೆ ಕೃಷಿ ಭೂಮಿ, ಮನೆಯಲ್ಲಿ ₹37 ಲಕ್ಷ ನಗದು, 1,104 ಗ್ರಾಂ ಚಿನ್ನಾಭರಣ, ಮೂರೂವರೆ ಕೆ.ಜಿ. ಬೆಳ್ಳಿ ಪತ್ತೆಯಾಗಿದೆ. ಬೆಳ್ಳಿ ಹಾಗೂ ಬಂಗಾರದ ಮೌಲ್ಯವೇ ₹1.13 ಕೋಟಿ ಎಂದು ಅಂದಾಜಿಸಲಾಗಿದೆ.

₹38.60 ಲಕ್ಷ ಬೆಲೆಬಾಳುವ ಒಂದು ಕಾರು, ಒಂದು ಬೈಕ್, ಬ್ಯಾಂಕ್ ಖಾತೆಯಲ್ಲಿ ನಿಶ್ಚಿತ ಠೇವಣಿ ₹ 61 ಲಕ್ಷ ನಗದು ಎಲ್ಲವೂ ಸೇರಿ ₹10.46 ಕೋಟಿಯಷ್ಟು ಆಸ್ತಿಯ ಮಾಹಿತಿ ಲಭ್ಯವಾಗಿದೆ ಎಂದು ಲೋಕಾಯುಕ್ತ ಪೊಲೀಸ್ ಮೂಲಗಳು ತಿಳಿಸಿವೆ. ಇಲ್ಲಿನ ಲೋಕಾಯುಕ್ತ ಠಾಣೆಯಲ್ಲಿ ತಪಾಸಣಾ ಕಾರ್ಯ ಮುಗಿಸಿದ ಬಳಿಕ ಎಫ್‌ಐಆರ್ ದಾಖಲಾಗಿದೆ.


ಕೊಪ್ಪಳದ ಭಾಗ್ಯನಗರದ ಕಲ್ಲೇಶ ಅವರ ಮನೆಯಲ್ಲಿ ಲಭಿಸಿದ ಚಿನ್ನಾಭರಣ

‘ಲೋಕಾ’ ಬಲೆಗೆ ಗ್ರಾಮ ಆಡಳಿತಾಧಿಕಾರಿ


ವಿಠ್ಠಲ

ಶಿಕಾರಿಪುರ (ಶಿವಮೊಗ್ಗ ಜಿಲ್ಲೆ): ಜಮೀನಿನ ಖಾತೆ ಮಾಡಿಕೊಡಲು ₹1 ಲಕ್ಷ ಲಂಚ ಪಡೆಯುತ್ತಿದ್ದ ತಾಲ್ಲೂಕಿನ ಶಿರಾಳಕೊಪ್ಪ ನಾಡಕಚೇರಿಯ ಗ್ರಾಮ ಆಡಳಿತಾಧಿಕಾರಿ ವಿಠ್ಠಲ ಕೊಲ್ಹಾರ ಶುಕ್ರವಾರ ರಾತ್ರಿ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಶಿಕಾರಿಪುರ ತಾಲ್ಲೂಕಿನ ಚಿಕ್ಕಜಂಬೂರಿನ ಜಿಕ್ರಿಯಾ ಬೇಗ್ (55) ತಮ್ಮ ತಂದೆ ಉಯಿಲು ಬರೆದು ಇಟ್ಟಿದ್ದ 2.5 ಎಕರೆ ಜಮೀನನ್ನು ಖಾತೆ ಮಾಡಿಕೊಡಲು ಅರ್ಜಿ ಸಲ್ಲಿಸಿದ್ದರು. ವಿಳಂಬ ಮಾಡಿದ್ದ ಗ್ರಾಮ ಆಡಳಿತಾಧಿಕಾರಿ ವಿಠ್ಠಲ ಕೆಲಸ ಮಾಡಿ-ಕೊಡಬೇಕಾದರೆ ₹ 5 ಲಕ್ಷ ಲಂಚ ಕೊಡುವಂತೆ ಕೇಳಿದ್ದರು. ಅಂತಿಮವಾಗಿ ₹ 4 ಲಕ್ಷಕ್ಕೆ ಒಪ್ಪಿಕೊಂಡಿದ್ದರು. ಆ ಬಗ್ಗೆ ಜಿಕ್ರಿಯಾ ಬೇಗ್ ಆ ಬಗ್ಗೆ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು ಎಂದು ತಿಳಿದುಬಂದಿದೆ.

ವಿಠ್ಠಲ ಕೊಲ್ಹಾರ ಶಿಕಾರಿಪುರ ತಹಶೀಲ್ದಾರ್ ಕಚೇರಿ ಆವರಣದ ಕ್ಯಾಂಟೀನ್‌ನಲ್ಲಿ ಜಿಕ್ರಿಯಾ ಬೇಗ್ ಅವರಿಂದ ಮುಂಗಡವಾಗಿ ₹1 ಲಕ್ಷ ಹಣವನ್ನು ಪಡೆಯುವಾಗ ದಾಳಿ ನಡೆಸಿದ ಲೋಕಾಯುಕ್ತ ಡಿವೈಎಸ್‌ಪಿ ಬಿ.ಪಿ. ಚಂದ್ರಶೇಖರ್ ನೇತೃತ್ವದ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ಚಿನ್ನ ಒತ್ತೆ ಇಟ್ಟಿದ್ದರು: ಆರೋಪಿ ವಿಠ್ಠಲ ಕೊಲ್ಹಾರ ₹ 2 ಲಕ್ಷ ಮುಂಗಡಕ್ಕೆ ಬೇಡಿಕೆ ಇಟ್ಟಿದ್ದ. ಅಷ್ಟು ಹಣ ಹೊಂದಿಸಲಾಗದೇ ದೂರುದಾರ ಜಿಕ್ರಿಯಾ ಬೇಗ್ ಚಿನ್ನ ಅಡವಿಟ್ಟು ₹ 1 ಲಕ್ಷ ಹೊಂದಿಸಿ ತಂದಿದ್ದರು.

ಮೈಸೂರು: ಮಾದಕವಸ್ತು ಘಟಕದ ಮೇಲೆ ದಾಳಿ

ನವದೆಹಲಿ (ಪಿಟಿಐ): ಕರ್ನಾಟಕದ ಮೈಸೂರಿನಲ್ಲಿರುವ ಮಾದಕ ವಸ್ತುಗಳ ರಹಸ್ಯ ಪ್ರಯೋಗಾಲಯದ ಮೇಲೆ ದಾಳಿ ನಡೆಸಿದ ಮಾದಕವಸ್ತು ನಿಯಂತ್ರಣ ದಳವು ರಾಜಸ್ಥಾನದ ನಾಲ್ವರನ್ನು ಬಂಧಿಸಿ, ₹10 ಕೋಟಿ ಮೌಲ್ಯದ ಮಾದಕವಸ್ತುಗಳನ್ನು ಜಪ್ತಿ ಮಾಡಿದೆ.

35 ಕೆ.ಜಿ ಮೆಫೆಡ್ರೋನ್ ಇದ್ದ ವಾಹನವನ್ನು ಅಧಿಕಾರಿಗಳು ಜ. 28ರಂದು ಗುಜರಾತ್‌ನಲ್ಲಿ ಪತ್ತೆಹಚ್ಚಿದ ಬಳಿಕ ಈ ಬಗ್ಗೆ ತನಿಖೆ ಆರಂಭಗೊಂಡಿತ್ತು. ಮೈಸೂರಿನಲ್ಲಿ ಅವರು ಪ್ರಯೋಗಾಲಯ ನಡೆಸುತ್ತಿರುವುದು ತನಿಖೆಯ ವೇಳೆ ಪತ್ತೆಯಾಗಿತ್ತು.

ಈ ಮಾದಕ ವಸ್ತು ಸಾಗಣೆ ಜಾಲದ ಮಾಸ್ಟರ್‌ಮೈಂಡ್ ಎನ್ನಲಾದ ಮಹೀಂದ್ರ ಕುಮಾರ್ ವಿಷ್ಣೋಯಿ ಮತ್ತು ಇತರ ಮೂವರನ್ನು ಬಂಧಿಸಲಾಗಿದೆ.

ಸ್ವಚ್ಛತೆಗೆ ಬಳಸುವ ರಾಸಾಯನಿಕ ವಸ್ತುಗಳ ತಯಾರಿಕಾ ಘಟಕದ ಹೆಸರಿನಲ್ಲಿ ಆರೋಪಿಗಳು ಪ್ರಯೋಗಾಲಯ ನಿರ್ಮಿಸಿದ್ದರು. ಆರೋಪಿಗಳಲ್ಲಿ ಒಬ್ಬರಾದ ವಿಷ್ಣೋಯಿ ಸಂಬಂಧಿಯು ಕಟ್ಟಡವನ್ನು ಬಾಡಿಗೆಗೆ ನೀಡಿದ್ದರು ಎಂದು ಎನ್‌ಸಿಬಿ ಪ್ರಕಟಣೆ ತಿಳಿಸಿದೆ.

‘₹10 ಕೋಟಿ ಮೌಲ್ಯದ ಮಾದಕವಸ್ತು, ₹25.6 ಲಕ್ಷ ನಗದು, ಒಂದು ಎಸ್‌ಯುವಿ ಮತ್ತು 500 ಕೆ.ಜಿ ರಾಸಾಯನಿಕ ವಸ್ತುಗಳನ್ನು ಜಪ್ತಿ ಮಾಡಲಾಗಿದೆ.

ವಿಷ್ಣೋಯಿ ವಿರುದ್ಧ ರಾಜಸ್ಥಾನದಲ್ಲಿ ಮೂರು ಮತ್ತು ಗುಜರಾತ್ ಒಂದು ಪ್ರಕರಣ ದಾಖಲಾಗಿದೆ ಎಂದು ಎನ್‌ಸಿಬಿ ತಿಳಿಸಿದೆ.

ಸಂಶಯಾಸ್ಪದ ರಾಸಾಯನಿಕ ವಸ್ತು ಪತ್ತೆ

ಮೈಸೂರು: ತಾಲ್ಲೂಕಿನ ಯಾಂದಳ್ಳಿಯ ಸಪ್ತಮಾತೃಕೆ ಬಡಾವಣೆಯಲ್ಲಿ-ರುವ 279ನೇ ನಂಬರಿನ ಮನೆ ಮೇಲೆ ಜಿಲ್ಲೆಯ ದಕ್ಷಿಣ ಪೊಲೀಸ್ ಠಾಣೆಯ ಪೊಲೀಸರು ದಾಳಿ ನಡೆಸಿದ್ದು, ಡ್ರಗ್ಸ್‌ಗೆ ಬಳಸುವ ರಾಸಾಯನಿಕ ವಸ್ತುಗಳು ಪತ್ತೆಯಾಗಿವೆ.

ಕಟ್ಟಡವನ್ನು ಬಾಡಿಗೆಗೆ ಪಡೆದಿದ್ದ, ಈಗ ಎನ್‌ಸಿಬಿ ತಂಡದ ವಶದಲ್ಲಿರುವ ಗಣಪತ್ ಲಾಲ್, ಅಲ್ಲಿ ವಾಸವಿದ್ದ ಭಜನ್‌ಲಾಲ್ ಮತ್ತು ಆತನ ಪತ್ನಿ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಅದು ಗಿರೀಶ್ ಬಾಬು ಎಂಬವರಿಗೆ ಸೇರಿದ ಕಟ್ಟಡ.

ಸಂಕ್ಷಿಪ್ತ ಸುದ್ದಿ

ಪುಸ್ತಕ ಬಹುಮಾನಕ್ಕೆ ಅರ್ಜಿ ಆಹ್ವಾನ

ಶಿವಮೊಗ್ಗ: ಇಲ್ಲಿನ ಕರ್ನಾಟಕ ಸಂಘದಿಂದ 2025ನೇ ಸಾಲಿನ ‘ಪುಸ್ತಕ ಬಹುಮಾನ’ಕ್ಕೆ ಲೇಖಕರು ಮತ್ತು ಪ್ರಕಾಶಕರಿಂದ ಕೃತಿಗಳನ್ನು ಆಹ್ವಾನಿಸಿದೆ.

2025ರಲ್ಲಿ ಮೊದಲ ಮುದ್ರಣವಾಗಿ ಪ್ರಕಟವಾದ ಕಾದಂಬರಿ, ಅನುವಾದ, ಮಹಿಳಾ ಸಾಹಿತ್ಯ, ಅಂಕಣ ಬರಹ, ನಾಟಕ, ಪ್ರವಾಸ ಸಾಹಿತ್ಯ, ಕವನ ಸಂಕಲನ ಸೇರಿದಂತೆ ಒಟ್ಟು 12 ವಿಭಾಗಗಳಲ್ಲಿ ಕೃತಿಗಳನ್ನು ಕಳುಹಿಸಬಹುದು.

ಬಹುಮಾನಕ್ಕೆ ಕಳುಹಿಸುವ ಕೃತಿಗಳು ಮರುಮುದ್ರಣ ಆಗಿರಬಾರದು. ಹಸ್ತಪ್ರತಿ, ಸಂಪಾದಿತ ಕೃತಿಗಳಿಗೆ ಅವಕಾಶ ಇಲ್ಲ. ಈ ಹಿಂದೆ ಬಹುಮಾನ ಪಡೆದವರು ಅದೇ ವಿಭಾಗದಲ್ಲಿ ಸ್ಪರ್ಧಿಸುವಂತಿಲ್ಲ. ಬಹುಮಾನಕ್ಕೆ ಒಟ್ಟು 4 ಪುಸ್ತಕ ಕಳುಹಿಸಬೇಕು. ಕೃತಿ ಕಳುಹಿಸಲು ಮಾರ್ಚ್ 31 ಕಡೆಯ ದಿನ.

ಪುಸ್ತಕಗಳನ್ನು ಕಾರ್ಯದರ್ಶಿ, ಕರ್ನಾಟಕ ಸಂಘ, ಬಿ.ಎಚ್. ರಸ್ತೆ, ಶಿವಮೊಗ್ಗ ಈ ವಿಳಾಸಕ್ಕೆ ಕೊರಿಯರ್ ಅಥವಾ ಅಂಚೆ ಮೂಲಕ ಇಲ್ಲವೇ ಖುದ್ದಾಗಿ ಸಲ್ಲಿಸಬೇಕು. ಆಯ್ಕೆಯಾದ ಕೃತಿಗಳಿಗೆ ₹10,000 ನಗದು ಬಹುಮಾನವಿದೆ. ಮಾಹಿತಿಗೆ 9980159696 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಉತ್ಖನನ ಸ್ಥಳದಲ್ಲಿ ಹಾವು ಗೋಚರ

ಗದಗ: ತಾಲ್ಲೂಕಿನ ಲಕ್ಕುಂಡಿ ಗ್ರಾಮದ ಕೋಟೆ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ನಡೆದಿರುವ ಉತ್ಖನನ ಸ್ಥಳದಲ್ಲಿ ಶುಕ್ರವಾರ ಪ್ರಾಚ್ಯ ಅವಶೇಷಗಳು ಪತ್ತೆಯಾಗಲಿಲ್ಲ. ಆದರೆ, ಉತ್ಖನನ ನಡೆದ ‘ಎ’ ಬ್ಲಾಕ್‌ನಲ್ಲಿ ಹಾವು ಕಾಣಿಸಿಕೊಂಡ ಪರಿಣಾಮ ಕೆಲಕಾಲ ಭಯದ ವಾತಾವರಣ ನಿರ್ಮಾಣವಾಗಿತ್ತು.

ಕೋಟೆ ವೀರಭದ್ರೇಶ್ವರ ದೇವಸ್ಥಾನದ ಆವರಣಕ್ಕೆ ಬಿದ್ದ ನೀರು ಸಿದ್ಧರ ಬಾವಿಗೆ ಹರಿದು ಹೋಗಲು ಅಳವಡಿಸಿರುವ ಪೈಪ್‌ನ ಕೆಳಭಾಗದಲ್ಲಿ ಹಾವು ಕಾಣಿಸಿದೆ. ಇದರಿಂದ ಉತ್ಖನನ ಕೆಲಸದಲ್ಲಿ ತೊಡಗಿದ್ದ ಕಾರ್ಮಿಕರು, ಸ್ಥಳೀಯರು ಹೆದರಿದ್ದಾರೆ.

‘ಗುರುವಾರ ಮೂರು ಹೆಡೆಯ ನಾಗಶಿಲ್ಪ ಪತ್ತೆಯಾಗಿತ್ತು. ಶುಕ್ರವಾರ ಬೆಳಿಗ್ಗೆ ಉತ್ಖನನ ಆರಂಭಿಸಿದ ವೇಳೆ ಹಾವು ಕಾಣಿಸಿತು. ಎರಡೂವರೆ ಅಡಿ ಉದ್ದದ ಹಾವನ್ನು ಉತ್ಖನನ ಮೇಲ್ವಿಚಾರಕ ಸಿಬ್ಬಂದಿ ರಕ್ಷಣೆ ಮಾಡಿದರು.

‘ವಿಭಾಗಕ್ಕೊಂದು ಹಸ್ತಪ್ರತಿ ಸಂಗ್ರಹಾಲಯ ತೆರೆಯಲಿ’


ಮಲ್ಲೇಪುರಂ ವೆಂಕಟೇಶ

ಬಾಗಲಕೋಟೆ: ‘ಹಸ್ತಪ್ರತಿಗಳು ನಾಡಿನ ಆಸ್ತಿ. ರಾಜ್ಯ ಸರ್ಕಾರವು ಕಂದಾಯ ವಿಭಾಗಕ್ಕೊಂದು ಹಸ್ತಪ್ರತಿಗಳ ಸಂಗ್ರಹಾಲಯ ತೆರೆಯುವುದರ ಜೊತೆಗೆ ಹಸ್ತಪ್ರತಿ ಅಧ್ಯಯನ ಕೇಂದ್ರ ಆರಂಭಿಸಬೇಕು’ ಎಂದು ಸಾಹಿತಿ ಪ್ರೊ. ಮಲ್ಲೇಪುರಂ ವೆಂಕಟೇಶ ಹೇಳಿದರು.

ಹಂಪಿ ಕನ್ನಡ ವಿ.ವಿ ಹಸ್ತಪ್ರತಿಶಾಸ್ತ್ರ ವಿಭಾಗ ಮತ್ತು ನವನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಹಯೋಗದಲ್ಲಿ ಶುಕ್ರವಾರ ಆರಂಭಗೊಂಡ ಅಖಿಲ ಕರ್ನಾಟಕ 22ನೇ ಹಸ್ತಪ್ರತಿ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ‘ಸರ್ಕಾರವು ಹಸ್ತಪ್ರತಿಯ ಸರ್ವೇಕ್ಷಣೆ, ಸಂಗ್ರಹಣೆ, ಸಂರಕ್ಷಣೆಗೆ ಮುಂದಾಗಬೇಕು’ ಎಂದರು.

‘ಅನುದಾನರಹಿತ ಹಸ್ತಪ್ರತಿ ಭಂಡಾರಗಳಿಗೆ ಸಂಗ್ರಹ, ಸಂರಕ್ಷಣೆ, ಪೋಷಣೆ ಮತ್ತು ಪ್ರಕಟಣೆಗೆ ಪ್ರತಿ ವರ್ಷ ಬಜೆಟ್‌ನಲ್ಲಿ ಅನುದಾನ ತೆಗೆದಿರಿಸಬೇಕು’ ಎಂದು ಹೇಳಿದರು.

‘ಪ್ರಾಚೀನ ಹಸ್ತಪ್ರತಿಗಳ ಮೂಲಕ ಜ್ಞಾನ ಪರಂಪರೆ ಅರಿಯಬಹುದು ಮತ್ತು ಸಂರಕ್ಷಿಸಬಹುದು. ಈಗಿನ ಕಾಲದ ಶ್ರೇಷ್ಠ ಕವಿಗಳು ಮತ್ತು ವಿದ್ವಾಂಸರ ಪ್ರಾತಿನಿಧಿಕ ಬರಹಗಳನ್ನೂ ಆ ಸಂಗ್ರಹಾಲಯಗಳು ಒಳಗೊಂಡಿರಬೇಕು’ ಎಂದರು.

ಮೂವರ ನಾಪತ್ತೆ, ಕೊಲೆ ಶಂಕೆ


ಕೊಟ್ಟೂರು (ವಿಜಯನಗರ ಜಿಲ್ಲೆ): ಪಟ್ಟಣದ ಲಾಲ್ ಬಹಾದ್ದೂರ್ ಶಾಸ್ತ್ರಿ ಬಡಾವಣೆಯಲ್ಲಿ ಬಾಡಿಗೆ ಮನೆಯಲ್ಲಿ ನೆಲಸಿದ್ದ ಯುವಕನೊಬ್ಬ ತನ್ನ ಅಪ್ಪ, ಅಮ್ಮ ಮತ್ತು ತಂಗಿ ನಾಪತ್ತೆಯಾಗಿದ್ದಾರೆ ಎಂದು ಬೆಂಗಳೂರಿನ ತಿಲಕನಗರ ಠಾಣೆಯಲ್ಲಿ ದೂರು ನೀಡಿದ್ದು, ಅವರಿಗಾಗಿ ತೀವ್ರ ಹುಡುಕಾಟ ಆರಂಭವಾಗಿದೆ.

‘ನನ್ನ ತಂದೆ ಭೀಮರಾಜ್ (48), ತಾಯಿ ಜಯಮ್ಮ (44), ತಂಗಿ ಅಮೃತಾ (18) ಅವರು ಬೆಂಗಳೂರಿನ ಜಯದೇವ ಆಸ್ಪತ್ರೆಗೆ ಹೋದವರು ನಾಪತ್ತೆಯಾಗಿದ್ದಾರೆ’ ಎಂದು ಟೈರ್ ರಿಪೇರಿ ಕೆಲಸ ಮಾಡುವ ಅಕ್ಷಯ ಕುಮಾರ್ ದೂರಿನಲ್ಲಿ ತಿಳಿಸಿದ್ದ. ಆದರೆ ಆಸ್ಪತ್ರೆಯಲ್ಲಿ ವಿಚಾರಿಸಿದಾಗ ಅಂತಹ ವ್ಯಕ್ತಿಗಳು ಬಂದೇ ಇಲ್ಲ ಎಂದು ಗೊತ್ತಾಗಿತ್ತು. ಹೀಗಾಗಿ ಪೊಲೀಸರು ಇದೀಗ ಯುವಕನನ್ನು ವಿಚಾರಣೆಗೆ ಒಳಪಡಿಸಿದ್ದು, ಕೊಟ್ಟೂರಿನ ಮನೆಯಲ್ಲಿ ಆತನ ಉಪಸ್ಥಿತಿಯಲ್ಲೇ ತಪಾಸಣೆ ಮಾಡಲು ಮುಂದಾಗಿದ್ದಾರೆ.

ವಿಜಯನಗರ ಜಿಲ್ಲಾ ಪೊಲೀಸರು ಕೊಟ್ಟೂರಿನ ಮನೆಯಲ್ಲಿ ತಪಾಸಣೆ ನಡೆಸಿದ್ದು, ಸದ್ಯ ಈ ಮೂವರ ಸುಳಿವು ಸಿಕ್ಕಿಲ್ಲ. ಎಸ್‌ಪಿ ಎಸ್.ಜಾಹ್ನವಿ ಸಹಿತ ಹಿರಿಯ ಅಧಿಕಾರಿಗಳು ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದಾರೆ. ಈ ಮೂವರು ಕೊಲೆಯಾಗಿರಬಹುದು ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

ಹಿನ್ನೆಲೆ: ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ದೊಡ್ಡಕಿಟ್ಟದಾಳ ಗ್ರಾಮದ ಅಕ್ಷಯ ಕುಮಾರ್ ಜಗಳೂರಿನಲ್ಲಿ ಟೈರ್ ರಿಪೇರಿ ಕೆಲಸ ಮಾಡುತ್ತಿದ್ದ. ಒಂದೂವರೆ ವರ್ಷದ ಹಿಂದೆ ಕೊಟ್ಟೂರಿಗೆ ಬಂದು ಹರಪನಹಳ್ಳಿ ರಸ್ತೆಯಲ್ಲಿ ಟೈರ್ ರಿಪೇರಿ ಅಂಗಡಿ ಇಟ್ಟುಕೊಂಡಿದ್ದ. ಕಳೆದ ನಾಲ್ಕು ದಿನಗಳಿಂದ ಮನೆಯಲ್ಲಿ ಯಾರ ಓಡಾಟವೂ ಕಾಣಿಸಿರಲಿಲ್ಲ ಎಂದು ಹೇಳಲಾಗಿದೆ.

ದೇಶವ್ಯಾಪಿ ಮುಷ್ಕರ ಫೆ. 12ಕ್ಕೆ


ಎಸ್‌.ವರಲಕ್ಷ್ಮಿ

ವಿಜಯಪುರ: ‘ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಜಾರಿ ಮಾಡಿರುವ ಕಾರ್ಮಿಕ ವಿರೋಧಿ ನಾಲ್ಕು ಸಂಹಿತೆ ಹಿಂಪಡೆಯುವಂತೆ ಆಗ್ರಹಿಸಿ ಫೆ. 12ರಂದು ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಲಾಗಿದೆ’ ಎಂದು ಸಿಐಟಿಯು ಸಂಘಟನೆಯ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎಸ್. ವರಲಕ್ಷ್ಮಿ ತಿಳಿಸಿದರು.

‘ಸಂಘಟಿತ, ಅಸಂಘಟಿತ ಕಾರ್ಮಿಕರು, ರೈತರು, ಕೃಷಿ ಕೂಲಿಕಾರರು, ಮಹಿಳೆಯರು, ಯುವಜನ, ವಿದ್ಯಾರ್ಥಿ ಸಂಘಟನೆಗಳು ಮುಷ್ಕರದಲ್ಲಿ ಪಾಲ್ಗೊಳ್ಳಲಿವೆ’ ಎಂದು ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ರಾಜ್ಯ ಕಾಂಗ್ರೆಸ್ ಸರ್ಕಾರ ಸಹ ಕಾರ್ಮಿಕರು ಹಾಗೂ ಕಾರ್ಮಿಕರ ಸಂಘಟನೆಗಳ ಅಭಿಪ್ರಾಯ ಪಡೆಯದೇ ಕಾರ್ಮಿಕ ನಿಯಮಗಳನ್ನು ರೂಪಿಸುತ್ತಿದೆ. ಆದ್ದರಿಂದ ಪ್ರಧಾನಿ ಮೋದಿ ಸರ್ಕಾರ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರದಲ್ಲಿ ಯಾವುದೇ ವ್ಯತ್ಯಾಸ ಇಲ್ಲ’ ಎಂದು ಹೇಳಿದರು.

ಸರ್ಕಾರಕ್ಕೆ ಶಿಫಾರಸು ಮಾಡಲಿರುವ ಪ್ರೊ.ಬರಗೂರು ನೇತೃತ್ವದ ಸಮಿತಿ

ಅಧ್ಯಯನ ಪೀಠಗಳಿಗೆ ಕನಿಷ್ಠ 1 ಕೋಟಿ

• ಎ.ಎಂ.ಸುರೇಶ

ಬೆಂಗಳೂರು: ಅನುದಾನದ ಕೊರತೆಯಿಂದ ನಲುಗುತ್ತಿರುವ ವಿಶ್ವವಿದ್ಯಾಲಯಗಳ ಅಧ್ಯಯನ ಪೀಠಗಳಿಗೆ ಕನಿಷ್ಠ ತಲಾ ಒಂದು ಕೋಟಿ ಅನುದಾನ ನೀಡಬೇಕು ಹಾಗೂ ಪೀಠಗಳನ್ನು ಆರಂಭಿಸುವ ಬಗ್ಗೆ ಮಾರ್ಗಸೂಚಿ ರೂಪಿಸಬೇಕು ಎಂದು ಶಿಫಾರಸು ಮಾಡಲು ಸರ್ಕಾರ ರಚಿಸಿದ್ದ ಸಮಿತಿ ತಯಾರಿ ನಡೆಸಿದೆ.

ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ 110ಕ್ಕೂ ಅಧಿಕ ಅಧ್ಯಯನ ಪೀಠಗಳಿವೆ. ಅವುಗಳ ಸ್ಥಿತಿಗತಿ ಬಗ್ಗೆ ಅಧ್ಯಯನ ಮಾಡಿ, ಬಲವರ್ಧನೆಗೆ ಶಿಫಾರಸು ಮಾಡಲು ಪ್ರೊ.ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆಯಲ್ಲಿ ಸರ್ಕಾರ ಸಮಿತಿ ರಚಿಸಿದೆ.

ಈ ಬಗ್ಗೆ ಅಧ್ಯಯನ ನಡೆಸಿರುವ ಸಮಿತಿ ಸದ್ಯದಲ್ಲೇ ವರದಿ ನೀಡಲಿದ್ದು, ಪೀಠಗಳ ಕಾರ್ಯವೈಖರಿಯ ಸುಧಾರಣೆಗೆ ಹಲವು ಶಿಫಾರಸುಗಳನ್ನು ಮಾಡಲು ಉದ್ದೇಶಿಸಿದೆ ಎಂದು ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ವಿವಿಧ ವಿಶ್ವವಿದ್ಯಾಲಯಗಳಲ್ಲಿ ಇರುವ ಅಧ್ಯಯನ ಪೀಠಗಳ ಸ್ಥಿತಿಗತಿ ಬಗ್ಗೆ ಕುಲಪತಿ ಹಾಗೂ ಕುಲಸಚಿವರಿಂದ ಸಮಿತಿಯು ಪ್ರಶ್ನಾವಳಿ ರೂಪದಲ್ಲಿ ಈಗಾಗಲೇ ಮಾಹಿತಿ ತರಿಸಿಕೊಂಡಿದೆ.

ಈಚೆಗೆ ನಡೆದ ಸಮಿತಿ ಸಭೆಯಲ್ಲಿ ಈ ಬಗ್ಗೆ ವಿವರವಾಗಿ ಚರ್ಚೆ ನಡೆದಿದ್ದು, ಪೀಠಗಳ ವಸ್ತುಸ್ಥಿತಿಯನ್ನು ಕುಲಪತಿಗಳು ಸಮಿತಿಯ ಗಮನಕ್ಕೆ ತಂದಿದ್ದಾರೆ ಎಂದು ಗೊತ್ತಾಗಿದೆ.

‘ಕೆಲವು ಪೀಠಗಳಷ್ಟೇ ಚೆನ್ನಾಗಿ ಕಾರ್ಯನಿರ್ವಹಿಸುತ್ತಿವೆ. ಬಹುತೇಕ ಪೀಠಗಳು ಹೆಸರಿಗಷ್ಟೇ ಇವೆ. ಅನುದಾನ ಹಾಗೂ ಸಿಬ್ಬಂದಿ ಕೊರತೆಯಿಂದ ಯಾವುದೇ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಾಧ್ಯವಾಗುತ್ತಿಲ್ಲ. ರಾಜಕೀಯ ಒತ್ತಡ, ಸಮುದಾಯಗಳ ಬೇಡಿಕೆ ಸೇರಿದಂತೆ ಹಲವು ಕಾರಣಗಳಿಂದಾಗಿ ಅಗತ್ಯಕ್ಕಿಂತ ಹೆಚ್ಚು ಪೀಠಗಳು ರಚನೆಯಾಗಿವೆ. ಆದರೆ, ಅವುಗಳನ್ನು ಈಗ ಮುಚ್ಚಲು ಸಾಧ್ಯವಿಲ್ಲ’ ಎಂಬ ನಿರ್ಧಾರಕ್ಕೆ ಬರಲಾಗಿದೆ.

‘ಕೆಲವು ಪೀಠಗಳಿಗೆ ₹5 ಲಕ್ಷ ನೀಡಿದ್ದರೆ, ಕೆಲವೊಂದಕ್ಕೆ ₹1 ಕೋಟಿವರೆಗೂ ಅನುದಾನ ನೀಡಲಾಗಿದೆ. ಅನುದಾನ ನೀಡುವಲ್ಲಿ ತಾರತಮ್ಯವಾಗಿದೆ. ಸರ್ಕಾರ ನೀಡುವ ಹಣವನ್ನು ಬ್ಯಾಂಕಿನಲ್ಲಿ ಇಡುಗಂಟು ಇಟ್ಟು, ಬರುವ ಬಡ್ಡಿಯಲ್ಲಿ ಪೀಠಗಳನ್ನು ನಡೆಸಬೇಕು ಎಂದು ನಿಯಮ ಇದೆ. ಪೀಠಗಳು ಸಕ್ರಿಯವಾಗಿ ಕಾರ್ಯನಿರ್ವಹಿಸದೆ ಇರುವುದಕ್ಕೆ ಸಂಪನ್ಮೂಲಗಳ ಕೊರತೆ ಪ್ರಮುಖ ಕಾರಣವಾಗಿದೆ. ಹೀಗಾಗಿ ಪೀಠಗಳಿಗೆ ಏಕರೂಪವಾಗಿ ಅನುದಾನ ನಿಗದಿ ಮಾಡುವ ಅಗತ್ಯವಿದೆ’ ಎಂಬ ತೀರ್ಮಾನಕ್ಕೆ ಸಮಿತಿಯು ಬಂದಿದೆ.

ಹೊಸದಾಗಿ ಆರಂಭವಾಗಿರುವ ವಿಶ್ವವಿದ್ಯಾಲಯಗಳಲ್ಲಿ ಯಾವುದೇ ಪೀಠಗಳು ಇಲ್ಲ. ಆದರೆ, ಹಳೆಯ ವಿಶ್ವವಿದ್ಯಾಲಯಗಳಲ್ಲಿ ಹೆಚ್ಚು ಪೀಠಗಳು ಇವೆ. ಕೆಲವು ವಿ.ವಿ.ಗಳಲ್ಲಿ 18–20 ಪೀಠಗಳಿವೆ. ಇದಲ್ಲದೆ ಕೆಲವು ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಕೇಂದ್ರಗಳು/ಸಂಸ್ಥೆಗಳು ಇವೆ. ಆದರೆ, ಇವು ಸಮಿತಿಯ ಅಧ್ಯಯನ ವ್ಯಾಪ್ತಿಗೆ ಬರುವುದಿಲ್ಲ. ಪೀಠಗಳಿಗೆ ಸೀಮಿತವಾಗಿ ಶಿಫಾರಸು ಮಾಡಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಈಗಿರುವ ಪೀಠಗಳ ಬಲವರ್ಧನೆ, ಅರ್ಥಪೂರ್ಣ ಕಾರ್ಯಕ್ರಮಗಳ ಆಯೋಜನೆ ಮಾಡುವುದು ಸೇರಿದಂತೆ 5–6 ಶಿಫಾರಸುಗಳನ್ನು ಮಾಡುವ ಸಾಧ್ಯತೆ ಇದೆ.

ಹಂಪಿ ವಿಶ್ವವಿದ್ಯಾಲಯದ ಡಾ.ರಾಜ್‌ಕುಮಾರ್ ಅಧ್ಯಯನ ಪೀಠ, ಮಂಗಳೂರು ವಿಶ್ವವಿದ್ಯಾಲಯದ ನಾರಾಯಣ ಗುರು ಅಧ್ಯಯನ ಪೀಠ, ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಅಧ್ಯಯನ ಪೀಠ, ವಿವಿಧ ವಿಶ್ವವಿದ್ಯಾಲಯಗಳಲ್ಲಿ ಇರುವ ಅಂಬೇಡ್ಕರ್ ಅಧ್ಯಯನ ಪೀಠಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಆಯಾ ವಿಶ್ವವಿದ್ಯಾಲಯದ ಕುಲಪತಿಗಳು ಸಮಿತಿಗೆ ಮಾಹಿತಿ ನೀಡಿದ್ದಾರೆ.

ಅಧ್ಯಯನ ಪೀಠಗಳ ಕುರಿತು ತುಮಕೂರು ವಿ.ವಿ ವಿಶ್ರಾಂತ ಕುಲಪತಿ ಓ.ಅನಂತರಾಮಯ್ಯ ಅವರು ಹಿಂದೆ ಸಲ್ಲಿಸಿದ ವರದಿ ಪರಿಶೀಲಿಸಿ, ಪರಿಷ್ಕೃತ ವರದಿ ನೀಡಲು ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದ್ದು, ಸಾಹಿತಿಗಳಾದ ನಟರಾಜ್ ಹುಳಿಯಾರ್, ವಸುಂಧರಾ ಭೂಪತಿ ಸದಸ್ಯರಾಗಿದ್ದಾರೆ.

ಮುಖ್ಯಾಂಶಗಳು

- ಹೊಸ ವಿ.ವಿ.ಗಳಲ್ಲಿ ಪೀಠಗಳು ಇಲ್ಲ
- ಕೆಲವು ವಿ.ವಿ.ಗಳಲ್ಲಿ 18–20 ಪೀಠಗಳ ರಚನೆ
- ಅನುದಾನ ಇಲ್ಲದೆ ಸೊರಗುತ್ತಿರುವ ಪೀಠಗಳು



> ಪೀಠಗಳಿಗೆ ಏಕರೂಪ ಅನುದಾನದ ಅಗತ್ಯವಿದೆ. ಈಗಾಗಲೇ ವಿ.ವಿ.ಗಳಿಂದ ಮಾಹಿತಿ ಸಂಗ್ರಹಿಸಿದ್ದು ಬಜೆಟ್ ಮಂಡನೆಗೂ ಮೊದಲೇ ಸಮಿತಿಯು ಸರ್ಕಾರಕ್ಕೆ ವರದಿ ನೀಡಲಿದೆ
> **ಪ್ರೊ.ಬರಗೂರು ರಾಮಚಂದ್ರಪ್ಪ,** ಸಮಿತಿಯ ಅಧ್ಯಕ್ಷರು

ಗಾಂಧಿ ವಿಚಾರ ಅಳಿಸಲಾಗದು: ರಾಹುಲ್

ಹುತಾತ್ಮರ ದಿನದಂದು ಮಹಾತ್ಮ ಗಾಂಧಿ ಸ್ಮರಣೆ, ಗೌರವ ಸಮರ್ಪಣೆ





‘ಹುತಾತ್ಮರ ದಿನ’ದ ಅಂಗವಾಗಿ ಲೋಕಸಭಾ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಶುಕ್ರವಾರ ನವದೆಹಲಿಯ ‘ಗಾಂಧಿ ಸ್ಮೃತಿ’ಯಲ್ಲಿ ಗೌರವ ಅರ್ಪಿಸಿದರು (ಎಡಚಿತ್ರ). ಮಹಾತ್ಮ ಗಾಂಧಿ ಅವರ ಪುಣ್ಯತಿಥಿ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ದೆಹಲಿಯ ರಾಜ್‌ಘಾಟ್‌ನಲ್ಲಿ ಪುಷ್ಪ ನಮನ ಸಲ್ಲಿಸಿದರು – ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಮಹಾತ್ಮ ಗಾಂಧಿ ಅವರು ಕೇವಲ ಒಬ್ಬ ವ್ಯಕ್ತಿಯಲ್ಲ, ‘ಭಾರತದ ಅಮರ ಆತ್ಮ’. ಅವರ ವಿಚಾರ, ಸಿದ್ಧಾಂತವನ್ನು ಅಳಿಸಲು ವಿಭಿನ್ನ ಸಮಯಗಳಲ್ಲಿ ಹಲವರು ನಡೆಸಿದ ಪ್ರಯತ್ನಗಳು ವಿಫಲವಾಗಿವೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

‘ಸ್ವಾತಂತ್ರ್ಯದ ಜತೆಗೆ ಸತ್ಯದ ಶಕ್ತಿಯನ್ನು ಗಾಂಧಿ ಸಾರಿದ್ದಾರೆ. ಸತ್ಯದ ಶಕ್ತಿಯು ಅಧಿಕಾರದ ಶಕ್ತಿಗಿಂತ ದೊಡ್ಡದು ಎಂಬ ಮೂಲಭೂತ ತತ್ವವನ್ನು ಅವರು ದೇಶಕ್ಕೆ ನೀಡಿದ್ದಾರೆ’ ಎಂದು ರಾಹುಲ್ ಸ್ಮರಿಸಿದರು.

‘ಒಂದು ಸಾಮ್ರಾಜ್ಯ, ದ್ವೇಷದ ಸಿದ್ಧಾಂತ ಮತ್ತು ಅಧಿಕಾರದಲ್ಲಿದ್ದವರ ದುರಹಂಕಾರವು ವಿಭಿನ್ನ ಸಮಯಗಳಲ್ಲಿ ಗಾಂಧೀಜಿ ಅವರನ್ನು ಅಳಿಸಲು ವಿಫಲ ಯತ್ನ ನಡೆಸಿವೆ’ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಗಾಂಧೀಜಿ ಅವರು ಭಾರತೀಯರ ಮನದಲ್ಲಿ ಅಮರವಾಗಿರುವ ಕಾರಣ, ಅವರ ಚಿಂತನೆಗಳನ್ನು ಯಾರಿಂದಲೂ ಅಳಿಸಲು ಸಾಧ್ಯವಿಲ್ಲ ಎಂದು ಅವರು ಪ್ರತಿಪಾದಿಸಿದ್ದಾರೆ.

ಹುತಾತ್ಮರ ದಿನ ರಾಷ್ಟ್ರಪಿತನಿಗೆ ನಮನಗಳನ್ನು ಸಲ್ಲಿಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ‘ಬಾಪು ಅವರು ಸತ್ಯ, ಅಹಿಂಸೆ ಮತ್ತು ಕರುಣೆಯ ಪ್ರತಿಪಾದಕರಾಗಿದ್ದರು’ ಎಂದು ಸ್ಮರಿಸಿದ್ದಾರೆ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರೂ ಗೌರವ ಅರ್ಪಿಸಿದ್ದಾರೆ.

ಆರ್‌ಎಸ್‌ಎಸ್ ವಿರುದ್ಧ ಟೀಕೆ: ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಮತ್ತು ಗೃಹ ಸಚಿವ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ಹಿಂದೂ ಮಹಾಸಭಾ ಮತ್ತು ಆರ್‌ಎಸ್‌ಎಸ್ ಚಟುವಟಿಕೆ ಖಂಡಿಸಿ ಶ್ಯಾಮ ಪ್ರಸಾದ್ ಮುಖರ್ಜಿ ಅವರಿಗೆ 1948ರಲ್ಲಿ ಬರೆದಿದ್ದ ಎರಡು ಪ್ರತ್ಯೇಕ ಪತ್ರಗಳನ್ನು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ‘ಎಕ್ಸ್’ನಲ್ಲಿ ಹಂಚಿಕೊಂಡು ಆರ್‌ಎಸ್‌ಎಸ್ ಅನ್ನು ಟೀಕಿಸಿದ್ದಾರೆ.

ಗಾಂಧಿ ಅವರು ಹತ್ಯೆಯಾದ 1948ರ ಜನವರಿ 30ರಂದು ನೆಹರೂ ಅವರು ಆಲ್ ಇಂಡಿಯಾ ರೇಡಿಯೊದಲ್ಲಿ ಮಾಡಿದ ಭಾಷಣದ ಲಿಂಕ್ ಅನ್ನೂ ಅವರು ಹಂಚಿಕೊಂಡಿದ್ದಾರೆ.

ನಿಷೇಧದ ಆದೇಶವನ್ನು ಧಿಕ್ಕರಿಸಿ ಹಿಂದೂ ಮಹಾಸಭಾವು ಪುಣೆ, ಅಹ್ಮದ್‌ನಗರ, ದೆಹಲಿಯಲ್ಲಿ ಸಭೆಗಳನ್ನು ನಡೆಸಿದೆ ಎಂದು ಈ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

‘ಮಹಾತ್ಮ ಗಾಂಧಿಯವರು ಒಂದು ಅಡಚಣೆಯಾಗಿದ್ದಾರೆ. ಅವರು ಬೇಗ ಸತ್ತಷ್ಟೂ ದೇಶಕ್ಕೆ ಒಳ್ಳೆಯದು ಎಂಬ ಭಾಷಣಗಳನ್ನು ಆ ಸಭೆಗಳಲ್ಲಿ ಮಾಡಲಾಗಿತ್ತು. ಆರ್‌ಎಸ್‌ಎಸ್ ಇನ್ನೂ ಕೆಟ್ಟದಾಗಿ ವರ್ತಿಸಿದೆ ಮತ್ತು ಅದರ ಆಕ್ಷೇಪಾರ್ಹ ಚಟುವಟಿಕೆಗಳ ಬಗ್ಗೆ ಸಾಕಷ್ಟು ಮಾಹಿತಿಯನ್ನು ಸಂಗ್ರಹಿಸಿದ್ದೇವೆ’ ಎಂದು ನೆಹರೂ ತಮ್ಮ ಪತ್ರದಲ್ಲಿ ತಿಳಿಸಿದ್ದರು. ಈ ಪತ್ರದ ‘ಸ್ಕ್ರೀನ್‌ಶಾಟ್’ ಅನ್ನು ಜೈರಾಮ್ ಹಂಚಿಕೊಂಡಿದ್ದಾರೆ.

ಬಾಪು ಸ್ಮರಿಸಿದ ಮೋದಿ

ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ ಪುಣ್ಯತಿಥಿ ಪ್ರಯುಕ್ತ ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ರಾಜ್‌ಘಾಟ್‌ಗೆ ತೆರಳಿ ಪುಷ್ಪನಮನ ಸಲ್ಲಿಸಿದರು.

‘ಗಾಂಧಿ ಅವರು ಸ್ವದೇಶಿ ಪರಿಕಲ್ಪನೆಯ ಪ್ರಬಲ ಪ್ರತಿಪಾದಕರಾಗಿದ್ದರು. ಈಗ ಸ್ವಾವಲಂಬಿ ಭಾರತ ಮತ್ತು ದೇಶದ ಅಭಿವೃದ್ಧಿಗೆ ಸ್ವದೇಶಿ ವಿಚಾರವು ಮೂಲಭೂತ ಆಧಾರವಾಗಿದೆ’ ಎಂದು ಹೇಳಿದ್ದಾರೆ.

‘ಗಾಂಧಿ ಅವರ ವ್ಯಕ್ತಿತ್ವ ಮತ್ತು ಅವರು ನಿರ್ವಹಿಸಿದ ಜವಾಬ್ದಾರಿಗಳು ದೇಶದ ಜನರಿಗೆ ಕರ್ತವ್ಯದ ಪಥದಲ್ಲಿ ಸಾಗಲು ಸ್ಫೂರ್ತಿದಾಯಕವಾಗಿದೆ’ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಅಗೌರವ ತೋರಿದ ರಾಹುಲ್: ಶಾ

ಡಿಬ್ರುಗಢ (ಪಿಟಿಐ): ಗಣರಾಜ್ಯೋತ್ಸವದ ಅಂಗವಾಗಿ ರಾಷ್ಟ್ರಪತಿ ನಿವಾಸದಲ್ಲಿ ನಡೆದ ಸತ್ಕಾರಕೂಟದಲ್ಲಿ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಅಸ್ಸಾಂನ ಸಾಂಪ್ರದಾಯಿಕ ವಸ್ತ್ರ ‘ಗಾಮೋಸಾ’ (ಸ್ಕಾರ್ಫ್) ಧರಿಸದೆ ಈಶಾನ್ಯ ರಾಜ್ಯಗಳ ಸಂಸ್ಕೃತಿಗೆ ಅಗೌರವ ತೋರಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಆರೋಪಿಸಿದ್ದಾರೆ.

ವಿದೇಶಿ ಗಣ್ಯರು ಸೇರಿದಂತೆ ರಾಷ್ಟ್ರಪತಿ ನಿವಾಸದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲ ಅತಿಥಿಗಳಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ‘ಗಾಮೋಸಾ’ ನೀಡಿದ್ದರು. ಕೈಮಗ್ಗದಲ್ಲಿ ನೇಯ್ದ ಗಾಮೋಸಾ ಅಸ್ಸಾಂನ ಸಂಸ್ಕೃತಿಯ ಸಂಕೇತವಾಗಿದೆ. ಆದರೆ, ಅತಿಥಿಗಳಲ್ಲಿ ರಾಹುಲ್ ಮಾತ್ರ ಇದನ್ನು ಧರಿಸಲು ನಿರಾಕರಿಸಿದರು ಎಂದು ಶುಕ್ರವಾರ ಇಲ್ಲಿನ ಖಾನಿಕರ್ ಕವಾಯತು ಮೈದಾನದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಅಮಿತ್ ಶಾ ಹೇಳಿದರು.

‘ರಾಹುಲ್ ಗಾಂಧಿ ತಮ್ಮ ಮನಬಂದಂತೆ ಮಾಡಬಹುದು. ಆದರೆ, ಎಲ್ಲಿಯವರೆಗೆ ಬಿಜೆಪಿ ಅಧಿಕಾರದಲ್ಲಿ ಇರುತ್ತದೆಯೋ ಅಲ್ಲಿಯವರೆಗೆ, ಈಶಾನ್ಯ ಸಂಸ್ಕೃತಿಗೆ ಅಗೌರವ ತೋರುವುದನ್ನು ಸಹಿಸುವುದಿಲ್ಲ’ ಎಂದರು.

ಪಿ.ಟಿ.ಉಷಾ ಪತಿ ಶ್ರೀನಿವಾಸನ್ ನಿಧನ



ಶ್ರೀನಿವಾಸನ್

ಕೋಯಿಕ್ಕೋಡ್ (ಕೇರಳ) (ಪಿಟಿಐ): ಭಾರತ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷೆ ಹಾಗೂ ರಾಜ್ಯಸಭಾ ಸದಸ್ಯರೂ ಆಗಿರುವ ಪಿ.ಟಿ.ಉಷಾ ಅವರ ಪತಿ ಶ್ರೀನಿವಾಸನ್ (67) ಅವರು ಶುಕ್ರವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ ಉಜ್ವಲ್ ಇದ್ದಾರೆ.

‘ಕೇಂದ್ರ ಸರ್ಕಾರದ ನಿವೃತ್ತ ನೌಕರನಾಗಿರುವ ಶ್ರೀನಿವಾಸನ್ ಅವರು ಶುಕ್ರವಾರ ಮುಂಜಾನೆ ಕುಸಿದುಬಿದ್ದರು. ಅವರನ್ನು ತಕ್ಷಣವೇ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ, ಅಷ್ಟರಲ್ಲಿ ಕೊನೆ ಯುಸಿರೆಳೆದರು’ ಎಂದು ಕುಟುಂಬದ ಮೂಲಗಳು ಪಿಟಿಐಗೆ ತಿಳಿಸಿವೆ.

‘ಪಯ್ಯೋಳಿ ಎಕ್ಸ್‌ಪ್ರೆಸ್’ ಖ್ಯಾತಿಯ ಉಷಾ ಅವರು ಕ್ರೀಡಾ ಕ್ಷೇತ್ರದಲ್ಲಿ ಮಾಡಿರುವ ಸಾಧನೆಗಳಿಗೆ ಹಾಗೂ ಅವರ ರಾಜಕೀಯ ಬೆಳವಣಿಗೆಗೆ ಶ್ರೀನಿವಾಸನ್ ಅವರು ಪ್ರೇರಕ ಶಕ್ತಿಯಾಗಿದ್ದರು. ಪತ್ನಿಗೆ ‘ಆಧಾರ ಸ್ತಂಭ’ದಂತೆ ನಿರಂತರವಾಗಿ ಬೆಂಬಲ ನೀಡಿದ್ದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಉಷಾ ಅವರಿಗೆ ಕರೆ ಮಾಡಿ ಸಾಂತ್ವನ ಹೇಳಿದ್ದಾರೆ.

ಚಿಟಿಕೆ ಸುದ್ದಿ

ಅಕೋಲಾ ಪಾಲಿಕೆಗೆ ಬಿಜೆಪಿಯ ಶಾರದಾ ಮೇಯರ್

ನಾಗ್ಪುರ (ಪಿಟಿಐ): ಮಹಾರಾಷ್ಟ್ರದ ಅಕೋಲಾ ಮಹಾನಗರ ಪಾಲಿಕೆಯ ನೂತನ ಮೇಯರ್ ಆಗಿ ಬಿಜೆಪಿಯ ಶಾರದಾ ಖೇಡ್ಕರ್ ಅವರು ಶುಕ್ರವಾರ ಆಯ್ಕೆಯಾದರು.

ಸುದ್ದಿಗಾರರೊಂದಿಗೆ ಮಾತನಾಡಿದ ಪಾಲಿಕೆ ಆಯುಕ್ತ ಸುನೀಲ್ ಲಹಾನೆ, ‘ಪಾಲಿಕೆ ಸದಸ್ಯರು, ಮೇಯರ್ ಸ್ಥಾನಕ್ಕೆ ಖೇಡ್ಕರ್ ಹಾಗೂ ಉಪಮೇಯರ್ ಸ್ಥಾನಕ್ಕೆ ಅಮೋಲ್ ಗೊಗೆ ಅವರನ್ನು ಆಯ್ಕೆ ಮಾಡಿದ್ದಾರೆ’ ಎಂದರು.

ಖೇಡ್ಕರ್ ಅವರು 45 ಮತಗಳನ್ನು ಪಡೆದರೆ, ಇವರ ಪ್ರತಿಸ್ಪರ್ಧಿ ಅಭ್ಯರ್ಥಿ ಶಿವಸೇನಾದ (ಉದ್ಧವ್ ಠಾಕ್ರೆ ಬಣ) ಸುರೇಖಾ ಕಾಳೆ ಅವರು 32 ಮತಗಳನ್ನು ಪಡೆದರು. ಬಿಜೆಪಿಯ ಗೊಗೆ ಅವರ ಎದುರು ಕಾಂಗ್ರೆಸ್‌ನ ಅಜಾದ್ ಖಾನ್ ಅವರು 32 ಮತ ಪಡೆದು ಸೋಲನುಭವಿಸಿದರು.

ನಿಷೇಧಿತ ಸಂಘಟನೆಯ ಮೂವರು ಸೆರೆ

ಇಂಫಾಲ (ಪಿಟಿಐ): ಮಣಿಪುರದ ಪೂರ್ವ ಇಂಫಾಲ ಜಿಲ್ಲೆಯಲ್ಲಿ, ನಿಷೇಧಿತ ಸಂಘಟನೆಗಳಿಗೆ ಸೇರಿದ ಮೂವರು ಸದಸ್ಯರನ್ನು ಭದ್ರತಾ ಪಡೆಗಳು ಬಂಧಿಸಿವೆ ಎಂದು ಪೊಲೀಸರು ಶುಕ್ರವಾರ ತಿಳಿಸಿದರು.

ನಿಷೇಧಿತ ಕಾಂಗ್ಲೀಪಾಕ್ ಕಮ್ಯುನಿಸ್ಟ್ ಪಾರ್ಟಿಯ ಇಬ್ಬರು ಸದಸ್ಯರನ್ನು ಜಿಲ್ಲೆಯ ಪ್ಯಾಲೆಸ್ ಗೇಟ್ ಬಳಿ ಹಾಗೂ ಪ್ರಿಪಾಕ್ ಸಂಘಟನೆಯ ಒಬ್ಬ ಸದಸ್ಯನನ್ನು ನೊಂಗದದಲ್ಲಿ ಗುರುವಾರ ಬಂಧಿಸಲಾಗಿದೆ ಎಂದು ಅವರು ತಿಳಿಸಿದರು.

ಟೆಂಗ್‌ನೌಪಾಲ್ ಜಿಲ್ಲೆಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಸ್ಫೋಟಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಚುರಾಚಂದ್‌ಪುರದಲ್ಲಿ 36 ಕೆ.ಜಿಗಿಂತ ಅಧಿಕ ತೂಕದ ಅಫೀಮನ್ನು ಬುಧವಾರ ವಶಪಡಿಸಿಕೊಳ್ಳಲಾಗಿದೆ ಎಂದರು.

ಸುಕ್ಮಾ: ನಾಲ್ವರು ನಕ್ಸಲರ ಶರಣು

ಸುಕ್ಮಾ (ಛತ್ತೀಸಗಢ): ಇಬ್ಬರು ಮಹಿಳೆಯರು ಸೇರಿದಂತೆ ನಾಲ್ವರು ನಕ್ಸಲರು ಶರಣಾಗಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ.

ಸೋಧಿ ಜೋಗಾ, ಡಾಬರ್ ಗಂಗಾ, ಸೋಧಿ ರಾಜೆ, ಮಾಧವಿ ಬುಧರಿ ಶರಣಾಗತರಾದವರು. ಸೋಧಿ ಜೋಗಾ ಸುಳಿವು ನೀಡಿದವರಿಗೆ ₹5 ಲಕ್ಷ ಬಹುಮಾನ ಘೋಷಿಸಿದ್ದರೆ, ಉಳಿದ ಮೂವರ ಸುಳಿವು ನೀಡಿದವರಿಗೆ ತಲಾ ₹1 ಲಕ್ಷ ಬಹುಮಾನ ಘೋಷಿಸಲಾಗಿತ್ತು.

ಸರ್ಕಾರದ ಶರಣಾಗತಿ ಯೋಜನೆಯಡಿ ಬಸ್ತಾರ್‌ನ ದಕ್ಷಿಣ ವಿಭಾಗದ ಕಿಸ್ತಾರಾಂ ಪ್ರದೇಶ ಸಮಿತಿಯ ನಕ್ಸಲರು ತಮ್ಮ ಶಸ್ತ್ರಾಸ್ತ್ರಗಳೊಂದಿಗೆ ಶರಣಾಗತರಾಗಿದ್ದಾರೆ ಎಂದು ಬಸ್ತಾರ್ ವಲಯದ ಐಜಿ ಸುಂದರ್‌ರಾಜ್ ಪಿ. ಮಾಹಿತಿ ನೀಡಿದ್ದಾರೆ.

ಚಿನ್ನ ಕಳವು: ಹೇಳಿಕೆ ದಾಖಲು

ತಿರುವನಂತಪುರ: ಶಬರಿಮಲೆ ಚಿನ್ನ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ತಂಡವು ಶುಕ್ರವಾರ ಮಲಯಾಳ ಚಿತ್ರನಟ ಜಯರಾಂ ಅವರ ಹೇಳಿಕೆಯನ್ನು ದಾಖಲಿಸಿಕೊಂಡಿದೆ.

ಚೆನ್ನೈನಲ್ಲಿರುವ ಜಯರಾಂ ನಿವಾಸಕ್ಕೆ ಭೇಟಿ ನೀಡಿದ ಅಧಿಕಾರಿಗಳು, ಚಿನ್ನ ಕಳವು ಪ್ರಕರಣದ ಪ್ರಮುಖ ಆರೋಪಿ ಉಣ್ಣಿಕೃಷ್ಣನ್ ಪೋಟಿ ಜತೆಗೆ ಜಯರಾಂಗೆ ಇರುವ ಸಂಬಂಧದ ಕುರಿತು ಮಾಹಿತಿ ಕಲೆಹಾಕಿತು.

ಚಿನ್ನ ಲೇಪಿತ ಬಾಗಿಲ ಚೌಕಟ್ಟಿನ ಭಾಗಗಳೊಂದಿಗೆ ಉಣ್ಣಿಕೃಷ್ಣನ್ ಪೋಟಿ, ಚೆನ್ನೈನಲ್ಲಿರುವ ಜಯರಾಂ ನಿವಾಸಕ್ಕೆ ಭೇಟಿ ನೀಡಿದ ವಿಡಿಯೊ ಇತ್ತೀಚೆಗೆ ಬಹಿರಂಗಗೊಂಡಿತ್ತು.

ಬಿಸಿ ಗಾಳಿ ಬಲೂನ್

ಪಿಟಿಐ ಚಿತ್ರ:



ಹಿಮಾಚಲ ಪ್ರದೇಶದ ಮನಾಲಿ ಬಳಿ ಹಿಮದಿಂದ ಆವೃತವಾದ ಪರ್ವತಗಳ ಸಮೀಪ ಪ್ರವಾಸಿಗರು ಬಿಸಿ ಗಾಳಿ ಬಲೂನ್‌ನಲ್ಲಿ ಹಾರಾಟ ನಡೆಸಿದರು

ಉದ್ಯಮಿ ರಾಯ್ ಆತ್ಮಹತ್ಯೆ

ಒಂದನೇ ಪುಟದಿಂದ...

‘ರಾಯ್ ಅವರ ಗುಂಡು ಹಾರಿಸಿಕೊಳ್ಳಲು ಬಳಸಿದ ಪಿಸ್ತೂಲ್ ವಶಕ್ಕೆ ಪಡೆದುಕೊಳ್ಳಲಾಗಿದೆ. ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳ ಎದುರೇ ಗುಂಡು ಹಾರಿಸಿಕೊಂಡರೇ ಎಂಬುದನ್ನು ಪರಿಶೀಲನೆ ನಡೆಸಲಾಗುತ್ತಿದೆ. ಐ.ಟಿ ಅಧಿಕಾರಿಗಳನ್ನೂ ವಿಚಾರಣೆಗೆ ಒಳಪಡಿಸಿ, ಮಾಹಿತಿ ಕಲೆ ಹಾಕಲಾಗಿದೆ. ಕಚೇರಿಯ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿ ಪಡೆದುಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

ಘಟನೆ ನಡೆದ ಕಚೇರಿಗೆ ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಹಾಗೂ ಕೇಂದ್ರ ವಿಭಾಗದ ಡಿಸಿಪಿ ಅಕ್ಷಯ್ ಹಾಕೇ ಅವರು ಭೇಟಿ ನೀಡಿ ಪರಿಶೀಲಿಸಿದರು. ಕಾನ್ಫಿಡೆಂಟ್ ಗ್ರೂಪ್ ಕೇರಳ ವಿಭಾಗದ ವ್ಯವಸ್ಥಾಪಕ ನಿರ್ದೇಶಕ ಟಿ.ಜೆ.ಜೋಸೆಫ್ ಅವರು ದೂರು ಆಧರಿಸಿ ಅಶೋಕನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ.

ಮಧ್ಯಾಹ್ನ ಕಚೇರಿಗೆ ಬಂದಿದ್ದ ರಾಯ್: ಐ.ಟಿ ಅಧಿಕಾರಿಗಳು ಸೂಚನೆ ಮೇರೆಗೆ ಮಧ್ಯಾಹ್ನ ಕಚೇರಿಗೆ ಬಂದಿದ್ದ ಅವರು ಒಂದು ತಾಸು ವಿಚಾರಣೆ ಎದುರಿಸಿದ್ದರು. ಅದಾದ ಮೇಲೆ ತಮ್ಮ ಚೇಂಬರ್‌ಗೆ ಮಧ್ಯಾಹ್ನ 3ರ ಸುಮಾರಿಗೆ ದಾಖಲೆ ತರುವುದಾಗಿ ಹೇಳಿ ಹೋಗಿದ್ದರು. ಅಲ್ಲಿ ಅವರು ಗುಂಡು ಹಾರಿಸಿಕೊಂಡಿದ್ದರು. ಜೋರಾದ ಶಬ್ದ ಕೇಳಿ ಐ.ಟಿ ಅಧಿಕಾರಿಗಳು ಹಾಗೂ ಕಚೇರಿಯ ಸಿಬ್ಬಂದಿ ಕೊಠಡಿಗೆ ತೆರಳಿ ನೋಡಿದಾಗ ರಕ್ತದ ಮಡುವಿನಲ್ಲಿ ಬಿದ್ದಿದ್ದರು. ಸ್ಥಳದಲ್ಲಿದ್ದ ಕಚೇರಿ ಸಿಬ್ಬಂದಿ ಅವರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ದಿದ್ದರು. ಪರಿಶೀಲನೆ ನಡೆಸಿದ ವೈದ್ಯರು, ಮಾರ್ಗಮಧ್ಯದಲ್ಲಿಯೇ ಮೃತಪಟ್ಟಿದ್ದಾರೆ ಎಂಬುದನ್ನು ದೃಢಪಡಿಸಿದರು. ಮರಣ ಪತ್ರ ಏನಾದರೂ ಬರೆದಿಟ್ಟಿದ್ದಾರೆಯೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ರಾಯ್ ಅವರಿಗೆ ಪತ್ನಿ ಹಾಗೂ ಇಬ್ಬರು ಮಕ್ಕಳಿದ್ದಾರೆ. ಪುತ್ರ ರೋಹಿತ್ ಅವರು ಕಾನ್ಫಿಡೆಂಟ್ ಗ್ರೂಪ್‌ನ ಅಂತರರಾಷ್ಟ್ರೀಯ ವ್ಯಾಪಾರ ಮತ್ತು ವಿನ್ಯಾಸ ವಿಭಾಗವನ್ನು ನಿರ್ವಹಿಸುತ್ತಿದ್ದಾರೆ ಎಂದು ಮೂಲಗಳು ಹೇಳಿವೆ. ‘ನಾರಾಯಣ ಆಸ್ಪತ್ರೆಯಲ್ಲಿ ಮೃತದೇಹ ಇರಿಸಲಾಗಿದ್ದು, ಮರಣೋತ್ತರ ಪರೀಕ್ಷೆಯ ಬಳಿಕ ಮೃತದೇಹವನ್ನು ಹಸ್ತಾಂತರ ಮಾಡಲಾಗುವುದು’ ಎಂದು ಮೂಲಗಳು ಹೇಳಿವೆ.

‘ಸ್ವಯಂ ಗುಂಡು ಹಾರಿಸಿಕೊಂಡು ಆತ್ಮಹತ್ಯೆ’

ಪ್ರಾಥಮಿಕ ತನಿಖೆಯಂತೆ ಮೇಲ್ನೋಟಕ್ಕೆ ರಾಯ್ ಅವರೇ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವಂತೆ ಕಂಡುಬರುತ್ತಿದೆ. ಕುಟುಂಬದವರು ನೀಡುವ ದೂರು ಆಧರಿಸಿ ಮುಂದಿನ ತನಿಖೆ ನಡೆಸಲಾಗುವುದು. ಯಾವ ಪಿಸ್ತೂಲ್ ಬಳಸಲಾಗಿತ್ತು? ಅದರ ಸಾಮರ್ಥ್ಯ ಏನು ಎಂಬುದನ್ನೂ ಪರಿಶೀಲಿಸಲಾಗುವುದು. ಕಳೆದ ಮೂರು ದಿನಗಳಿಂದ ಐ.ಟಿ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದರು ಎಂಬ ಮಾಹಿತಿಯಿದೆ. ಕೇರಳದ ಐ.ಟಿ ಅಧಿಕಾರಿಗಳ ಜತೆಗೆ ನಗರ ಪೊಲೀಸರು ಸಂಪರ್ಕದಲ್ಲಿ ಇದ್ದಾರೆ. ಅವರಿಂದಲೂ ಮಾಹಿತಿ ಪಡೆದುಕೊಳ್ಳಲಾಗಿದೆ.

ಸೀಮಾಂತ್ ಕುಮಾರ್ ಸಿಂಗ್, ನಗರ ಪೊಲೀಸ್ ಕಮಿಷನರ್

‘ಐ.ಟಿ ದಾಳಿ ಒತ್ತಡದಲ್ಲಿದ್ದ ರಾಯ್’

‘ಶುಕ್ರವಾರ ಬೆಳಿಗ್ಗೆ 11ರ ಸುಮಾರಿಗೆ ಸಹೋದರ ನನ್ನೊಂದಿಗೆ ಮೊಬೈಲ್‌ನಲ್ಲಿ ಮಾತನಾಡಿದ್ದರು. ಕೇರಳದ ಐ.ಟಿ ಅಧಿಕಾರಿಗಳು ಮೂರು ದಿನಗಳಿಂದ ಪರಿಶೀಲನೆ ನಡೆಸುತ್ತಿದ್ದರು. ದಾಳಿಯಿಂದ ಸ್ವಲ್ಪ ಗೊಂದಲದಲ್ಲಿ ಇದ್ದೇನೆ ಎಂಬುದಾಗಿಯೂ ಹೇಳಿಕೊಂಡಿದ್ದರು. ಜ.27ರಂದು ನನ್ನ ಮನೆಗೂ ಐ.ಟಿ ಅಧಿಕಾರಿಗಳು ಬಂದು ಪರಿಶೀಲನೆ ನಡೆಸಿ ಹೋಗಿದ್ದರು. ಕೌಟುಂಬಿಕವಾಗಿ ಯಾವುದೇ ಸಮಸ್ಯೆ ಇರಲಿಲ್ಲ. ಸಾಲವೂ ಇರಲಿಲ್ಲ. ಸಹೋದರ ಹೆದರಿಕೊಳ್ಳುವ ವ್ಯಕ್ತಿ ಅಲ್ಲ. ಕೇರಳದ ಐ.ಟಿ ಅಧಿಕಾರಿಗಳ ಒತ್ತಡದಿಂದಲೇ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ರಾಯ್ ಸಹೋದರ ಸಿ.ಜೆ.ಬಾಬ ಆರೋಪಿಸಿದರು.

‘ಪುತ್ರ ಹಾಗೂ ಪುತ್ರಿ ದುಬೈನಲ್ಲಿದ್ದು, ನಗರಕ್ಕೆ ಬರುತ್ತಿದ್ದಾರೆ’ ಎಂದು ಮಾಹಿತಿ ನೀಡಿದರು.

ರಾಯ್ ಆತ್ಮಹತ್ಯೆ ಸಮಗ್ರ ತನಿಖೆ: ಡಿಕೆಶಿ

ಬೆಂಗಳೂರು: ‘ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ಪರಿಶೀಲನೆಯ ಮಧ್ಯೆಯೇ ಸಿ.ಜೆ.ರಾಯ್ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಗೊತ್ತಾಗಿದೆ. ಈ ಬಗ್ಗೆ ಸಾಕಷ್ಟು ಅನುಮಾನಗಳಿದ್ದು, ರಾಜ್ಯ ಸರ್ಕಾರದಿಂದಲೇ ಸಮಗ್ರ ತನಿಖೆ ನಡೆಸಲು ಕ್ರಮ ತೆಗೆದುಕೊಳ್ಳುತ್ತೇವೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಕನಕಪುರದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ರಾಯ್ ಅವರು ರಿಯಲ್ ಎಸ್ಟೇಟ್ ಉದ್ಯಮ, ಸಾಮಾಜಿಕ ಸೇವೆ, ಸಿನಿಮಾ ನಿರ್ಮಾಣದಲ್ಲಿ ತೊಡಗಿಸಿಕೊಂಡಿದ್ದರು. ಆದಾಯ ತೆರಿಗೆ ಅಧಿಕಾರಿಗಳು ಪ್ರಶ್ನಿಸುತ್ತಿರುವಾಗಲೇ ಓಡಿಹೋಗಿ, ಗುಂಡು ಹಾರಿಸಿಕೊಂಡಿದ್ದಾರೆ. ಈ ಬಗ್ಗೆ ತನಿಖೆ ನಡೆಸುತ್ತೇವೆ. ದೆಹಲಿಯಿಂದಲೂ ಈ ಬಗ್ಗೆ ವರದಿ ನೀಡಿ ಎಂದು ಸೂಚನೆ ಬಂದಿದೆ’ ಎಂದರು.

ಸಾವಿರಾರು ಕೋಟಿ ಒಡೆಯ

ಉದ್ಯಮಿ ಸಿ.ಜೆ.ರಾಯ್ ಅವರು 1997ರಲ್ಲಿ ಎಚ್.ಪಿ ಕಂಪನಿಯಲ್ಲಿ ಕೆಲಸಕ್ಕೆ ಸೇರಿದ್ದರು. ಅದಾದ ಮೇಲೆ ಕೆಲಸ ಬಿಟ್ಟು ನಗರದಲ್ಲಿ ಉದ್ಯಮ ಕ್ಷೇತ್ರಕ್ಕೆ ಕಾಲಿಟ್ಟದ್ದರು. ಸಣ್ಣ ಪ್ರಮಾಣದಲ್ಲಿ ಉದ್ಯಮ ಆರಂಭಿಸಿದ್ದ ಅವರು ಬಳಿಕ ‘ಕಾನ್ಫಿಡೆಂಟ್ ಗ್ರೂಪ್’ ಎಂಬ ದೊಡ್ಡ ಸಂಸ್ಥೆ ಕಟ್ಟಿದ್ದರು. ನೂರಾರು ಮಂದಿಗೆ ಕೆಲಸವನ್ನೂ ಕೊಟ್ಟಿದ್ದರು.

ಸರ್ಜಾಪುರ, ಬೆಳ್ಳಂದೂರು ಸೇರಿದಂತೆ ನಗರದ ಹೊರವಲಯದಲ್ಲಿ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದರು. ಸಾವಿರಾರು ಕೋಟಿ ಒಡೆಯರಾಗಿದ್ದ ಅವರು ಹತ್ತಾರು ಲೇಔಟ್ ನಿರ್ಮಿಸಿದ್ದರು ಎಂದು ಅವರ ಆತ್ಮೀಯರು ಹೇಳಿದ್ದಾರೆ.

‘ಆರಂಭದಲ್ಲಿ ರಾಯ್ ಅವರ ಬಳಿ ‘ಮಾರುತಿ-800’ ಕಾರು ಮಾತ್ರ ಇತ್ತು. ಬಳಿಕ ವಿದೇಶಿ ಕಂಪನಿಗಳ ಹಲವು ಐಷಾರಾಮಿ ಕಾರುಗಳನ್ನೂ ಅವರು ಖರೀದಿಸಿದ್ದರು. ಹಲವು ರಿಯಾಲಿಟಿ ಶೋಗಳಿಗೆ ಪ್ರಾಯೋಜಕತ್ವ ನೀಡಿದ್ದರು. ದೇಶದ ಶ್ರೀಮಂತರ ಪೈಕಿ ರಾಯ್ ಸಹ ಒಬ್ಬರು’ ಎಂದು ಆಪ್ತರು ಹೇಳಿದರು.

ರಿಯಲ್ ಎಸ್ಟೇಟ್ ಮಾತ್ರವಲ್ಲದೇ ಕನ್ನಡ ಹಾಗೂ ಮಲಯಾಳ ಭಾಷೆಗಳ 15ಕ್ಕೂ ಹೆಚ್ಚು ಚಿತ್ರಗಳನ್ನೂ ನಿರ್ಮಾಣ ಮಾಡಿದ್ದರು. ರಾಯ್ ಅವರು ಮನರಂಜನೆ, ಶಿಕ್ಷಣ, ಆತಿಥ್ಯ, ಚಿಲ್ಲರೆ ವ್ಯಾಪಾರ ಮತ್ತು ಅಂತರರಾಷ್ಟ್ರೀಯ ವ್ಯಾಪಾರದಂತಹ ವಿವಿಧ ಕ್ಷೇತ್ರಗಳಲ್ಲಿಯೂ ತಮ್ಮ ಉದ್ಯಮ ವಿಸ್ತರಿಸಿದ್ದರು ಎಂದು ಮೂಲಗಳು ಹೇಳಿವೆ.

ರಾಯ್ ಅವರು ಐಷಾರಾಮಿ ಕಾರುಗಳ ಪ್ರಿಯ. ದುಬೈ ಮತ್ತು ಭಾರತದಲ್ಲಿ ದುಬಾರಿ ಬೆಲೆಯ ರೋಲ್ಸ್ ರಾಯ್, ಲ್ಯಾಂಬೊರ್ಗಿನಿಯಂತಹ ಕಾರುಗಳನ್ನು ಹೊಂದಿದ್ದರು.

ನನ್ನ ನಿಲುವು ಬಿಜೆಪಿ ಪರವಲ್ಲ: ತರೂರ್

ತಿರುವನಂತಪುರ (ಪಿಟಿಐ): ‘ಕೆಲವು ವಿಚಾರಗಳ ಕುರಿತ ನನ್ನ ನಿಲುವುಗಳು ಮಾಧ್ಯಮಗಳಿಗೆ ‘ಬಿಜೆಪಿ ಪರ’ ಎಂಬಂತೆ ಕಾಣಬಹುದು. ಆದರೆ ನಾನು ‘ಸರ್ಕಾರದ ಪರ’ ಅಥವಾ ‘ದೇಶದ ಪರ’ದ ನಿಲುವು ಇದು ಎಂದೇ ಪರಿಗಣಿಸುತ್ತೇನೆ’ ಎಂದು ಹಿರಿಯ ಕಾಂಗ್ರೆಸ್ ನಾಯಕ ಶಶಿ ತರೂರ್ ಶುಕ್ರವಾರ ಹೇಳಿದರು.

‘ಈ ಹಿಂದೆಯೂ ಈ ಬಗ್ಗೆ ಸ್ಪಷ್ಟನೆ ನೀಡಿದ್ದೆ. ದೇಶದ ಕುರಿತಂತೆ ಮಾತನಾಡಲು ಆದ್ಯತೆ ನೀಡುತ್ತೇನೆ, ರಾಜಕೀಯದ ಬಗ್ಗೆ ಮಾತನಾಡಲು ಇಷ್ಟವಿಲ್ಲ’ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ, ‘ಪಕ್ಷದ ಸದಸ್ಯರು ಪಕ್ಷದ ಗೆರೆಯನ್ನು ದಾಟಬಾರದು. ಸಂಸತ್ತಿನಲ್ಲಿ ಯಾವತ್ತೂ ಪಕ್ಷದ ಪರವಾಗಿ ನಿಂತಿದ್ದೇನೆ’ ಎಂದು ಹೇಳಿದರು..

‘ನಾನು ಕಾಂಗ್ರೆಸ್‌ನಲ್ಲಿಯೇ ಇರುತ್ತೇನೆ, ಎಲ್ಲಿಗೂ ಹೋಗುವುದಿಲ್ಲ. ಕೇರಳದ ಚುನಾವಣಾ ಪ್ರಚಾರದಲ್ಲೂ ಭಾಗಿಯಾಗುತ್ತೇನೆ. ಯುಡಿಎಫ್ ಜಯಕ್ಕಾಗಿ ಕೆಲಸ ಮಾಡುತ್ತೇನೆ’ ಎಂದರು.

ಕೊಚ್ಚಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ತರೂರ್ ಅವರನ್ನು ಕೆಲವು ನಾಯಕರು ಸರಿಯಾಗಿ ನಡೆಸಿಕೊಂಡಿರಲಿಲ್ಲ. ಈ ಬೆನ್ನಲ್ಲೇ, ತರೂರ್ ಅವರು ಗುರುವಾರ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದರು. ಬಳಿಕ ‘ಎಲ್ಲವೂ ಸರಿಯಾಗಿದೆ’ ಎಂದು ಹೇಳಿದ್ದರು.

ಪಹಲ್ಗಾಮ್ ಭಯೋತ್ಪಾದಕ ದಾಳಿ ನಂತರದ ಭಾರತ–ಪಾಕಿಸ್ತಾನ ಸಂಘರ್ಷದ ಬಗ್ಗೆ ತರೂರ್ ಅವರು ಕಳೆದ ವರ್ಷ ನೀಡಿದ್ದ ಹೇಳಿಕೆಯು ವಿವಾದಕ್ಕೆ ಕಾರಣವಾಗಿತ್ತು. ಕಾಂಗ್ರೆಸ್ ಪಕ್ಷ ಮತ್ತು ಅವರ ಹೇಳಿಕೆ ನಡುವೆ ವೈರುಧ್ಯವಿತ್ತು. ಹಲವು ಕಾಂಗ್ರೆಸ್ ನಾಯಕರು ಅವರನ್ನು, ಅವರ ಉದ್ದೇಶವನ್ನು ಪ್ರಶ್ನಿಸಿದ್ದರು.

ರಾಹುಲ್ ಹೊಗಳಿದ ಸಂಸದ



ಶಶಿ ತರೂರ್

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ‘ಪ್ರಾಮಾಣಿಕ ವ್ಯಕ್ತಿ’ ಎಂದು ಪಕ್ಷದ ಹಿರಿಯ ನಾಯಕ ಶಶಿ ತರೂರ್ ಅವರು ಶ್ಲಾಘಿಸಿದರು.

‘ದೇಶದಲ್ಲಿನ ಕೋಮುವಾದದಂತಹ ವಿಚಾರಗಳ ವಿರುದ್ಧದ ‘ಗಟ್ಟಿ ಧ್ವನಿ’ ಅವರು’ ಎಂದು ಹೇಳಿದರು.

‘ರಾಹುಲ್ ಗಾಂಧಿ ಅವರು ಕೋಮು ರಾಜಕೀಯ, ದ್ವೇಷ ಮತ್ತು ವಿಭಜನೆ ವಿರುದ್ಧ ನಿರಂತರವಾಗಿ ಮಾತನಾಡುವುದರಿಂದ ಪ್ರತಿಯೊಬ್ಬರೂ ಅವರನ್ನು ಇಷ್ಟಪಡುತ್ತಾರೆ’ ಎಂದು ಹೇಳಿದರು.

‘ರಾಹುಲ್ ಗಾಂಧಿ ವಿರುದ್ಧದ ತಪ್ಪು ಹೇಳಿಕೆಗಳನ್ನು ನಾನೂ ಎಂದಿಗೂ ಒಪ್ಪುವುದಿಲ್ಲ. ಅವರೊಬ್ಬ ಪ್ರಾಮಾಣಿಕ ನಾಯಕ’ ಎಂದರು.

3 ವಿಗ್ರಹ ನೀಡಲು ಮುಂದಾದ ಅಮೆರಿಕ

ನ್ಯೂಯಾರ್ಕ್(ಪಿಟಿಐ): ಭಾರತದ ದೇಗುಲಗಳಿಂದ ಅಕ್ರಮವಾಗಿ ತೆರವುಗೊಂಡಿದ್ದ ಮೂರು ಪುರಾತನ ಕಂಚಿನ ವಿಗ್ರಹಗಳನ್ನು ಭಾರತಕ್ಕೆ ಮರಳಿಸಲು ಅಮೆರಿಕ ನಿರ್ಧರಿಸಿದೆ.

ಮೂರು ವಿಗ್ರಹಗಳನ್ನು ಭಾರತದ ದೇಗುಲಗಳಿಂದ ಅಕ್ರಮವಾಗಿ ತೆರವುಗೊಳಿಸಲಾಗಿತ್ತು ಎಂಬುದು ಸಂಶೋಧನೆಯ ಮೂಲಕ ಖಚಿತವಾಗಿರುವುದರಿಂದ ಅವುಗಳನ್ನು ಭಾರತ ಸರ್ಕಾರಕ್ಕೆ ವಾಪಸ್ ನೀಡಲಾಗುತ್ತದೆ ಎಂದು ವಾಷಿಂಗ್ಟನ್‌ನಲ್ಲಿರುವ ನ್ಯಾಷನಲ್ ‘ಮ್ಯೂಸಿಯಂ ಆಫ್ ಏಷ್ಯನ್ ಆರ್ಟ್’ ಬುಧವಾರ ಪ್ರಕಟಣೆಯಲ್ಲಿ ತಿಳಿಸಿದೆ.

ಗೋಮಾಂಸ ರಫ್ತು ನಿಲ್ಲಿಸಿ: ಯೋಗಿಗೆ ಸವಾಲು



ಮಾಘಮೇಳದಿಂದ ನಿರ್ಗಮಿಸಿದ ಅವಿಮುಕ್ತೇಶ್ವರಾನಂದ ಸರಸ್ವತಿ

ವಾರಾಣಸಿ (ಪಿಟಿಐ): ‘ರಾಜ್ಯದಿಂದ ಗೋಮಾಂಸ ರಫ್ತು ನಿಲ್ಲಿಸಿ ಮತ್ತು ಗೋವನ್ನು ‘ರಾಷ್ಟ್ರ ಮಾತಾ’ ಎಂದು ಘೋಷಿಸಿ. ಈ ಮೂಲಕ ಹಿಂದೂ ಧರ್ಮದ ಕುರಿತ ತಮ್ಮ ಬದ್ಧತೆಯನ್ನು ಸಾಬೀತು ಮಾಡಿ’ ಎಂದು ಸ್ವಾಮಿ ಅವಿಮುಕ್ತೇಶ್ವರಾನಂದ ಸರಸ್ವತಿ ಅವರು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ ಸವಾಲೆಸೆದಿದ್ದಾರೆ.

ಪ್ರಯಾಗರಾಜ್‌ನ ತ್ರಿವೇಣಿ ಸಂಗಮದಲ್ಲಿ ಪುಣ್ಯಸ್ನಾನಕ್ಕೆ ಅವಕಾಶ ನೀಡದ ಆಡಳಿತದ ನಡೆಯನ್ನು ಖಂಡಿಸಿ ಅವಿಮುಕ್ತೇಶ್ವರಾನಂದ ಅವರು ಶಂಕರಾಚಾರ್ಯ ಕ್ಯಾಂಪ್‌ನಲ್ಲಿ ಜನವರಿ 18ರಿಂದ ಸತ್ಯಾಗ್ರಹ ನಡೆಸಿದ್ದರು. ಬುಧವಾರ ತಮ್ಮ ಪ್ರತಿಭಟನೆಯನ್ನು ಅಂತ್ಯಗೊಳಿಸಿ ಭಾರವಾದ ಹೃದಯದಿಂದ ಅಲ್ಲಿಂದ ತೆರಳಿದ್ದರು.

ಸುದ್ದಿಗಾರರೊಂದಿಗೆ ಶುಕ್ರವಾರ ಮಾತನಾಡಿದ ಅವರು, ‘ನಾನು 11 ದಿನ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾಗ ಯಾವೊಬ್ಬ ಅಧಿಕಾರಿಯೂ ಪುಣ್ಯಸ್ನಾನ ಮಾಡುವಂತೆ ಹೇಳಲಿಲ್ಲ. ಈಗ ತುಂಬಾ ತಡವಾಗಿದೆ. ಮುಂದಿನ ವರ್ಷ ಮಾಘ ಮೇಳದ ಸಂದರ್ಭದಲ್ಲಿ ಪವಿತ್ರ ಸ್ನಾನ ಮಾಡುತ್ತೇನೆ’ ಎಂದರು.

‘ಹಿಂದೂ ಧರ್ಮದ ಕುರಿತ ನಿಮ್ಮ ಬದ್ಧತೆಯನ್ನು ಸಾಬೀತು ಮಾಡಲು 40 ದಿನಗಳ ಒಳಗಾಗಿ ಗೋ ಹತ್ಯೆಯನ್ನು ನಿಲ್ಲಿಸಿ. ಆಗ ನೀವೊಬ್ಬ ಹಿಂದೂ ಅನುಯಾಯಿ ಎನ್ನುವುದನ್ನು ಒಪ್ಪಿಕೊಳ್ಳುತ್ತೇವೆ’ ಎಂದು ಹೇಳಿದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಧರ್ಮವೆಂದರೆ ಬರೀ ನಂಬಿಕೆಯಲ್ಲ; ಒಳ್ಳೆಯ ನಡವಳಿಕೆಯೂ ಹೌದು.

–ಡಾ. ಸರ್ವಪಲ್ಲಿ ರಾಧಾಕೃಷ್ಣನ್

ಸಂಪಾದಕೀಯ

ಮುಡಾ: ಮುಖ್ಯಮಂತ್ರಿಗೆ ನಿರಾಳ ಪ್ರಾಧಿಕಾರದ ಕಳಂಕ ಉಳಿದೇ ಇದೆ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ (ಮುಡಾ) ಅಕ್ರಮವಾಗಿ ನಿವೇಶನ ಪಡೆದಿದ್ದಾರೆಂದು ಆರೋಪಿಸಲಾದ ಪ್ರಕರಣದಲ್ಲಿ ‘ಕ್ಲೀನ್ ಚಿಟ್’ ದೊರೆತಿರುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನಿರಾಳಭಾವ ಉಂಟುಮಾಡುವಂತಹ ಬೆಳವಣಿಗೆ. ಸಿದ್ದರಾಮಯ್ಯ ಮತ್ತು ಅವರ ಪತ್ನಿ ಬಿ.ಎಂ. ಪಾರ್ವತಿ ಸೇರಿದಂತೆ ನಾಲ್ವರ ವಿರುದ್ಧದ ಆರೋಪಗಳ ಬಗ್ಗೆ ತನಿಖೆ ನಡೆಸಿ ಲೋಕಾಯುಕ್ತ ಪೊಲೀಸರು ಸಲ್ಲಿಸಿದ್ದ ‘ಬಿ’ ರಿಪೋರ್ಟ್ ಅನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಮಾನ್ಯ ಮಾಡಿದೆ. ಹೀಗಾಗಿ, ಈ ಪ್ರಕರಣದಲ್ಲಿ ಸಿದ್ದರಾಮಯ್ಯ ಸದ್ಯಕ್ಕೆ ನಿರಾಳರಾದಂತಾಗಿದೆ. ಮುಖ್ಯಮಂತ್ರಿ ಪಾಲಿಗೆ ಕಾನೂನು ಹೋರಾಟಕ್ಕೆ ಸಂಬಂಧಿಸಿದಂತೆ ಮಾತ್ರವಲ್ಲದೆ ರಾಜಕೀಯವಾಗಿ ಕೂಡ ಈ ವಿದ್ಯಮಾನ ಮಹತ್ವದ್ದಾಗಿದೆ. ನಾಯಕತ್ವ ಬದಲಾವಣೆಗೆ ಸಂಬಂಧಿಸಿದ ಊಹಾಪೋಹಗಳು ಚಾಲ್ತಿಯಲ್ಲಿರುವ ಸಂದರ್ಭದಲ್ಲಿ, ಲೋಕಾಯುಕ್ತ ಪೊಲೀಸರು ಸಲ್ಲಿಸಿರುವ ವರದಿಯನ್ನು ನ್ಯಾಯಾಲಯ ಒಪ್ಪಿಕೊಂಡಿರುವುದು ಸಿದ್ದರಾಮಯ್ಯ ಅವರಿಗೆ ಶಕ್ತಿ ತುಂಬಿದಂತಾಗಿದೆ. ಒಂದುವೇಳೆ, ಈ ವರದಿಯನ್ನು ನ್ಯಾಯಾಲಯ ಒಪ್ಪಿಕೊಳ್ಳದೆ ಹೋಗಿದ್ದಲ್ಲಿ ಸರ್ಕಾರ ಹಾಗೂ ಪಕ್ಷದಲ್ಲಿ ಅವರ ಸ್ಥಾನ ಅತಂತ್ರವಾಗುವ ಸಾಧ್ಯತೆಯಿತ್ತು. ಮುಖ್ಯಮಂತ್ರಿ ರಾಜೀನಾಮೆಗೆ ಒತ್ತಾಯಿಸುತ್ತಿದ್ದ ವಿರೋಧ ಪಕ್ಷದ ಆಗ್ರಹವನ್ನೂ ನ್ಯಾಯಾಲಯದ ಆದೇಶ ದುರ್ಬಲಗೊಳಿಸಿದೆ ಹಾಗೂ ಕಾಂಗ್ರೆಸ್ ಶಾಸಕಾಂಗ ಪಕ್ಷದ ಮೇಲಿನ ಸಿದ್ದರಾಮಯ್ಯನವರ ಹಿಡಿತವನ್ನು ಮತ್ತಷ್ಟು ಬಲಪಡಿಸಿದೆ. ಸುಮಾರು ನಾಲ್ಕು ದಶಕಗಳ ಅವಧಿಯ ತಮ್ಮ ಕಳಂಕರಹಿತ ರಾಜಕೀಯ ಪಯಣದ ಬಗ್ಗೆ ಹೆಮ್ಮೆಪಡುತ್ತಿದ್ದ ಮುಖ್ಯಮಂತ್ರಿ ಅವರ ಸಾರ್ವಜನಿಕ ಜೀವನದ ವರ್ಚಸ್ಸನ್ನು ಅಕ್ರಮ ನಿವೇಶನ ಪಡೆದಿರುವ ಆರೋಪಗಳು ಮಬ್ಬಾಗಿಸಿದ್ದವು. ಅವರ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ ಮುಡಾ 14 ಪರಿಹಾರ ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿದೆ ಎನ್ನುವ ಆರೋಪ ಮುಖ್ಯಮಂತ್ರಿ ಅವರ ರಾಜಕೀಯ ವಿರೋಧಿಗಳಿಗೆ ಆಯುಧವಾಗಿ ಪರಿಣಮಿಸಿತ್ತು. ಮುಖ್ಯಮಂತ್ರಿ ಪತ್ನಿ ನಿವೇಶನಗಳನ್ನು ಹಿಂದಿರುಗಿಸಿದರೂ, ಕಾನೂನು ಪ್ರಕ್ರಿಯೆ ಮುಂದುವರಿದಿತ್ತು. ಪ್ರಸ್ತುತ ನ್ಯಾಯಾಲಯ ನೀಡಿರುವ ಕಾನೂನು ಪರಿಭಾಷೆಯಲ್ಲಿನ ಕ್ಲೀನ್ ಚಿಟ್, ವಿಚಾರಣೆಗೆ ಅಗತ್ಯವಾದ ಪುರಾವೆಗಳು ಇಲ್ಲದಿರುವುದರಿಂದ ಸಿದ್ದರಾಮಯ್ಯ ಸೇರಿದಂತೆ ಎಲ್ಲ ಆರೋಪಿಗಳನ್ನೂ ಕ್ರಿಮಿನಲ್ ಹೊಣೆಗಾರಿಕೆಯಿಂದ ಮುಕ್ತಗೊಳಿಸಿದೆ.



ಮುಡಾ ಹಗರಣದ ಆರೋಪಗಳಿಂದ ಹೊರಬಂದಿರುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರಾಜಕೀಯ ಶಕ್ತಿ ತುಂಬಲಿದೆ. ಆದರೆ, ಪ್ರಾಧಿಕಾರದ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಪ್ರಶ್ನೆಗಳು ಮುಂದುವರಿದೇ ಇವೆ.

ಮುಖ್ಯಮಂತ್ರಿಗೆ ದೊರೆತಿರುವ ಈ ನಿರಾಳಭಾವದ ಹಾದಿ, ಸಾಂವಿಧಾನಿಕ ಹಾಗೂ ಕಾನೂನು ನಡುವಿನ ಸಂಘರ್ಷದಿಂದ ಕೂಡಿತ್ತು. ಈ ಸಂಘರ್ಷ, ಸಿದ್ದರಾಮಯ್ಯನವರ ವಿರುದ್ಧದ ಆರೋಪಗಳ ವಿಚಾರಣೆಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು 2024ರಲ್ಲಿ ಅನುಮತಿ ನೀಡುವುದರೊಂದಿಗೆ ಆರಂಭವಾಗಿತ್ತು. ರಾಜ್ಯಪಾಲರ ತೀರ್ಮಾನವನ್ನು ಸರ್ಕಾರ ಅಸ್ಥಿರಗೊಳಿಸುವ ಪ್ರಯತ್ನ ಎಂದು ಕಾಂಗ್ರೆಸ್ ಟೀಕಿಸಿತ್ತು. ಹೈಕೋರ್ಟ್‌ನ ಏಕಸದಸ್ಯ ಪೀಠ ರಾಜ್ಯಪಾಲರ ನಿರ್ಧಾರವನ್ನು ಎತ್ತಿಹಿಡಿದರೂ, ಸಿದ್ದರಾಮಯ್ಯ ಮತ್ತು ಅವರ ಕುಟುಂಬಕ್ಕೆ ಜಾರಿ ನಿರ್ದೇಶನಾಲಯ (ಇಡಿ) ನೀಡಿದ್ದ ನೋಟಿಸ್‌ಗಳಿಗೆ ತಡೆನೀಡಿತ್ತು. ಸುಪ್ರೀಂ ಕೋರ್ಟ್ ಕೂಡ ಇಡಿ ಮೇಲ್ಮನವಿಯನ್ನು ತಳ್ಳಿಹಾಕಿತ್ತು. ಪ್ರಸ್ತುತ ನ್ಯಾಯಾಲಯ ಒಪ್ಪಿಕೊಂಡಿರುವ ಲೋಕಾಯುಕ್ತರ ವರದಿ, ಇಡೀ ಪ್ರಕ್ರಿಯೆಯನ್ನು ರಾಜಕೀಯಪ್ರೇರಿತ ಎಂದು ವಾದಿಸಲು ಕಾಂಗ್ರೆಸ್‌ಗೆ ಅವಕಾಶ ಮಾಡಿಕೊಟ್ಟಿದೆ.

ಲೋಕಾಯುಕ್ತರ ‘ಬಿ’ ರಿಪೋರ್ಟ್ ಅನ್ನು ನ್ಯಾಯಾಲಯ ಒಪ್ಪಿಕೊಂಡಿರುವುದರಿಂದಾಗಿ, ಮುಡಾ ಹಗರಣಗಳ ಪ್ರಕರಣ ಕೊನೆಗೊಂಡಿದೆ ಎಂದು ಹೇಳಲಾಗದು. ‘ಬಿ’ ರಿಪೋರ್ಟ್ ಪ್ರಶ್ನಿಸಿ ಸಲ್ಲಿಸಿದ್ದ ಪ್ರತಿಭಟನಾ ಅರ್ಜಿಯನ್ನು ವಿಶೇಷ ನ್ಯಾಯಾಲಯ ತಿರಸ್ಕರಿಸಿರುವುದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸುವ ಇಂಗಿತವನ್ನು ದೂರುದಾರ ಸ್ನೇಹಮಯಿ ಕೃಷ್ಣ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಮುಡಾದ ದೊಡ್ಡಮಟ್ಟದ ಅಕ್ರಮಗಳ ತನಿಖೆಯನ್ನು ಮುಂದುವರಿಸಬೇಕೆಂದು ವಿಶೇಷ ನ್ಯಾಯಾಲಯ ಆದೇಶಿಸಿದೆ. ಮುಡಾದ ಮಾಜಿ ಆಯುಕ್ತರನ್ನು ಜಾರಿ ನಿರ್ದೇಶನಾಲಯ ಈಗಾಗಲೇ ಬಂಧಿಸಿದ್ದು, ₹450 ಕೋಟಿಗೂ ಹೆಚ್ಚಿನ ಸ್ಥಿರಾಸ್ತಿ ವಶಪಡಿಸಿಕೊಂಡಿದೆ. ಹಾಗಾಗಿ, ಪ್ರಸಕ್ತ ಬೆಳವಣಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವೈಯಕ್ತಿಕ ಹಾಗೂ ರಾಜಕೀಯ ಗೆಲುವಷ್ಟೇ ಆಗಿದೆ. ಈ ಗೆಲುವಿನಿಂದಾಗಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅಂಟಿಕೊಂಡಿರುವ ಕೊಳೆ ತೊಳೆದುಹೋಗದು. ಹಗರಣಗಳ ಬಗೆಗಿನ ತನಿಖೆಯನ್ನು ಸರ್ಕಾರ ಮುಂದುವರಿಸಬೇಕು. ಪಾರದರ್ಶಕ ಹಾಗೂ ತ್ವರಿತ ತನಿಖೆಯ ಮೂಲಕ ಸಾರ್ವಜನಿಕ ವಿಶ್ವಾಸಕ್ಕೆ ಚ್ಯುತಿ ಆಗದಂತೆ ನಡೆದುಕೊಳ್ಳುವ ಜವಾಬ್ದಾರಿಯಿಂದ ಸರ್ಕಾರ ನುಣುಚಿಕೊಳ್ಳಬಾರದು.

ಜಾಲಾಡಿ

ಆರ್ಥಿಕ ಸುಧಾರಣೆ



ಫಾರಿನ್ ಕಾರು, ವಿಸ್ಕಿ, ಚಾಕೊಲೇಟ್‌ಗಳಿಗೆ ಸುಂಕ ವಿನಾಯಿತಿ ಕೊಟ್ಟು ಫಾರಿನ್ ವಸ್ತುಗಳನ್ನೇ ಬಳಸುವ ಶ್ರೀಮಂತರನ್ನು ಖುಷಿಪಡಿಸುವುದು; ಅಡುಗೆ ಎಣ್ಣೆ, ಅಕ್ಕಿ, ಬೇಳೆ, ಪೆಟ್ರೋಲ್, ಡೀಸೆಲ್ ಬೆಲೆ ಏರಿಸಿ ಮಧ್ಯಮವರ್ಗದ ಜೀವನವನ್ನು ಬರ್ಬಾದ್ ಮಾಡುವುದು ಯಾವ ಸೀಮೆಯ ಆರ್ಥಿಕ ಸುಧಾರಣೆ!?

ಶರತ್ ಅಂಬೆಕಲ್ಲು, ಟೆಕ್ಕಿ, ‘ಫೇಸ್‌ಬುಕ್’ನಿಂದ

ಕಿಡಿನುಡಿ



ಕಳೆದ ವರ್ಷದ ಫೆಬ್ರುವರಿ ಮತ್ತು ಮಾರ್ಚ್‌ನಲ್ಲಿ ಪಾವತಿ ಆಗಬೇಕಾಗಿದ್ದ ₹5 ಸಾವಿರ ಕೋಟಿ ಗೃಹಲಕ್ಷ್ಮಿ ಹಣ ಏನಾಯಿತು? ಯಾವಾಗ ಬಿಡುಗಡೆಯಾಗುತ್ತದೆ ಎನ್ನುವ ಪ್ರಶ್ನೆಗಳಿಗೆ ಇನ್ನೂ ಉತ್ತರ ಸಿಕ್ಕಿಲ್ಲ. ಈಗ ಅನ್ನಭಾಗ್ಯದ ಹಣದಲ್ಲೂ ಭ್ರಷ್ಟಾಚಾರ ನಡೆದಿರುವ ವಾಸನೆ ಬರುತ್ತಿದೆ.

ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಬುಧವಾರ, 31-1-2001

• ಬೈಕ್ ಅಪಘಾತ: ಮೈಸೂರಿನಲ್ಲಿ ಇಬ್ಬರು ವಿದ್ಯಾರ್ಥಿಗಳ ಸಾವು

ಮೈಸೂರು, ಜ. 30– ಹತೋಟಿ ತಪ್ಪಿದ ಬುಲೆಟ್ ಮೋಟಾರ್ ಬೈಕೊಂದು ರಸ್ತೆಬದಿಯ ಕಾಂಕ್ರೀಟ್ ಫುಟ್‌ಪಾತ್‌ಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರರಿಬ್ಬರು ಸತ್ತಿರುವ ಘಟನೆ ನಗರದ ಕೆ.ಆರ್.ಎಸ್. ರಸ್ತೆಯ ಕೇಂದ್ರ ಆಹಾರ ಸಂಶೋಧನಾಲಯದ (ಸಿಎಫ್‌ಟಿಆರ್‌ಐ) ಮುಂಭಾಗ ನಿನ್ನೆ ಮಧ್ಯರಾತ್ರಿ ಸಂಭವಿಸಿದೆ.

ಮೈಸೂರು ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳಾದ ರಘುನಂದನ್ (22) ಹಾಗೂ ಅವಿನಾಶ್ ಆರ್. ಚಂದ್ರ (22) ಮೃತಪಟ್ಟವರು.

ಮೃತರಾದ ರಘುನಂದನ್ ಹಾಸನ ಬಳಿಯ ಅರಸೀಕೆರೆ ನಿವಾಸಿ ಬಿ.ಎನ್. ಸುಬ್ಬೇಗೌಡರ ಪುತ್ರರಾಗಿದ್ದರೆ, ಸತ್ತ ಇನ್ನೊಬ್ಬ ವಿದ್ಯಾರ್ಥಿ ಅವಿನಾಶ್ ಆರ್. ಚಂದ್ರ ಶಿವಮೊಗ್ಗ ಜಿಲ್ಲೆಯ ಸೊರಬದವರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

75 ವರ್ಷಗಳ ಹಿಂದೆ

ಬುಧವಾರ, 31-1-1951

• ಲಾಟರಿ–ಸ್ಪರ್ಧೆಗಳ ಮೇಲೆ ಹತೋಟಿ

ಬೆಂಗಳೂರು, ಜ. 30– ಲೈಸೆನ್ಸ್ ಪಡೆಯದಿರುವ ಲಾಟರಿಗಳು ಹಾಗೂ ಬಹುಮಾನವುಳ್ಳ ಸ್ಪರ್ಧೆಗಳನ್ನು ಕ್ರಮಬಾಹಿರವೆಂದು ಸಾರುವ ಹಾಗೂ ಅವುಗಳ ಮೇಲೆ ತೆರಿಗೆ ವಿಧಿಸಲು ಸರ್ಕಾರಕ್ಕೆ ಅವಕಾಶ ಕೊಡಲು ಲಾಟರಿಗಳು ಮತ್ತು ಬಹುಮಾನವುಳ್ಳ ಸ್ಪರ್ಧೆಗಳ ಹತೋಟಿ ಹಾಗೂ ತೆರಿಗೆಯ ಮಸೂದೆಯನ್ನು ಇಂದು ನಡೆದ ಶಾಸನಸಭೆ ಸೆಲೆಕ್ಟ್ ಸಮಿತಿ ವರದಿಯೊಡನೆ ಅಂಗೀಕರಿಸಿತು. ವಿ. ವೆಂಕಟಪ್ಪನವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಅನೇಕ ಮೋಸದ ಲಾಟರಿಗಳು ಮತ್ತು ನಡೆಸುವವರ ಲಾಭಕ್ಕಾಗಿಯೇ ಇರುವ ಲಾಟರಿಗಳು ಮತ್ತು ಬಹುಮಾನವುಳ್ಳ ಸ್ಪರ್ಧೆಗಳಲ್ಲಿ ಗೆಲ್ಲಬಹುದೆಂಬ ಆಸೆಯಿಂದ ದುಡ್ಡು ಹಾಕಿ ಬಡಜನರು ಕಳೆದುಕೊಳ್ಳುತ್ತಿರುವುದನ್ನು ನಿಲ್ಲಿಸುವ ಉದ್ದೇಶದಿಂದ ಸರ್ಕಾರ ಈ ಮಸೂದೆ ತಂದಿದೆ.

ನದಿಗಳ ತಿರುವೊ? ಮುಳುವೊ?



ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಜನವರಿ 11ರಂದು ನಡೆದ ಸಮಾವೇಶದಲ್ಲಿ ಜಾತಿಭೇದ ಮರೆತು ಸುಮಾರು 30 ಸಾವಿರ ಜನರು ಭಾಗವಹಿಸಿದ್ದರು. ಜಿಲ್ಲೆಯ ಜೀವನಾಡಿಗಳಾದ ಬೇಡ್ತಿ ಮತ್ತು ಅಘನಾಶಿನಿ ನದಿಯನ್ನು ಅಪಹರಿಸಲು ಹೊರಟ ಸರ್ಕಾರದ ಯೋಜನೆಯನ್ನು ವಿರೋಧಿಸುವುದು ಅವರ ಉದ್ದೇಶವಾಗಿತ್ತು.

ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆ ದೇಶದಾದ್ಯಂತ 30 ನದಿಗಳ ಜೋಡಣೆ ಯೋಜನೆಗಳನ್ನು ಗುರುತಿಸಿದೆ. ಅವುಗಳಲ್ಲಿ 16 ದಕ್ಷಿಣ ಭಾರತಕ್ಕೆ ಸಂಬಂಧಿಸಿವೆ. ರಾಜ್ಯಕ್ಕೆ ಸಂಬಂಧಿಸಿದ 6 ಪ್ರಸ್ತಾವಗಳಲ್ಲಿ ಎರಡು ವಿಶ್ವಪ್ರಸಿದ್ಧ ಪಶ್ಚಿಮಘಟ್ಟಗಳ ಬೇಡ್ತಿ ಹಾಗೂ ಅಘನಾಶಿನಿ ನದಿ ತಿರುವು ಯೋಜನೆಗಳು. ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ, ಶಿರಸಿ ಮತ್ತು ಸಿದ್ದಾಪುರ ತಾಲ್ಲೂಕುಗಳಲ್ಲಿರುವ ಪಶ್ಚಿಮಘಟ್ಟಗಳಿಂದ ಪಶ್ಚಿಮಾಭಿಮುಖವಾಗಿ ಹರಿಯುವ ನೀರನ್ನು ತಿರುಗಿಸಿ, ಪೂರ್ವಾಭಿಮುಖವಾಗಿ ಹರಿಯುವ ವರದಾ ನದಿಗೆ ಸೇರಿಸುವ ಯೋಜನೆಯಿದು.

ಅರಬ್ಬಿ ಸಮುದ್ರಕ್ಕೆ ಸೇರುವ ಬೇಡ್ತಿ ಮತ್ತು ಅಘನಾಶಿನಿ ಅಪರೂಪದ ಸಸ್ಯ–ಪ್ರಾಣಿ ಪ್ರಭೇದ ಮತ್ತು ವಿಶಿಷ್ಟವಾದ ಶಿಲಾರಚನೆಯಿಂದ ಕೂಡಿವೆ. ದಟ್ಟವಾದ, ಸದಾಹಸಿರು ಅರಣ್ಯಗಳಿಂದ ಆವೃತವಾದ ಸಂಕೀರ್ಣ ಕಣಿವೆಗಳನ್ನು ಹೊಂದಿವೆ. ಅಘನಾಶಿನಿ ನದಿಯು ಮಾನವ ಹಸ್ತಕ್ಷೇಪದಿಂದ ದೂರ ಉಳಿದಿದೆ.

ಜಲಚಕ್ರ ಸರಾಗವಾಗಿ ತಿರುಗಲು ಪಶ್ಚಿಮಘಟ್ಟಗಳ ಅರಣ್ಯ ಮಹತ್ವದ ಪಾತ್ರವಹಿಸುತ್ತದೆ. ಅರಣ್ಯ ನಿರ್ವಹಣೆಯಲ್ಲಿ ಮಾನವನ ಹಸ್ತಕ್ಷೇಪವಾದಾಗ ಜಲಚಕ್ರದಲ್ಲಿ ವ್ಯತ್ಯಯವುಂಟಾಗುತ್ತದೆ. ನದಿ ಹರಿವು, ಅಂತರ್ಜಲ ಮಟ್ಟ, ಮಣ್ಣಿನ ಸವಕಳಿಯ ಮೇಲೆಯೂ ವ್ಯತಿರಿಕ್ತ ಪರಿಣಾಮ ಉಂಟಾಗುತ್ತದೆ.

ಬೇಡ್ತಿ–ವರದಾ ಜೋಡಣೆಯ ಯೋಜನಾ ಪೂರ್ವ ವರದಿಯನ್ನು ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯು 2021ರ ಆಗಸ್ಟ್‌ನಲ್ಲಿ ಸಲ್ಲಿಸಿದೆ. ವರದಿಯ ಪ್ರಕಾರ, ಬೇಡ್ತಿ ನದಿಯಿಂದ 242 ದಶಲಕ್ಷ ಕ್ಯೂಬಿಕ್ ಮೀಟರ್ ನೀರನ್ನು ಎತ್ತಿ ರಾಯಚೂರು ಜಿಲ್ಲೆಯ ತುಂಗಭದ್ರಾ ಯೋಜನೆಯ ಅಡಿಯಲ್ಲಿ 60,200 ಹೆಕ್ಟೇರ್ ಕೃಷಿಭೂಮಿಗೆ ಒದಗಿಸಲಾಗುವುದು. ಇದಕ್ಕಾಗಿ ಪಟ್ಟಣದ ಹಳ್ಳ ಮತ್ತು ಶಾಲ್ಮಲಾ ಹಳ್ಳಗಳಿಗೆ ತಡೆಕಟ್ಟುಗಳನ್ನು ನಿರ್ಮಿಸಿ, ಅವುಗಳನ್ನು ಪರಸ್ಪರ ಸಂಪರ್ಕಿಸುವ ಪ್ರಸ್ತಾವ ಇದೆ. ಯೋಜನೆ ಜಾರಿಗೆ ಬಂದರೆ, ಉತ್ತರ ಕನ್ನಡ ಜಿಲ್ಲೆಯ 787 ಹೆಕ್ಟೇರ್ ಅರಣ್ಯ, 130 ಹೆಕ್ಟೇರ್ ಕೃಷಿ ಭೂಮಿ ಮತ್ತು 88 ಹೆಕ್ಟೇರ್ ಕೃಷಿಯೇತರ ಭೂಮಿ ಮುಳುಗಡೆಯಾಗಲಿದೆ. ಸಿದ್ದಾಪುರ ತಾಲ್ಲೂಕಿನ ಕೆಲವು ಹೋಬಳಿಗಳು ಭಾಗಶಃ ಮುಳುಗಲಿವೆ. ಕೊಳವೆಗಳ ಮೂಲಕ ನೀರನ್ನು ಸಾಗಿಸಲು ಕಡಿಯಲಾಗುವ ಮರಗಳ ಸಂಖ್ಯೆ ಒಂದು ಲಕ್ಷದ ಇಪ್ಪತ್ತು ಸಾವಿರ ಎಂದು ಅಂದಾಜು ಮಾಡಲಾಗಿದೆ. ಹಾಲಿ 967 ಜನಸಂಖ್ಯೆಯಿರುವ ಒಂದು ಗ್ರಾಮ ಸಂಪೂರ್ಣವಾಗಿ ಮುಳುಗಡೆಯಾಗಲಿದೆ. ಹಾಲಿ ಯೋಜನೆಯ ಸ್ವರೂಪವನ್ನು ಬದಲಿಸಿ, ಅತಿ ಕಡಿಮೆ ಅರಣ್ಯನಾಶ ಮತ್ತು ಇತರ ಹಾನಿಗಳನ್ನು ತಗ್ಗಿಸಲಾಗುತ್ತದೆ ಎಂದು ಹೇಳಲಾಗುತ್ತಿದೆ.

ಸರ್ಕಾರ ಬಲವಂತವಾಗಿ ಈ ಯೋಜನೆಗಳನ್ನು ಜಾರಿ ಮಾಡಿದಲ್ಲಿ, ತೀರ ಪ್ರದೇಶದ ಜನರ ಜೀವನೋಪಾಯಕ್ಕೆ ತೀವ್ರ ಹೊಡೆತ ಬೀಳುತ್ತದೆ; ಅರಣ್ಯ ನಾಶದಿಂದ ಜಲಚಕ್ರ, ಮುಂಗಾರು ಮಳೆ ಮಾದರಿಯಲ್ಲಿ ವ್ಯತ್ಯಯ ಉಂಟಾಗಲಿದೆ. ಅಪಾಯದಂಚಿನಲ್ಲಿರುವ ಜೀವವೈವಿಧ್ಯ ನಾಶವಾಗುವ ಭೀತಿಯಿದೆ. ನದಿಯ ಸಹಜ ಹರಿವಿಗೆ ತಡೆ ಮಾಡಿದಲ್ಲಿ, ಕರಾವಳಿಯಲ್ಲಿ ಸಮುದ್ರದ ಉಪ್ಪುನೀರು ನದಿಗೆ ಸೇರುತ್ತದೆ. ಇದರಿಂದ ಆ ಭಾಗದಲ್ಲಿ ಕುಡಿಯುವ ನೀರಿನ ತೀವ್ರ ಕೊರತೆ ಉಂಟಾಗುತ್ತದೆ.

ಇತ್ತೀಚೆಗೆ ಸುಪ್ರೀಂ ಕೋರ್ಟ್, ಸಂರಕ್ಷಿತ ಅರಣ್ಯಗಳ ಗಡಿಯಿಂದ ಒಂದು ಕಿ.ಮೀ. ವ್ಯಾಪ್ತಿಯನ್ನು ಪರಿಸರ ಸೂಕ್ಷ್ಮ ವಲಯ ಎಂದು ಘೋಷಿಸಿದ್ದು, ಸದರಿ ಪ್ರದೇಶದಲ್ಲಿ ಯಾವುದೇ ಶಾಶ್ವತ ನಿರ್ಮಾಣಕ್ಕೆ ಅನುಮತಿ ಇಲ್ಲ ಎಂದು ಆದೇಶಿಸಿದೆ. ಅದರಂತೆ, ಈ ಯೋಜನೆ ಜಾರಿ ಮಾಡಲು ಅವಕಾಶವೇ ಇರುವುದಿಲ್ಲ. ಸ್ಥಳೀಯ ಗ್ರಾಮ ಪಂಚಾಯಿತಿಗಳು ಮತ್ತು ತಾಲ್ಲೂಕು ಪಂಚಾಯಿತಿಗಳು ಈ ಯೋಜನೆ ಜಾರಿ ವಿರೋಧಿಸಿ ನಿರ್ಣಯ ಕೈಗೊಂಡಿವೆ.

> ನದಿ ತಿರುವು ಯೋಜನೆಗಳ ಹಿಂದೆ ಕರೆಯುವ ಹಸುವಿನ ಕೆಚ್ಚಲು ಕೊಯ್ಯುವ ಅವಿವೇಕವಿದೆ. ನದಿಗಳು ಪೈಪುಗಳಲ್ಲಿ ಹರಿಸುವ ನೀರಿನ ಮೂಲಗಳಲ್ಲ. ಅವುಗಳ ಸಹಜ ನಡಿಗೆಗೆ ಅಡ್ಡಿ ಉಂಟು ಮಾಡಿದರೆ, ಪಶ್ಚಿಮಘಟ್ಟಗಳಿಗೆ ಗಾಸಿಯಾಗುತ್ತದೆ; ರಾಜ್ಯವೂ ಅಪಾಯ ಎದುರಿಸಬೇಕಾಗುತ್ತದೆ.

ಹೂಳಿನಿಂದ ತುಂಬಿರುವ ತುಂಗಭದ್ರಾ ಜಲಾಶಯದಲ್ಲಿ ನದಿ ಜೋಡಣೆಯಿಂದ ಲಭ್ಯವಾಗುವ ಹೆಚ್ಚುವರಿ ನೀರು ಸಂಗ್ರಹಿಸುವುದು ತಾಂತ್ರಿಕವಾಗಿ ಅಸಾಧ್ಯ. ಅತಿಯಾದ ಮತ್ತು ನಿರಂತರವಾಗಿ ನೀರನ್ನು ಬಳಸಿದ ಪ್ರದೇಶಗಳು ಸವುಳಾಗುತ್ತಿವೆ. ಸ್ವಲ್ಪ ವರ್ಷದ ನಂತರದಲ್ಲಿ ಆ ಭೂಮಿಯಲ್ಲಿ ಯಾವ ಬೆಳೆಯನ್ನೂ ಬೆಳೆಯುವುದು ಅಸಾಧ್ಯವಾಗಲಿದೆ.

ಕರ್ನಾಟಕ ಜಲ ಸಂಪನ್ಮೂಲ ಇಲಾಖೆಯು ಅಘನಾಶಿನಿ ನದಿಯನ್ನು ಚಿತ್ರದುರ್ಗ ಜಿಲ್ಲೆಯ ವೇದಾವತಿ ನದಿಗೆ ಜೋಡಿಸುವ ₹23,000 ಕೋಟಿ ಮೌಲ್ಯದ ಬೃಹತ್ ಯೋಜನೆಯ ಸಾಧ್ಯತಾ ವರದಿಯನ್ನು ತಯಾರಿಸಿದೆ. ಇದರನ್ವಯ 35 ಟಿಎಂಸಿ ಅಡಿ ನೀರನ್ನು ತಿರುಗಿಸಿ ಹಿರಿಯೂರು ತಾಲ್ಲೂಕಿನ ವಾಣಿವಿಲಾಸ ಸಾಗರವನ್ನು ತುಂಬಿಸುವ ಉದ್ದೇಶವಿದೆ. 194 ಕಿ.ಮೀ. ಉದ್ದದ ಕೊಳವೆಮಾರ್ಗ ಸಿದ್ದಾಪುರ, ಗೋಳಿಮಕ್ಕಿ, ಹಾರ್ಸಿಕಟ್ಟಾ, ಸಾಗರ, ಶಿವಮೊಗ್ಗ, ತರೀಕೆರೆ ಮತ್ತು ಅಜ್ಜಂಪುರ ಮೂಲಕ ಸಾಗಲಿದೆ ಎನ್ನಲಾಗಿದೆ.


ಹಾವೇರಿ ಸಂಸದ ಬಸವರಾಜ ಬೊಮ್ಮಾಯಿ ಪಶ್ಚಿಮಘಟ್ಟವಾಸಿಗಳ ಮನವೊಲಿಸಿ ನದಿ ಜೋಡಣೆ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಹೇಳಿದ್ದಾರೆ. ಬೇಡ್ತಿ–ಅಘನಾಶಿನಿ ನದಿ ತಿರುವಿನಿಂದ ಬಯಲು ನಾಡು ಹಸಿರಾಗುವುದು ಹಾಗೂ ಇಲ್ಲಿನ ಜನರಿಗೆ ಕುಡಿಯುವ ನೀರು ಲಭ್ಯವಾಗುವುದು ಎಂಬುದು ಅವರ ಮಾತಿನ ತಾತ್ಪರ್ಯ. ಯೋಜನೆಯ ಸಮರ್ಥಕರು ರಾಯಚೂರು, ಕೊಪ್ಪಳ ಮತ್ತು ಗದಗ ಜಿಲ್ಲೆಗಳ ನೀರಿನ ಕೊರತೆಯನ್ನು ಮುಂದಿಡುತ್ತಾರೆ. ಆದರೆ, ಈ ಪ್ರದೇಶಗಳ ನೀರಿನ ಸಮಸ್ಯೆಗೆ ಬೇರೆಯದೇ ಕಾರಣವಿದೆ. ಈ ಜಿಲ್ಲೆಗಳಲ್ಲಿ ಇತ್ತೀಚಿನ ದಶಕಗಳಲ್ಲಿ ವಿಪರೀತ ನೀರು ಬೇಡುವ ಬೆಳೆಗಳಾದ ಭತ್ತ, ಕಬ್ಬು, ಬಾಳೆ ಬೆಳೆಯಲಾಗುತ್ತಿದೆ. ಒಂದು ಹೆಕ್ಟೇರ್ ಕಬ್ಬು ಬೆಳೆಯು ವರ್ಷಕ್ಕೆ 15–20 ದಶಲಕ್ಷ ಲೀಟರ್ ನೀರು ಬೇಡುತ್ತದೆ. ಬರ ಪ್ರದೇಶದಲ್ಲಿ ಇಂತಹ ಬೆಳೆ ವಿನ್ಯಾಸವೇ ನೀರಿನ ಸಂಕಷ್ಟಕ್ಕೆ ಮೂಲ ಕಾರಣ. ಅಲ್ಲದೆ, ತುಂಗಭದ್ರಾ, ವರದಾ, ವೇದಾವತಿ ಕಣಿವೆಯಲ್ಲಿ ಈಗಾಗಲೇ ಅಣೆಕಟ್ಟುಗಳು, ಕಾಲುವೆಗಳಿವೆ. ಅಲ್ಲಿ ನೀರಿನ ದುರ್ಬಳಕೆ, ಸೋರಿಕೆ, ಅಸಮರ್ಪಕ ನಿರ್ವಹಣೆ ಮುಂದುವರಿದಿದೆ. ಇವುಗಳನ್ನು ಸರಿಪಡಿಸದೇ ನದಿ ತಿರುವು ಯೋಜನೆ ಕೈಗೆತ್ತಿಕೊಳ್ಳುವುದು ಸಮಸ್ಯೆಗೆ ಪರಿಹಾರವಲ್ಲ.

ವೈಜ್ಞಾನಿಕವಾಗಿ ನೋಡಿದರೆ, ರಾಯಚೂರು–ಕೊಪ್ಪಳ–ಗದಗ ಪ್ರದೇಶಗಳಿಗೆ ನದಿ ತಿರುವು ಮಾತ್ರವೇ ಪರಿಹಾರ ಎಂಬುದು ತಪ್ಪುಕಲ್ಪನೆ. ಬರ ಪ್ರದೇಶಗಳಿಗೆ ಸೂಕ್ತವಾದ ಜೋಳ, ಸಜ್ಜೆ, ರಾಗಿ, ತೊಗರಿ, ಕಡಲೆ, ಎಣ್ಣೆಕಾಳುಗಳು ಮುಂತಾದ ಅತಿ ಕಡಿಮೆ ನೀರು ಬೇಡುವ ಬೆಳೆಗಳನ್ನು ಅಲ್ಲಿ ಬೆಳೆಯಲಾಗುತ್ತಿತ್ತು. ಸೂಕ್ಷ್ಮ ನೀರಾವರಿ, ಹನಿ ನೀರಾವರಿ ಪದ್ಧತಿ ಅಳವಡಿಸಿಕೊಳ್ಳುವುದರಿಂದ ಶೇ 30–40ರಷ್ಟು ನೀರು ಉಳಿತಾಯವಾಗಲಿದೆ. ಬೆಳೆ ವಿನ್ಯಾಸ ಬದಲಾವಣೆ ಹಾಗೂ ನೀರಾವರಿಯಲ್ಲಿ ದಕ್ಷತೆ ಹೆಚ್ಚಿಸಿದಲ್ಲಿ, ಹಾಲಿ ಲಭ್ಯವಿರುವ ನೀರಿನಲ್ಲೇ ಹೆಚ್ಚಿನ ಪ್ರದೇಶವನ್ನು ನೀರಾವರಿ ಭೂಮಿಯನ್ನಾಗಿ ಪರಿವರ್ತಿಸಬಹುದು. ಇಂತಹ ಸುಧಾರಣೆಗಳು ರಾಜಕೀಯವಾಗಿ ಆಕರ್ಷಕವಾಗಿರದಿದ್ದರೂ, ದೀರ್ಘಕಾಲೀನ ಪರಿಹಾರಗಳಾಗಿವೆ.

ಮಹದಾಯಿ ನದಿ ತಿರುವು ಯೋಜನೆ ಈಗಾಗಲೇ ಪಶ್ಚಿಮಘಟ್ಟಗಳಲ್ಲಿ ಎಬ್ಬಿಸಿರುವ ವಿವಾದ ಎಚ್ಚರಿಕೆಯ ಗಂಟೆಯಾಗಿದೆ. ಅತ್ತ ಗೋವಾ ರಾಜ್ಯವೂ ಈ ನದಿ ತಿರುವು ಯೋಜನೆಗೆ ವಿರೋಧ ವ್ಯಕ್ತಪಡಿಸುತ್ತಲೇ ಇದೆ. ಮೂಲತಃ ಮಲಪ್ರಭಾ ಅಣೆಕಟ್ಟು (1974) ಕುಡಿಯುವ ನೀರಿಗಾಗಿ ಪ್ರಾರಂಭವಾದ ಯೋಜನೆಯಾಗಿತ್ತು. ಆದರೆ, ಅತಿ ಹೆಚ್ಚು ನೀರು ಕಬ್ಬು ಬೆಳೆಗೆ ಮತ್ತು ಸಕ್ಕರೆ ಕಾರ್ಖಾನೆಗಳ ಚಟುವಟಿಕೆಗಳಿಗೆ ಬಳಕೆಯಾಗುತ್ತಿದೆ. ನೀರಿನ ತೀವ್ರ ಕೊರತೆಯಿರುವ ಮಲಪ್ರಭಾ ಜಲಾನಯನ ಪ್ರದೇಶದಲ್ಲಿ 2005ರಲ್ಲಿ 25,000 ಹೆಕ್ಟೇರ್ ಕಬ್ಬು ಬೆಳೆಯಲಾಗುತ್ತಿತ್ತು. 2025ರಲ್ಲಿ ಮೂರು ಪಟ್ಟು ಹೆಚ್ಚಾಗಿ, 96,000 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ ಹಾಗೂ 132 ಟಿಎಂಸಿ ಅಡಿ ನೀರನ್ನು ಬಳಸಲಾಗುತ್ತಿದೆ. 2 ಲಕ್ಷ ಹೆಕ್ಟೇರ್ ಮಳೆಯಾಶ್ರಿತ ಪ್ರದೇಶದಲ್ಲಿ ಸಾಂಪ್ರದಾಯಿಕವಾಗಿ ಬೆಳೆಯುವ ಬೆಳೆಗಳಿಗೆ ಬರೀ 24 ಟಿಎಂಸಿ ಅಡಿ ನೀರು ಬಳಕೆಯಾಗುತ್ತಿದೆ. ಜೊತೆಗೆ, ಸಕ್ಕರೆ ಕಾರ್ಖಾನೆಗಳ ಮಾಲೀಕತ್ವ ರಾಜಕೀಯ ಶಕ್ತಿಗಳ ಕೈಯಲ್ಲಿರುವುದು ಯೋಜನೆಗಳ ಬಗೆಗಿನ ಅನುಮಾನವನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ.

ಬೇಡ್ತಿ–ಅಘನಾಶಿನಿ ನದಿ ಜೋಡಣೆ ಯೋಜನೆಯಲ್ಲಿಯೂ ಇದೇ ರೀತಿಯ ಅಪಾಯ ಕಾಣುತ್ತಿದೆ. ಆರಂಭದಲ್ಲಿ ಬರ ಪ್ರದೇಶಗಳಿಗೆ ನೀರು ಎಂದು ಹೇಳಿ, ನಂತರ ನೀರು ಹೆಚ್ಚು ಬೇಡುವ ಬೆಳೆಗಳು ಮತ್ತು ಕೈಗಾರಿಕೆಗಳಿಗೆ ಮಾರ್ಗ ತೆರೆದರೆ, ಪಶ್ಚಿಮಘಟ್ಟಗಳ ನಾಶ ಅನಿವಾರ್ಯ.

ನದಿಗಳು ಪೈಪಿನಲ್ಲಿ ಹರಿಸುವ ನೀರಿನ ಮೂಲಗಳಲ್ಲ; ಅವು ಜೀವಂತ ಪರಿಸರ ವ್ಯವಸ್ಥೆಗಳು. ಬೇಡ್ತಿ–ಅಘನಾಶಿನಿ ನದಿ ತಿರುವು ಯೋಜನೆ ಉತ್ತರ ಕನ್ನಡದ ಕಾಡು, ಕರಾವಳಿ ಮತ್ತು ಪಶ್ಚಿಮಘಟ್ಟಗಳ ಭವಿಷ್ಯವನ್ನು ನಾಶ ಮಾಡುತ್ತದೆ. ಬರ ಪ್ರದೇಶಗಳ ಸಮಸ್ಯೆಗೆ ಪರಿಹಾರ ಹುಡುಕುವಾಗ, ಮತ್ತೊಂದು ಪ್ರದೇಶವನ್ನು ಬರದ ದಾರಿಯಲ್ಲಿ ತಳ್ಳುವುದು ನ್ಯಾಯವೂ ಅಲ್ಲ, ವಿವೇಕವೂ ಅಲ್ಲ.



ವಾಚಕರ ವಾಣಿ

ಕೆಇಎ ಸಹಾಯವಾಣಿಯ ಅಸಹಾಯಕತೆ

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ವಿವಿಧ ವೃತ್ತಿಪರ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆಸುವ ಸಿಇಟಿ ಪರೀಕ್ಷೆಗೆ ಅರ್ಜಿ ಆಹ್ವಾನಿಸಿದೆ. ಅಭ್ಯರ್ಥಿಗಳ ಸಹಾಯಕ್ಕಾಗಿ ‘08023460460’ ಸಹಾಯವಾಣಿ ತೆರೆದಿದೆ. ಆದರೆ, ಈ ಸಂಖ್ಯೆಗೆ ಕರೆ ಮಾಡಿದರೆ ಹತ್ತರಿಂದ ಹದಿನೈದು ನಿಮಿಷ ಕಾಯಬೇಕಾಗುತ್ತದೆ. ಇನ್ನೇನು ನಮ್ಮ ಸರದಿ ಬಂತು ಎನ್ನುವಷ್ಟರಲ್ಲಿ ಕರೆ ಕಡಿತಗೊಳ್ಳುತ್ತದೆ. ಎಷ್ಟು ಬಾರಿ ಪ್ರಯತ್ನಿಸಿದರೂ ಇದೇ ಪರಿಸ್ಥಿತಿ. ಇದು ಹೀಗೆಯೇ ಮುಂದುವರಿದರೆ ಅರ್ಜಿ ಸಲ್ಲಿಸುವ ಸಮಯದಲ್ಲಿ ತೊಂದರೆ ಅನುಭವಿಸುತ್ತಿರುವ ವಿದ್ಯಾರ್ಥಿಗಳ ಸಹಾಯಕ್ಕೆ ಬರುವುದಾದರೂ ಯಾರು? ಪ್ರಾಧಿಕಾರವು ಈ ಸಮಸ್ಯೆ ಪರಿಹರಿಸದಿರುವುದು ಯಕ್ಷಪ್ರಶ್ನೆಯಾಗಿದೆ.

ಮಂಜುನಾಥ ಸು.ಮ., ಚಿಂತಾಮಣಿ

‘ಸಂವಿಧಾನವೇ ಬೆಳಕು’ ಸ್ತುತ್ಯರ್ಹ ನಡೆ

ಸಂವಿಧಾನವು ಪ್ರಜಾಪ್ರಭುತ್ವದ ಆತ್ಮ ಹಾಗೂ ದೇಶದ ಸರ್ವಶ್ರೇಷ್ಠ ಗ್ರಂಥವಾಗಿದೆ. ಆದರೆ, ಸಮಸಮಾಜದ ಆಶಯದಡಿ ಬಿ.ಆರ್. ಅಂಬೇಡ್ಕರ್ ರಚಿಸಿರುವ ಸಂವಿಧಾನವನ್ನು ಬುಡಮೇಲು ಮಾಡುವ ಹುನ್ನಾರ ನಡೆಯುತ್ತಿದೆ. ಕೆಲವು ಜನಪ್ರತಿನಿಧಿಗಳೇ ಸಂವಿಧಾನದ ಪರಾಮರ್ಶೆಯ ಮಾತುಗಳನ್ನಾಡುತ್ತಿದ್ದಾರೆ. ಆದರೆ, ಅವರಿಗೆ ಅದರ ಆಶಯಗಳನ್ನು ಈಡೇರಿಸುವ ಮನಸ್ಸಿಲ್ಲ. ಇಂತಹ ಸಂಕ್ರಮಣ ಸ್ಥಿತಿಯಲ್ಲಿ ‘ಸಂವಿಧಾನವೇ ಬೆಳಕು’ ಕಾರ್ಯಕ್ರಮದ ಮೂಲಕ ಅದರ ಮೂಲತತ್ತ್ವಗಳ ಬಗ್ಗೆ ‘ಪ್ರಜಾವಾಣಿ’ ಮೂಡಿಸುತ್ತಿರುವ ಜಾಗೃತಿ ಸ್ತುತ್ಯರ್ಹ. ಸಂವಿಧಾನ ತಜ್ಞರು, ವಕೀಲರು, ನ್ಯಾಯಮೂರ್ತಿಗಳು, ಹಿರಿಯ ಅಧಿಕಾರಿಗಳು, ಗಣ್ಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಿರುವುದು ಅಭಿನಂದನೀಯ.

ದಡದಹಳ್ಳಿ ರಮೇಶ್, ಚಾಮರಾಜನಗರ

ಬಜೆಟ್ ಪ್ರತಿ: ಸ್ಥಳೀಯ ಭಾಷೆ ನಿರ್ಲಕ್ಷ್ಯ

ಕೇಂದ್ರ ಸರ್ಕಾರವು ಪ್ರತಿವರ್ಷ ಬಜೆಟ್ ಮತ್ತು ಆರ್ಥಿಕ ಸಮೀಕ್ಷೆಯ ವರದಿಗಳನ್ನು ವೆಬ್‌ಸೈಟ್‌ನಲ್ಲಿ ಬಿಡುಗಡೆ ಮಾಡುತ್ತದೆ. ಅದರ ವಿವರವು ಹಿಂದಿ ಮತ್ತು ಇಂಗ್ಲಿಷ್‌ನಲ್ಲಿರುತ್ತದೆ. ಇದರಿಂದ ಸ್ಥಳೀಯ ಭಾಷೆಯಲ್ಲಿ ಕಲಿತವರು ಅರ್ಥೈಸಿಕೊಳ್ಳಲು ಸಾಧ್ಯವಿಲ್ಲ. ಎಲ್ಲಾ ರಾಜ್ಯಗಳ ಪ್ರಾದೇಶಿಕ ಭಾಷೆಯಲ್ಲಿ ಆರ್ಥಿಕ ಸಮೀಕ್ಷೆ ಮತ್ತು ಬಜೆಟ್ ಕುರಿತ ವಿವರ ಪ್ರಕಟಿಸಬೇಕಿದೆ. ಇದರಿಂದ ದೇಶದ ಆಗುಹೋಗುಗಳ ಬಗ್ಗೆ ತಿಳಿದುಕೊಳ್ಳಲು ಅನುಕೂಲವಾಗಲಿದೆ. ಜೊತೆಗೆ, ಪ್ರಾದೇಶಿಕ ಭಾಷೆಗಳಿಗೂ ಹೆಚ್ಚಿನ ಮನ್ನಣೆ ನೀಡಿದಂತಾಗುತ್ತದಲ್ಲವೆ?

ಕಲ್ಲನಗೌಡ ಬಿರಾದಾರ, ವಿಜಯಪುರ

ಪಿಎಚ್.ಡಿ ನೈಜತೆ ಪತ್ತೆಗೆ ಸಮಿತಿ ರಚಿಸಿ

2025–26ನೇ ಸಾಲಿಗೆ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಿಗೆ ಆಯ್ಕೆಯಾದ ಅತಿಥಿ ಉಪನ್ಯಾಸಕರು, ಪದವಿಯ ನೈಜತೆ ಪ್ರಮಾಣಪತ್ರ ಕೊಡಬೇಕೆಂದು ಆದೇಶಿಸಿರುವುದು ಸ್ವಾಗತಾರ್ಹ. ಇತ್ತೀಚೆಗೆ ಐದಾರು ಲಕ್ಷ ರೂಪಾಯಿ ಕೊಟ್ಟು ಹೊರರಾಜ್ಯಗಳಿಂದ ಪಿಎಚ್.ಡಿ ಪದವಿ ಪ್ರಮಾಣಪತ್ರ ಪಡೆಯುತ್ತಿರುವ ದಂಧೆ ಹೆಚ್ಚಿದೆ. ಈ ನಕಲಿ ಪಿಎಚ್.ಡಿ ಹಾವಳಿ ಅತಿಥಿ ಉಪನ್ಯಾಸಕರಿಗಷ್ಟೆ ಸೀಮಿತವಾಗಿಲ್ಲ. 2009ರಲ್ಲಿ ಪದವಿ ಕಾಲೇಜುಗಳಿಗೆ ನೇಮಕವಾಗಿರುವ ಕೆಲವು ಸಹಾಯಕ ಪ್ರಾಧ್ಯಾಪಕರು ಬಡ್ತಿ ಹಾಗೂ ಹೆಚ್ಚಿನ ಸಂಬಳದ ಆಸೆಗಾಗಿ ಕಳ್ಳಮಾರ್ಗದಲ್ಲಿ ನಕಲಿ ಡಾಕ್ಟರೇಟ್ ಪದವಿ ಪಡೆದಿರುವ ಶಂಕೆಯಿದೆ. ಅನುದಾನಿತ ಪದವಿ ಕಾಲೇಜುಗಳಲ್ಲೂ ಕೆಲವರು ನಕಲಿ ಪಿಎಚ್.ಡಿ ಪ್ರಮಾಣಪತ್ರ ಸಲ್ಲಿಸಿ ಹುದ್ದೆ ಗಿಟ್ಟಿಸಿಕೊಂಡಿರುವ ಸಾಧ್ಯತೆಯಿದೆ. ಹಾಗಾಗಿ, ಪಿಎಚ್.ಡಿ ಪ್ರಮಾಣಪತ್ರಗಳ ನೈಜತೆ ಪರಿಶೀಲನೆಗಾಗಿ ಉನ್ನತ ಶಿಕ್ಷಣ ಇಲಾಖೆಯು ಸಮಿತಿ ರಚಿಸಬೇಕಿದೆ. ಕಾನೂನು ಉಲ್ಲಂಘಿಸಿದವರನ್ನು ಕೆಲಸದಿಂದ ವಜಾಗೊಳಿಸಬೇಕಿದೆ.

ಹೊನ್ನಪ್ಪ ಹೊನ್ನಪ್ಪನವರ, ಹಾವೇರಿ

ಶಿಕ್ಷಕರ ನೇಮಕಾತಿಗೆ ಸರ್ಕಾರದ ಅಸಡ್ಡೆ

ರಾಜ್ಯದ ಸರ್ಕಾರಿ ಶಾಲೆಗಳಲ್ಲಿರುವ ಶಿಕ್ಷಕರ ಕೊರತೆ ನೀಗಿಸಲು ಹೊಸದಾಗಿ ಶಿಕ್ಷಕರ ನೇಮಕಾತಿಗೆ ಸರ್ಕಾರ ಮುಂದಾಗಿದೆ. ಹಂತ ಹಂತವಾಗಿ ಭರ್ತಿ ಮಾಡಿಕೊಳ್ಳಲಾಗುವುದು ಎಂದು ಕಳೆದ ವರ್ಷವೇ ಶಿಕ್ಷಣ ಸಚಿವರು ಪ್ರಕಟಿಸಿದ್ದರು. ಅದರಂತೆ ಶಿಕ್ಷಕರ ಅರ್ಹತಾ ಪರೀಕ್ಷೆಯನ್ನೂ ನಡೆಸಲಾಗಿದೆ. ಆದರೆ, ನೇಮಕಾತಿ ಮಾತ್ರ ನನೆಗುದಿಗೆ ಬಿದ್ದಿದೆ. ಕೆಪಿಎಸ್ ಶಾಲೆಗಳನ್ನು ತೆರೆಯುವ ಉತ್ಸಾಹದಲ್ಲಿರುವ ಸರ್ಕಾರಕ್ಕೆ ಶಿಕ್ಷಕರ ಕೊರತೆ ಬಗ್ಗೆ ಗಮನವಿಲ್ಲ. ಬೋಧಕರೇ ಇಲ್ಲದಿದ್ದರೆ ಸರ್ಕಾರಿ ಶಾಲೆಗಳು ಉಳಿಯುವುದಾದರೂ ಹೇಗೆ? ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳಿಗೆ ನೇಮಕಾತಿ ನಡೆದು ಹಲವು ವರ್ಷಗಳೇ ಕಳೆದಿವೆ. ಸರ್ಕಾರವು ಹೇಳಿಕೆಯಲ್ಲಿಯೇ ಕಾಲಹರಣ ಮಾಡುವುದು ಸರಿಯಲ್ಲ. ಸಕಾಲದಲ್ಲಿ ಖಾಲಿ ಹುದ್ದೆಗಳ ಭರ್ತಿಗೆ ಕ್ರಮವಹಿಸಬೇಕಿದೆ.

ಪ್ರಶಾಂತ ಹೂಗಾರ, ವಿಜಯಪುರ

‘ಖಾದಿ’ಯ ಬಣ್ಣ ಬದಲಿಸುವ ಅಪಾಯ?

ಖಾದಿ ಉತ್ಪನ್ನಗಳನ್ನು ಉತ್ತೇಜಿಸುವ ಉದ್ದೇಶದಿಂದ ಸರ್ಕಾರಿ ನೌಕರರು ಪ್ರತಿ ತಿಂಗಳ ಮೊದಲ ಶನಿವಾರ ಖಾದಿ ಬಟ್ಟೆ ಧರಿಸುವಂತೆ ಸರ್ಕಾರ ಸುತ್ತೋಲೆ ಹೊರಡಿಸಿದೆ. ಖಾದಿ ಉತ್ಪನ್ನವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸರ್ಕಾರದ ಈ ಹೆಜ್ಜೆ ಸ್ವಾಗತಾರ್ಹ. ಆದರೆ, ಆ ನೆಪದಲ್ಲಿ ಸರ್ಕಾರಿ ನೌಕರರಿಗೆ ಖಾದಿ ತೊಡುವಂತೆ ಸೂಚಿಸುವುದು ಸರಿಯಲ್ಲ. ಖಾದಿ ತೊಡುವ ಔಚಿತ್ಯದ ಬಗ್ಗೆ, ಮಹತ್ವದ ಬಗ್ಗೆ ನೌಕರರಿಗೆ ಅರ್ಥವಾಗುವಂತೆ ಕಾರ್ಯಕ್ರಮ ರೂಪಿಸುವುದನ್ನು ಮಾಡಬೇಕು. ಅದರ ಹೊರತು ಆದೇಶದ ಮೂಲಕ ಮಾಡಲು ಹೊರಟರೆ ಮುಂದೆ ಬರುವ ಸರ್ಕಾರಗಳು ಆ ಖಾದಿಯ ಬಣ್ಣವನ್ನೂ ನಿರ್ಧರಿಸಬಹುದು. ಆದ್ದರಿಂದ ಇದನ್ನು ಸರ್ಕಾರಿ ಆದೇಶದಂತಲ್ಲದೆ ಅರಿವು ಮೂಡಿಸುವ ಕ್ರಮವಾಗಿ ನೋಡುವಂತಾಗಲಿ.

ಹುಲಿಕುಂಟೆ ಮೂರ್ತಿ, ಬೆಂಗಳೂರು

ಚುರುಮುರಿ



ಆಪರೇಷನ್ ‘ಮಾರು’ವೇಷ!

• ತುರುವೇಕೆರೆ ಪ್ರಸಾದ್

‘ನಾಯಕ್ರು ರಾಜ್ರಂಗೆ ಮಾರುವೇಷದಾಗೆ ಓಗಿ ಜನ್ರ ಕಷ್ಟ ಸುಖ ತಿಳ್ಕಬೇಕು ಅಂತ ವಿಧಾನಸಭೆಯ ಅಧಿವೇಶನದಲ್ಲಿ ಕಮಲದೋರು ಉಪದೇಶ ಮಾಡವ್ರಲ್ಲಪ್ಪ’ ಎಂದು ಗುದ್ಲಿಂಗ ಸಭೆಯಲ್ಲಿ ಮಾತು ಆರಂಭಿಸಿದ.

‘ಅಂದ್ರೇನ್ಲಾ? ನಮ್ ನಾಯಕ್ರು ಶಕ್ತಿ ಯೋಜನೆ ಎಂಗ್ ನಡೀತೈತೆ ಅಂತ ನೋಡಕ್ಕೆ ಸೀರೆ ಉಟ್ಕಂಡು ಬಸ್ ಹತ್ಬೇಕೇನ್ಲಾ?’ ರಾಂಗಾದ ಮಾಲಿಂಗ.

‘ಅಂಗಲ್ಲ ಕಣಲೇ, ಮನೆ ಮೇಡಂಗೆ ಮಾರುವೇಷ ಆಕಿ ತಾವೂ ಮಾರುವೇಷ ಆಕ್ಕಂಡು ಟಿಪಿಕಲ್ ಅಮ್ಮಾವ್ರ ಗಂಡನ ತರ ತಲೆ ಮೇಲೆ 10 ಕೆಜಿ ಅನ್ನಭಾಗ್ಯ ಅಕ್ಕಿ ಒತ್ಕಂಡು ಹಳ್ಳಿ ಬಸ್ ಹತ್ಬೇಕು’ ಎಂದ ಕಲ್ಲೇಶಿ.

‘ಗೃಹಜ್ಯೋತಿ ಚೆಕ್ ಮಾಡಕ್ಕೆ ವೇಷ ಮರುಸ್ಕಳೋ ಅಂಗೇ ಇಲ್ಲ. ಸಂಜೆ ಹಳ್ಳಿ ಕಡೆ ಕರೆಂಟೇ ಇರಕಿಲ್ಲವಲ್ಲ! ನೇರ ವೇಷ್ದಲ್ಲೇ ಜನ ಪರದಾಡೋದನ್ನ ಬ್ಯಾಟರಿ ಹಾಕಿ ನೋಡ್ಬಹುದು’.

‘ರಾಜಕೀಯ ನಿಮಿತ್ತಂ ಬಹುಕೃತ ವೇಷಂ! ಆಪರೇಷನ್ ಮಾರುವೇಷ! ನಾಯಕ್ರಿಗೆ ಆ ಜಯಂತಿ, ಈ ಪುಣ್ಯತಿಥಿ ಅಂತ ವೇಷ ಆಕ್ಕಂಡು ರೂಢಿ ಇರ್ತದೆ ಬಿಡು. ಇವಾಗ ನಾಯಕ್ರು ಚರಂಡಿ ಕಂಟ್ರಾಕ್ಟು ಮಾಡಸ್ಬೇಕು, ಟ್ರಾಕ್ಟ್ರು ಓಡುಸ್ಬೇಕು, ಎಲ್ಲೆಲ್ಲಿ ಅನ್ಯಾಯ ಆಯ್ತಾ ಅದೆ ಅಲ್ಲೆಲ್ಲಾ ಮೋಸಕ್ಕೆ ತಕ್ಕ ವೇಷ ಹಾಕ್ಬೇಕು ಅನ್ನು’.

‘ಅದಕ್ಕಿಂತ ಎಚ್ಚಾಗಿ ಮಗರಾಮ ಯವ್ಯಾವ ಖಾತೇಲಿ ಕ್ಯಾತೆ ತೆಗೆದವ್ರೆ? ಯಾರ್‍ಯಾರ ‘ಚಾರ್ಜ್’ ಡೌನ್ ಮಾಡ್ತಾವ್ರೆ ಅಂತ ನೋಡಕ್ಕೂ ಮಾರುವೇಷ ಹಾಕ್ಬೇಕು’.

‘ಅದಿರ್ಲಿ, ನಾಯಕ್ರೇ ಮಾರುವೇಷದಲ್ಲಿ ಒಂಟವ್ರೆ ಅಂತ ಇಡೀ ಕ್ಯಾಬಿನೆಟ್ಟೇ ವೇಷ ಮರುಸ್ಕಂಡು ಒಂಟ್ಬುಟ್ರೆ ಲಂಚಕೋರರ ಗತಿ ಏನಪ್ಪಾ?’

‘ಅಂಗೆಲ್ಲಾ ಆಗಕಿಲ್ಲ ಬಿಡು. ಹೋಲ್‌ಸೇಲ್ ಕುರ್ಚಿ ಬಿಟ್ ಓದ್ರೆ ಮಾರುವೇಷದಲ್ಲಿ ಕುರ್ಚಿ ಮೇಲೆ ಕುಂತುಬಿಡ್ತಾರೆ ಅನ್ನೋ ಭಯ ಇರುತ್ತೆ. ‘ಮಾರು’ವೇಷ ಹಾಕ್ಕಂಡು ಕುದುರೆ ಮಾರೋ ನಕುಲರೂ ಇರ್ತಾರೆ’ ಎಂದು ಪರ್ಮೇಶಿ ಬಿಡಿಸಿ ಹೇಳಿದ.

ಪರ್ಮೇಶಿಯ ಮಾತಿಗೆ ಸಭೆಯಲ್ಲಿ ಪಾಲ್ಗೊಂಡಿದ್ದ ಎಲ್ಲರೂ ಗೊಳ್ಳನೆ ನಕ್ಕರು.

ಸಂಗತ

ಖಾದಿ: ಅರಿವಿಲ್ಲದ ದಾರಿ, ದುಡುಕು ನಡೆ

ಸರ್ಕಾರಿ ನೌಕರರು ತಿಂಗಳಿಗೊಮ್ಮೆ ಖಾದಿ ಧರಿಸಬೇಕೆನ್ನುವ ಉದ್ದೇಶ ಚೆನ್ನಾಗಿದೆ. ಆದರೆ, ದಿಢೀರ್ ತೀರ್ಮಾನದಿಂದ ಖಾದಿ ಉದ್ಯಮಕ್ಕೆ ಪ್ರಯೋಜನವಿಲ್ಲ.


• ಸಂತೋಷ ಕೌಲಗಿ

ಸರ್ಕಾರಿ ಹಾಗೂ ಸರ್ಕಾರಿ ಸ್ವಾಮ್ಯದ ನಿಗಮ–ಮಂಡಳಿ, ಪ್ರಾಧಿಕಾರ, ವಿಶ್ವವಿದ್ಯಾಲಯ, ಅನುದಾನಿತ ಸಂಸ್ಥೆಗಳ ಅಧಿಕಾರಿಗಳು ಹಾಗೂ ಎಲ್ಲ ನೌಕರರು ಪ್ರತಿ ತಿಂಗಳ ಮೊದಲ ಶನಿವಾರ ಸ್ವಯಂಪ್ರೇರಣೆಯಿಂದ ಖಾದಿ ಬಟ್ಟೆ ಧರಿಸಿ ಕರ್ತವ್ಯ ನಿರ್ವಹಿಸುವಂತೆ ಸರ್ಕಾರ ಸುತ್ತೋಲೆ ಹೊರಡಿಸಿದೆ. ಈ ಸುತ್ತೋಲೆ ಪ್ರಶಂಸಾರ್ಹ. ಆದರೆ, ಅಧಿಕಾರಿಗಳಿಗೆ ವಸ್ತುಸ್ಥಿತಿಯ ಅರಿವು ಇದ್ದಂತಿಲ್ಲ. ಈ ಪ್ರಕ್ರಿಯೆಯನ್ನು ಚಾಲ್ತಿಗೆ ತರಲು ಇರಬಹುದಾದ ಸಮಸ್ಯೆಗಳ ಕಡೆಗೆ ಅಧಿಕಾರ ನಡೆಸುವವರು ಗಮನಹರಿಸಿದಂತಿಲ್ಲ.

ಖಾದಿಯಲ್ಲಿ ಎರಡು ವಿಧ: ಒಂದು, ಅಸಲಿ, ಮತ್ತೊಂದು ನಕಲಿ. ಪ್ರಸ್ತುತ ದೇಶದಲ್ಲಿ ಮಾರಾಟವಾಗುತ್ತಿರುವ ಖಾದಿಯಲ್ಲಿ ಹೆಚ್ಚಿನ ಪ್ರಮಾಣದ್ದು ನಕಲಿಯೇ.

ಅಸಲಿ ಖಾದಿ, ಕೈಯಿಂದ ನೂತ ನೂಲಿನಿಂದ, ಕೈಮಗ್ಗದಲ್ಲಿ ತಯಾರಾಗುವ ಬಟ್ಟೆ. ಅದಕ್ಕೆ ತನ್ನದೇ ಆದ ಇತಿಮಿತಿ ಇದೆ. ಮೊದಲನೆಯದಾಗಿ ಉತ್ಪಾದನೆ. ಅಸಲಿ ಖಾದಿಯನ್ನು ಆತುರದಲ್ಲಿ ದೊಡ್ಡ ಪ್ರಮಾಣದಲ್ಲಿ ಉತ್ಪತ್ತಿ ಮಾಡಲು ಸಾಧ್ಯವಿಲ್ಲ. ಒಬ್ಬ ನೇಕಾರ ದಿನಕ್ಕೆ 7 ಮೀಟರ್‌ಗಿಂತ ಹೆಚ್ಚು ನೇಯ್ಗೆ ಮಾಡಲಾರ. ಹಾಗೆಯೇ, ಕೊಳ್ಳುಬಾಕ ಸಂಸ್ಕೃತಿಯ ಗ್ರಾಹಕರ ಬೇಡಿಕೆಗಳಾದ ಕಡಿಮೆ ಧಾರಣೆ, ಕಣ್ಣಿಗೆ ಒಪ್ಪುವ ಬಣ್ಣ ಮತ್ತು ವಿನ್ಯಾಸಗಳ ಆಯ್ಕೆಯನ್ನು ಹೇರಳವಾಗಿ ನೀಡಲು ನೈಜ ಖಾದಿ ಉದ್ಯಮಕ್ಕೆ ಸಾಧ್ಯವಿಲ್ಲ.

ಅಸಲಿಯಂತೆಯೇ ಕಾಣಿಸುವ ನಕಲಿ ಖಾದಿ ಬಟ್ಟೆ, ಗಿರಣಿ ನೂಲು ಬಳಸಿ ವಿದ್ಯುತ್ ಮಗ್ಗ ಇಲ್ಲವೇ ದೊಡ್ಡ ಗಿರಣಿಗಳಲ್ಲಿ ರೂಪುಗೊಳ್ಳುತ್ತದೆ. ಇದರ ಬೆಲೆ ಕಡಿಮೆ ಮತ್ತು ವಿನ್ಯಾಸಗಳ ಆಯ್ಕೆ ಹೆಚ್ಚು. ಗ್ರಾಹಕರು ನೀಡುವ ಹಣದ ಹೆಚ್ಚಿನ ಪಾಲು ಕುಶಲಕರ್ಮಿಗಳಿಗೆ ಹೋಗದೆ ವ್ಯಾಪಾರಸ್ಥರಿಗೆ ಹೋಗುತ್ತದೆ.



ಹೆಚ್ಚಿನ ಗ್ರಾಹಕರಿಗೆ ಖಾದಿ ಬಟ್ಟೆ, ಕೈಮಗ್ಗದ ಬಟ್ಟೆ, ಗಿರಣಿ ಬಟ್ಟೆ, ಹತ್ತಿ ಬಟ್ಟೆ, ಪಾಲಿಯೆಸ್ಟರ್ ಬಟ್ಟೆಗಳ ನಡುವಿನ ವ್ಯತ್ಯಾಸ ಗೊತ್ತಿಲ್ಲ. ತಾವು ಖರೀದಿ ಮಾಡಿ ನೀಡಿದ ಹಣದ ಹೆಚ್ಚಿನ ಲಾಭ ಯಾರಿಗೆ ಹೋಗುತ್ತದೆ ಎಂಬ ಅರಿವೂ ಅವರಿಗಿಲ್ಲ.

ಗಾಂಧೀಜಿಯವರ ಕಾಲದಲ್ಲೂ ನಕಲಿ ಖಾದಿಯ ಸಮಸ್ಯೆ ಇತ್ತು. ಅವರ ಕಾಲದಲ್ಲಿ ಖಾದಿಗೆ ಬೇಡಿಕೆ ಹೆಚ್ಚಾದಾಗ ಲಾಭಬಡುಕರು ನಕಲಿ ಖಾದಿಯನ್ನು ಮಾರಲು ತೊಡಗಿದರು. ಸ್ವತಃ ಗಾಂಧಿಯವರೇ ಹಲವಾರು ದಿನ ಅಹಮದಾಬಾದಿನ ಅಂಗಡಿ ಬೀದಿಯಲ್ಲಿ ನಿಂತು ಅಸಲಿ ಖಾದಿಯ ಬಗ್ಗೆ ತಿಳಿಹೇಳುತ್ತಾ ಕರಪತ್ರವನ್ನು ಹಂಚಿ, ನಕಲಿ ಖಾದಿಯ ಹಾವಳಿಯನ್ನು ಜನರಿಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದ್ದು ಇತಿಹಾಸದ ಭಾಗ.

ರಾಜ್ಯ ಸರ್ಕಾರಕ್ಕೆ ನಿಜವಾಗಿಯೂ ಖಾದಿ ಕ್ಷೇತ್ರವನ್ನು ಉದ್ಧಾರ ಮಾಡಬೇಕು ಎಂಬ ಕಾಳಜಿಯಿದ್ದರೆ ಈ ರೀತಿ ಆತುರದ ತೀರ್ಮಾನ ಮಾಡಬಾರದು. ಕನಿಷ್ಠ ಒಂದೆರಡು ವರ್ಷವಾದರೂ ಖಾದಿ ನೇಕಾರರು ಮತ್ತು ಖಾದಿ ಸಂಸ್ಥೆಗಳೊಂದಿಗೆ ಸಂವಾದ ನಡೆಸಿ, ತನ್ನ ಯೋಜನೆಯನ್ನು ಅವರಿಗೆ ಮನದಟ್ಟು ಮಾಡಿಕೊಡಬೇಕು. ಯೋಜನೆ ಜಾರಿಗೆ ಬಂದರೆ ಬೇಡಿಕೆ ಎಷ್ಟು ಬರುತ್ತದೆ ಎಂದು ಲೆಕ್ಕ ಹಾಕಿ, ಅದರ ಉತ್ಪಾದನೆಗೆ ನೇಕಾರರು ಮತ್ತು ಸಂಘಗಳನ್ನು ಮಾನಸಿಕವಾಗಿ ಮತ್ತು ಭೌತಿಕವಾಗಿ ತಯಾರು ಮಾಡಬೇಕು. ಗ್ರಾಹಕರ ಕನಿಷ್ಠ ಬೇಡಿಕೆಗಳಾದ ಬಟ್ಟೆಯ ಗುಣಮಟ್ಟ, ಬಣ್ಣ ಮತ್ತು ವಿನ್ಯಾಸಗಳ ಕಡೆಗೆ ಆದ್ಯತೆ ಕೊಟ್ಟು ಕೆಲಸ ಮಾಡಬೇಕು.

ಖಾದಿಯ ಮಹತ್ವ, ಅದರಿಂದಾಗಿ ಉಂಟಾಗುವ ಉದ್ಯೋಗದ ಅವಕಾಶ, ಸುಸ್ಥಿರಗೊಳ್ಳುವ ಗ್ರಾಮೀಣ ಬದುಕು, ಪರಿಸರ ಲಾಭಗಳು, ವಿಕೇಂದ್ರೀಕರಣ ಹಾಗೂ ಹಣ ಬಂಡವಾಳಶಾಹಿಗಳಿಗೆ ಹೋಗದೆ ಶ್ರಮಿಕರ ಕೈಗೆ ಹೋಗುತ್ತದೆ ಎಂಬ ವಿಷಯಗಳ ಕುರಿತು ಸರ್ಕಾರ ತನ್ನ ನೌಕರರಿಗೆ ಅರಿವು ಮೂಡಿಸಬೇಕು. ಗೌರವ ಮತ್ತು ಸಾಮಾಜಿಕ ಬದ್ಧತೆಯ ಸಂಕೇತವಾದ ಖಾದಿ, ಪರಿಸರಸ್ನೇಹಿ ಉಡುಪು ಹೌದು ಎನ್ನುವುದನ್ನು ಮನವರಿಕೆ ಮಾಡಿಕೊಡಬೇಕು. ಮೇಲಿನ ಅಧಿಕಾರಿಗಳ ಆದೇಶಕ್ಕೆ ಮಣಿದು ಖಾದಿ ಕೊಳ್ಳದೆ, ಸ್ವಯಂಪ್ರೇರಣೆಯಿಂದ ಖಾದಿ ಕೊಳ್ಳುವಂತೆ ಮಾಡಬೇಕು. ಖಾದಿ ಕೇವಲ ಬಟ್ಟೆಯಲ್ಲ, ಅದೊಂದು ಮೌಲ್ಯ ಎಂಬುದು ನೌಕರರಿಗೆ ಮನದಟ್ಟಾಗಬೇಕು. ಖಾದಿ ಬಟ್ಟೆ ಧರಿಸುವ ಬಗ್ಗೆ ಕೆಲವರಿಗೆ ಪೂರ್ವಗ್ರಹಗಳು ಇರುವುದರಿಂದ, ಬದಲಿಗೆ ಮನೆಯಲ್ಲಿ ಬಳಕೆಗೆ ಬೇಕಾದ ಟವೆಲ್‌ಗಳು ಕರವಸ್ತ್ರಗಳನ್ನು ಕೊಂಡರೆ ನೂರಾರು ಮಗ್ಗಗಳಿಗೆ ಜೀವ ಕೊಡಬಹುದು. ಇದು ಮಧ್ಯಮ ದಾರಿ.

ರಾಜಕೀಯ ದೃಷ್ಟಿಯಿಂದ ಕೈಗೊಳ್ಳುವ ಆತುರದ ಆದೇಶಗಳು ಅಸಲಿ ಖಾದಿಗಾಗಲೀ, ನೇಕಾರರಿಗಾಗಲೀ, ಖಾದಿ ಸಂಸ್ಥೆಗಳಿಗಾಗಲೀ ಯಾವ ಅನುಕೂಲವನ್ನೂ ಮಾಡುವುದಿಲ್ಲ. ಸದ್ಯ ಖಾದಿ ಸಂಸ್ಥೆಗಳಲ್ಲಿ ಇರುವ ಖಾದಿ ಬಟ್ಟೆಗಳ ಗುಣಮಟ್ಟ ಶೋಚನೀಯವಾಗಿದೆ. ಅವುಗಳ ಬಣ್ಣ ಮತ್ತು ವಿನ್ಯಾಸ ಗಿರಣಿ ಬಟ್ಟೆಗಳ ಅಣಕವಾಗಿದೆ. ಖಾದಿ ಬಟ್ಟೆ ತನ್ನ ಅಸಲಿತನ ಕಳೆದುಕೊಂಡು ಪೇಲವವಾಗಿ ಕಾಣುತ್ತಿದೆ. ಹಾಗಾಗಿಯೇ ಗ್ರಾಹಕರನ್ನು ಆಕರ್ಷಿಸಲು ಸೋತಿದೆ.

ಸರ್ಕಾರದ ದಿಢೀರ್ ನಿರ್ಧಾರ ನಕಲಿ ಖಾದಿ ಉತ್ಪಾದಿಸುವ ಮತ್ತು ಮಾರುವವರಿಗೆ ಲಾಭ ಮಾಡಿಕೊಡುವಂತಿದೆ. ಮಹಾತ್ಮ ಗಾಂಧಿ ಅವರ ಬಗ್ಗೆ ಮತ್ತು ಖಾದಿಯ ಬಗ್ಗೆ ವಾಟ್ಸ್‌ಆ್ಯಪ್ ವಿಶ್ವವಿದ್ಯಾಲಯಗಳು ಆಗಲೇ ಸಾಕಷ್ಟು ಪಾಠ ಮಾಡಿ, ಮಹಾತ್ಮನನ್ನು ಖಳನಾಯಕನನ್ನಾಗಿ ರೂಪಿಸಿವೆ. ಆತುರದ ಹಾಗೂ ವಿವೇಚನೆ ಇಲ್ಲದ ನಿರ್ಧಾರಗಳ ಮೂಲಕ ಗಾಂಧಿಯನ್ನು ಮತ್ತಷ್ಟು ಅಪ್ರಸ್ತುತಗೊಳಿಸುವ ಕೆಲಸವನ್ನು ಸರ್ಕಾರ ಮಾಡಬಾರದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬಜೆಟ್

ಸಿದ್ಧವಾಗುವುದು ಹೇಗೆ? ತಂಡದಲ್ಲಿ ಯಾರ್‍ಯಾರು?

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಭಾನುವಾರ (ಫೆ.1) 2026–27ನೇ ಸಾಲಿನ ಬಜೆಟ್ ಅನ್ನು ಸಂಸತ್ತಿನಲ್ಲಿ ಮಂಡಿಸಲಿದ್ದಾರೆ. ಸರ್ಕಾರದ ಆರ್ಥಿಕ ಗುರಿಗಳ ನೀಲನಕ್ಷೆಯನ್ನು ಒಳಗೊಂಡ ಬಜೆಟ್ ಸಿದ್ಧಪಡಿಸುವುದು ಸವಾಲಿನ ಮತ್ತು ಸಂಕೀರ್ಣವಾದ ಕೆಲಸ. ಈ ದೀರ್ಘ ಪ್ರಕ್ರಿಯೆಯಲ್ಲಿ ಹಣಕಾಸು ಸಚಿವಾಲಯದ ಅಡಿಯಲ್ಲಿ ಬರುವ ವಿವಿಧ ಇಲಾಖೆಗಳ ಅಧಿಕಾರಿಗಳ ಪಾತ್ರವು ಗಮನಾರ್ಹವಾದುದು. ಬಜೆಟ್ ತಯಾರಿಯ ವಿವಿಧ ಹಂತಗಳು ಮತ್ತು ಈ ಪ್ರಕ್ರಿಯೆಯಲ್ಲಿ ಹಣಕಾಸು ಸಚಿವರ ಜತೆಗೆ ಕೆಲಸ ನಿರ್ವಹಿಸಿದ ಅಧಿಕಾರಿಗಳ ಪರಿಚಯ ಇಲ್ಲಿದೆ

ಪ್ರಜಾವಾಣಿ ವಾರ್ತೆ

ಬಜೆಟ್ ಅನ್ನು ಹೇಗೆ ರೂಪಿಸಲಾಗುತ್ತದೆ ಎನ್ನುವ ಕುತೂಹಲ ಜನರಲ್ಲಿದೆ. ಕೇಂದ್ರ ಸರ್ಕಾರದ ಆರ್ಥಿಕ ಗುರಿಗಳು, ಅನುದಾನದ ವಿನಿಯೋಗ ಮತ್ತು ವರಮಾನ ಸಂಗ್ರಹದ ವಾರ್ಷಿಕ ದಿಕ್ಸೂಚಿಯಾದ ಬಜೆಟ್ ಅನ್ನು ರೂಪಿಸುವುದು ಗುರುತರವಾದ ಕಾರ್ಯ. ಸರ್ಕಾರದ ವಿವಿಧ ಇಲಾಖೆಗಳು ಮತ್ತು ಕೇಂದ್ರ ಸರ್ಕಾರದ ಹಲವು ಉನ್ನತ ಅಧಿಕಾರಿಗಳ ಹಲವು ತಿಂಗಳ ಶ್ರಮ ಬಜೆಟ್ ಹಿಂದೆ ಇರುತ್ತದೆ.

ಹಣಕಾಸು ಸಚಿವಾಲಯವು ನೀತಿ ಆಯೋಗವೂ ಸೇರಿದಂತೆ ಪ್ರಮುಖ ಸಂಸ್ಥೆ, ಇಲಾಖೆಗಳೊಂದಿಗೆ ಚರ್ಚಿಸಿ ಬಜೆಟ್ ರೂಪಿಸುತ್ತದೆ. ಸರ್ಕಾರದ ವೆಚ್ಚದ ಆದ್ಯತೆಗಳು, ವರಮಾನದ ಗುರಿ, ಆರ್ಥಿಕ ನೀತಿಗಳು ಮತ್ತು ಆರ್ಥಿಕ ಕಾರ್ಯತಂತ್ರಗಳನ್ನು ಬಜೆಟ್ ಒಳಗೊಂಡಿರುತ್ತದೆ. ಸಂಸತ್‌ನ ಪ್ರತಿವರ್ಷದ (ಫೆಬ್ರುವರಿಯಲ್ಲಿ ನಡೆಯುವ) ಬಜೆಟ್ ಅಧಿವೇಶನದಲ್ಲಿ ಲೋಕಸಭೆಯಲ್ಲಿ ಹಣಕಾಸು ಸಚಿವರು ಬಜೆಟ್ ಮಂಡಿಸುವುದು ಸಂಪ್ರದಾಯ. ಅದಕ್ಕೂ ಆರು ತಿಂಗಳ ಹಿಂದೆಯೇ (ಆಗಸ್ಟ್–ಸೆಪ್ಟೆಂಬರ್) ಅದರ ಸಿದ್ಧತೆಗಳು ಆರಂಭವಾಗಿರುತ್ತವೆ. ಹಲವು ಹಂತಗಳ ಮೂಲಕ ಬಜೆಟ್ ರೂಪು ಪಡೆಯುತ್ತದೆ.

ಸುತ್ತೋಲೆ: ಕೇಂದ್ರ ಹಣಕಾಸು ಸಚಿವಾಲಯವು ಅಂದಾಜು ವರಮಾನ ಮತ್ತು ವೆಚ್ಚದ ಮಾಹಿತಿಯ ಸಂಬಂಧ ಎಲ್ಲ ಇಲಾಖೆಗಳಿಗೆ, ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಿಗೆ, ಸ್ವಾಯತ್ತ ಸಂಸ್ಥೆಗಳಿಗೆ ಸುತ್ತೋಲೆ ಕಳಿಸುವುದರೊಂದಿಗೆ ಬಜೆಟ್ ಪ್ರಕ್ರಿಯೆ ಆರಂಭವಾಗುತ್ತದೆ. ಪ್ರತಿಯೊಂದು ಇಲಾಖೆಯೂ ಮೂರು ರೀತಿಯ ಮಾಹಿತಿ ನೀಡುತ್ತದೆ; ಮುಂದಿನ ವರ್ಷದ ಬಜೆಟ್ ಅಂದಾಜು, ಪ್ರಸ್ತುತ ವರ್ಷದ ಪರಿಷ್ಕೃತ ಅಂದಾಜು ಮತ್ತು ಹಿಂದಿನ ವರ್ಷದ ಸ್ವೀಕೃತಿ (ವರಮಾನ) ಮತ್ತು ವೆಚ್ಚದ ಮಾಹಿತಿಯನ್ನು ಇಲಾಖೆಗಳು ನೀಡುತ್ತವೆ.

ವರಮಾನ ಮತ್ತು ವೆಚ್ಚದ ಅಂದಾಜು: ವಿವಿಧ ರಾಜ್ಯ/ಮೂಲಗಳಿಂದ ಬಂದ ಮಾಹಿತಿಯನ್ನು ಹಣಕಾಸು ಸಚಿವಾಲಯವು ವಿಶ್ಲೇಷಿಸಿ, ವರಮಾನ ಮತ್ತು ವೆಚ್ಚವನ್ನು ಅಂದಾಜಿಸುತ್ತದೆ. ಈ ಮೂಲಕ ಸರ್ಕಾರದ ವರಮಾನ ಮತ್ತು ವೆಚ್ಚದ ನಡುವಿನ ಅಂತರವನ್ನು (ಬಜೆಟ್ ಕೊರತೆ) ತಿಳಿಯಲಾಗುತ್ತದೆ.

ಬಜೆಟ್‌ಪೂರ್ವ ಸಮಾಲೋಚನೆ: ಹಣಕಾಸು ಸಚಿವರು ರಾಜ್ಯಗಳ ಪ್ರತಿನಿಧಿಗಳು, ಉದ್ಯಮಿಗಳು, ಆರ್ಥಿಕ ತಜ್ಞರು, ಕಾರ್ಮಿಕ ಸಂಘಟನೆಗಳು ಮತ್ತು ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳನ್ನು ಭೇಟಿ ಮಾಡಿ ಅವರ ನಿರೀಕ್ಷೆ ಮತ್ತು ಅಗತ್ಯಗಳ ಬಗ್ಗೆ ದೀರ್ಘ ಹಾಗೂ ವಿಸ್ತೃತ ಚರ್ಚೆ ನಡೆಸುತ್ತಾರೆ.

ಬಜೆಟ್ ಬೇಡಿಕೆಗಳನ್ನು ಅಂತಿಮಗೊಳಿಸುವುದು: ವಿವಿಧ ವಲಯ/ರಾಜ್ಯ/ಇಲಾಖೆಗಳ ಬೇಡಿಕೆಗಳ ಬಗ್ಗೆ ಹಣಕಾಸು ಸಚಿವರು ಸಚಿವ ಸಂಪುಟದೊಂದಿಗೆ, ಪ್ರಧಾನಿ ಅವರೊಂದಿಗೆ ಚರ್ಚಿಸುತ್ತಾರೆ. ಯಾವ ಕ್ಷೇತ್ರ, ಇಲಾಖೆಗೆ ಎಷ್ಟು ಅನುದಾನ ನೀಡಬೇಕು ಎನ್ನುವ ಬಗ್ಗೆ ಸಮಾಲೋಚಿಸುತ್ತಾರೆ. ವರಮಾನ, ವೆಚ್ಚಗಳ ಅಂದಾಜು ಆಧರಿಸಿ ಹಣಕಾಸು ಸಚಿವರು ವಿವಿಧ ಇಲಾಖೆಗಳಿಗೆ ಅನುದಾನ ನಿಗದಿಯ ಬಗ್ಗೆ ತೀರ್ಮಾನಿಸುತ್ತಾರೆ.

ಮಂಡನೆ: ಬಜೆಟ್ ಅಧಿವೇಶನದ ವೇಳೆ ಸಂಸತ್ತಿನಲ್ಲಿ ಹಣಕಾಸು ಸಚಿವರು ಬಜೆಟ್ ಅನ್ನು ಮಂಡಿಸುತ್ತಾರೆ. ಸರ್ಕಾರ ಆರ್ಥಿಕ ಕಾರ್ಯತಂತ್ರ, ವರಮಾನ, ವೆಚ್ಚದ ಆದ್ಯತೆಗಳು, ಆರ್ಥಿಕ ನೀತಿಗಳು ಮತ್ತು ಸುಧಾರಣೆಗಳು ಬಜೆಟ್‌ನಲ್ಲಿ ವ್ಯಕ್ತವಾಗುತ್ತವೆ. ಸರ್ಕಾರ ಬಜೆಟ್‌ಗೆ ಸಂಸತ್ತಿನ ಅಂಗೀಕಾರ ಪಡೆಯಬೇಕಾಗುತ್ತದೆ. ಹೊಸ ಆರ್ಥಿಕ ವರ್ಷದ ಆರಂಭದ ದಿನ ಅಂದರೆ ಏಪ್ರಿಲ್ 1ರಿಂದ ಬಜೆಟ್ ಜಾರಿಗೆ ಬರುತ್ತದೆ.

ಆಧಾರ: ಪಿಟಿಐ, ಮಾಧ್ಯಮ ವರದಿಗಳು

ಬಜೆಟ್ ಪ್ರಕ್ರಿಯೆ ಅಂತಿಮ ಹಂತ ಮುಟ್ಟಿರುವುದನ್ನು ಹಣಕಾಸು ಇಲಾಖೆಯು ಆಯೋಜಿಸುವ 'ಹಲ್ವಾ ಸಮಾರಂಭ' ಎನ್ನುವ ಸಾಂಕೇತಿಕ ಕಾರ್ಯಕ್ರಮದ ಮೂಲಕ ಸೂಚಿಸಲಾಗುತ್ತದೆ. ಬಜೆಟ್ ಪ್ರತಿಗಳು ಮುದ್ರಣಗೊಳ್ಳಲು ಆರಂಭವಾಗಿರುವುದನ್ನೂ ಕಾರ್ಯಕ್ರಮವು ಸಂಕೇತಿಸುತ್ತದೆ.





ನಿರ್ಮಲಾ ಸೀತಾರಾಮನ್

ಬಜೆಟ್ ಸಿದ್ಧಪಡಿಸಲು ನೆರವಾದವರು



1. ಅನುರಾಧ ಠಾಕೂರ್, ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿ

ಬಜೆಟ್‌ನ ಮೂಲ ಶಿಲ್ಪಿ ಇವರು. ಬಜೆಟ್ ಸಿದ್ಧಪಡಿಸುವ ಇಲಾಖೆಯ ಮುಖ್ಯಸ್ಥರಾಗಿ ಸಂಪನ್ಮೂಲಗಳ ಹಂಚಿಕೆ ಮತ್ತು 2026–27ರ ಅರ್ಥವ್ಯವಸ್ಥೆಯ ಚೌಕಟ್ಟುಗಳನ್ನು ನಿರ್ಧರಿಸುವ ಪ್ರಮುಖ ಅಧಿಕಾರಿ. ಬಜೆಟ್ ದಾಖಲೆಗಳನ್ನು ಸಿದ್ಧಪಡಿಸುವ ಜವಾಬ್ದಾರಿ ಹೊಂದಿರುವ ಬಜೆಟ್ ವಿಭಾಗದ ನೇತೃತ್ವ ಇವರದ್ದು. 1994ರ ಹಿಮಾಚಲ ಕೇಡರ್‌ನ ಐಎಎಸ್ ಅಧಿಕಾರಿಯಾಗಿರುವ ಅನುರಾಧ ಅವರಿಗೆ ಇದು ಮೊದಲ ಬಜೆಟ್. ಈ ಇಲಾಖೆಯ ನೇತೃತ್ವ ವಹಿಸಿದ ಮೊದಲ ಮಹಿಳಾ ಅಧಿಕಾರಿಯೂ ಹೌದು.



2. ಅರವಿಂದ ಶ್ರೀವಾಸ್ತವ, ರೆವೆನ್ಯೂ ಕಾರ್ಯದರ್ಶಿ

ಕರ್ನಾಟಕ ಕೇಡರ್‌ನ ಐಎಎಸ್ ಅಧಿಕಾರಿಯಾಗಿರುವ ಅರವಿಂದ ಶ್ರೀವಾಸ್ತವ ಅವರದ್ದು ತೆರಿಗೆ ಪ್ರಸ್ತಾವನೆಗಳನ್ನು (ಬಜೆಟ್ ಭಾಷಣದ 'ಬಿ' ಭಾಗ) ಸಿದ್ಧಪಡಿಸುವ ಜವಾಬ್ದಾರಿ. ಇವರ ತಂಡವು ನೇರ ತೆರಿಗೆ–ಆದಾಯ ತೆರಿಗೆ, ಕಾರ್ಪೊರೇಟ್ ತೆರಿಗೆ ಮತ್ತು ಪರೋಕ್ಷ ತೆರಿಗೆಗಳನ್ನು (ಜಿಎಸ್‌ಟಿ, ಕಸ್ಟಮ್ಸ್) ನಿರ್ವಹಿಸುತ್ತದೆ. ರೆವೆನ್ಯೂ ಕಾರ್ಯದರ್ಶಿಯಾಗಿ ಶ್ರೀವಾಸ್ತವ ಅವರಿಗೆ ಇದು ಮೊದಲ ಬಜೆಟ್ ಆದರೂ, ಹಿಂದೆ ಅವರು ಹಣಕಾಸು ಸಚಿವಾಲಯದ ಬಜೆಟ್ ವಿಭಾಗದ ಜಂಟಿ ಕಾರ್ಯದರ್ಶಿಯಾಗಿದ್ದರು. ಆ ಬಳಿಕ ಪ್ರಧಾನಿ ಕಚೇರಿಗೆ ನಿಯೋಜನೆಗೊಂಡಿದ್ದರು. ವರಮಾನ ಸಂಗ್ರಹದ ವಿಚಾರದಲ್ಲಿ ಇವರ ಪಾತ್ರ ನಿರ್ಣಾಯಕವಾಗಿದೆ.



3. ವುಮಲುನಮಾಂಗ ವುಅಲ್ನಮ್, ವೆಚ್ಚ ಕಾರ್ಯದರ್ಶಿ

ಸರ್ಕಾರ ಮಾಡುವ ವೆಚ್ಚ, ಸಬ್ಸಿಡಿ ಸರಳೀಕರಣ ಮತ್ತು ಕೇಂದ್ರ ಸರ್ಕಾರದ ಯೋಜನೆಗಳ ಅನುಷ್ಠಾನದ ಮೇಲುಸ್ತುವಾರಿ ಇವರದ್ದು. ವಿತ್ತೀಯ ಕೊರತೆಯನ್ನು ನಿಭಾಯಿಸಲು ವಿತ್ತೀಯ ಶಿಸ್ತನ್ನು ಕಾಪಾಡಿಕೊಳ್ಳುವಂತೆ ನೋಡಿಕೊಳ್ಳುವುದರ ಜೊತೆಗೆ ಮುಂದಿನ ಆರ್ಥಿಕ ವರ್ಷಕ್ಕೆ ಅಗತ್ಯವಾದ ಮಾರ್ಗದರ್ಶನವನ್ನೂ ಇವರ ಇಲಾಖೆ ನೀಡುತ್ತದೆ.



4. ಎಂ.ನಾಗರಾಜು, ಆರ್ಥಿಕ ಸೇವೆಗಳ ಕಾರ್ಯದರ್ಶಿ

ಇವರ ಇಲಾಖೆಯು ಸರ್ಕಾರದ ಆರ್ಥಿಕ ಒಳಗೊಳ್ಳುವಿಕೆ ಯೋಜನೆಗಳು ಮತ್ತು ಸಾಮಾಜಿಕ ಭದ್ರತಾ ಯೋಜನೆಗಳ ಚಾಲನಾ ಶಕ್ತಿ. ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳು, ವಿಮಾ ಕಂಪನಿಗಳು ಮತ್ತು ಪಿಂಚಣಿ ವ್ಯವಸ್ಥೆಗಳ ಹಣಕಾಸಿನ ಸ್ಥಿತಿಗತಿಗಳ ಮೇಲೆ ಇವರ ಇಲಾಖೆಯು ನಿಗಾ ಇಡುತ್ತದೆ. ಸಾಲ ನೀಡಿಕೆ ಹೆಚ್ಚಳ, ಡಿಜಿಟಲ್ ತಂತ್ರಜ್ಞಾನದ ಅಳವಡಿಕೆ ಮತ್ತು ಸಾಮಾಜಿಕ ಭದ್ರತಾ ಕಾರ್ಯಕ್ರಮಗಳೂ ಸೇರಿದಂತೆ ಸರ್ಕಾರದ ಹಣಕಾಸಿನ ಕಾರ್ಯಸೂಚಿಗಳ ಅನುಷ್ಠಾನದಲ್ಲಿ ಈ ಇಲಾಖೆಯದ್ದು ನಿರ್ಣಾಯಕ ಪಾತ್ರ.



5. ಅರುಣೀಶ್ ಚಾವ್ಲಾ, ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆ ಕಾರ್ಯದರ್ಶಿ

ಸರ್ಕಾರದ ಬಂಡವಾಳ ಹಿಂತೆಗೆತ ಮತ್ತು ಖಾಸಗೀಕರಣ ಯೋಜನೆಗಳ ನೀಲನಕ್ಷೆಯ ಜವಾಬ್ದಾರಿ ಹೊತ್ತಿರುವ ಇಲಾಖೆಯ ನೇತೃತ್ವ ಇವರದ್ದು. ಕೇಂದ್ರ ಸರ್ಕಾರಿ ವಲಯದ ಉದ್ದಿಮೆಗಳಲ್ಲಿರುವ ಸರ್ಕಾರದ ಪಾಲಿನ ಷೇರು ಮಾರಾಟದಿಂದ ಬರುವ ತೆರಿಗೆಯೇತರ ವರಮಾನದ ಗುರಿಗಳನ್ನು ನಿರ್ವಹಿಸುವುದು ಇವರ ಕೆಲಸ.



6. ಕೆ.ಮೋಸೆಸ್ ಚಾಲಾಯಿ, ಸಾರ್ವಜನಿಕ ವಲಯದ ಉದ್ದಿಮೆಗಳ ಇಲಾಖೆ ಕಾರ್ಯದರ್ಶಿ

ಇಲಾಖೆಯ ಮುಖ್ಯಸ್ಥರಾಗಿ ಕೇಂದ್ರ ಸರ್ಕಾರಿ ಸ್ವಾಮ್ಯದ ಉದ್ದಿಮೆಗಳ ಬಂಡವಾಳ ವೆಚ್ಚದ ಯೋಜನೆಗಳು ಮತ್ತು ಬಜೆಟ್‌ನಲ್ಲಿ ಹಂಚಿಕೆ ಮಾಡಿರುವ ಅನುದಾನವನ್ನು ಪರಿಣಾಮಕಾರಿಯಾಗಿ ಬಳಕೆಯಾಗುವುದನ್ನು ಖಾತ್ರಿ ಪಡಿಸುವುದು ಇವರ ಜವಾಬ್ದಾರಿ. ಆಸ್ತಿ ನಗದೀಕರಣ ಮತ್ತು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಒಟ್ಟಾರೆ ಹಣಕಾಸಿನ ಪರಿಸ್ಥಿತಿಯ ಮೇಲ್ವಿಚಾರಣೆ ಮಾಡುವ ಹೊಣೆಯೂ ಇವರ ಮೇಲಿದೆ.



7. ವಿ.ಅನಂತ ನಾಗೇಶ್ವರನ್, ಮುಖ್ಯ ಆರ್ಥಿಕ ಸಲಹೆಗಾರ

ಕೇಂದ್ರ ಸರ್ಕಾರದ ಆರು ಇಲಾಖೆಗಳಲ್ಲದೆ, ಮುಖ್ಯ ಆರ್ಥಿಕ ಸಲಹೆಗಾರರ ಕಚೇರಿ ಕೂಡ ಬಜೆಟ್ ಸಿದ್ಧಪಡಿಸುವ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳುತ್ತದೆ. ಇವರ ಕಚೇರಿಯು ಬಜೆಟ್‌ಗಾಗಿ ದೇಶದ ಅರ್ಥವ್ಯವಸ್ಥೆಗೆ ಸಂಬಂಧಿಸಿದ ಪ್ರಮುಖವಾದ ಮಾಹಿತಿಗಳನ್ನು ನೀಡುತ್ತದೆ. ಆರ್ಥಿಕ ಪ್ರಗತಿಯ ಮುನ್ಸೂಚನೆ, ಕೃಷಿ, ಕೈಗಾರಿಕೆ, ಸೇವಾ ವಲಯಗಳು ಸೇರಿದಂತೆ ವಿವಿಧ ವಲಯಗಳ ಸಾಧನೆಗಳ ಪರಾಮರ್ಶೆ ಮತ್ತು ಜಾಗತಿಕ ಮಟ್ಟದ ಅಪಾಯ/ಸವಾಲುಗಳನ್ನು ಮೌಲ್ಯಮಾಪನ ಮಾಡಿದ ವಿವರಗಳನ್ನು ನೀಡುತ್ತದೆ. ಇದಲ್ಲದೇ, ಪ್ರಮುಖ ಆರ್ಥಿಕ ಸುಧಾರಣೆಗಳು, ಆರ್ಥಿಕ ನೀತಿಗಳು ಮತ್ತು ಹಣಕಾಸಿನ ಕಾರ್ಯತಂತ್ರಗಳ ಬಗ್ಗೆ ಹಣಕಾಸು ಸಚಿವರಿಗೆ ಸಲಹೆಯನ್ನೂ ನೀಡುತ್ತದೆ.

ಭಾರತದ ಯಾವ ಹಿನ್ನೆಲೆ ಗಾಯಕ–ಗಾಯಕಿಯೂ ಈ ವೃತ್ತಿಯಿಂದ ನಿವೃತ್ತಿಯನ್ನು ಘೋಷಿಸಿದ ಉದಾಹರಣೆಗಳಿಲ್ಲ. ದೇಶದ ಜನಪ್ರಿಯ ಗಾಯಕ ಅರಿಜೀತ್ ಸಿಂಗ್ ಅಂತಹುದೊಂದು ಘೋಷಣೆ ಮಾಡಿ ಚರ್ಚೆಗಳನ್ನು, ಪ್ರಶ್ನೆಗಳನ್ನು ತೇಲಿಬಿಟ್ಟಿದ್ದಾರೆ. ಹದಿನೈದು ವರ್ಷಗಳಲ್ಲಿ ವಾರಕ್ಕೆ ಸರಾಸರಿ ಒಂದರಂತೆ ಸಿನಿಮಾ ಹಾಡನ್ನು ಕೊಟ್ಟ ಅವರ ಬಾಳಪಥ ಆಸಕ್ತಿಕರವಾಗಿದೆ

ಭಾವಗಾರುಡಿಗನ ಗಾನಪಯಣ

• ವಿಶಾಖ ಎನ್.

ವ್ಯಕ್ತಿ

ಇನ್ನು ಆಟ ನಿಲ್ಲಿಸುವುದಾಗಿ ಕ್ರಿಕೆಟಿಗರು ತಮ್ಮ ಮೂವತ್ತೆಂಟನೇ ವಯಸ್ಸಿನಲ್ಲಿ ನಿವೃತ್ತಿ ಘೋಷಿಸುವುದು ಮಾಮೂಲಿ ಸುದ್ದಿ. ಅದೇ ವಯಸ್ಸಿನ ಒಬ್ಬ ಹಾಡುಗಾರ ಸಿನಿಮಾ ಹಿನ್ನೆಲೆ ಗಾಯನಕ್ಕೆ ಪೂರ್ಣವಿರಾಮ ಹಾಕುವುದಾಗಿ ಪ್ರಕಟಿಸಿದರೆ ಅದು ಹೊಸ ಕಾಲದ ಸೋಜಿಗ. ಅಂತಹ ಬೆರಗುಗೊಳಿಸುವ ನಿರ್ಧಾರವನ್ನು ಅರಿಜೀತ್ ಸಿಂಗ್ ಪ್ರಕಟಿಸಿದ್ದಾರೆ; ಅದೂ ಸಾಮಾಜಿಕ ಮಾಧ್ಯಮದ ಸಂದೇಶದ ಮೂಲಕ.

ಪಶ್ಚಿಮ ಬಂಗಾಳದ ಮುರ್ಶಿದಾಬಾದ್ ಬಳಿಯ ಜಿಯಾಗಂಜ್ ಎಂಬ ಪಟ್ಟಣದಲ್ಲಿ ಅರಿಜೀತ್ ಮನೆ ಇದೆ. ಅದು ಬಂಗಲೆಯೇನೂ ಅಲ್ಲ. ಅಲ್ಲಿ ಸುಸಜ್ಜಿತ ಸ್ಟುಡಿಯೊ ಒಂದನ್ನು ನಿರ್ಮಿಸಿಕೊಂಡಿದ್ದಾರೆ. ಧ್ವನಿಮುದ್ರಣಕ್ಕೆ ಅಗತ್ಯವಿರುವ ಆಧುನಿಕ ತಂತ್ರಜ್ಞಾನದ ಸಕಲವೂ ಅಲ್ಲಿದೆ. ಅದನ್ನು ಅವರು ಅಪ್‌ಡೇಟ್ ಕೂಡ ಮಾಡುತ್ತಿರುತ್ತಾರೆ. ಅವರು ಎಲ್ಲರೊಳಗೆ ಒಂದಾಗುವವರಂತೆ ಸ್ಕೂಟರ್ ಏರಿ ಅಂಗಡಿಗೆ ಹೋಗಿ, ದಿನಸಿ ತರುತ್ತಾರೆ. ನಿತ್ಯವೂ ಶೇವ್ ಮಾಡುವುದಿಲ್ಲ, ಗಡ್ಡ ಟ್ರಿಮ್ ಮಾಡುವುದೂ ಅಪರೂಪ. ಹಾಕುವ ಬಟ್ಟೆಗಳು ಸರಳಾತಿ ಸರಳ. ವೇದಿಕೆ ಮೇಲೆ ಕಾರ್ಯಕ್ರಮ ನೀಡುವಾಗಲೂ ಅವರು ದಿರಿಸಿನ ಕಡೆ ಅಷ್ಟಾಗಿ ಲಕ್ಷ್ಯ ಕೊಟ್ಟವರಲ್ಲ. ಅವರು ಹೀಗೆ– ಕೆಲವರ ದೃಷ್ಟಿಯಲ್ಲಿ– ಅಸಡಾ ಬಸಡಾ ಆಗಿ ಇದ್ದರೂ ತಲೆಮಾರುಗಳು ಅವರ ಕಂಠವನ್ನು ಎದೆಗೆ ಇಳಿಸಿಕೊಂಡಿವೆ. ಭಗ್ನ ಪ್ರೇಮಿಗಳಿಗೆ ಅವರ ರಾಗಾಲಾಪ ಇಷ್ಟ. ಪ್ರೇಮಿಗಳಿಗಂತೂ ಅವರ ನಾದದ ಗುಂಗು ಆಪ್ಯಾಯಮಾನ.

2005ರಲ್ಲಿ 'ಫೇಮ್ ಗುರುಕುಲ್' ಎಂಬ ರಿಯಾಲಿಟಿ ಶೋ ಒಂದರಲ್ಲಿ ಮೊದಲಿಗೆ ಅರಿಜೀತ್ ಕಾಣಿಸಿಕೊಂಡದ್ದು. ಆಗ ಅವರ ಕಂಠ ಬೇರೆಯದೇ ರೀತಿ ಇತ್ತು. ಅನುಕರಣೆ ಶೈಲಿಯ ಹಾಡುಗಾರಿಕೆ. ಆ ರಿಯಾಲಿಟಿ ಶೋನಲ್ಲಿ ಅವರು ಗೆಲ್ಲಲಿಲ್ಲ. ಆದರೆ, ಬದುಕಿಗೆ ಒಂದು ಅಧ್ಯಾಯವನ್ನು ಸೇರಿಸಿಕೊಂಡರು. ಸಂಗೀತದಲ್ಲಿ ಏನಾದರೂ ಸಾಧಿಸಬೇಕು ಎಂಬ ಗುರಿ ಇಟ್ಟುಕೊಂಡು ಕೋಲ್ಕತ್ತಕ್ಕೆ ಅವರು ವಲಸೆ ಹೋದರು. ಅಲ್ಲಿ ಮ್ಯೂಸಿಕಲ್ ಪ್ರೋಗ್ರಾಮರ್ ಆಗಿ, ಸಹಾಯಕರಾಗಿ ಸ್ಟುಡಿಯೊ ಕೆಲಸದ ಸೂಕ್ಷ್ಮಗಳನ್ನು ಕಲಿತುಕೊಂಡರು. ಕೆಲವು ವರ್ಷಗಳು ಆ ಕಲಿಕೆಯಲ್ಲೇ ಸರಿದುಹೋದವು. ಶಂಕರ್ ಎಹ್ಸಾನ್ ಲಾಯ್ ಮೊದಲಿಗೆ ಒಂದು ಗೀತೆ ಹಾಡುವ ಅವಕಾಶ ಕೊಟ್ಟರಾದರೂ ಅದು ಹಿಟ್ ಆಗಲಿಲ್ಲ. 'ಮರ್ಡರ್ 2' ಹಿಂದಿ ಸಿನಿಮಾದ 'ದಿಲ್ ಸಂಭಲ್ ಝರಾ' (ಹೃದಯವೇ ನಿಧಾನಿಸು) ಎಂಬ ಹಾಡು ಹಿಟ್ ಆಯಿತು. ಆದರೆ ಅವರಿಗೆ ಹೆಚ್ಚು ಜನಪ್ರಿಯತೆ ತಂದುಕೊಟ್ಟದ್ದು 'ಆಶಿಕಿ 2' ಹಿಂದಿ ಸಿನಿಮಾದ 'ತುಮ್ ಹೀ ಹೋ' (ನೀನೇ ಸರ್ವಸ್ವ ಎಂಬ ಧ್ವನ್ಯರ್ಥ) ಗೀತೆ. ಈ ಎರಡೂ ಹಾಡುಗಳು ವ್ಯಾಪಕವಾಗಿ ಯುವಕರ ಮೊಬೈಲ್ ರಿಂಗ್ ಟೋನ್ ಆದವು. ಹೋಟೆಲ್, ಕ್ಲಬ್, ಎಫ್.ಎಂ ಎಲ್ಲೆಡೆಯೂ ಅದೇ ಹಾಡು ತಿಂಗಳುಗಟ್ಟಲೆ ಅನುರಣಿಸಿತು. ಪ್ರೇಮಿಗಳಿಗೆ ಅದೊಂದು ಭಾವಗೀತೆಯಂತೆ ಕಾಡಿದ್ದೇ ಅರಿಜೀತ್ ಮನೆಮಾತಾದರು.

ಪಶ್ಚಿಮ ಬಂಗಾಳದ ಅರಿಜೀತ್ ಬಾಲಪ್ರತಿಭೆ. ಅಮ್ಮ ಅದಿತಿ ಸಿಂಗ್, ಅಜ್ಜಿ, ಚಿಕ್ಕಮ್ಮ ಎಲ್ಲರೂ ಶಾಸ್ತ್ರೀಯ ಸಂಗೀತ ಹಾಡುತ್ತಿದ್ದವರೇ. ಅವರಿಂದ ಸಹಜ ಪ್ರೇರಣೆ ಪಡೆದ ಬಾಲಕನಲ್ಲೂ ಸಂಗೀತದ ಸ್ವರಗಳು ಮಿಳಿತಗೊಂಡವು. ಕೈಗೆ ಹಾರ್ಮೋನಿಯಂ ಬಂದದ್ದು ಬೆರಳುಗಳು ಪುಟ್ಟದಾಗಿರುವಾಗಲೇ. ಬೀರೇಂದ್ರಪ್ರಸಾದ್ ಹಜಾರಿ ಅವರಲ್ಲಿ ಮೂಲಪಾಠ ಕಲಿತ ಅರಿಜೀತ್, ಅದಾಗಲೇ ಭರವಸೆ ಮೂಡಿಸಿದ್ದರು.

ಪ್ರಾಯಕ್ಕೆ ಬರುವ ಹುಡುಗರಿಗೆ ಗಂಟಲು ಒಡೆದಾಗ ಒಂದು ಬಗೆಯ ಕರ್ಕಶವಾದ ಸದ್ದು ಮೂಡುತ್ತದೆ. ಅರಿಜೀತ್ ಹಾಡುಗಾರಿಕೆಯಲ್ಲಿ ಅಂತಹ ಒಡಕು ಅಲ್ಲಲ್ಲಿ ಇದೆ. ವಿಶೇಷವಾಗಿ ತಾರಕ ಸ್ವರಕ್ಕೆ ಏರಿದಾಗ 'ಗರ' ಎಂಬಂತಹ ಶಬ್ದದ ಎಳೆ ಸಹಜವೆಂಬಂತೆ ಕೇಳುತ್ತದೆ. ಅದು ಒಂದು ಬಗೆಯಲ್ಲಿ ಭಗ್ನಪ್ರೇಮಿಯ ಆರ್ತನಾದದಂತೆ ಭಾಸವಾಗತೊಡಗಿತು. ಎದೆಯಾಳದಲ್ಲಿ ನೋವು ಹುದುಗಿಸಿಕೊಂಡು ಹಾಡಿದಾಗ, ಸಾಲುಗಳ ಮೇಲೆ ದುಃಖದ ಸಿಂಚನ ಆದಂತೆ ಭಾಸವಾಗುವ ಶ್ರುತಿ ಅದು.

ಶಾಸ್ತ್ರೀಯ ಸಂಗೀತದ ವೈಯಾಕರಣಿಗಳು ಇದನ್ನು 'ಶುದ್ಧ ಸಂಗೀತ'ದ ನಿಕಷಕ್ಕೆ ಒಡ್ಡಿ, ಅಲ್ಲಗಳೆದ ಪ್ರಸಂಗಗಳೂ ಇವೆ.

ಟೀಕೆಗಳ ಬಗ್ಗೆ ಅರಿಜೀತ್ ತಲೆ ಕೆಡಿಸಿಕೊಂಡವರಲ್ಲ. ಅವರು ಕಣ್ಮುಚ್ಚಿ ಹಾಡಲು ಅನುವಾದರೆ, ಒಂದೊಂದು ಕಛೇರಿಯಲ್ಲೂ ತಮ್ಮದೇ ಹಳೆಯ ಗೀತೆಯನ್ನು ಬೇರೆಯದೇ ಬಗೆಯಲ್ಲಿ ಹಾಡುತ್ತಾರೆ. ತಮಗೆ ಇಷ್ಟವಾದ, ಬೇರೆಯವರು ಹಾಡಿದ ಗೀತೆಗಳನ್ನು ಹಾಡಲೂ ಅವರು ಹಿಂಜರಿದಿಲ್ಲ. 'ಹಮಾರಿ ಅಧೂರಿ ಕಹಾನಿ', '...ದಿಲ್ ಹೈ ಮುಷ್ಕಿಲ್', 'ಪಚ್ತಾವೋಗೆ', 'ಬೇಖಯಾಲಿ' ಇವೆಲ್ಲ ಹಾಡುಗಳು ಭಗ್ನಪ್ರೇಮಿಗಳು ತಮ್ಮ ಪರಿಸ್ಥಿತಿಗೆ ಹೊಂದಿಸಿಕೊಂಡು ಅನುಭವಿಸಿದಂಥವು. 'ಮೈ ರಂಗ್ ಶರಬತೋಂ ಕಾ', 'ಕೇಸರಿಯಾ ತೇರಾ' ತರಹದ ಲವಲವಿಕೆಯ ಹಾಡನ್ನೂ ಅರಿಜೀತ್ ಕೊಟ್ಟಿದ್ದಾರೆ. 'ಲಾ ಪತಾ ಲೇಡೀಸ್' ಸಿನಿಮಾದ 'ಸಜ್ನಿ ರೇ' ಹಾಡು ಒಂದೂವರೆ ತಿಂಗಳು ವಿವಿಧ ವೇದಿಕೆಗಳಲ್ಲಿ ನಂಬರ್ ಒನ್ ಗೀತೆ ಎಂದೆನಿಸಿಕೊಂಡು ಜನಪ್ರಿಯವಾಗಿತ್ತು.

ಪ್ರೀತಂ, ರೆಹಮಾನ್, ವಿಶಾಲ್ ಶೇಖರ್, ಅಮಿತ್ ತ್ರಿವೇದಿ ಸ್ವರ ಸಂಯೋಜನೆಯ ಅನೇಕ ಹಾಡುಗಳಿಗೆ ಅರಿಜೀತ್ ಶಾರೀರ ನ್ಯಾಯ ಒದಗಿಸಿದೆ. ಡಚ್ ಡಿಜೆ ಮಾರ್ಟಿನ್ ಗ್ಯಾರಿಕ್ಸ್ ಹಾಗೂ ಬ್ರಿಟನ್‌ನ ಜನಪ್ರಿಯ ಗಾಯಕ ಎಡ್ ಶೀರನ್ ಭಾರತದಲ್ಲಿ ಸಂಗೀತ ಪ್ರವಾಸ ಮಾಡಿದಾಗ ಅರಿಜೀತ್ ವಾಸವಿದ್ದ ಊರಿಗೇ ಹೋಗಿದ್ದರು. ಅಲ್ಲಿಯೇ ಸ್ಟುಡಿಯೊದಲ್ಲಿ ಕಾಲ ಕಳೆದು ಬಂದಿದ್ದರು. ಗೀತೆಯನ್ನೂ ಗುನುಗಿದ್ದರು.

ಒಂದು ಕಾರ್ಯಕ್ರಮಕ್ಕೆ ಅವಧಿಯನ್ನು ಆಧರಿಸಿ ಎರಡು ಕೋಟಿ ರೂಪಾಯಿಯಿಂದ ₹12 ಕೋಟಿವರೆಗೆ ಅರಿಜೀತ್ ಪಡೆಯುತ್ತಾರೆ ಎಂದು ಸಂಗೀತ ನಿರ್ದೇಶಕ ಮಾಂಟಿ ಶರ್ಮಾ ಸಂದರ್ಶನವೊಂದರಲ್ಲಿ ಹೇಳಿದ್ದರು.

'ನನಗೆ ಜನಪ್ರಿಯತೆ ಆಗಿಬರುವುದಿಲ್ಲ' ಎಂದು 2017ರಲ್ಲಿ ಸಂದರ್ಶನವೊಂದರಲ್ಲಿ ಈ ಗಾಯಕ ಹೇಳಿಕೊಂಡಿದ್ದರು. 'ಹೋದ ಕಡೆಯೆಲ್ಲ ನನ್ನದೇ ಹಾಡುಗಳನ್ನು ನಾನೇ ಕೇಳಿಸಿಕೊಳ್ಳುವುದು ಮುಜುಗರದ ಸಂಗತಿ' ಎಂಬುದು ಅವರ ಆತ್ಮವಿಮರ್ಶೆಯ ನುಡಿಯಾಗಿತ್ತು. ಒಂದೇ ಕೆಲಸವನ್ನು ಮಾಡುವುದು ತಮಗೆ ಬಹು ಬೇಗ ಬೇಸರ ತರಿಸುತ್ತದೆ ಎಂದು ಹೇಳಿದ್ದವರೂ ಅವರೇ. ಹಿನ್ನೆಲೆ ಗಾಯನಕ್ಕೆ ಒಲ್ಲೆ ಎಂದು ಅವರು ಹೇಳಿರುವುದಕ್ಕೆ ನಿರ್ದಿಷ್ಟ ಕಾರಣಗಳನ್ನು ಕೊಟ್ಟಿಲ್ಲ. ಹಲವು ಕಾರಣಗಳಿವೆ ಎಂದಷ್ಟೇ ಉಲ್ಲೇಖಿಸಿದ್ದಾರೆ. ನವಾಜುದ್ದೀನ್ ಸಿದ್ದಿಕಿ ಪುತ್ರಿ ಅಭಿನಯಿಸಲಿರುವ ಸಿನಿಮಾವೊಂದನ್ನು ಅವರು ನಿರ್ದೇಶಿಸಲಿದ್ದಾರೆ ಎಂಬ ಸುದ್ದಿ ಇದೆ. ಶಾಸ್ತ್ರೀಯ ಸಂಗೀತದ ಪ್ರಯೋಗಗಳಿಗೆ ಕೈಹಾಕುವ ಸೂಚನೆಯನ್ನೂ ಕೊಟ್ಟಿದ್ದಾರೆ. ರಾಜಕೀಯ ಪಕ್ಷ ಕಟ್ಟುತ್ತಾರೆ ಎಂಬ ವದಂತಿ ಕೂಡ ಹರಡಿದೆ.

'ಮಹಾಪ್ರತಿಭೆಯಿಂದ ಹೊಸತೇನೋ ಬರಲಿದೆ... ಅದಕ್ಕಾಗಿ ಕಾಯುವೆ' ಎನ್ನುವುದು ಗಾಯಕಿ ಶ್ರೇಯಾ ಘೋಷಾಲ್ ಕುತೂಹಲ. ಸಿನಿಮಾ ಸಂಗೀತದಲ್ಲಿ ಗಾಯಕನ ಕ್ರಿಯಾಶೀಲತೆಯಲ್ಲಿ ಹೆಚ್ಚಿನ ಸ್ವಾತಂತ್ರ್ಯ ಇರುವುದಿಲ್ಲ. ಅದರಿಂದ ಹೊರಬಂದು, ತಮ್ಮದೇ ಪಥದಲ್ಲಿ ನಡೆಯುವ ದೃಢನಿಶ್ಚಯವನ್ನು ಇವರು ಮಾಡಿರಬಹುದು ಎಂದೂ ವಿಶ್ಲೇಷಿಸಲಾಗುತ್ತಿದೆ.

ಪ್ರಶಸ್ತಿ ಪ್ರದಾನ ಸಮಾರಂಭವೊಂದರಲ್ಲಿ ನಟ ಸಲ್ಮಾನ್ ಖಾನ್ ಈ ಗಾಯಕ ತೊಟ್ಟಿದ್ದ ಉಡುಗೆ ನೋಡಿ, 'ನಿದ್ದೆಯಿಂದ ಎದ್ದು ಬಂದಂತಿದೆ' ಎಂದು ಗೇಲಿ ಮಾಡಿದ್ದರು. 'ನಿಮ್ಮಂಥವರು ನಮ್ಮನ್ನು ಮಲಗಿಸಿ ಬಿಟ್ಟಿದ್ದೀರಿ' ಎಂದು ಅದಕ್ಕೆ ಅರಿಜೀತ್ ಖಾರವಾಗಿಯೇ ಪ್ರತಿಕ್ರಿಯಿಸಿದ್ದರು. ಇದರಿಂದಾಗಿ ಇಬ್ಬರ ನಡುವೆ ವರ್ಷಗಳ ಕಾಲ ಮುನಿಸು ಮೂಡಿತ್ತು. ಅದು ಆಮೇಲೆ ಬಗೆಹರಿಯಿತು. ತಮ್ಮಿಂದಲೇ ಆದ ತಪ್ಪು ಅದು ಎಂದು ಸಲ್ಮಾನ್ ಸ್ಪಷ್ಟನೆ ಕೊಟ್ಟರು. ಈಗ ಸಲ್ಮಾನ್ ಅಭಿನಯದ 'ಬ್ಯಾಟಲ್ ಆಫ್ ಗಲ್ವಾನ್' ಹಿಂದಿ ಸಿನಿಮಾಕ್ಕೆ ಒಂದು ಹಾಡನ್ನು ಅರಿಜೀತ್ ಹಾಡಿದ್ದಾರೆ.

ಒಂದಷ್ಟು ಪ್ರಶ್ನೆಗಳು ಹಾಗೂ ಕುತೂಹಲದ ಮೂಟೆಯನ್ನು ತೇಲಿಬಿಟ್ಟು, ಅರಿಜೀತ್ ತಮ್ಮ ಪಾಡಿಗೆ ತಮ್ಮ ಸ್ಟುಡಿಯೊದಲ್ಲಿ ಈಗ ಕುಳಿತಿದ್ದಾರೆ. ಅವರ ಮುಂದಿನ ಸಂಗೀತದ ಅಲೆ ಎಂಥದ್ದಾಗಿರುವುದೋ ಎನ್ನುವ ನಿರೀಕ್ಷೆಯಂತೂ ಉಳಿದಿದೆ.



ಅರಿಜೀತ್ ಸಿಂಗ್

₹414 ಕೋಟಿ ಆಸ್ತಿ

ಸಾಮಾನ್ಯವಾಗಿ ಗಾಯಕ–ಗಾಯಕಿಯ ಆಸ್ತಿಯ ಮೌಲ್ಯದ ಬಗ್ಗೆ ಯಾರೂ ಮಾತಾಡುವುದಿಲ್ಲ. ಅರಿಜೀತ್ ಸಿಂಗ್ ಈ ವಿಷಯದಲ್ಲೂ ಸುದ್ದಿಯಾದರು. 'ಮಿಂಟ್' ಪತ್ರಿಕೆಯು ವರದಿ ಮಾಡಿದಂತೆ ಈ ಗಾಯಕನ ಆಸ್ತಿಯ ಮೌಲ್ಯ ₹414 ಕೋಟಿ.

ಒಂದು ಹಾಡಿಗೆ ಅವರು ₹8 ಲಕ್ಷದಿಂದ ₹10 ಲಕ್ಷ ಸಂಭಾವನೆ ತೆಗೆದುಕೊಳ್ಳುತ್ತಾರೆ. ಸಂಗೀತ ಕಾರ್ಯಕ್ರಮಗಳಿಂದಲೇ ಅವರಿಗೆ ಹೆಚ್ಚು ಆದಾಯ ಬರುತ್ತದೆ. ವರ್ಷಕ್ಕೆ ಸರಾಸರಿ ₹70 ಕೋಟಿಯಷ್ಟು ಗಳಿಕೆ ಅವರದ್ದು ಎಂಬ ಅಂದಾಜಿದೆ.

ದೇಶ–ವಿದೇಶಗಳಲ್ಲಿ ಪ್ರವಾಸ ಅವರಿಗೆ ಸಹಜ ಎಂಬಂತಾಗಿತ್ತು. ಆದರೆ, ಬೇರೆಲ್ಲಿಯೂ ಅವರು ರೆಸ್ಟೋರೆಂಟ್ ತೆರೆಯುವ ಹಾದಿ ಹಿಡಿಯಲಿಲ್ಲ. ತಮ್ಮ ತವರೂರಿನಲ್ಲೇ 'ಹೆಶೆಲ್' ಎಂಬ ಹೆಸರಿನ ಹೋಟೆಲ್ ನಡೆಸುತ್ತಾರೆ. ಅಲ್ಲಿ ₹40ಕ್ಕೆ ಊಟ ಸಿಗುತ್ತದೆನ್ನುವುದು ವಿಶೇಷ.

ನವಿ ಮುಂಬೈನಲ್ಲಿ ₹8 ಕೋಟಿ ಮೌಲ್ಯದ ಮನೆಯೊಂದನ್ನು ಕೊಂಡುಕೊಂಡಿದ್ದರೂ ಅಲ್ಲಿ ಯಾವಾಗಲೂ ವಾಸ ಮಾಡುವುದಿಲ್ಲ. ಮರ್ಸಿಡಿಸ್ ಬೆಂಜ್, ಲ್ಯಾಂಡ್ ರೋವರ್ ಕಾರುಗಳನ್ನು ಕೊಂಡಿದ್ದಾರಾದರೂ ಅವುಗಳಲ್ಲಿ ಓಡಾಡಿ ರೀಲ್ಸ್ ಮಾಡುವ ಗೀಳಿನವರ ಪೈಕಿ ಅಲ್ಲ. ಒಟ್ಟು ₹3.5 ಕೋಟಿ ಮೌಲ್ಯದ ವಾಹನಗಳು ಅವರ ಬಳಿ ಇವೆ ಎಂದೂ ವರದಿಯಾಗಿದೆ.

ಖಾಸಗಿ ಬದುಕಿನ ವಿವರಗಳನ್ನು ಹಂಚಿಕೊಳ್ಳದ ಅವರದ್ದು ಸಂಕೋಚದ ಸ್ವಭಾವ. ಹಿಂದೆ ಮದುವೆಯಾಗಿ ವಿಚ್ಛೇದನ ಪಡೆದಿದ್ದ ಕೋಯೆಲ್ ರಾಯ್ ಎಂಬವರನ್ನು 2014ರಲ್ಲಿ ಅರಿಜೀತ್ ಮದುವೆಯಾದರು. ಅದಕ್ಕೂ ಮೊದಲು, ರೂಪರೇಖಾ ಬ್ಯಾನರ್ಜಿ ಎಂಬ ಗಾಯಕಿಯೊಟ್ಟಿಗೆ ಇದ್ದ ಸಂಬಂಧ ಮುರಿದುಬಿದ್ದಿತ್ತು. ಕೋಯೆಲ್ ಅವರನ್ನು ಆಕೆಯ ಪುತ್ರಿಯ ಸಹಿತ ಅರಿಜೀತ್ ತಮ್ಮ ಕುಟುಂಬಕ್ಕೆ ಸೇರಿಸಿಕೊಂಡರು.

ಕನ್ನಡದಲ್ಲೂ ಹಾಡಿದ್ದರು

ಪುನೀತ್ ರಾಜ್‌ಕುಮಾರ್ ಅಭಿನಯದ 'ನಿನ್ನಿಂದಲೆ' ಕನ್ನಡ ಸಿನಿಮಾಕ್ಕೆ ಅರಿಜೀತ್ 'ಮೌನ ತಾಳಿತೆ ದಾರಿ' ಎಂಬ ಗೀತೆ ಹಾಡಿದ್ದರು. ಮಣಿ ಶರ್ಮ ಸ್ವರ ಸಂಯೋಜನೆ ಮಾಡಿದ್ದ ಆ ಹಾಡಿನಲ್ಲಿ ಅವರ ಕಂಠ ಹಿಂದಿಯ ಜನಪ್ರಿಯ ಗೀತೆಗಳಿಗಿಂತ ಹೊರತೇ ಆಗಿರುವಂತೆ ಕೇಳುತ್ತದೆ.

ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಲಂಡನ್‌ನ ಟಾಟೆನ್‌ಹಮ್ ಹಾಟ್‌ಸ್ಪರ್ ಕ್ರೀಡಾಂಗಣದಲ್ಲಿ ಅರಿಜೀತ್ ಕಾರ್ಯಕ್ರಮ ನಡೆದಿತ್ತು. ಅಲ್ಲಿ ಟಿಕೆಟ್ ಬೆಲೆಯು ₹26 ಸಾವಿರದಿಂದ ₹3.05 ಲಕ್ಷದವರೆಗೆ ಇರುತ್ತದೆ. ಭಾರತದ ಯಾವ ಸಂಗೀತಗಾರನಿಗೂ ಅಲ್ಲಿ ಕಾರ್ಯಕ್ರಮ ನೀಡುವ ಅವಕಾಶ ಅದಕ್ಕೂ ಮೊದಲು ದೊರೆತಿರಲಿಲ್ಲ. ಅಲ್ಲಿಯೂ ಅಷ್ಟೂ ಟಿಕೆಟ್‌ಗಳು ಮಾರಾಟವಾಗಿದ್ದವು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

31 ಜನವರಿ 2026 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ತ್ರಯೋದಶಿ ಗಂ. 8-26 ನಂತರ ಚತುರ್ದಶಿ ಗಂ 29-53 ನಕ್ಷತ್ರ: ಪುನರ್ವಸು ಗಂ. 25-34 ಯೋಗ: ವಿಷ್ಕಂಭ ಗಂ. 13-34 ಕರಣ: ತೈತಿಲ ಗಂ. 8-26 ಮಕರ ಮಾಸದ 17 ನೇ ದಿನ. **ಮಳೆ ನಕ್ಷತ್ರ :** ಶ್ರವಣ 3 ನೇ ಪಾದ. **ರಾಹುಕಾಲ :** ಬೆಳಿಗ್ಗೆ 09-00 - 10-30 **ಸೂರ್ಯೋದಯ :** 07-01 **ಸೂರ್ಯಾಸ್ತ :** 06-27, **ಮುಸ್ಲಿಂ ದಿನಾಂಕ :** 11 ಶಬನ್, **ಅದೃಷ್ಟ ಸಂಖ್ಯೆ :** 9, 10

ಮೇಷ: ಅನಿವಾರ್ಯ ಕಾರಣದಿಂದ ಬಹು ಮುಖ್ಯ ಕೆಲಸದಿಂದ ತಪ್ಪಿಸಿಕೊಳ್ಳಬೇಕಾಗುತ್ತದೆ. ಯಾರಿಗೂ ಸಾಲ ಕೊಡದಿರಲು ನಿಶ್ಚಯಿಸಿ. ಅನಾರೋಗ್ಯದಿಂದ ವೈದ್ಯರ ಭೇಟಿ ಮಾಡುವಿರಿ.

ವೃಷಭ: ಸಹೋದರರ ಜೊತೆ ತಾಳ್ಮೆ ಕಳೆದುಕೊಂಡು ಕಲಹಗಳನ್ನು ಮಾಡುವಿರಿ. ಮನಸ್ತಾಪಗಳು ಕ್ರಮೇಣ ಬಗೆಹರಿದು ನೆಮ್ಮದಿ ಕಾಣುವಿರಿ. ಮನೆಯಲ್ಲಿ ಪತ್ನಿ, ಮಕ್ಕಳ ಆರೋಗ್ಯದ ಬಗ್ಗೆ ಗಮನ ಹರಿಸಿ.

ಮಿಥುನ: ಹಳೆಯ ಕೆಲಸವನ್ನೆ ಹೊಸ ಹಾಗೂ ಗ್ರಾಹಕರನ್ನು ಸೆಳೆಯುವಂಥ ನಿಯಮಗಳನ್ನು ಹಾಕಿಕೊಂಡು ಪುನಃ ಪ್ರಾರಂಭ ಮಾಡುವಿರಿ. ಲೇವಾದೇವಿ ವ್ಯವಹಾರದಲ್ಲಿ ಜಾಗರೂಕತೆ ಇರಲಿ. ಕೋಪದ ಮೇಲೆ ನಿಯಂತ್ರಣವಿರಲಿ.

ಕರ್ಕಾಟಕ: ಪ್ರತಿ ವೈಯಕ್ತಿಕ ಕೆಲಸಗಳಿಗೂ ಅನಾರೋಗ್ಯದ ಕಾರಣ ಬೇರೆಯವರ ನೆರವು ಬೇಕಾಗುತ್ತದೆ. ವಿದ್ಯಾರ್ಥಿಗಳು ಯಶಸ್ಸು ಸಾಧಿಸಲು ಅಧಿಕ ಪರಿಶ್ರಮ ಹಾಕಿದರೂ ಅದೃಷ್ಟವು ಕೈ ಕೊಡಲಿದೆ.

ಸಿಂಹ: ಜೀವನವು ಮೇಲ್ನೋಟಕ್ಕೆ ಎಲ್ಲರ ಕಣ್ಣಿಗೂ ಉತ್ತಮವಾಗಿ ಕಂಡುಬಂದರೂ ಒಳಗಿನ ಸತ್ಯಾಂಶ ತೋರುವುದು. ಖರ್ಚುವೆಚ್ಚಗಳು ನಿಯಂತ್ರಣದಲ್ಲಿ ಇರಲಿಕ್ಕೆ ಸಾಹಸ ಪಡಬೇಕಾಗುವುದು.

ಕನ್ಯಾ: ಅತಿ ಹಣಕಾಸಿನ ವ್ಯಾಮೋಹದಿಂದ ಪಶ್ಚಾತ್ತಾಪಕ್ಕೆ ಕಾರಣವಾಗದಂತೆ ನೋಡಿಕೊಳ್ಳಿ. ರಾಜಕೀಯ ವ್ಯಕ್ತಿಗಳಿಗೆ ಬಂದ ಹೊಸ ಜವಾಬ್ದಾರಿಯಲ್ಲಿ ಜನಾನುರಾಗ ಹೆಚ್ಚಿಸಿಕೊಳ್ಳುವುದು ಅನಿವಾರ್ಯ.

ತುಲಾ: ನಿಮ್ಮ ಕ್ಷೇತ್ರದಲ್ಲಿ ಶ್ರೇಯಸ್ಸನ್ನು ಪಡೆಯಲು ಉಪಯೋಗಿಸಿದ ತಂತ್ರಗಳು ಈ ಬಾರಿಗೆ ಪ್ರಯೋಜನಕ್ಕೆ ಬರುವುದಿಲ್ಲ. ದೂರದ ಪ್ರಯಾಣದ ಮೊದಲು ಅಲ್ಲಿಯ ಸ್ಥಿತಿಗತಿಗಳನ್ನು ಬಲ್ಲವರಿಂದ ವಿಚಾರಿಸಿ.

ವೃಶ್ಚಿಕ: ಜರುಗಲಿರುವ ಸಂಗತಿ ಗಾಢ ಪರಿಣಾಮ ಬೀರಿ ವೃತ್ತಿಗೆ ಸಂಬಂಧಿಸಿದ ವಿಷಯದಲ್ಲಿ ಉತ್ತಮ ನಿರ್ಧಾರ ಕೈಗೊಳ್ಳಲು ಸಹಾಯವಾಗಲಿದೆ. ಹೊಸ ಸ್ಥಳದಲ್ಲಿ ಹೊಂದಿಕೊಳ್ಳಲು ಸಮಯ ತೆಗೆದುಕೊಳ್ಳುವಿರಿ.

ಧನು: ಸ್ಪರ್ಧಾತ್ಮಕ ಪರೀಕ್ಷೆಗಾಗಿ ತಯಾರಾಗುತ್ತಿರುವವರು ಯಾವುದೇ ಸಣ್ಣ ವಿಷಯಗಳನ್ನು ನಿರ್ಲಕ್ಷ್ಯ ಮಾಡುವಂತಿಲ್ಲ. ಕೆಲಸಕ್ಕೆ ಅನಿರೀಕ್ಷಿತ ಬದಲಾವಣೆಗಳು ಬರಬಹುದು. ವಾತದ ಬಾಧೆ ಉಪಶಮನವಾಗುವುದು.

ಮಕರ: ವಾಣಿಜ್ಯ ವ್ಯವಹಾರಗಳಿಗೆ ಸಂಬಂಧಿಸಿದ ಮುಖ್ಯ ವ್ಯಕ್ತಿಗಳನ್ನು ಭೇಟಿ ಮಾಡುವ ಕೆಲಸದಲ್ಲಿ ವಿಘ್ನ ಇರಲಿದೆ. ಲಕ್ಷ್ಮಿ ವೆಂಕಟೇಶ್ವರನನ್ನು ಭಕ್ತಿಯಿಂದ ಆರಾಧಿಸಿ. ಸಾಮಾಜಿಕವಾಗಿ ಗೌರವವು ಇಮ್ಮಡಿಗೊಳ್ಳಲಿದೆ.

ಕುಂಭ: ಪತಿ–ಪತ್ನಿಯರ ನಡುವೆ ಪರಸ್ಪರ ಸಮರ್ಪಣಾ ಭಾವವಿದ್ದಲ್ಲಿ ಉತ್ತಮವಾಗಿ ಇರುತ್ತದೆ. ಪ್ರೀತಿಯ ಜೀವನದಲ್ಲಿ ಅನೇಕ ದೀರ್ಘಕಾಲೀನ ಬದಲಾವಣೆಗಳಾಗಬಹುದು. ಅಧಿಕ ಕೊಬ್ಬಿನ ಅಂಶದ ಆಹಾರವನ್ನು ತ್ಯಜಿಸಿ.

ಮೀನ: ದುಡಿಮೆ ಎಷ್ಟು ಮುಖ್ಯವೋ ಅಷ್ಟೇ ವಿಶ್ರಾಂತಿಯೂ ಮುಖ್ಯ ಎಂಬುದನ್ನು ಕಂಡುಕೊಳ್ಳಿರಿ. ನೇರ ನಡೆ-ನುಡಿಯು ವ್ಯವಹಾರವನ್ನು ಕುಂಠಿತಗೊಳಿಸಬಹುದು. ಕ್ರಿಮಿಕೀಟಗಳಿಂದ ತೊಂದರೆಗೆ ಒಳಗಾಗುವಿರಿ.

ಪದಬಂಧ 6301


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹಡಗಿನ ಚುಕ್ಕಾಣಿ ಹಿಡಿದವನು (4)
3.ಹಿಮದ ಬಳಿ ತಿರುಗಾಡುತ್ತಿರುವ ಕೋಣ (3)
5.ಶ್ರೀಕೃಷ್ಣನ ಸ್ನೇಹಿತ (3)
7.ಬೆಳೆ ಕುಯಿಲು ಆದ ಮೇಲೆ ಬರೆದ ಮರಣಪತ್ರ (3)
8.ತುತ್ತು ತಿನ್ನುವಾಗ ಈ ತೊಂದರೆ! (2)
9.ಪ್ರೇಮಿಗಳ ಅಗಲಿಕೆಯ ಬೇನೆ (5)
11.ಪ್ರತಿಭೆಯಲ್ಲಿ ಕಾಣುತ್ತಿರುವ ಕಾಂತಿ (2)
12.ನೆಲವನ್ನು ಗೋಮಯದಿಂದ ಸಾರಿಸುವುದು (3)
13.ಕುಮಾರನು ತೋರಿಸುತ್ತಿರುವ ಸೊಕ್ಕು (3)
16.ನಗ ಖರೀದಿಸಿದ ಷಹರು ಇಲ್ಲಿದೆ (3)
17.ಕತ್ತಿಯ ಅಲುಗು (4)

ಮೇಲಿಂದ ಕೆಳಕ್ಕೆ

1.ಇನ್ನೂ ಕರು ಹಾಕದ ಹಸು (3)
2.ನಿರ್ಯಾತವನ್ನು ಹೀಗೆನ್ನಿ (2)
3.ಉಡಿಗೊಂದು ಪರ್ಯಾಯ ಪದ (3)
4.ಬರವಿದ್ದಾಗ ಕುಡಿದ ಪಾನಕ (4)
6.ಮನದಿಂದ ಸಲ್ಲಿಸಿದ ಅರ್ಜಿ (3)
7.ದಾಹವಿದ್ದಾಗ ನೀಡಿದ ದೃಷ್ಟಾಂತ (5)
10.ಈ ಪರಿ ಕಾಣಿಸಿದ ಆವರಣ! (3)
11.ಇದು ಹಾಸ್ಯ ನಾಟಕ (4)
12.ಹತ್ತು ನೂರಿದು (3)
14.ಅಶ್ವ ಇಲ್ಲಿ ಬಂದಿದೆ (3)
15.ಸಖಿಯೊಡನೆ ಬಂದಿರುವ ಸ್ನೇಹಿತ (2)



6300ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

2.ಆಮ್ಲಜನಕ
4.ಸುಲಲಿತ 7.ತಿಪಾ
9.ಗುರಾಣಿ 10.ಕಣ
11.ಅಂಬರಚುಂಬಿ 12.ರಥ
13.ಕಣಜ 14.ತ್ರಿಹ
16.ಸುರಚಾಪ 18.ರಸಕವಳ

ಮೇಲಿಂದ ಕೆಳಕ್ಕೆ:

1.ರಾಸು 3.ಕಲ್ಯಾಣಿ
5.ಲವಣ 6.ತತಿ
8.ಪಾತರಗಿತ್ತಿ 9.ಗುಲಾಬಿ
11.ಅಂಬುಜ 12.ರಮಚಾ
13.ಕರ್ಜೂರ 15.ಹಸು
17.ಪರ

ಸುಡೊಕು 6685

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	6		8				1	
2							7	
		4	9		2	8	3	6
3		6				5		9
	7		3	2	4			
		1				3		7
4			6		1		9	
	3				5			
6		8	2				5	

6684 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331





ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Anjanapura

SALE BDA 30X40 Anjanapura 5th G Block South facing 40X60 west facing commercial site 2nd Block. 9620041313, 9945373839

Banashankari

"BANASHANKARI 6TH_STAGE 4th_Block`50x80 North`West corner and`50x80 North`facing 7th-Block and`30x40 West`facing 2nd-Block and`40x60 3rd-Block East`facing near`BDA Complex._Call: 9845146725/ 9741466369"

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BANASHANKARI 6TH Stage 10th Block 40X60 West Facing Price. 2.34 CR. Genuine Buyers: 9148914809/ 9993959099

SALE BSK 6th stage 4th B Block 40X60 west Facing 2.10Cr Also 40X60 South Facing 6th Block 2.20cr Behind 100 Road all owners site. 9945373839, 9620041313

BANASHANKARI 6TH Stage 7th Block BDA 30x40 East Facing Site For Sale 1.6Cr. Owner- 9900115519

Commercial Space for RENT
(Opposite St.Philomena's Church, Mysore-1)
About 11,000sqft- ground+ 2 floors, Parking available in basement.
Suitable for Software Co./ Bank/Super Market / Shopping Complex/ Showrooms/ Shops.



Please Contact:
Mob: 9880063284 | 8884819699



Shobha Residency
OMKAR NAGAR, Opposite JSS College, 40 Feet Wide Road, Near to Global Village, Rajarajeshwari Nagar, Bangalore.
BDA Approved Luxury 3 BHK Flats for Sale in Prime Location.
Each Flat Built up Area 2100 Sqft. North Facing
Call: 98440 26676 | 83104 43385

Kempegowda Layout

NADAPRABHU KEMPEGOWDA LAYOUT BDA SITES SELLING/ BUYING 20x30, 30x40, 40x60, 50x80. Genuine Buyers Call: 9632146784, 9731162167.

KEMPEGWODA LAYOUT 3rd Block "J"Sector Kommaghatta #2740 30x40 Site Sale.Ready to Construction ₹9750/-. 9742681666

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80. Contact Kumar 9945119449

Rajajinagar

RAJAJINAGAR 2ND Stage 40X60 Property for Sale East facing, Excellent location, Price 22000/- Call: 9663983846

Vishweshwariah Layout

SMVL 7TH Block, 40×60 Site, DC Conversion E Katha, North, Byregowda Layout, Near Kings Club: 9980433004

"VISVESHWARAIAH LAYOUT 6th Block 40x60 South facing Site for sale Good Location Genuine Buyers Contact: 9845500019/ 7019314962"

BDA-SITE FOR-SALE @ Sir. M. Vishweshwaraiah Layout 30x40 Contact: 6363496142

'DIRECT OWNER' 30x40 North Facing Vishveswaraiah Layout 4th Block, Full Development Area: 8496030007/ 8310885235

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 82173 92686

MORE **Classifieds** Ads on Subsequent Pages

FOR SALE
BDA SITE No. 90, BTM 1st Stage, North facing 40×60, 60 ft. Road, Adjacent to JALA BHAVAN, Between Bannerghatta Road to Jayanagar East End Road, Approx 100 mtr. to Bannerghatta Main Road.
Genuine Buyers Call:
Muralidhar: 98453 01599

New Building with 65 Rooms For Rent
near **MANYATA TECH PARK**
Suitable for
Student Hostel
Company Guest House
Lodging
Attached Bath and Ample Car Parking
PG
Contact
98450 08811

Hegganahalli

2SITES SALE 80ftx100ft In Hegganahalli Cross Bangalore-91 A&E Katha Borewell Brick wall Fenced:9900287834/ 9448377834

Multiple Locations

BDA SITES AVAILABLE 50x80, 40x60, 30x40, 30x20 in Vishweshwaraiah Layout and Kempegowda Layout. 9900999919.

Mysore

KIADB INDUSTRIAL HOUSING AUCTION SITE FOR SALE, 17539 SQFT, E/Face, RING ROAD, OPPOSITE SHESHADRIPURAM COLLEGE, HEBBAL, MYSORE. CALL: 9845981490

The California Holiday Village
RK ENTERPRISES

Residential
DTCP APPROVED Sites
DTCP APPROVED
E-KHATA SITES
ದೇವನಹಳ್ಳಿ
ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ 45 ನಿಮಿಷಗಳ ಪ್ರಯಾಣ
ಈಶಾ ಫೌಂಡೇಶನ್‌ನಿಂದ ಕೇವಲ 25 ನಿಮಿಷಗಳ ಪ್ರಯಾಣ
OFFER PRICE Rs.649 per sq ft Onwards




- ಸೈಟುಗಳು ನೋಂದಣಿ ಮತ್ತು ಮನೆ ನಿರ್ಮಾಣಕ್ಕೆ ಸಿದ್ಧವಾಗಿದೆ.
- 100% ಕಾನೂನಾತ್ಮಕ ದಾಖಲೆ ಪತ್ರಗಳು
- ಅಭಿವೃದ್ಧಿಪಡಿಸಿದ ಲೇಔಟ್
- ನಿವೇಶನ ಖರೀದಿಸಲು ಬ್ಯಾಂಕ್ ಸಾಲ ಸೌಲಭ್ಯವಿದೆ

ಸೌಲಭ್ಯಗಳು : •ನೀರು •ಬೀದಿ ದೀಪ •ರಸ್ತೆಗಳು •ಪಾರ್ಕ್ •ವಿದ್ಯುತ್ •ಅಂಡರ್ ಗ್ರೌಂಡ್ ವಾಟರ್ ಲೈನ್ಸ್
Site dimension: 30x40 onwards
www.rkcalifornia.com
ಸೈಟ್ ಭೇಟಿಗಾಗಿ ಕರೆ ಮಾಡಿ : 8880665577

ಟೆಲಿಕಾಂ ಎಂಪ್ಲಾಯಿಸ್ ಅಂಡ್ ಅದರ್ಸ್ ಹೌಸಿಂಗ್ ವೆಲ್ಫೇರ್ ಟ್ರಸ್ಟ್ (ರಿ.)
TELECOMEMPLOYEES AND OTHERS HOUSINGWELFARE TRUST [R]
TELECOM EMPLOYEES AND OTHERS HOUSING WELFARE TRUST (R) ESTD-2017
Reg No. GAN-400021-2017-18 C.D. No. GAND287 TELECOMEMPHOUSINGTRUST.COM

PREMIUM PLOTS FOR SALE at DEVANAHALLI

INVESTMENT PURPOSE - This is your moment, Seize the Opportunity





DR. N. NARASIMHA MURTHY (PRESIDENT)

Price Starts at ₹1,499/-
Entrance Arch | Wide Roads | Kids Play Area | Club House | 24/7 Security | Jogging Track | Electricity Connection | Compound wall
SAVE UPTO 10% off
T&C Applicable*

We are also located in - Devanahalli | Tumkur | Doddballapura | Hejjala | Nelamangala | Mysore | Kunigal

Mob : +91 94801 09111 | +91 91410 42196

No. 132 /B , 4th Main, CBI Main Road, Opp, SBI Bank, Ganganagar Extn. Bengaluru - 560032.

ಮುಂಬೈ ಧಾರಣೆ (ಶೇಂಗಾ)

30-01-2026

ಜಾವಾ 70/80(ಹೊಸ)	11500-11600
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ (ಹೊಸ)	8500-8600
ದಪ್ಪ ಗುಜರಾತ್ (ಹೊಸ)	9800-9900
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1820 (1690)
ಒಂದು ವಾರದ ಡೆಲಿವರಿ	1815 (1695)
ಪಾಮ್ ವಾರದ ಡೆಲಿವರಿ	1328 (1343)
ಸೂರ್ಯಕಾಂತಿ ಎಣ್ಣೆ ಕಚ್ಚಾ	1535 (1540)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,61,000 (1,74,000)
ಬೆಳ್ಳಿ ಕೆ.ಜಿಗೆ	3,20,000 (3,78,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಷೇರುಪೇಟೆ ವಹಿವಾಟು

82,566 ಹಿಂದಿನ ಅಂತ್ಯ — 296 — 82,269 ಇಂದಿನ ಅಂತ್ಯ

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,418
ಇಂದಿನ ಅಂತ್ಯ:	25,320
ದಿನದ ಕನಿಷ್ಠ:	25,213
	98

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹575
	12 ಕ್ಕೆ	₹75
ಮೈಸೂರು:	100 ಕ್ಕೆ	₹577

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹415-753
ದ್ವಿತಳಿ (ಬಿ.ವಿ)	₹286-939

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹198
ಆರ್‌ಎಸ್‌ಎಸ್-5	₹193
ಗುಡ್ ಲಾಟ್	₹181

ಮುದ್ರೆ-ಮನೆ ಕಾಫಿ (50 ಕೆಜಿಗೆ)

ಎಪಿ	₹26,000
ಎಸಿ	₹14,150
ಆರ್‌ಪಿ	₹17,850
ಆರ್‌ಸಿ	₹10,600

₹4,682 ಕೋಟಿ ಕಬ್ಬು ಬಿಲ್ ಬಾಕಿ

ಕಾರ್ಖಾನೆಗಳ ಪಾವತಿ ಪ್ರಮಾಣ ಶೇ 50ರಷ್ಟೂ ದಾಟಿಲ್ಲ

• ಬಸವರಾಜ ಹವಾಲ್ದಾರ

ಬಾಗಲಕೋಟೆ: ರಾಜ್ಯದಲ್ಲಿ ಕಬ್ಬು ನುರಿಸುವ ಹಂಗಾಮು ಆರಂಭವಾಗಿ ಎರಡೂವರೆ ತಿಂಗಳಾಗಿದ್ದು, 81 ಸಕ್ಕರೆ ಕಾರ್ಖಾನೆಗಳು ಕಬ್ಬು ನುರಿಸುತ್ತಿವೆ. ಕಬ್ಬು ಪೂರೈಸಿದ ರೈತರ ಕಬ್ಬಿನ ಬಿಲ್ ₹4,682 ಕೋಟಿ ಬಾಕಿ ಉಳಿದಿದೆ.

ಈವರೆಗೆ ಕಾರ್ಖಾನೆಗಳು 390 ಲಕ್ಷ ಟನ್ ಕಬ್ಬು ನುರಿಸಿದ್ದು, 31.72 ಲಕ್ಷ ಟನ್ ಸಕ್ಕರೆ ಉತ್ಪಾದನೆ ಆಗಿದೆ. ಕಾರ್ಖಾನೆಗಳು ಜ.15ರವರೆಗೆ ₹15,609 ಕೋಟಿ ಪಾವತಿಸಬೇಕಿತ್ತು. ₹10,935 ಕೋಟಿ ಮಾತ್ರ ಪಾವತಿಸಿವೆ.

ಕೆಲ ಸಕ್ಕರೆ ಕಾರ್ಖಾನೆಗಳು ಶೇ 25 ರಿಂದ ಶೇ 40ರಷ್ಟು ಮಾತ್ರ ಬಿಲ್ ಪಾವತಿಸಿದ್ದರೆ, ಕೆಲ ಕಾರ್ಖಾನೆಗಳು ಶೇ 70 ರಿಂದ ಶೇ 80ರಷ್ಟು ಪಾವತಿಸಿವೆ. ಸರಾಸರಿ ಶೇ 70ರಷ್ಟು ಬಿಲ್ ಪಾವತಿಯಾಗಿದೆ. 2025ರ ನವೆಂಬರ್ ತಿಂಗಳಲ್ಲಿಯೇ ಕಬ್ಬು ಪೂರೈಕೆಯನ್ನು ಪೂರ್ಣಗೊಳಿಸಿರುವ ಮಂಡ್ಯ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳು ಇನ್ನೂ ₹12.58 ಕೋಟಿ ಬಿಲ್ ಬಾಕಿ ಉಳಿಸಿಕೊಂಡಿವೆ.

‘ಕಾಯ್ದೆ ಪ್ರಕಾರ ಕಬ್ಬು ಪೂರೈಸಿದ 14 ದಿನಗಳಲ್ಲಿ ಬಿಲ್ ಪಾವತಿಸಬೇಕು. ಕೆಲ ಕಾರ್ಖಾನೆಗಳಲ್ಲಿ ಡಿಸೆಂಬರ್ 15ರವರೆಗೆ ಬಿಲ್ ಪಾವತಿಸಲಾಗಿದೆ. ಒಂದೂವರೆ ತಿಂಗಳ ಬಿಲ್ ಉಳಿಸಿವೆ’ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನೆಯ ಜಿಲ್ಲಾ ಘಟಕದ ಅಧ್ಯಕ್ಷ ಬಸವಂತಪ್ಪ ಕಾಂಬಳೆ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕಬ್ಬು ಕಟಾವು, ಸಾಗಣೆ ಬಿಲ್ ಹೆಚ್ಚಿದ್ದು ರೈತರಿಗೆ ಹೊರೆಯಾಗುತ್ತಿದೆ. ಕೆಲ ಕಾರ್ಖಾನೆಗಳು ದೂರದಿಂದ ಕಬ್ಬು ತರುತ್ತಿವೆ. ಇದರಿಂದ ಸಾಗಣೆ ವೆಚ್ಚ ಹೆಚ್ಚಾಗುತ್ತಿದೆ. ಟನ್ ಕಬ್ಬಿಗೆ ₹850ರವರೆಗೆ ಬರಲಿದೆ’ ಎಂದರು.

ಗರಿಷ್ಠ ಬಾಕಿ ಎಲ್ಲೆಲ್ಲಿ?

ಜಿಲ್ಲೆ	ಬಾಕಿ (₹ಕೋಟಿಗಳಲ್ಲಿ)
ಬೆಳಗಾವಿ	1,769
ಬಾಗಲಕೋಟೆ	1,382
ವಿಜಯಪುರ	608
ಕಲಬುರಗಿ	386
ಬೀದರ್	249



ಬೆಳೆದು ನಿಂತಿರುವ ಕಬ್ಬು

> ಬಾಗಲಕೋಟೆ ಜಿಲ್ಲೆಯ 14 ಸಕ್ಕರೆ ಕಾರ್ಖಾನೆಗಳು ಕಬ್ಬು ನುರಿಸುತ್ತಿವೆ. ಶೇ 65ರಷ್ಟು ಬಿಲ್ ಪಾವತಿ ಆಗಿದೆ. ಉಳಿದ ಬಿಲ್ ಪಾವತಿಗೆ ಈಗಾಗಲೇ ತಿಳಿಸಲಾಗಿದೆ
>
> **ಶ್ರೀಶೈಲ ಕಂಕಣವಾಡಿ,** ಜಂಟಿ ನಿರ್ದೇಶಕ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ

> ಕಬ್ಬಿನ ಬಾಕಿ ಬಿಲ್ ಅನ್ನು ಆದಷ್ಟು ಬೇಗನೆ ಪಾವತಿಸಬೇಕು. ಇಲ್ಲದಿದ್ದರೆ, ಬೆಳೆಗಾರರ ಕುಟುಂಬಗಳ ನಿರ್ವಹಣೆಗೆ ಸಮಸ್ಯೆಯಾಗಲಿದೆ.
>
> **ಬಸವಂತಪ್ಪ ಕಾಂಬಳೆ,** ಜಿಲ್ಲಾ ಅಧ್ಯಕ್ಷ, ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನೆ

ಸುದ್ದಿ 2 ನಿಮಿಷ

ಲಾಭ ಗಳಿಕೆ ವಹಿವಾಟು ಚಿನ್ನ, ಬೆಳ್ಳಿ ದರ ಇಳಿಕೆ

ನವದೆಹಲಿ (ಪಿಟಿಐ): ಗಗನಮುಖಿಯಾಗಿದ್ದ ಚಿನ್ನ ಮತ್ತು ಬೆಳ್ಳಿಯ ದರವು ಶುಕ್ರವಾರ ಇಳಿಕೆ ಕಂಡಿದೆ. ಇಲ್ಲಿನ ಚಿನಿವಾರ ಪೇಟೆಯಲ್ಲಿ ನಡೆದ ವಹಿವಾಟಿನಲ್ಲಿ ಚಿನ್ನದ ದರವು 10 ಗ್ರಾಂಗೆ ₹14 ಸಾವಿರದಷ್ಟು, ಬೆಳ್ಳಿಯ ದರವು ಕೆ.ಜಿ.ಗೆ ₹20 ಸಾವಿರದಷ್ಟು ಇಳಿಕೆ ಆಗಿದೆ.

ಅಮೆರಿಕದ ಡಾಲರ್ ಮೌಲ್ಯದಲ್ಲಿ ಹೆಚ್ಚಳ ಹಾಗೂ ಹೂಡಿಕೆದಾರರು ಲಾಭ ಗಳಿಕೆಯ ಉದ್ದೇಶದಿಂದ ಚಿನ್ನ ಮತ್ತು ಬೆಳ್ಳಿಯನ್ನು ಮಾರಾಟ ಮಾಡಿದ್ದುದು ಈ ಇಳಿಕೆಗೆ ಕಾರಣ ಎಂದು ವರ್ತಕರು ಹೇಳಿದ್ದಾರೆ.

ಚಿನ್ನದ ಬೆಲೆಯು ಶೇ 7.65ರಷ್ಟು ಕುಸಿದು ₹1.69 ಲಕ್ಷಕ್ಕೆ ತಲುಪಿದೆ. ಬೆಳ್ಳಿಯ ಬೆಲೆಯು ಸರಿಸುಮಾರು ಶೇ 5ರಷ್ಟು ಕಡಿಮೆ ಆಗಿದ್ದು ₹3,84,500ಕ್ಕೆ ತಲುಪಿದೆ. ‘ಈಚಿನ ದಿನಗಳಲ್ಲಿ ಚಿನ್ನ, ಬೆಳ್ಳಿಯ ಬೆಲೆಯು ಭಾರಿ ಪ್ರಮಾಣದಲ್ಲಿ ಹೆಚ್ಚಾಗಿತ್ತು. ಹೀಗಾಗಿ ಹೂಡಿಕೆದಾರರು ಲಾಭ ಗಳಿಕೆಯ ಉದ್ದೇಶದಿಂದ ಚಿನ್ನ, ಬೆಳ್ಳಿ ಮಾರಾಟ ಮಾಡಿದರು’ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಸರಕು ವಿಭಾಗದ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.



‘ದೊಡ್ಡ ಸಾಂಸ್ಥಿಕ ಹೂಡಿಕೆದಾರರು ಚಿನ್ನ, ಬೆಳ್ಳಿಯ ನಗದೀಕರಣಕ್ಕೆ ಮುಂದಾಗಿದ್ದುದು ಈ ಬೆಲೆ ಇಳಿಕೆಗೆ ಕಾರಣ’ ಎಂದು ಗಾಂಧಿ ಹೇಳಿದ್ದಾರೆ. ಅಮೆರಿಕದ ಡಾಲರ್ ಮೌಲ್ಯವು ಸುಧಾರಿಸಿ-ಕೊಂಡಿದ್ದುದು ಕೂಡ ಚಿನ್ನ, ಬೆಳ್ಳಿಯ ಬೆಲೆ ಇಳಿಕೆಗೆ ಕಾರಣವಾಯಿತು ಎಂದು ತಿಳಿಸಿದ್ದಾರೆ.

ಟಿವಿಎಸ್ ಕ್ರೆಡಿಟ್ ಲಾಭ ಶೇ 13ರಷ್ಟು ಏರಿಕೆ

ಬೆಂಗಳೂರು: ಬ್ಯಾಂಕೇತರ ಹಣಕಾಸು ಕಂಪನಿ (ಎನ್‌ಬಿಎಫ್‌ಸಿ) ಟಿವಿಎಸ್ ಕ್ರೆಡಿಟ್ ಡಿಸೆಂಬರ್ ತ್ರೈಮಾಸಿಕದಲ್ಲಿ ₹272 ಕೋಟಿ ಲಾಭ ಗಳಿಸಿದೆ. ಇದು ಹಿಂದಿನ ವರ್ಷದ ಇದೇ ಅವಧಿಯ ಲಾಭಕ್ಕೆ ಹೋಲಿಸಿದರೆ ಶೇ 13ರಷ್ಟು ಹೆಚ್ಚು.

ಕಂಪನಿಯ ಒಟ್ಟು ವರಮಾನವು ₹1,870 ಕೋಟಿ ಆಗಿದೆ. ಇದು ಹಿಂದಿನ ವರ್ಷದ ಇದೇ ಅವಧಿಯ ವರಮಾನಕ್ಕೆ ಹೋಲಿಸಿದರೆ ಶೇ 9ರಷ್ಟು ಜಾಸ್ತಿ.

ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ಸಾಲ ನೀಡಿಕೆ ಪ್ರಮಾಣವು ಬೆಳವಣಿಗೆ ಕಂಡಿದೆ. ಜಿಎಸ್‌ಟಿ ದರ ಪರಿಷ್ಕರಣೆಯ ನಂತರದಲ್ಲಿ, ಹಣದುಬ್ಬರ ಪ್ರಮಾಣ ಕಡಿಮೆ ಇರುವ ಕಾರಣದಿಂದಾಗಿ ಗ್ರಾಹಕರ ಕಡೆಯಿಂದ ಸ್ಪಂದನ ಜಾಸ್ತಿ ಆಗಿದೆ. ಇದರಿಂದಾಗಿ ಮಾರುಕಟ್ಟೆಯಲ್ಲಿ ಕಂಪನಿಯ ಪಾಲು ಜಾಸ್ತಿ ಆಗಿದೆ ಎಂದು ಪ್ರಕಟಣೆ ತಿಳಿಸಿದೆ. ಡಿಸೆಂಬರ್ 31ಕ್ಕೆ ಕೊನೆಗೊಂಡ ಒಂಬತ್ತು ತಿಂಗಳ ಅವಧಿಯಲ್ಲಿ ಹೊಸದಾಗಿ 41 ಲಕ್ಷಕ್ಕೂ ಹೆಚ್ಚು ಗ್ರಾಹಕರಿಗೆ ಸಾಲ ನೀಡಲಾಗಿದೆ. ಈ ಮೂಲಕ ಕಂಪನಿಯ ಗ್ರಾಹಕರ ಸಂಖ್ಯೆಯು 2.3 ಕೋಟಿ ಆಗಿದೆ ಎಂದು ಹೇಳಿದೆ.

ಇಂಡಿಯನ್ ಆಯಿಲ್ – ಆಕಾಸಾ ನಡುವೆ ಒಪ್ಪಂದ

ಬೆಂಗಳೂರು: ಭವಿಷ್ಯದಲ್ಲಿ ಸುಸ್ಥಿರ ವಿಮಾನ ಇಂಧನದ ಪೂರೈಕೆ ವಿಚಾರವಾಗಿ ಇಂಡಿಯನ್ ಆಯಿಲ್ ಕಂಪನಿಯು ಆಕಾಸಾ ಏರ್ ಕಂಪನಿಯ ಜೊತೆ ಹೈದರಾಬಾದ್‌ನಲ್ಲಿ ಒಪ್ಪಂದ-ವೊಂದಕ್ಕೆ ಸಹಿ ಹಾಕಿದೆ.

ಸುಸ್ಥಿರ ವಿಮಾನ ಇಂಧನ ಪೂರೈಕೆಯ ಮೂಲಕ ಆಕಾಸಾ ಏರ್ ಕಂಪನಿಯು ಸುಸ್ಥಿರತೆಗೆ ಸಂಬಂಧಿಸಿದಂತೆ ಹೊಂದಿರುವ ಗುರಿಗಳಿಗೆ ಇಂಡಿಯನ್ ಆಯಿಲ್ ಕಂಪನಿಯು ನೆರವು ಒದಗಿಸಲಿದೆ ಎಂದು ಪ್ರಕಟಣೆ ತಿಳಿಸಿದೆ.

‘ಕಡಿಮೆ ಇಂಗಾಲದ ಇಂಧನವನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸುವ ನಮ್ಮ ಬದ್ಧತೆಯನ್ನು ಈ ಒಪ್ಪಂದವು ತೋರಿಸುತ್ತಿದೆ’ ಎಂದು ಇಂಡಿಯನ್ ಆಯಿಲ್‌ನ ಹಿರಿಯ ಅಧಿಕಾರಿ ಶಯಲೇಶ್ ಧರ್ ಹೇಳಿದ್ದಾರೆ.

ವಿತ್ತೀಯ ಕೊರತೆ ಶೇ 54.5ರಷ್ಟು

ನವದೆಹಲಿ (ಪಿಟಿಐ): ಡಿಸೆಂಬರ್ ಅಂತ್ಯದ ವೇಳೆಗೆ ಕೇಂದ್ರ ಸರ್ಕಾರದ ವಿತ್ತೀಯ ಕೊರತೆಯು 2025–26ನೇ ಬಜೆಟ್‌ನಲ್ಲಿ ಅಂದಾಜು ಮಾಡಿರುವ ಮೊತ್ತದ ಶೇಕಡ 54.5ರಷ್ಟು ಆಗಿದೆ. ಮೊತ್ತದ ಲೆಕ್ಕದಲ್ಲಿ ಇದು ₹8.55 ಲಕ್ಷ ಕೋಟಿ.

ಹಿಂದಿನ ವರ್ಷದ ಇದೇ ಹೊತ್ತಿನಲ್ಲಿ ಕೇಂದ್ರದ ವಿತ್ತೀಯ ಕೊರತೆಯು ಬಜೆಟ್ ಅಂದಾಜಿನ ಶೇ 56.7ರಷ್ಟು ಆಗಿತ್ತು.

2025–26ನೇ ಆರ್ಥಿಕ ವರ್ಷದಲ್ಲಿ ವಿತ್ತೀಯ ಕೊರತೆಯು (ವೆಚ್ಚ ಹಾಗೂ ವರಮಾನದ ನಡುವಿನ ವ್ಯತ್ಯಾಸ) ದೇಶದ ಒಟ್ಟು ಜಿಡಿಪಿಯ ಶೇ 4.4ರಷ್ಟು ಇರಲಿದೆ ಎಂಬುದು ಕೇಂದ್ರ ಸರ್ಕಾರದ ಅಂದಾಜು. ಇದು ಮೊತ್ತದ ಲೆಕ್ಕದಲ್ಲಿ ₹15.69 ಲಕ್ಷ ಕೋಟಿ ಆಗುತ್ತದೆ.

ಭಾರತದ ಸಂಸದೀಯ ಇತಿಹಾಸದಲ್ಲಿ ಹೆಮ್ಮೆಯ ಸಂಗತಿ: ಪ್ರಧಾನಿ

9ನೇ ಬಜೆಟ್ ಮಂಡಿಸಲಿರುವ ನಿರ್ಮಲಾ

ನವದೆಹಲಿ (ಪಿಟಿಐ): ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಭಾನುವಾರ ಒಂಬತ್ತನೆಯ ಬಾರಿಗೆ ಬಜೆಟ್ ಮಂಡನೆ ಮಾಡಲಿದ್ದಾರೆ. ನಿರಂತರವಾಗಿ, ಅತ್ಯಂತ ಹೆಚ್ಚಿನ ಅವಧಿಗೆ ಕೇಂದ್ರದ ಹಣಕಾಸು ಸಚಿವರ ಹುದ್ದೆಯನ್ನು ನಿರ್ವಹಿಸಿದ ಹೆಗ್ಗಳಿಕೆ ನಿರ್ಮಲಾ ಅವರದ್ದು.

ನಿರ್ಮಲಾ ಅವರು 2019ರ ಮೇ 31ರಂದು ಕೇಂದ್ರ ಹಣಕಾಸು ಸಚಿವರಾಗಿ ಅಧಿಕಾರ ಸ್ವೀಕರಿಸಿದರು. ನಂತರ ಕೋವಿಡ್ ಸಾಂಕ್ರಾಮಿಕ, ಜಾಗತಿಕ ಮಟ್ಟದಲ್ಲಿನ ಹಲವು ಬಿಕ್ಕಟ್ಟುಗಳ ಸಂದರ್ಭದಲ್ಲಿ ಅವರು ಈ ಹೊಣೆಯನ್ನು ನಿರ್ವಹಿಸಿದ್ದಾರೆ. ಭಾರತವು ಅವರ ಅವಧಿಯಲ್ಲಿ ವಿಶ್ವದಲ್ಲಿ ಅತ್ಯಂತ ವೇಗದ ಬೆಳವಣಿಗೆ ಕಾಣುತ್ತಿರುವ ಪ್ರಮುಖ ಅರ್ಥ ವ್ಯವಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ನಿರ್ಮಲಾ ಅವರು ಹಣಕಾಸು ಸಚಿವೆ ಆಗಿ ಜನವರಿ 31ರಂದು (ಶನಿವಾರ)



ಆರು ವರ್ಷ, ಎಂಟು ತಿಂಗಳು ಕಳೆದಿವೆ. ಅವರು ಭಾನುವಾರ ಬಜೆಟ್ ಮಂಡನೆ ಮಾಡಲಿದ್ದಾರೆ. ಆಗ ಅವರು ಸತತವಾಗಿ ಒಂಬತ್ತನೆಯ ಬಜೆಟ್ ಮಂಡಿಸಿ ದಾಖಲೆ ಸೃಷ್ಟಿಸಲಿದ್ದಾರೆ.

ನಿರ್ಮಲಾ ಅವರು ಸತತವಾಗಿ ಒಂಬತ್ತನೆಯ ಬಜೆಟ್ ಮಂಡಿಸಲಿರುವುದು ‘ಭಾರತದ ಸಂಸದೀಯ ಇತಿಹಾಸದಲ್ಲಿ ಒಂದು ಹೆಮ್ಮೆಯ ಸಂಗತಿಯಾಗಿ ದಾಖಲಾಗಲಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಬಜೆಟ್ ಅಧಿವೇಶನದ ಆರಂಭಕ್ಕೂ ಮುನ್ನ ಹೇಳಿದ್ದರು.

ದೀರ್ಘ ಅವಧಿಗೆ ಹಣಕಾಸು ಸಚಿವರಾಗಿದ್ದ ಇತರರು

ಸಿ.ಡಿ. ದೇಶಮುಖ್ ಅವರು 1950ರ ಜೂನ್ 1ರಿಂದ ಆರು ವರ್ಷ ಎರಡು ತಿಂಗಳು ಹಣಕಾಸು ಸಚಿವರಾಗಿದ್ದ-ರು. ಮನಮೋಹನ್ ಸಿಂಗ್ ಅವರು 1990ರ ಜೂನ್ 21ರಿಂದ 1996ರ ಜೂನ್ 16ರವರೆಗೆ ಸರಿಸುಮಾರು ಐದು ವರ್ಷ ಹಣಕಾಸು ಸಚಿವರಾ-ಗಿದ್ದರು.

ನಂತರ ಪ್ರಧಾನಿಯಾಗಿ ಅವರು 2008ರಲ್ಲಿ ಹಾಗೂ 2012ರಲ್ಲಿ ಅಲ್ಪ ಅವಧಿಗೆ ಹಣಕಾಸು ಖಾತೆಯ ಹೊಣೆ ನಿರ್ವಹಿಸಿದ್ದರು. ಚಿದಂಬರಂ ಅವರು ಒಟ್ಟು ಎಂಟು ವರ್ಷ ಹಣಕಾಸು ಸಚಿವರಾಗಿ ಕೆಲಸ ಮಾಡಿದ್ದಾರೆ. ಆದರೆ ಸತತವಾಗಿ ಅಲ್ಲ.

ಮೊರಾರ್ಜಿ ದೇಸಾಯಿ (7 ವರ್ಷ, 9 ತಿಂಗಳು), ಪ್ರಣವ್ ಮುಖರ್ಜಿ (6 ವರ್ಷ 4 ತಿಂಗಳು), ಅರುಣ್ ಜೇಟ್ಲಿ (4 ವರ್ಷ 8 ತಿಂಗಳು), ವೈ.ಬಿ. ಚವಾಣ್ (4 ವರ್ಷ 3 ತಿಂಗಳು), ಯಶವಂತ್ ಸಿನ್ಹಾ (4 ವರ್ಷ 4 ತಿಂಗಳು) ಸತತವಾಗಿ ಅಲ್ಲದಿದ್ದರೂ ಸುದೀರ್ಘ ಅವಧಿಗೆ ಹಣಕಾಸು ಸಚಿವರಾಗಿ ಕೆಲಸ ಮಾಡಿದ ಇತರ ಪ್ರಮುಖರು.

ಮೊರಾರ್ಜಿ ದೇಸಾಯಿ ಅವರು ಒಟ್ಟು 10 ಬಾರಿ ಬಜೆಟ್ ಮಂಡನೆ ಮಾಡಿದ್ದರು, ಪಿ. ಚಿದಂಬರಂ ಅವರು ಒಂಬತ್ತು ಬಾರಿ ಬಜೆಟ್ ಮಂಡಿಸಿದ್ದರು. ಆದರೆ ಇವರಿಬ್ಬರೂ ಸತತವಾಗಿ ಇಷ್ಟು ಬಾರಿ ಬಜೆಟ್ ಮಂಡನೆ ಮಾಡಿಲ್ಲ.

ಪ್ಯಾರಿಸ್‌ನಲ್ಲಿ ‘ಇಂದ್ರಿಯ’ ಆಭರಣ ಪ್ರದರ್ಶನ

ಬೆಂಗಳೂರು: ಆದಿತ್ಯ ಬಿರ್ಲಾ ಸಮೂಹದ ಆಭರಣ ಬ್ರ್ಯಾಂಡ್ ಆಗಿರುವ ‘ಇಂದ್ರಿಯ’ ತನ್ನ ಸಂಗ್ರಹಗಳನ್ನು ಇದೇ ಮೊದಲ ಬಾರಿಗೆ ‘ಪ್ಯಾರಿಸ್ ಕುಟೂರ್ ವೀಕ್’ನಲ್ಲಿ ಪ್ರದರ್ಶಿಸಿದೆ. ಇದಕ್ಕೆ ಖ್ಯಾತ ವಿನ್ಯಾಸಕಾರ ಗೌರವ್ ಗುಪ್ತ ಅವರು ಅಧಿಕೃತ ಆಭರಣ ಪಾಲುದಾರ ಆಗಿದ್ದರು.



ಈ ಮೂಲಕ ‘ಇಂದ್ರಿಯ’ ಬ್ರ್ಯಾಂಡ್ ಭಾರತದ ಆಭರಣಗಳ ಕಲಾತ್ಮಕತೆಯ-ನ್ನು ವಿಶ್ವದ ಅತ್ಯಂತ ಪ್ರತಿಷ್ಠಿತ ಫ್ಯಾಷನ್ ವೇದಿಕೆಗೆ ಒಯ್ದಿದೆ ಎಂದು ಪ್ರಕಟಣೆ ಹೇಳಿದೆ.

‘ಇಂದ್ರಿಯ’ ಬ್ರ್ಯಾಂಡ್‌ನ ಮಾರ್ಕೆಟಿಂಗ್ ವಿಭಾಗದ ಮುಖ್ಯಸ್ಥ ಶಾಂತಿಸ್ವರೂಪ್ ಪಂಡಾ ಅವರು, ‘ಈ ಬ್ರ್ಯಾಂಡ್ ಭಾರತದ ಸೂಕ್ಷ್ಮ ಕಲೆ, ಕುಸುರಿಯನ್ನು ತನ್ನ ವಿನ್ಯಾಸದಲ್ಲಿ ಒಳಗೊಂಡಿದೆ’ ಎಂದು ಹೇಳಿದ್ದಾರೆ.

ಅಡಿಕೆ ಧಾರಣೆ

ಕುಮಟಾ	
ಹೊಸಚಾಲಿ	41119-47707
ಚಾಲಿ	47999-49999
ಚಿಪ್ಪು	30899-36599
ಕೋಕ	12569-33999
ಸಿದ್ದಾಪುರ	
ಬಿಳಿಗೋಟು	27699-37809
ಚಾಲಿ	43699-49619
ಕೋಕ	21699-30569
ಕೆಂಪುಗೋಟು	31689-38699
ರಾಶಿ	48699-55099
ತಟ್ಟಿಬೆಟ್ಟೆ	38109-45099
ಹೊಸಚಾಲಿ	36109-45500
ಶಿರಸಿ	
ಬೆಟ್ಟೆ	37199-53941
ಬಿಳಿಗೋಟು	27099-41899
ಚಾಲಿ	47050-51308
ಕೆಂಪುಗೋಟು	26400-37699
ರಾಶಿ	51298-56861
ಯಲ್ಲಾಪುರ	
ಆಪಿ	61800-67930
ಬಿಳಿಗೋಟು	14899-37489
ಹಳೆಚಾಲಿ	37815-50369
ಕೋಕ	13601-32599
ಹೊಸಚಾಲಿ	37969-49000
ಕೆಂಪುಗೋಟು	24699-40099
ತಟ್ಟಿಬೆಟ್ಟೆ	37265-53339
ಶಿವಮೊಗ್ಗ	
ಬೆಟ್ಟೆ	53100-66869
ಗೊರಬಲು	19000-40509
ರಾಶಿ	45669-56079
ಸರಕು	66600-94999

ಭಾರತೀಯ ನಾಯಕರ ಉಡುಗೊರೆ

ನ್ಯೂಯಾರ್ಕ್ (ಪಿಟಿಐ): ಮಾಜಿ ಅಧ್ಯಕ್ಷ ಜೋ ಬೈಡನ್ ಸೇರಿದಂತೆ ಅಲ್ಲಿನ ಮುಖಂಡರಿಗೆ ಭಾರತವು ನೀಡಿದ ಉಡುಗೊರೆಗಳ ಪಟ್ಟಿಯನ್ನು ಅಮೆರಿಕ ವಿದೇಶಾಂಗ ಇಲಾಖೆ ಬಿಡುಗಡೆ ಮಾಡಿದೆ.

‘ವಿದೇಶಿ ಸರ್ಕಾರಿ ಮೂಲಗಳಿಂದ 2024ರಲ್ಲಿ ಪಡೆದ ಉಡುಗೊರೆಗಳ’ ಸಮಗ್ರ ಪಟ್ಟಿಯನ್ನು ವಿದೇಶಾಂಗ ಇಲಾಖೆಯ ಶಿಷ್ಟಾಚಾರ ಮುಖ್ಯಸ್ಥರ ಕಚೇರಿಯು ಸಲ್ಲಿಸಿದ್ದು, ಯಾವ್ಯಾವ ಉಡುಗೊರೆ ಸ್ವೀಕರಿಸಲಾಗಿದೆ ಹಾಗೂ ಅವುಗಳ ಮೌಲ್ಯ ಎಷ್ಟೆಂದು ನಮೂದಿಸಿರುವ ವರದಿ ಇದಾಗಿದೆ.

ಮರದ ಕಪಾಟು, ಸ್ಕಾರ್ಫ್, ಕೇಸರಿ ತುಂಬಿದ ಜಾರ್, ಚಹಾ ತುಂಬಿದ ಮರದ ಪೆಟ್ಟಿಗೆಯನ್ನು ಮೋದಿ ಅವರು 2023ರ ಸೆ.10ರಂದು ಬೈಡನ್ ಅವರಿಗೆ ಕೊಡುಗೆಯಾಗಿ ನೀಡಿದ್ದು, ಇವುಗಳ ಮೌಲ್ಯ 51,667. ಭಾರತ ಆಯೋಜಿಸಿದ್ದ ಜಿ 20 ನಾಯಕರ ಸಭೆಗಾಗಿ 2023ರ ಸೆಪ್ಟೆಂಬರ್‌ನಲ್ಲಿ ಭಾರತಕ್ಕೆ ಬಂದಿದ್ದ ಜೋ ಬೈಡನ್ ಅವರಿಗೆ ಮೋದಿ ಅವರು ₹7.13 ಲಕ್ಷ ಮೌಲ್ಯದ ‘ಸ್ಟರ್ಲಿಂಗ್ ಸಿಲ್ವರ್ ಮೆಟಲ್ ಟ್ರೈನ್ ಸೆಟ್’ ಕೊಡುಗೆಯಾಗಿ ನೀಡಿದ್ದಾರೆ. ಅಮೆರಿಕದ ಆಗಿನ ಪ್ರಥಮ ಮಹಿಳೆ ಜಿಲ್ ಬೈಡನ್ ಅವರಿಗೆ ₹2.73 ಲಕ್ಷದ ಪಶ್ಮಿನಾ ಶಾಲನ್ನು ಮೋದಿ ಅವರು 2024ರ ಅ.21ರಂದು ಉಡುಗೊರೆಯಾಗಿ ಕೊಟ್ಟಿದ್ದಾರೆ.

ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರಿಗೆ 2024ರ ಅ.18ರಂದು ₹1.22 ಸಾವಿರ ಮೌಲ್ಯದ ಲಾರ್ಡ್ ಕೃಷ್ಣ ರಾಸಲೀಲಾ ಸಿಲ್ವರ್ ಬಾಕ್ಸ್ ಹಾಗೂ ಅವರ ಪತಿಗೆ ₹54 ಸಾವಿರ ಮೊತ್ತದ ಕಂಫ್ಲಿಕ್ಸ್ ಅನ್ನು ಮೋದಿ ನೀಡಿದ್ದಾರೆ.



ಜಮಖಂಡಿ ತಾಲ್ಲೂಕಿನ ಆಲಬಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಊಟದ ತಟ್ಟೆಗಳನ್ನು ಕೊಳಚೆ ನೀರಿನಲ್ಲಿ ತೊಳೆದರು

ಕೊಳಚೆ ನೀರಿನಲ್ಲಿ ತಟ್ಟೆ ತೊಳೆದ ವಿದ್ಯಾರ್ಥಿಗಳು: ಶಿಕ್ಷಕಿ ಅಮಾನತು

ಜಮಖಂಡಿ (ಬಾಗಲಕೋಟೆ ಜಿಲ್ಲೆ): ತಾಲ್ಲೂಕಿನ ಆಲಬಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಊಟದ ತಟ್ಟೆಗಳನ್ನು ಕೊಳಚೆ ನೀರಿನಲ್ಲಿ ತೊಳೆಯುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು ಚರ್ಚೆಗೆ ಗ್ರಾಸವಾಗಿದೆ.

ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಸಿ.ಮನ್ನಿಕೇರಿ ಮತ್ತು ಬಿಇಒ ಅಶೋಕ ಬಸಣ್ಣವರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಕರ್ತವ್ಯ ನಿರ್ಲಕ್ಷ್ಯ ತೋರಿದ ಆರೋಪದ ಮೇಲೆ ಪ್ರಭಾರ ಮುಖ್ಯಶಿಕ್ಷಕಿ ನಂದಾ ಕುಲಕರ್ಣಿ ಅವರನ್ನು ಅಮಾನತು ಮಾಡಿ, ಆದೇಶ ಹೊರಡಿಸಿದ್ದಾರೆ.

‘ಶಾಲಾ ಆವರಣದಲ್ಲಿರುವ ಕೊಳವೆ ಬಾವಿ ದುರಸ್ತಿ ಇರುವ ಕಾರಣ ನಲ್ಲಿಯಲ್ಲಿ ನೀರು ಬರುತ್ತಿಲ್ಲ. ಹೀಗಾಗಿ ಶಾಲಾ ಕಾಂಪೌಂಡ್ ಹೊರಗೆ ಹೋಗಿ ಮಕ್ಕಳು ತಟ್ಟೆ ತೊಳೆಯುತ್ತಿರುವುದು ತಪ್ಪು. ಈ ಕುರಿತು ಪಿಡಿಒಗೆ ಬೋರ್‌ವೇಲ್ ದುರಸ್ತಿ ಬಗ್ಗೆ ಮಾಹಿತಿ ನೀಡಲಾಗಿದೆ’ ಎಂದು ಎ.ಸಿ.ಮನ್ನಿಕೇರಿ ತಿಳಿಸಿದರು.

ರಾಜೀವ್ ಗೌಡಗೆ ಜಾಮೀನು

ಚಿಕ್ಕಬಳ್ಳಾಪುರ: ಶಿಡ್ಲಘಟ್ಟ ನಗರಸಭೆ ಆಯುಕ್ತೆಗೆ ಬೆದರಿಕೆ ಹಾಕಿದ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ಕಾಂಗ್ರೆಸ್ ಮುಖಂಡ ರಾಜೀವ್ ಗೌಡ ಅವರಿಗೆ ಸ್ಥಳೀಯ ಜೆಎಂಎಫ್ ನ್ಯಾಯಾಲಯ ಶುಕ್ರವಾರ ಜಾಮೀನು ಮಂಜೂರು ಮಾಡಿದೆ.



ರಾಜೀವ್ ಗೌಡ

ಜ. 28ರಂದು ರಾಜೀವ್ ಗೌಡ ಜಾಮೀನು ಅರ್ಜಿ ವಿಚಾರಣೆ ನಡೆಸಿದ್ದ ಶಿಡ್ಲಘಟ್ಟ ನ್ಯಾಯಾಲಯವು ಜ.30ರಂದು ಆದೇಶ ಪ್ರಕಟಿಸುವುದಾಗಿ ತಿಳಿಸಿತ್ತು. ಹಿರಿಯ ಸಿವಿಲ್ ನ್ಯಾಯಾಧೀಶ ಮೊಹಮ್ಮದ್ ರೋಷನ್ ಷಾ ಶುಕ್ರವಾರ ಜಾಮೀನು ಮಂಜೂರು ಮಾಡಿದರು.

ಜಾಮೀನು ಮಂಜೂರು ಆಗಿದ್ದಕ್ಕೆ ಬೆಂಬಲಿಗರು ಪಟಾಕಿ ಸಿಡಿಸಿ ಸಂಭ್ರಮಿಸಬಾರದು ಎಂದು ನ್ಯಾಯಾಧೀಶರು ತಾಕೀತು ಮಾಡಿದರು.

ಬಹು ಧ್ರುವೀಕರಣಕ್ಕೆ ಬೆಂಬಲ ಅಗತ್ಯ: ವಿಶ್ವಸಂಸ್ಥೆ

ವಿಶ್ವಸಂಸ್ಥೆ (ಪಿಟಿಐ): ಭಾರತ ಮತ್ತು ಐರೋಪ್ಯ ಒಕ್ಕೂಟದ (ಇ.ಯು) ನಡುವಿನ ಮುಕ್ತ ವ್ಯಾಪಾರ ಒಪ್ಪಂದವನ್ನು (ಎಫ್‌ಟಿಎ) ಉಲ್ಲೇಖಿಸಿದ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರಸ್ ಬಹು ಧ್ರುವೀಕರಣವನ್ನು ಬೆಂಬಲಿಸುವ ಅಗತ್ಯವನ್ನು ಒತ್ತಿ ಹೇಳಿದರು.



ಆಂಟನಿಯೋ ಗುಟಾರಸ್

ಯಾವುದೋ ಒಂದು ಶಕ್ತಿಯಿಂದ ಜಾಗತಿಕ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿಲ್ಲ ಎಂದು ಅಮೆರಿಕ ಮತ್ತು ಚೀನಾವನ್ನು ಉಲ್ಲೇಖಿಸಿ ಹೇಳಿದರು.

‘ಸದ್ಯದ ಪರಿಸ್ಥಿತಿಯಲ್ಲಿ ಅಮೆರಿಕವು ವಿಶ್ವದ ಶಕ್ತಿಶಾಲಿ ರಾಷ್ಟ್ರ ಎಂಬುದು ಸ್ಪಷ್ಟವಾಗಿದೆ. ವಿಶ್ವವು ಎರಡು ಧ್ರುವಗಳಾಗಿ ವಿಂಗಡಣೆಯಾಗಿದೆ. ಒಂದು ಬದಿಯಲ್ಲಿ ಚೀನಾ ಹಾಗೂ ಇನ್ನೊಂದು ಬದಿಯಲ್ಲಿ ಅಮೆರಿಕ ದೇಶಗಳು ಶಕ್ತಿಕೇಂದ್ರಗಳಾಗಿವೆ’ ಎಂದು ಹೇಳಿದರು.

‘ಭಾರತ ಮತ್ತು ಇ.ಯು ಬೃಹತ್ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಿವೆ. ಶಾಂತಿ, ಅಭಿವೃದ್ಧಿ, ಮೌಲ್ಯಗಳು ಹಾಗೂ ಸ್ಥಿರತೆ ಇರುವ ವಿಶ್ವ ಬೇಕಾದರೆ ನಾವು ಬಹುಧ್ರುವೀಕರಣವ-ನ್ನು ಬೆಂಬಲಿಸಬೇಕು. ವಿವಿಧ ದೇಶಗಳ ನಡುವಿನ ಬಲವಾದ ಸಂಬಂಧವನ್ನು ಉತ್ತೇಜಿಸ-ಬೇಕಾಗಿದೆ. ಇತ್ತೀಚೆಗೆ ನಡೆದ ಇ.ಯು–ಮರ್ಕೊಸುರ್ (ದಕ್ಷಿಣ ಅಮೆರಿಕದ ಒಕ್ಕೂಟ), ಇ.ಯು– ಇಂಡೊನೇಷ್ಯಾ ಹಾಗೂ ಇ.ಯು–ಭಾರತ ನಡುವಿನ ಸಂಬಂಧದಲ್ಲಿ ಉತ್ತಮ ನಿರೀಕ್ಷೆಯನ್ನು ಹೊಂದಿದ್ದೇನೆ’ ಎಂದರು.

‘ಫೆಡರಲ್ ರಿಸರ್ವ್: ಕೆವಿನ್ ವಾರ್ಷ್ ನಾಮನಿರ್ದೇಶನ’

ಲಂಡನ್ (ರಾಯಿಟರ್ಸ್): ‘ಅಮೆರಿಕದ ಕೇಂದ್ರೀಯ ಬ್ಯಾಂಕ್ ಫೆಡರಲ್ ರಿಸರ್ವ್ (ಫೆಡ್) ಮುಖ್ಯಸ್ಥ ಜೆರೋಮ್ ಪೋವೆಲ್ ಅವರ ಅಧಿಕಾರಾವಧಿ ಮೇ ತಿಂಗಳಲ್ಲಿ ಮುಕ್ತಾಯಗೊಳ್ಳಲಿದ್ದು, ಆ ಸ್ಥಾನಕ್ಕೆ ಮಾಜಿ ಗವರ್ನರ್ ಕೆವಿನ್ ವಾರ್ಷ್ ಅವರನ್ನು ನಾಮನಿರ್ದೇಶನ ಮಾಡಲಾಗಿದೆ’ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶುಕ್ರವಾರ ತಿಳಿಸಿದ್ದಾರೆ.



ಕೆವಿನ್ ವಾರ್ಷ್

ಮುಖ್ಯಸ್ಥ ನಾಮನಿರ್ದೇಶನ ಪ್ರಕ್ರಿಯೆಯು ತಿಂಗಳುಗಳ ಕಾಲ ನಡೆಯುತ್ತದೆ. ವಾರ್ಷ್, ಶ್ವೇತಭವನದ ಆರ್ಥಿಕ ಸಲಹೆಗಾರ ಕೆವಿನ್ ಹ್ಯಾಸೆಟ್, ಫೆಡ್ ಗವರ್ನರ್ ಕ್ರಿಸ್ಟೋಫರ್ ವಾಲರ್, ಷೇರು ಮಾರುಕಟ್ಟೆ ತಜ್ಞ ರಿಕ್ ರೀಡರ್ ಅವರು ತಮ್ಮ ಅರ್ಹತೆ ಮತ್ತು ಆರ್ಥಿಕ ನೀತಿಗಳ ಕುರಿತು ಟಿ.ವಿ ಕಾರ್ಯಕ್ರಮಗಳಲ್ಲಿ ಹಂಚಿಕೊಳ್ಳುವ ಮೂಲಕ ಪ್ರಚಾರ ಮಾಡುತ್ತಿದ್ದಾರೆ.

ಡಾಲರ್ ಮೌಲ್ಯವು ಆರಂಭಿಕ ಏರಿಕೆಯ ನಂತರ ತುಸು ಇಳಿಕೆಯಾಗಿದೆ. ಅಮೆರಿಕದ ಟ್ರೆಜರಿ ಬಾಂಡ್ ಬಡ್ಡಿದರ ಹೆಚ್ಚಾಗಿದ್ದು, ವಾಲ್ ಸ್ಟ್ರೀಟ್‌ನ (ಷೇರು ಮಾರುಕಟ್ಟೆ) ವಹಿವಾಟು ಕುಸಿತಗೊಳ್ಳುವ ಸಾಧ್ಯತೆ ಇದೆ.

ಕ್ಯೂಬಾಕ್ಕೆ ತೈಲ ಮಾರಾಟ ಮಾಡಿದರೆ ಸುಂಕ: ಟ್ರಂಪ್ ಎಚ್ಚರಿಕೆ

ವಾಷಿಂಗ್ಟನ್ (ಎಪಿ): ಕ್ಯೂಬಾಕ್ಕೆ ತೈಲ ಮಾರಾಟ ಮಾಡುವ ಯಾವುದೇ ದೇಶದ ಮೇಲೆ ಸುಂಕ ವಿಧಿಸುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೆದರಿಕೆ ಹಾಕಿದ್ದಾರೆ.

ಇದು ಮೆಕ್ಸಿಕೊ ಮೇಲೆ ಒತ್ತಡ ಹೇರುವ ಕ್ರಮವಾಗಿದ್ದು, ಈ ಕಾರ್ಯಕಾರಿ ಆದೇಶಕ್ಕೆ ಗುರುವಾರ ಟ್ರಂಪ್ ಸಹಿ ಹಾಕಿದ್ದಾರೆ. ಕ್ಯೂಬಾಕ್ಕೆ ತೈಲ ಮಾರಾಟ ಮಾಡುವ ಅಥವಾ ತೈಲ ಪೂರೈಸುವ ಯಾವುದೇ ದೇಶದ ಯಾವುದೇ ಸರಕಿನ ಮೇಲೆ ಅಮೆರಿಕ ಹೆಚ್ಚುವರಿ ಸುಂಕ ಹೇರಲಿದೆ ಎಂದು ಟ್ರಂಪ್ ಹೇಳಿದ್ದಾರೆ.

‘ಕ್ಯೂಬಾಕ್ಕೆ ತೈಲ ಮಾರಾಟವನ್ನು ಮೆಕ್ಸಿಕೊ ತಾತ್ಕಾಲಿಕವಾಗಿ ಸ್ಥಗಿತಗೊಳಿ-ಸಿದೆ. ಇದು ‘ಸಾರ್ವಭೌಮ ನಿರ್ಧಾರ’ವೇ ಹೊರತು ಅಮೆರಿಕದ ಒತ್ತಡಕ್ಕೆ ಮಣಿದು ಅಲ್ಲ’ ಎಂದು ಮೆಕ್ಸಿಕೊ ಅಧ್ಯಕ್ಷೆ ಕ್ಲೌಡಿಯಾ ಶೇನ್‌ಬಾಮ್ ಹೇಳಿದ್ದಾರೆ.

ಕ್ಯೂಬಾ ಸರ್ಕಾರದಿಂದ ಅಂತರ ಕಾಯ್ದು-ಕೊಳ್ಳುವಂತೆ ಟ್ರಂಪ್ ಅವರು ಮೆಕ್ಸಿಕೊದ ಮೇಲೆ ಸತತ ಒತ್ತಡ ಹೇರುತ್ತಿದ್ದಾರೆ.

ತರಬೇತಿಯ ಮಾದರಿ

ಎಎಫ್‌ಪಿ ಚಿತ್ರ:



ಹೈದರಾಬಾದ್‌ನ ಬೇಗಂಪೇಟ್ ವಿಮಾನ ನಿಲ್ದಾಣದಲ್ಲಿ ನಡೆಯುತ್ತಿರುವ ವೈಮಾನಿಕ ಪ್ರದರ್ಶನದಲ್ಲಿ ಪೈಲಟ್ ಒಬ್ಬರು ಏರ್‌ಬಸ್ ಎಚ್‌125 ಹೆಲಿಕಾಪ್ಟರ್ ಚಾಲನಾ ತರಬೇತಿಯ ಮಾದರಿಯನ್ನು ಪ್ರದರ್ಶಿಸಿದರು

ವೀಸಾ ಅಥವಾ ವೀಸಾ ನವೀಕರಣಕ್ಕೆ ಒತ್ತಾಯ ಮಾಡುವ ಹಕ್ಕನ್ನು ಹೊಂದಿಲ್ಲ

‘ವಿದೇಶಿಯರ ಹೊರಹಾಕುವ ಅಧಿಕಾರ ಕೇಂದ್ರಕ್ಕಿದೆ’

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ‘ಭಾರತದಿಂದ ಯಾವುದೇ ವಿದೇಶಿಯರನ್ನು ಹೊರಹಾಕಲು ಸೂಕ್ತ ಆದೇಶ ಹೊರಡಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇದೆ’ ಎಂದು ಪ್ರಕರಣವೊಂದರಲ್ಲಿ ಉಲ್ಲೇಖಿಸಿರುವ ಕರ್ನಾಟಕ ಹೈಕೋರ್ಟ್, ‘ಭಾರತದಲ್ಲಿರುವ ವಿದೇಶಿಯರು ತಮ್ಮ ವೀಸಾ ಅಥವಾ ವೀಸಾ ನವೀಕರಣಕ್ಕೆ ಒತ್ತಾಯ ಮಾಡುವ ಹಕ್ಕನ್ನು ಹೊಂದಿಲ್ಲ’ ಎಂದು ಸ್ಪಷ್ಟಪಡಿಸಿದೆ.

‘ತಮ್ಮನ್ನು ಬಂಧನದಿಂದ ಬಿಡುಗಡೆಗೊಳಿಸುವಂತೆ ಕೋರಿದ್ದ ಮನವಿಯನ್ನು ತಿರಸ್ಕರಿಸಿರುವ ಏಕಸದಸ್ಯ ನ್ಯಾಯಪೀಠದ ಆದೇಶ ರದ್ದುಗೊಳಿಸಬೇಕು’ ಎಂದು ಕೋರಿ ಸದ್ಯ ಯಲಹಂಕ ವಿಳಾಸ ಹೊಂದಿರುವ ವಿದೇಶಿಯರಾದ ಒಬಿನ್ನಾ ಜೆರೆಮಿಯಾ ಒಕಾಫೋರ್ ಮತ್ತು ಜಾನ್ ಅಡೆಕ್ವಾಫ್ ವ್ಯಾಂಡೆಫ್ಯಾನ್ ಸಲ್ಲಿಸಿದ್ದ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ವಜಾಗೊಳಿಸಿ ಈ ಕುರಿತಂತೆ ಆದೇಶಿಸಿದೆ.

‘ಮೇಲ್ಮನವಿದಾರರ ಮೊಬೈಲ್ ಫೋನ್ ವಿವರಗಳನ್ನು ಪರಿಶೀಲಿಸಿದಾಗ ಅವು ಮಾದಕ ದ್ರವ್ಯಗಳ ಮಾರಾಟಕ್ಕೆ ಸಂಬಂಧಿಸಿದ ಮಾಹಿತಿಯನ್ನು ಒಳಗೊಂಡಿವೆ’ ಎಂಬ ಬೆಂಗಳೂರಿನ ಕೇಂದ್ರ ಅಪರಾಧ ವಿಭಾಗದ ಮಾದಕ ದ್ರವ್ಯ ವಿರೋಧಿ ಘಟಕದ ಮಾಹಿತಿಯನ್ನು ಗಂಭೀರವಾಗಿ ಪರಿಗಣಿಸಿರುವ ನ್ಯಾಯಪೀಠ, ‘ಭಾರತದ ಸಂವಿಧಾನದ 19 (1) (ಡಿ) ಮತ್ತು 19(1)(ಇ) ವಿಧಿಗಳ ಅಡಿಯಲ್ಲಿ ಭಾರತದಾದ್ಯಂತ ಮುಕ್ತವಾಗಿ ಚಲಿಸುವ ಹಕ್ಕು ಮತ್ತು ದೇಶದ ಯಾವುದೇ ಭಾಗದಲ್ಲಿ ವಾಸಿಸುವ ಹಾಗೂ ನೆಲೆಸುವ ಹಕ್ಕು ಭಾರತದ ನಾಗರಿಕರಿಗೆ ಮಾತ್ರ ಲಭ್ಯವಿದೆ, ವಿದೇಶಿಯರಿಗೆ ಅಲ್ಲ’ ಎಂದು ವಿಶದಪಡಿಸಿದೆ.

‘ಅಧಿಕಾರಿಗಳು ತೆಗೆದುಕೊಂಡ ಕ್ರಮವು ಭಾರತದ ಸಂವಿಧಾನದ 14 ಮತ್ತು 21ನೇ ವಿಧಿಗಳ ಉಲ್ಲಂಘನೆಯಾಗಿದೆ’ ಎಂದು ಮೇಲ್ಮನವಿದಾರರ ಪರ ವಕೀಲರ ವಾದವನ್ನು ತಿರಸ್ಕರಿಸಿರುವ ನ್ಯಾಯಪೀಠ, ‘ವಿದೇಶಿಯರಿಗೆ ವೀಸಾ ಅಥವಾ ಅದರ ನವೀಕರಣವನ್ನು ಒತ್ತಾಯಿಸುವ ಹಕ್ಕಿಲ್ಲ. ವೀಸಾ ಮಂಜೂರು ಅಥವಾ ವಿಸ್ತರಣೆಯನ್ನು ನಿರಾಕರಿಸುವ ಹಕ್ಕು ಸ್ಪಷ್ಟವಾಗಿ ಅನಿಯಂತ್ರಿತ ಸಾರ್ವಭೌಮದ ಹಕ್ಕು. ಅಂತೆಯೇ, ವೀಸಾ ನಿರಾಕರಿಸಲು ರಾಜ್ಯವು ಯಾವುದೇ ವಿವರಣೆಯನ್ನು ನೀಡುವ ಅಗತ್ಯವೂ ಇಲ್ಲ’ ಎಂದು ನ್ಯಾಯಪೀಠ ಹೇಳಿದೆ.

ಈ ವಿದೇಶಿಯರ ಕಸುಬೇನು?

‘ನಮ್ಮ ಬಂಧನ ಸಂವಿಧಾನದ ವಿಧಿಗಳಿಗೆ ವಿರುದ್ಧವಾಗಿದೆ’ ಎಂದು ಆಕ್ಷೇಪಿಸಿರುವ ಇಬ್ಬರು ವಿದೇಶಿಯರ ಅರ್ಜಿಗೆ ಖಾರವಾಗಿ ಪ್ರತಿಕ್ರಿಯಿಸಿರುವ ಹೈಕೋರ್ಟ್, ‘ಇವರಿಬ್ಬರೂ ಯಾವ ಉದ್ಯೋಗ ವೀಸಾದಡಿ ಭಾರತಕ್ಕೆ ಬಂದಿದ್ದು ಇವರ ಕಸುಬಿನ ವಿವರಗಳೇನು ಎಂಬುದನ್ನು ಕೋರ್ಟ್‌ಗೆ ಸಲ್ಲಿಸಬೇಕು’ ಎಂದು ಅರ್ಜಿದಾರರ ಪರ ವಕೀಲರಿಗೆ ತಾಕೀತು ಮಾಡಿದೆ.

‘ನಮ್ಮನ್ನು ಬಂಧಿಸುವ ಮನ್ನ ಬಂಧನ ಸಂವಿಧಾನದ ವಿಧಿಗಳಿಗೆ ವಿರುದ್ಧವಾಗಿದೆ ಮತ್ತು ಬಂಧನದ ವೇಳೆ ಕಾರಣಗಳನ್ನು ನಮಗೆ ಅರ್ಥವಾಗುವ ಭಾಷೆಯಲ್ಲಿ ಒದಗಿಸಿಲ್ಲ’ ಎಂದು ಆಕ್ಷೇಪಿಸಿ ನೈಜೀರಿಯಾ ಪ್ರಜೆಗಳಾದ ಎಮೆಕಾ ಜೇಮ್ಸ್ ಇವೊಬಾ ಅಲಿಯಾಸ್ ಆಸ್ಟಿನ್ ನೊಸೊ ಇವೊಬಾ ಮತ್ತು ಯುಡೆರಿಕ್ ಫಿಡೆಲಿಸ್ (ಸದ್ಯ ಕೋಗಿಲು ನಿವಾಸಿಗಳು) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರಾಸಿಕ್ಯೂಷನ್ ಪರ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, ‘ಇವರ ಬಳಿ ಎಂಡಿಎಂಎ ಮತ್ತು ಕೊಕೇನ್ ವಶಪಡಿಸಿಕೊಳ್ಳಲಾಗಿದೆ’ ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಈ ಮಾತಿಗೆ ಕನಲಿ ಹೋದ ನ್ಯಾಯಪೀಠ, ‘ಇವರ ಉದ್ಯೋಗ ವೀಸಾದ ವಿವರಗಳೇನು ಇವರು ಇಲ್ಲಿ ಏನು ಕಸುಬು ಮಾಡಿಕೊಂಡಿದ್ದಾರೆ. ಎಲ್ಲಾ ವಿವರಗಳನ್ನು ನ್ಯಾಯಾಲಯಕ್ಕೆ ಒದಗಿಸಿ’ ಎಂದು ಅರ್ಜಿದಾರರ ಪರ ವಕೀಲರಿಗೆ ನಿರ್ದೇಶಿಸಿತು. ಅಂತೆಯೇ, ‘ಈ ಪ್ರಕರಣದಲ್ಲಿ ಕೇಂದ್ರ ಸರ್ಕಾರವನ್ನೂ ಪಕ್ಷಗಾರನನ್ನಾಗಿ ಮಾಡಿ’ ಎಂದು ಸೂಚಿಸಿ ವಿಚಾರಣೆ ಮುಂದೂಡಿತು.



ಪೃಥ್ವಿ ಅಂಬಾರ್, ಸಾಯಿಕುಮಾರ್

ತಾಳ್ಮೆ ಪರೀಕ್ಷಿಸುವ ಅಪ್ಪ–ಮಗನ ಬಾಂಧವ್ಯ

ಚೌಕಿದಾರ್

- ನಿರ್ಮಾಣ: ಕಲ್ಲಹಳ್ಳಿ ಚಂದ್ರಶೇಖರ
- ನಿರ್ದೇಶನ: ಚಂದ್ರಶೇಖರ್ ಬಂಡಿಯಪ್ಪ
- ತಾರಾಗಣ: ಸಾಯಿಕುಮಾರ್, ಪೃಥ್ವಿ ಅಂಬಾರ್, ಧನ್ಯಾ ರಾಮ್‌ಕುಮಾರ್, ಶ್ವೇತಾ, ಸುಧಾರಾಣಿ, ಧರ್ಮ, ಚೈತ್ರಾ ಮತ್ತಿತರರು.

ಸಿನಿಮಾವೊಂದು ಗಟ್ಟಿಯಾದ ಕಥೆ ಇಲ್ಲದೆ ಸಂದರ್ಭಕ್ಕನುಸಾರವಾಗಿ ಸಿದ್ಧಸೂತ್ರದ ಚಿತ್ರಕಥೆಯಲ್ಲಿ ಹೆಣೆಯಲ್ಪಟ್ಟರೆ ತಾಳ್ಮೆ ಪರೀಕ್ಷೆಯಾಗುತ್ತದೆ. 'ಚೌಕಿದಾರ್' ಹೀಗೇ ಇದೆ. ಕಥೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನೇ ನೀಡದ ನಿರ್ದೇಶಕರು ನಾಯಕನ ಫೈಟ್ಸ್–ಹಾಡುಗಳಲ್ಲೇ ಸಿನಿಮಾ ಮುಗಿಸಿದ್ದಾರೆ.

ಒಬ್ಬನೇ ಮಗನಾದ 'ಸಿದ್ಧಾರ್ಥ್'ನನ್ನು(ಪೃಥ್ವಿ ಅಂಬಾರ್) ಮುದ್ದಾಗಿ ಬೆಳೆಸುವ, ತನಗೆ ಬಾಲ್ಯದಲ್ಲಿ ದೊರಕದ ಎಲ್ಲಾ ಸೌಲಭ್ಯಗಳನ್ನು ಮಗನಿಗೆ ನೀಡುವ ಸರ್ಕಾರಿ ಅಧಿಕಾರಿ 'ಪ್ರಕಾಶ್ ಗೌಡ'(ಸಾಯಿಕುಮಾರ್). ಈತನಿಗೆ 'ಮಗನೇ ಸರ್ವಸ್ವ'. ಆತನಿಗೆ ಕೊಡಿಸಿದ ಬೈಕ್ ಮೇಲೆ ಇದನ್ನೇ ಸ್ಟಿಕ್ಕರ್ ಆಗಿ ಹಾಕಿಸಿದ್ದಾನೆ. ಅತ್ತ ಅಪ್ಪ–ಅಮ್ಮನ ಕೈಯಲ್ಲೇ ಮದ್ಯ–ಸಿಗರೇಟ್ ತರಿಸುವಷ್ಟು ಸಲುಗೆಯಲ್ಲಿ 'ಸಿದ್ಧಾರ್ಥ್' ಬೆಳೆಯುತ್ತಾನೆ. ಮಗನ ಮೇಲೆ ಏಕಿಷ್ಟು ಪ್ರೀತಿ ಎಂದು ಅಪ್ಪನಲ್ಲಿ ಕೇಳಿದರೆ, 'ನಮ್ಮ ತೆವಲಿಗೆ ಮಕ್ಕಳನ್ನು ಹುಟ್ಟಿಸುತ್ತೇವೆ, ಅವು ಏನು ಅಪ್ಲಿಕೇಷನ್ ಹಾಕಿಕೊಂಡು ಹುಟ್ಟುತ್ತಾವೆಯೇ' ಎಂದು ಪ್ರಶ್ನಿಸುವಾತ. ಇಂಥ ಅಪ್ಪ–ಮಗನ ಸ್ಥಿತಿ ಏನಾಗುತ್ತದೆ ಎನ್ನುವುದೇ ಚಿತ್ರದ ಕಥೆ.

ಸಮಾಜದಲ್ಲಿರುವ ವಾಸ್ತವಕ್ಕೆ ತದ್ವಿರುದ್ಧವಾದ ಕಥೆ ಇಲ್ಲಿದೆ. ಹೀಗಾಗಿ ಇದು ಹತ್ತಿರವಾಗುವುದೂ ಇಲ್ಲ. ಚಿತ್ರಕಥೆಯೂ ಬಹಳ ಕೃತಕವಾಗಿದೆ. ಮೊದಲಾರ್ಧದಲ್ಲಿ ಕಥೆ ಹುಡುಕಿದರೂ ಸಿಗುವುದಿಲ್ಲ. ಇಲ್ಲಿ ಬರುವ ದೃಶ್ಯಗಳು ಹಾಗೂ ಮೂರು ಫೈಟ್ಸ್ ಏತಕ್ಕಾಗಿ ಎನ್ನುವ ಪ್ರಶ್ನೆಯಲ್ಲೇ ಈ ಭಾಗವನ್ನು ದೂಡಬೇಕು. ಈ ಸಂದರ್ಭದಲ್ಲಿ ಸಾಯಿಕುಮಾರ್ ಅವರದ್ದೇ 'ಯಾಕೆ ಯಾಕೆ?' ಎನ್ನುವ ಡೈಲಾಗ್ ನೆನಪಾಗದೇ ಇರದು. ಅಗತ್ಯವೇ ಇಲ್ಲದ ಚಿತ್ರಕಥೆ ಇಲ್ಲಿದೆ. ದ್ವಿತೀಯಾರ್ಧದಲ್ಲಿ ಕಥೆ ತೆರೆದುಕೊಂಡರೂ ಅದಕ್ಕೆ ಗಟ್ಟಿತನವಿಲ್ಲ. ಯಾವ ವಿಷಯಕ್ಕೆ ಆದ್ಯತೆ ಕೊಡಬೇಕು ಎನ್ನುವ ಗೊಂದಲವಿದ್ದಂತೆ ತೋಚುತ್ತದೆ. ಪಾತ್ರಗಳ ಬರವಣಿಗೆಯಲ್ಲಿ ಜೀವಂತಿಕೆ ಇಲ್ಲ. ಸುಧಾರಾಣಿ ಅವರ ಪೊಲೀಸ್ ಅಧಿಕಾರಿ ಪಾತ್ರ ಕಥೆಗೆ ಅಗತ್ಯವೇ ಇರಲಿಲ್ಲ.

ನಾಯಕನಿಗೆ ನಾಯಕಿಯ ಮೇಲೆ ಪ್ರೀತಿಯೇ ಇಲ್ಲ. ಹೀಗಿದ್ದರೂ ಮದುವೆಯಾದ ಮರುಕ್ಷಣದಲ್ಲೇ ಒಂದು ಡ್ಯುಯೆಟ್ ಹಾಡಿದೆ! ವಿನಾಕಾರಣ ಫೈಟ್ಸ್ ತುರುಕಲಾಗಿದೆ. ಪ್ರತಿ ಫೈಟ್‌ನಲ್ಲೂ ನಾಯಕ ಅಟ್ಟಾಡಿಸಿಕೊಂಡು ಏಕೆ ಹೋಗುತ್ತಾನೆ? ಅಮ್ಮನ ಮಾತುಗಳಿಗೆ ಬದಲಾಗದ ಸಿದ್ಧಾರ್ಥ್ ಸ್ನೇಹಿತನೊಬ್ಬನ ಮಾತುಗಳಿಂದ ಪ್ರಭಾವಿತನಾಗುವುದು ಹೇಗೆ? ಹೀಗೆ ಸರಣಿ ಪ್ರಶ್ನೆಗಳು ಉಳಿದುಕೊಳ್ಳುತ್ತವೆ. ಸಾಯಿಕುಮಾರ್ ಅವರು ನಿಭಾಯಿಸಿದ ಅಪ್ಪನ ಪಾತ್ರದ ಬರವಣಿಗೆ ಬಹಳ ಕೃತಕವಾಗಿದೆ. ಪೃಥ್ವಿ ಅಂಬಾರ್ ಪಾತ್ರದಲ್ಲಿ ಹಲವು ಶೇಡ್‌ಗಳಿದ್ದರೂ ಅವುಗಳು ಕಥೆಯಿಂದಾಗಿ ಸೋತಿವೆ. ನೆನಪಿನಲ್ಲಿ ಉಳಿಯುವ ಹಾಡುಗಳಿಲ್ಲ.

ಅಭಿಲಾಷ್ ಪಿ.ಎಸ್.

ನಾವು ನೋಡಿದ ಸಿನಿಮಾ

'ಸೀಟ್ ಎಡ್ಜ್'ನಲ್ಲಿ ದೆವ್ವದ ಹುಡುಕಾಟ



ಸೀಟ್ ಎಡ್ಜ್

- ನಿರ್ಮಾಣ: ಗಿರಿಧರ್ ಟಿ.
- ನಿರ್ದೇಶನ: ಚೇತನ್ ಶೆಟ್ಟಿ
- ತಾರಾಗಣ: ಸಿದ್ದು ಮೂಲಿಮನಿ, ರವೀಕ್ಷ ಶೆಟ್ಟಿ, ರಘು ರಾಮನಕೊಪ್ಪ ಮತ್ತಿತರರು

ಜೀವನದಲ್ಲಿ ಹೆಸರು, ಹಣ ಗಳಿಸಬೇಕೆಂಬ ಹಪಹಪಿತನ ಹೊಂದಿರುವಾತ ಯುಟ್ಯೂಬರ್ ಸಿದ್ದು. ಪ್ರಾರಂಭದಲ್ಲಿ ಕೆಲವು ವಿಡಿಯೊಗಳನ್ನು ಮಾಡಿ ಅಪಹಾಸ್ಯಕ್ಕೆ ಒಳಗಾಗುತ್ತಾನೆ. ಅದರಿಂದ ಆಚೆ ಬಂದು ಪ್ರಸಿದ್ಧನಾಗಬೇಕು ಎಂದು ಪಣತೊಡುತ್ತಾನೆ. ಆಗ ಆತ ಭಯ ಹುಟ್ಟಿಸುವ ದೆವ್ವದ ವಿಡಿಯೊಗಳನ್ನು ನೋಡುತ್ತಾನೆ. ನಂತರ ಸ್ಥಳೀಯವಾಗಿ ಜನಜನಿತವಾದ ದೆವ್ವದ ಮನೆಯನ್ನು ಹುಡುಕಿಕೊಂಡು ಹೋಗುತ್ತಾನೆ. ಅಲ್ಲಿ ನಡೆಯುವ ಒಂದಷ್ಟು ಘಟನೆಗಳೇ ಚಿತ್ರಕಥೆ.

ವ್ಲಾಗರ್‌ಗಳು ಜನಪ್ರಿಯವಾಗಬೇಕೆಂದು ಏನೆಲ್ಲ ಸಾಹಸ ಮಾಡುತ್ತಾರೆ, ಯಾವ ರೀತಿಯ ರಿಸ್ಕ್‌ಗಳಿಗೆ ಕೈಹಾಕುತ್ತಾರೆ ಎನ್ನುವುದನ್ನು ನಿರ್ದೇಶಕ ಈ ಚಿತ್ರದಲ್ಲಿ ತೋರಿಸುತ್ತ ಹೋಗುತ್ತಾರೆ. ಚಿತ್ರದ ನಾಯಕ ಸಿದ್ದು, ಯೋಗಗುರು ರಘು ಆತ್ಮೀಯರು. ಅವರಿಬ್ಬರ ಹಾಸ್ಯ ಸನ್ನಿವೇಶಗಳೊಂದಿಗೆ ಸಿನಿಮಾ ಪ್ರಾರಂಭವಾಗುತ್ತದೆ. ಇದೊಂದು ಕಾಮಿಡಿ ಸಿನಿಮಾ ಅಂದುಕೊಳ್ಳುವ ಹೊತ್ತಿಗೆ ನಂದಿನಿ ಆಗಮನವಾಗುತ್ತದೆ. ಅಲ್ಲಿಂದ ಹಾಸ್ಯದ ಜತೆಗೆ ಪ್ರೇಮಪಯಣವೂ ತೆರೆದುಕೊಳ್ಳುತ್ತದೆ. ಸಿದ್ದುವಿನ ವೈಯಕ್ತಿಕ ಬದುಕು, ಏಳು ಬೀಳು, ಪ್ರೇಮ ಪಯಣವೇ ಮೊದಲಾರ್ಧದ ಸರಕು.

ಅಲ್ಲಲ್ಲಿ ಕಥೆಗೆ ಸಣ್ಣ, ಸಣ್ಣ ತಿರುವುಗಳಿವೆ. ಬದುಕನ್ನು ಬಹಳ ಸರಳವಾಗಿ ತೆಗೆದುಕೊಂಡ ಸಿದ್ದು, ಒಂದು ಸನ್ನಿವೇಶದಲ್ಲಿ ಬಹಳ ಗಂಭೀರವಾಗುತ್ತಾನೆ. ಬದುಕಿನಲ್ಲಿ ಏನಾದರೂ ಮಾಡಿ ಯಶಸ್ಸು ಸಾಧಿಸಬೇಕೆಂಬ ಹಟಕ್ಕೆ ಬೀಳುತ್ತಾನೆ. ತನ್ನನ್ನು ಅಪಹಾಸ್ಯ ಮಾಡಿದವರಿಗೆ ಉತ್ತರ ಕೊಡಲು ಮುಂದಾಗುತ್ತಾನೆ.

ಬೇರೆ ದೇಶಗಳಲ್ಲಿ ಯುಟ್ಯೂಬರ್‌ಗಳು ಗ್ರಾಫಿಕ್ಸ್ ಬಳಸಿ ವೀಕ್ಷಕರನ್ನು ಹೇಗೆ ದೆವ್ವವಿದೆ ಎಂದು ನಂಬಿಸುತ್ತಾರೆ ಎಂಬುದನ್ನು ತೋರಿಸಲಾಗಿದೆ. ಅದೇ ರೀತಿ ಸಿದ್ದು ಕೂಡ ಗ್ರಾಫಿಕ್ಸ್‌ನಿಂದ ದೆವ್ವದ ದರ್ಶನ ಮಾಡಿಸಲು ಪ್ರಾರಂಭಿಸುತ್ತಾನೆ. ಹಾಗಿದ್ದ ಸಿದ್ದು ಯಾಕೆ ನಿಜವಾದ ದೆವ್ವದ ಬಂಗಲೆಯನ್ನು ಬೆನ್ನತ್ತಿ ಹೋಗುತ್ತಾನೆ, ನಂತರ ಏನೆಲ್ಲ ಆಗುತ್ತದೆ ಎಂಬುದನ್ನು ಚಿತ್ರದಲ್ಲಿಯೇ ನೋಡಬೇಕು.

ಸಿದ್ದುವಾಗಿ ನಟಿಸಿರುವ ಸಿದ್ದು ಮೂಲಿಮನಿ ಮೂಲತಃ ಹಾಸ್ಯ ಕಲಾವಿದ. ಹೀಗಾಗಿ ಹಾಸ್ಯದ ದೃಶ್ಯಗಳು ಸಹಜವಾಗಿ ಅವರಿಗೆ ಒಗ್ಗಿವೆ. ಜತೆಗೆ ಉಳಿದ ಸನ್ನಿವೇಶಗಳಲ್ಲಿಯೂ ಅವರು ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ರಘು ರಾಮನಕೊಪ್ಪ ಪ್ರಾರಂಭದಲ್ಲಿ ನಗಿಸುತ್ತಾರೆ. ನಂತರದಲ್ಲಿ ಅವರ ಪಾತ್ರ ಪೋಷಣೆ ತುಸು ಕಿರಿಕಿರಿ ಮೂಡಿಸುತ್ತದೆ. ವಿಶೇಷವಾಗಿ ಅವರು ಪದೇಪದೇ ಹೇಳುವ 'ಮೋನೆ' ಎಂಬ ಡೈಲಾಗ್. ನಂದಿನಿಯಾಗಿ ರವೀಕ್ಷ ನಟನೆ ನೆನಪಿನಲ್ಲಿ ಉಳಿಯುವುದಿಲ್ಲ. ಆಕಾಶ್ ಪರ್ವ ಸಂಗೀತದಲ್ಲಿ ಒಂದೆರಡು ಹಾಡುಗಳು ಹಿತವಾಗಿವೆ. ಹಿನ್ನೆಲೆ ಸಂಗೀತ ಸನ್ನಿವೇಶಗಳಿಗೆ ತಕ್ಕಂತೆ ಇದೆ. ದೆವ್ವದ ಮನೆಯ ಚಿತ್ರಣ, ಪರಿಸರ ಸೊಗಸಾಗಿದೆ. ಸ್ವಲ್ಪ ಬೇಗ ಮುಖ್ಯಕಥೆಗೆ ಬಂದು, ಚಿತ್ರಕಥೆಯನ್ನು 'ಸೀಟ್ ಎಡ್ಜ್'ನಲ್ಲಿ ಕೂರಿಸುವಂತೆಯೇ ಮಾಡುವ ಅವಕಾಶ ನಿರ್ದೇಶಕರಿಗಿತ್ತು.

ನೋಡಬಹುದಾದ ಸಿನಿಮಾ

'ಫಾರ್ಗಾ'ನಿಗೆ ಸಾಯಿಕುಮಾರ್ ಸಾಥ್



ಸಾಯಿಕುಮಾರ್ ಪ್ರಮುಖ ಪಾತ್ರದಲ್ಲಿ ನಟಿಸಿರುವ 'ಫಾರ್ಗಾ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಎಂ.ಶಶಿಧರ್ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ.

'ನಿರ್ದೇಶಕರು ಈ ಕಥೆ ಹೇಳಿದ ತಕ್ಷಣ ನಟಿಸಬೇಕು ಅನಿಸಿತು. ನಾನು ಮೊದಲ ಸಲ ಇಂಥ ಭಿನ್ನ ಪಾತ್ರ ಮಾಡಿದ್ದೇನೆ. ಪತ್ತೆದಾರನ ಪಾತ್ರ. ಈ ಚಿತ್ರದ ನಿರ್ಮಾಪಕರು ಕನ್ನಡಕ್ಕೆ ಒಳ್ಳೆಯ ಸಿನಿಮಾಗಳನ್ನು ನೀಡಿದ್ದಾರೆ. ಅವರು ಮತ್ತೆ ಸಿನಿಮಾ ನಿರ್ಮಾಣಕ್ಕೆ ಕೈಹಾಕಿರುವುದು ಖುಷಿಯಾಗಿದೆ. ಸಿನಿಮಾ ತುಂಬ ಚೆನ್ನಾಗಿ ಮೂಡಿಬಂದಿದೆ. ಇಂಥ ತಂಡಗಳು ಬೆಳೆಯಬೇಕು' ಎಂದರು ಸಾಯಿಕುಮಾರ್.

ಈ ಹಿಂದೆ 'ಜೋಗಿ', 'ಪ್ರೀತಿ ಏಕೆ ಭೂಮಿ ಮೇಲಿದೆ' ಮೊದಲಾದ ಚಿತ್ರಗಳನ್ನು ನಿರ್ಮಿಸಿದ್ದ ಅಶ್ವಿನಿ ರಾಮ್‌ಪ್ರಸಾದ್ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ನಾಯಕ ಅರುಣ್‌ಗೆ ರೆಹಾನ ಜೋಡಿಯಾಗಿದ್ದಾರೆ.

'ಜನ ಮೆಚ್ಚುವಂಥ ಸಿನಿಮಾ ಮಾಡಿದ್ದೇನೆ. ಚಿತ್ರದಲ್ಲಿ ನಾಯಕನಿಗೆ ಮೂರು ಗೆಟಪ್‌ಗಳಿವೆ. ಆ್ಯಕ್ಷನ್ ಜತೆಗೆ ಗಟ್ಟಿಯಾದ ಕಥೆ ಹೊಂದಿರುವ ಚಿತ್ರ. ಹಾರರ್, ಸಸ್ಪೆನ್ಸ್, ಥ್ರಿಲ್ಲರ್ ಅಂಶಗಳಿವೆ. ಇಲ್ಲಿ 'ಫಾರ್ಗಾ' ಎಂಬುದು ಒಂದು ಊರಿನ ಹೆಸರು. ಈ ಶೀರ್ಷಿಕೆ ಏಕೆ ಇಟ್ಟಿದ್ದು ಎಂಬುದು ಸಿನಿಮಾ ನೋಡಿದ ಮೇಲೆ ಗೊತ್ತಾಗುತ್ತದೆ. ಫೆ.6ರಂದು ಚಿತ್ರ ತೆರೆಗೆ ಬರಲಿದೆ' ಎಂದರು ನಿರ್ದೇಶಕ.

ಆರ್.ಪಿ.ಪಟ್ನಾಯಕ್ ಸಂಗೀತ, ಗುರುಪ್ರಸಾದ್ ಛಾಯಾಚಿತ್ರಗ್ರಹಣವಿದೆ. ಮಂಗಳೂರು, ಚಿಕ್ಕಮಗಳೂರು, ದಾಂಡೇಲಿ, ಆಗುಂಬೆ ಹಾಗೂ ಬೆಂಗಳೂರು ಸುತ್ತಮುತ್ತ ಚಿತ್ರ ಚಿತ್ರೀಕರಣಗೊಂಡಿದೆ.

ಆರ್‌ಟಿಐ ಮರುಪರಿಶೀಲನೆಗೆ ಖಂಡನೆ

ನರೇಗಾ ಬಳಿಕ ಆರ್‌ಟಿಐ ಕಗ್ಗೊಲೆಗೆ ಕೇಂದ್ರ ಯತ್ನ– ಖರ್ಗೆ ಆರೋಪ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಇಪ್ಪತ್ತು ವರ್ಷಗಳಷ್ಟು ಹಳೆಯದಾದ ಮಾಹಿತಿ ಹಕ್ಕು (ಆರ್‌ಟಿಐ) ಕಾಯ್ದೆಯನ್ನು ಮರುಪರಿಶೀಲಿಸಬೇಕು ಎಂದು ಆರ್ಥಿಕ ಸಮೀಕ್ಷೆ ಮಾಡಿರುವ ಶಿಫಾರಸನ್ನು ಕಾಂಗ್ರೆಸ್ ಮುಖಂಡರು ಮತ್ತು ಆರ್‌ಟಿಐ ಕಾರ್ಯಕರ್ತರು ಶುಕ್ರವಾರ ಕಟುವಾಗಿ ಟೀಕಿಸಿದ್ದಾರೆ.

ಕಾಯ್ದೆಯ ಅಡಿಯಲ್ಲಿ ಗೋಪ್ಯ ವರದಿಗಳು ಮತ್ತು ಕರಡು ಅಭಿಪ್ರಾಯಗಳನ್ನು ಬಹಿರಂಗ ಪಡಿಸುವುದಕ್ಕೆ ಅವಕಾಶ ನೀಡಬಾರದು. ಅಂತಹ ನಿಯಮಗಳು ಆಡಳಿತವನ್ನು ನಿರ್ಬಂಧಕ್ಕೊಳಪಡಿಸುತ್ತವೆ ಎಂದು ಸಮೀಕ್ಷೆಯಲ್ಲಿ ಪ್ರತಿಪಾದಿಸಿರುವುದನ್ನು ಕಾಂಗ್ರೆಸ್ ಖಂಡಿಸಿದೆ.

'ಆರ್‌ಟಿಐ ದುರ್ಬಲಕ್ಕೆ ಯತ್ನ': ಈ ಕುರಿತು ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, 'ಮೋದಿ ಸರ್ಕಾರವು ಆರ್‌ಟಿಐ ಕಾಯ್ದೆಯನ್ನು ವ್ಯವಸ್ಥಿತವಾಗಿ ದುರ್ಬಲಗೊಳಿಸಲು ಮುಂದಾಗಿದೆ. ಈಗಾಗಲೇ ನರೇಗಾ ಅನ್ನು ಕೊಂದದ್ದು ಆಗಿದೆ. ಮುಂದಿನದ್ದು ಆರ್‌ಟಿಐ ಸರದಿಯೇ' ಎಂದು ಪ್ರಶ್ನಿಸಿದ್ದಾರೆ. ಭ್ರಷ್ಟಾಚಾರವನ್ನು ರಕ್ಷಿಸಲು ಗೋಪ್ಯತೆಯನ್ನು ಆಯುಧವಾಗಿ ಬಳಸುವುದು ಎಷ್ಟು ಸರಿ ಎಂದು ಅವರು ಕೇಳಿದ್ದಾರೆ.



ಮಲ್ಲಿಕಾರ್ಜುನ ಖರ್ಗೆ

'ಈ ಮೂಲಕ ಕೇಂದ್ರ ಸರ್ಕಾರವು, ಸತ್ಯಾನ್ವೇಷಣೆಗೆ ಮುಂದಾಗುವವರನ್ನು ಶಿಕ್ಷಿಸುವಂತಹ ಭಯದ ವಾತಾವರಣ ಸೃಷ್ಟಿಸುತ್ತಿದೆ. ಈಗಾಗಲೇ 2014ರಿಂದ ಇಲ್ಲಿಯವರೆಗೆ 100ಕ್ಕೂ ಹೆಚ್ಚು ಆರ್‌ಟಿಐ ಕಾರ್ಯಕರ್ತರ ಹತ್ಯೆಯಾಗಿದೆ' ಎಂದು ಖರ್ಗೆ ಗಮನ ಸೆಳೆದಿದ್ದಾರೆ.

'ದೇಶದಲ್ಲಿ ಸಹಸ್ರಾರು ಆರ್‌ಟಿಐ ಪ್ರಕರಣಗಳು ಬಾಕಿ ಉಳಿದಿವೆ. ಹೀಗಿರುವಾಗ ಮಾಹಿತಿ ಆಯುಕ್ತರ ಅಧಿಕಾರಾವಧಿ ಮತ್ತು ವೇತನದ ಮೇಲೆ ನಿಯಂತ್ರಣ ಸಾಧಿಸಿ, ತನಗೆ ವಿಧೇಯರಾಗಿರುವಂತೆ ಕೇಂದ್ರ ಸರ್ಕಾರ ಮಾಡಿದೆ' ಎಂದು ಅವರು ಟೀಕಿಸಿದ್ದಾರೆ.

ಕೇಂದ್ರ ಮಾಹಿತಿ ಆಯೋಗ 2025ರ ಡಿಸೆಂಬರ್‌ನಿಂದ ಮುಖ್ಯ ಮಾಹಿತಿ ಆಯುಕ್ತರಿಲ್ಲದೆ ಕಾರ್ಯ ನಿರ್ವಹಿಸುತ್ತಿದೆ. 11 ವರ್ಷಗಳಲ್ಲಿ ಏಳನೇ ಬಾರಿ ಉದ್ದೇಶಪೂರ್ವಕವಾಗಿ ಈ ಹುದ್ದೆಯನ್ನು ಖಾಲಿ ಬಿಡಲಾಗಿದೆ ಎಂದು ಅವರು ದೂರಿದ್ದಾರೆ.

'ಮಾಹಿತಿ ನಿರಾಕರಣೆ ಸರಿಯೇ?': 'ನಮ್ಮನ್ನು ನಾವು ಪ್ರಜಾಪ್ರಭುತ್ವದ ತಾಯಿ ಎಂದು ಕರೆದುಕೊಳ್ಳುತ್ತೇವೆ. ಆದರೆ ಜನರಿಗೆ ಮಾಹಿತಿ ನೀಡುವುದರಿಂದ ದೂರ ಸರಿಯುವುದು ಎಷ್ಟು ಸರಿ' ಎಂದು ರಾಷ್ಟ್ರೀಯ ಮಾಹಿತಿ ಹಕ್ಕು ಅಭಿಯಾನದ ಜತೆ ಗುರುತಿಸಿಕೊಂಡಿರುವ ಅಂಜಲಿ ಭಾರದ್ವಾಜ್ ಪ್ರಶ್ನಿಸಿದ್ದಾರೆ.

ಸಂಸತ್ತಿನಲ್ಲಿ ಗುರುವಾರ ಮಂಡಿಸಲಾಗಿರುವ ಆರ್ಥಿಕ ಸಮೀಕ್ಷೆಯಲ್ಲಿ ಆರ್‌ಟಿಐ ಕಾಯ್ದೆಯನ್ನು ಮರುಪರಿಶೀಲಿಸುವ ಅಗತ್ಯವಿದೆ ಎಂದು ಪ್ರತಿಪಾದಿಸಲಾಗಿದೆ. ಈ ಕಾಯ್ದೆಯನ್ನು ಇನ್ನಷ್ಟು ಬಲಪಡಿಸಬೇಕಿದ್ದು, ಜಾಗತಿಕ ಮಟ್ಟದಲ್ಲಿನ ಅತ್ಯುತ್ತಮ ಅಭ್ಯಾಸಗಳನ್ನು ಸಂಯೋಜಿಸಬೇಕಿದೆ ಎಂದು ಸಮೀಕ್ಷೆ ಹೇಳಲಾಗಿದೆ.

ಮಾಹಿತಿಯನ್ನು ತಡೆಹಿಡಿಯಲು 'ಸಚಿವಾಲಯದ ವೀಟೊ' ಅಧಿಕಾರವನ್ನು ಸಮೀಕ್ಷೆ ಸೂಚಿಸಿದೆ. ಸೇವಾ ದಾಖಲೆಗಳು, ವರ್ಗಾವಣೆ, ಸಿಬ್ಬಂದಿ ವರದಿಗಳನ್ನು ಸಾರ್ವಜನಿಕ ಪರಿಶೀಲನೆಯಿಂದ ರಕ್ಷಿಸಬೇಕಾದ ಅಗತ್ಯವಿದೆ ಎಂದೂ ಅದು ಹೇಳಿದೆ.

'ಕೇಂದ್ರದಿಂದ ಬಡವರ ಮೇಲೆ ದಾಳಿ'

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಬಡವರ ಮೇಲೆ ನಿರಂತರವಾಗಿ ದಾಳಿ ಮಾಡುತ್ತಿದೆ. ಬಡವರ ಶಾಸನಬದ್ಧ ಉದ್ಯೋಗದ ಹಕ್ಕನ್ನು ಕಸಿದುಕೊಳ್ಳುತ್ತಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ನರೇಗಾ ಯೋಜನೆಯನ್ನು (ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ) ವಿಬಿ-ಜಿ ರಾಮ್ ಜಿ ಯೋಜನೆಯನ್ನಾಗಿ ಜಾರಿಗೊಳಿಸಿರುವುದನ್ನು ವಿರೋಧಿಸಿ ದೆಹಲಿಯ ಕಾಂಗ್ರೆಸ್ ಘಟಕವು, ಇಲ್ಲಿನ ಅಕ್ಬರ್ ರಸ್ತೆಯಲ್ಲಿರುವ ಎಐಸಿಸಿ ಕಚೇರಿಯಲ್ಲಿ 'ನರೇಗಾ ರಕ್ಷಿಸಿ ಸಂಗ್ರಾಮ ಯಾತ್ರೆ' ಪ್ರತಿಭಟನೆ ನಡೆಸಿತು.

ಈ ವೇಳೆ ಮಾತನಾಡಿದ ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, 'ನರೇಗಾ ಯೋಜನೆಯು ಲಕ್ಷಾಂತರ ಕುಟುಂಬಗಳಿಗೆ ಉದ್ಯೋಗದ ಹಕ್ಕನ್ನು ನೀಡಿದೆ. ವಿಬಿ-ಜಿ ರಾಮ್ ಜಿ ಯೋಜನೆಯು ನರೇಗಾದ ಮೂಲ ಚೈತನ್ಯವನ್ನು ದುರ್ಬಲಗೊಳಿಸುತ್ತದೆ' ಎಂದರು.

'ಸರ್ಕಾರದ ಕ್ರಮಗಳು ಬಡವರ ಮೇಲೆ ದಾಳಿಯನ್ನು ಸೂಚಿಸುತ್ತದೆ. ಬಡವರನ್ನು ಬೆಂಬಲಿಸುವ ವ್ಯವಸ್ಥೆಗಳನ್ನು ಕ್ರಮೇಣವಾಗಿ ತೆಗೆದು ಹಾಕಲಾಗುತ್ತಿದೆ' ಎಂದು ಕಾಂಗ್ರೆಸ್‌ನ ದೆಹಲಿ ಘಟಕದ ಅಧ್ಯಕ್ಷ ದೇವೇಂದ್ರ ಯಾದವ್ ಹೇಳಿದರು.

ಸಂಕ್ಷಿಪ್ತ ಸುದ್ದಿ

'ಅನಿರ್ದಿಷ್ಟ' ವಿನಾಯಿತಿ: ಪ್ರಶ್ನಿಸಿದ ಕೋರ್ಟ್

ನವದೆಹಲಿ (ಪಿಟಿಐ): ಪೈಲಟ್‌ಗಳ ವಾರದ ವಿಶ್ರಾಂತಿ ಅವಧಿ ಹಾಗೂ ರಜೆಯ ಹೊಸ ನಿಯಮಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ವಿಮಾನಯಾನ ಸಂಸ್ಥೆಗಳಿಗೆ ನೀಡಲಾಗಿರುವ 'ಅನಿರ್ದಿಷ್ಟ' ವಿನಾಯಿತಿ ಕುರಿತು ಡಿಜಿಸಿಎಗೆ ದೆಹಲಿ ಹೈಕೋರ್ಟ್ ಶುಕ್ರವಾರ ಪ್ರಶ್ನಿಸಿದೆ.

ಈ ವಿಷಯದ ಬಗ್ಗೆ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ (ಪಿಐಎಲ್) ಕುರಿತು ನೋಟಿಸ್ ನೀಡಿದ ಮುಖ್ಯ ನ್ಯಾಯಮೂರ್ತಿ ಡಿ.ಕೆ.ಉಪಾಧ್ಯಾಯ ಹಾಗೂ ನ್ಯಾಯಮೂರ್ತಿ ತೇಜಸ್ ಕಾರಿಯಾ ಅವರನ್ನು ಒಳಗೊಂಡ ನ್ಯಾಯಪೀಠವು, 'ಯಾವುದೇ ರಜೆಯನ್ನು ವಾರದ ವಿಶ್ರಾಂತಿಯ ಅವಧಿಗೆ ಬದಲಿಸಬಾರದು' ಎಂದಿದೆ. ಹೊಸ ಫ್ಲೈಟ್–ಡ್ಯೂಟಿ ಮಾನದಂಡವನ್ನು ತಕ್ಷಣ ಹಿಂತೆಗೆದುಕೊಳ್ಳುವ ನಿರ್ಧಾರದ ಹಿಂದಿನ 'ತರ್ಕ'ವನ್ನು ವಿವರಿಸುವಂತೆ ವಾಯುಯಾನ ನಿಯಂತ್ರಕರನ್ನು ಕೇಳಿದೆ.



ಪಿಐಎಲ್‌ಗೆ ಎರಡು ವಾರಗಳಲ್ಲಿ ಪ್ರತಿಕ್ರಿಯೆ ಸಲ್ಲಿಸುವಂತೆ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (ಡಿಜಿಸಿಎ) ಹಾಗೂ ಇಂಡಿಗೊ ವಿಮಾನಯಾನ ಸಂಸ್ಥೆಗೆ ನ್ಯಾಯಪೀಠ ಸೂಚಿಸಿದೆ.

ಬೆಂಕಿ ಅವಘಡ: ಬಿಜೆಪಿ ಪ್ರತಿಭಟನೆ

ಕೋಲ್ಕತ್ತ (ಪಿಟಿಐ): ಬೆಂಕಿ ಅವಘಡದಿಂದ ಹಲವಾರು ಕಾರ್ಮಿಕರು ಮೃತಪಟ್ಟಿರುವ ಪ್ರಕರಣಕ್ಕೆ ಸಂಬಂಧಿಸಿದ ಹೋಟೆಲ್ ಉದ್ಯಮಿಯನ್ನು ಬಂಧಿಸುವಂತೆ ಆಗ್ರಹಿಸಿ ಪಶ್ಚಿಮ ಬಂಗಾಳದ ಬಿಜೆಪಿ ನಾಯಕ ಸುವೇಂದು ಅಧಿಕಾರಿ ಮತ್ತು ಪಕ್ಷದ ಕಾರ್ಯಕರ್ತರು ಕೋಲ್ಕತ್ತದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.



ಕೋಲ್ಕತ್ತದ ಮೊಮೊ ಉತ್ಪಾದನಾ ಘಟಕವೊಂದರಲ್ಲಿ ಜನವರಿ 26ರಂದು ಬೆಂಕಿ ಅವಘಡ ಸಂಭವಿಸಿ, ಹಲವು ಕೆಲಸಗಾರರು ಮೃತಪಟ್ಟಿದ್ದಾರೆ.

ಆಡಳಿತಾರೂಢ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಆರೋಪಿಗಳನ್ನು ರಕ್ಷಿಸುತ್ತಿದೆ. ಘಟನೆ ನಡೆದು ಐದು ದಿನ ಕಳೆದರೂ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಘಟನಾ ಸ್ಥಳಕ್ಕೆ ಭೇಟಿ ನೀಡಿಲ್ಲ ಎಂದು ಸುವೇಂದು ಆರೋಪಿಸಿದರು.

ನಿಗದಿತ ಕ್ಲಿನಿಕ್‌ಗಳಲ್ಲಿ ಮಾತ್ರ ಸ್ಟೆಮ್ ಸೆಲ್ ಥೆರಪಿ: 'ಸುಪ್ರೀಂ'

ನವದೆಹಲಿ (ಪಿಟಿಐ): ಆಟಿಸಂನಿಂದ ಬಳಲುತ್ತಿರುವವರಿಗೆ ನಿಗದಿತ ಚಿಕಿತ್ಸಾಲಯಗಳನ್ನು ಹೊರತುಪಡಿಸಿ ಬೇರೆಡೆ ಸ್ಟೆಮ್ ಸೆಲ್ ಥೆರಪಿಯನ್ನು ನೀಡಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ಅನುಮೋದಿತ ಕ್ಲಿನಿಕ್ ಹೊರತುಪಡಿಸಿ ಹೊರಗೆ ಸ್ಟೆಮ್ ಸೆಲ್‌ಗಳ ಪ್ರತಿಯೊಂದು ಬಳಕೆಯನ್ನು ಅನೈತಿಕ ಹಾಗೂ ದುಷ್ಕೃತ್ಯ ಎಂಬುದಾಗಿ ಪರಿಗಣಿಸಲಾಗುವುದು ಎಂದು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಆರ್. ಮಹದೇವನ್ ಅವರಿದ್ದ ಪೀಠ ತಿಳಿಸಿದೆ.

'ತಮ್ಮ ಯೋಗಕ್ಷೇಮಕ್ಕೆ ಹಾನಿಕಾರಕ ಎನ್ನುವ ಆತಂಕದಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳನ್ನು ಬಿಡಲು ಸಾಧ್ಯವಿಲ್ಲ' ಎಂದಿದೆ.

'ಆಟಿಸಂಗೆ ಸ್ಟೆಮ್ ಸೆಲ್ ಚಿಕಿತ್ಸೆಯು ಕ್ಲಿನಿಕಲ್ ರೂಪದಲ್ಲಿ ವಾಣಿಜ್ಯವಾಗಿ ಮುಂದುವರಿಯಲು ಸಾಧ್ಯವಿಲ್ಲ' ಎಂಬ ನಮ್ಮ ನಿರ್ಧಾರದ ಬಗ್ಗೆ ನಮಗೆ ಸ್ಪಷ್ಟತೆಯಿದೆ ಎಂದೂ ತಿಳಿಸಿದೆ. ಏಮ್ಸ್ ಹಾಗೂ ರಾಷ್ಟ್ರೀಯ ವೈದ್ಯಕೀಯ ಮಂಡಳಿ ಅಧಿಕಾರಿಗಳೊಂದಿಗೆ ಸಮಾಲೋಚಿಸಿ, ಉತ್ತಮ ಪರಿಹಾರ ಕಂಡುಕೊಳ್ಳಿ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಕಾರ್ಯದರ್ಶಿಗೆ ನಿರ್ದೇಶಿಸುತ್ತೇವೆ ಎಂದಿದೆ.

ಆಟಿಸಂಗೆ ಸ್ಟೆಮ್ ಸೆಲ್ ಥೆರಪಿ ನೀಡುವುದಾಗಿ ಹಲವು ಚಿಕಿತ್ಸಾಲಯಗಳು ದೇಶದಾದ್ಯಂತ ವ್ಯಾಪಕ ಪ್ರಚಾರ ನಡೆಸುತ್ತಿರುವುದಕ್ಕೆ ಸಂಬಂಧಿಸಿದಂತೆ ಕಳವಳ ವ್ಯಕ್ತಪಡಿಸಿ ಸಲ್ಲಿಸಿರುವ ಅರ್ಜಿಯ ವಿಚಾರಣೆ ವೇಳೆ ನ್ಯಾಯಪೀಠ ಈ ತೀರ್ಪು ನೀಡಿದೆ.

ಸುನೇತ್ರಾ ಪ್ರಮಾಣ ಇಂದು?

ಒಂದನೇ ಪುಟದಿಂದ...

2024ರ ಲೋಕಸಭಾ ಚುನಾವಣೆಯವರೆಗೂ ಸುನೇತ್ರಾ ಅವರು ರಾಜಕೀಯ ಕ್ಷೇತ್ರದಿಂದ ದೂರವೇ ಉಳಿದುಕೊಂಡಿದ್ದರು. ಆ ವರ್ಷ ನಡೆದ ಲೋಕಸಭಾ ಚುನಾವಣೆಯಲ್ಲಿ ಅವರು ಬಾರಾಮತಿಯಿಂದ ಎನ್‌ಸಿಪಿ ಪಕ್ಷದ ಅಭ್ಯರ್ಥಿಯಾಗಿ ಕಣಕ್ಕಿಳಿದರು. ಆದರೆ, ಸಾಕಷ್ಟು ಕುತೂಹಲ ಕೆರಳಿಸಿದ ಸ್ಪರ್ಧೆಯಲ್ಲಿ ತನ್ನ ನಾದಿನಿ ಎನ್‌ಸಿಪಿಯ (ಎಸ್‌ಪಿ) ಸುಪ್ರಿಯಾ ಸುಳೆ ಎದುರು ಪರಾಭವಗೊಂಡರು. ಸುನೇತ್ರಾ ಆ ಬಳಿಕ ರಾಜ್ಯಸಭೆಗೆ ಆಯ್ಕೆಯಾದರು.

ಶುಕ್ರವಾರ ಸಂಜೆ ಸುದ್ದಿಗಾರರ ಜತೆ ಮಾತನಾಡಿದ್ದ ಮಹಾರಾಷ್ಟ್ರದ ಸಚಿವ ಛಗನ್ ಭುಜಬಲ್, 'ಎನ್‌ಸಿಪಿ ಶಾಸಕಾಂಗ ಪಕ್ಷದ ಸಭೆ ಜನವರಿ 31ರಂದು ನಡೆಯಲಿದ್ದು, ಸುನೇತ್ರಾ ಅವರನ್ನು ಶಾಸಕಾಂಗ ಪಕ್ಷದ ನಾಯಕಿಯಾಗಿ ಘೋಷಿಸಲಾಗುವುದು' ಎಂದು ಮಾಹಿತಿ ನೀಡಿದ್ದರು.

'ಶಾಸಕಾಂಗ ಪಕ್ಷದ ಸಭೆಯಲ್ಲಿ ಸುನೇತ್ರಾ ಅವರನ್ನು ನಾಯಕಿಯಾಗಿ ಘೋಷಿಸಿದ ಬಳಿಕ ಶನಿವಾರವೇ ಅವರು ಉಪಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವುದಕ್ಕೆ ಯಾವುದೇ ಅಭ್ಯಂತರ ಇಲ್ಲ ಎಂದು ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ತಿಳಿಸಿದ್ದಾರೆ' ಎಂದು ಹೇಳಿದ್ದರು.

ಎನ್‌ಸಿಪಿ ಮುಖಂಡರಿಂದ ಫಡಣವೀಸ್ ಭೇಟಿ: ಎನ್‌ಸಿಪಿಯ ಹಿರಿಯ ನಾಯಕರು ಶುಕ್ರವಾರ ದೇವೇಂದ್ರ ಫಡಣವೀಸ್ ಅವರನ್ನು ಭೇಟಿಯಾದರು. ದಕ್ಷಿಣ ಮುಂಬೈನಲ್ಲಿರುವ ಮುಖ್ಯಮಂತ್ರಿ ಅವರ ಅಧಿಕೃತ ನಿವಾಸ 'ವರ್ಷಾ'ದಲ್ಲಿ ಸುಮಾರು ಒಂದೂವರೆ ಗಂಟೆ ನಡೆದ ಸಭೆಯಲ್ಲಿ ಛಗನ್ ಭುಜಬಲ್, ಪಕ್ಷದ ರಾಷ್ಟ್ರೀಯ ಕಾರ್ಯಾಧ್ಯಕ್ಷ ಪ್ರಫುಲ್ ಪಟೇಲ್, ರಾಜ್ಯ ಘಟಕದ ಅಧ್ಯಕ್ಷ ಸುನಿಲ್ ತಟ್ಕರೆ ಮತ್ತು ಮಾಜಿ ಸಚಿವ ಧನಂಜಯ ಮುಂಡೆ ಸೇರಿದಂತೆ ಹಿರಿಯ ನಾಯಕರು ಭಾಗವಹಿಸಿದರು ಎಂದು ಮೂಲಗಳು ತಿಳಿಸಿವೆ.

ಸಿಐಡಿ ತನಿಖೆ ಆರಂಭ: ಅಜಿತ್ ಪವಾರ್ ಮತ್ತು ಇತರ ನಾಲ್ವರ ಸಾವಿಗೆ ಕಾರಣವಾದ ವಿಮಾನ ಅಪಘಾತದ ಕುರಿತು ಮಹಾರಾಷ್ಟ್ರ ಅಪರಾಧ ತನಿಖಾ ದಳ (ಸಿಐಡಿ) ತನಿಖೆ ಪ್ರಾರಂಭಿಸಿದೆ ಎಂದು ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ.

ಜನವರಿ 28ರ ದುರಂತದ ಬಳಿಕ ಪುಣೆ ಜಿಲ್ಲೆಯ ಬಾರಾಮತಿಯಲ್ಲಿ ದಾಖಲಾಗಿರುವ ಆಕಸ್ಮಿಕ ಸಾವು ಪ್ರಕರಣದ ಬಗ್ಗೆ ಸಿಐಡಿ ತನಿಖೆಗೆ ರಾಜ್ಯ ಪೊಲೀಸರು ಆದೇಶ ಹೊರಡಿಸಿದ್ದಾರೆ ಎಂದು ಹೇಳಿದ್ದಾರೆ.

ಅಜಿತ್ ಪವಾರ್ (66) ಮತ್ತು ಇತರ ನಾಲ್ವರು ಪ್ರಯಾಣಿಸುತ್ತಿದ್ದ ಲಘು ವಿಮಾನ ಬುಧವಾರ ಬೆಳಿಗ್ಗೆ ಪುಣೆ ಜಿಲ್ಲೆಯ ಬಾರಾಮತಿ ವಿಮಾನ ನಿಲ್ದಾಣದಲ್ಲಿ ಪತನಗೊಂಡಿತ್ತು. ವಿಮಾನದಲ್ಲಿದ್ದ ಎಲ್ಲರೂ ಮೃತಪಟ್ಟಿದ್ದರು.

ಅಸ್ಥಿ ವಿಸರ್ಜನೆ (ಪುಣೆ ವರದಿ): ಅಜಿತ್ ಪವಾರ್ ಅವರ ಚಿತಾಭಸ್ಮವನ್ನು ಹುಟ್ಟೂರಾದ ಬಾರಾಮತಿ ಬಳಿ ನೀರಾ ಮತ್ತು ಕರ್ಹಾ ನದಿಗಳ ಸಂಗಮದಲ್ಲಿ ಅವರ ಹಿರಿಯ ಪುತ್ರ ಪಾರ್ಥ್ ಶುಕ್ರವಾರ ವಿಸರ್ಜಿಸಿದರು.

ವಿಲೀನದತ್ತ ಎನ್‌ಸಿಪಿ ಬಣಗಳು?

ಒಂದನೇ ಪುಟದಿಂದ...

ಈಚೆಗೆ ನಡೆದ ಮುನ್ಸಿಪಲ್ ಕಾರ್ಪೊರೇಷನ್ ಚುನಾವಣೆಯಲ್ಲಿ ಪುಣೆ ಮತ್ತು ಪಿಂಪ್ರಿ ಚಿಂಚವಾಡದಲ್ಲಿ ಎರಡೂ ಬಣಗಳು ಮೈತ್ರಿ ಮಾಡಿಕೊಂಡು ಕಣಕ್ಕಿಳಿದಿದ್ದವು.

ಈ ಚುನಾವಣೆಯ ಬಳಿಕ ಎನ್‌ಸಿಪಿಯ ಎರಡೂ ಬಣಗಳ ನಡುವೆ ವಿಲೀನದ ಮಾತುಕತೆ ವೇಗವನ್ನು ಪಡೆದುಕೊಂಡಿದೆ. ಮುಂಬರುವ ಜಿಲ್ಲಾ ಪರಿಷತ್ ಮತ್ತು ಪಂಚಾಯಿತಿ ಸಮಿತಿ ಚುನಾವಣೆಯ ಬಳಿಕ ಫೆಬ್ರುವರಿ 8ರಂದು ವಿಲೀನದ ಅಧಿಕೃತ ಘೋಷಣೆ ಮಾಡಲು ಯೋಜಿಸಲಾಗಿತ್ತು ಎಂದು ಎನ್‌ಸಿಪಿ (ಎಸ್‌ಪಿ) ಮೂಲಗಳು ತಿಳಿಸಿವೆ.

'ಕುಟುಂಬ ಮತ್ತು ಪಕ್ಷವನ್ನು ಮತ್ತೆ ಒಟ್ಟಿಗೆ ಸೇರಿಸುವ ಪ್ರಕ್ರಿಯೆ ಈಗಾಗಲೇ ಪ್ರಗತಿಯಲ್ಲಿದೆ. ಬಣಗಳ ನಡುವಿನ ಭಿನ್ನಾಭಿಪ್ರಾಯ ಬಗೆಹರಿಸಲು ಅಜಿತ್ ಅವರು ಹಿರಿಯ ನಾಯಕರೊಂದಿಗೆ ಹಲವು ಸುತ್ತಿನ ಚರ್ಚೆ ನಡೆಸಿದ್ದರು' ಎಂದು ಹೇಳಿವೆ. ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ ಮಹಾರಾಷ್ಟ್ರ ವಿಧಾನಸಭೆಯಲ್ಲಿ 40 ಸ್ಥಾನಗಳನ್ನು ಹೊಂದಿದೆ (ಬಾರಾಮತಿ ಹೊರತುಪಡಿಸಿ). ಶರದ್ ಪವಾರ್ ಬಣವು 10 ಸ್ಥಾನಗಳನ್ನು ಹೊಂದಿದೆ. ವಿಲೀನದ ನಂತರ, ಏಕೀಕೃತ ಪಕ್ಷವು ಬಿಜೆಪಿ ನೇತೃತ್ವದ 'ಮಹಾಯುತಿ' ಸರ್ಕಾರದ ಭಾಗವಾಗಿ ಉಳಿಯುತ್ತದೆಯೇ ಎಂಬುದು ಕುತೂಹಲಕ್ಕೆ ಎಡೆಮಾಡಿಕೊಟ್ಟಿದೆ.

ಪಕ್ಷವು ಆಡಳಿತಾರೂಢ ಮೈತ್ರಿಕೂಟದಿಂದ ಹೊರಬಂದರೂ, ದೇವೇಂದ್ರ ಫಡಣವೀಸ್ ಸರ್ಕಾರವು ಸುಭದ್ರವಾಗಿ ಉಳಿಯುತ್ತದೆ. ಏಕೆಂದರೆ 288 ಸದಸ್ಯ ಬಲದ ಸದನದಲ್ಲಿ ಎನ್‌ಸಿಪಿ ಸೇರಿದಂತೆ ಮೈತ್ರಿಕೂಟವು ಪ್ರಸ್ತುತ 235 ಶಾಸಕರ ಬಲವನ್ನು ಹೊಂದಿದೆ.

ಪ್ರಶಸ್ತಿಗೆ ಜೊಕೊ–ಅಲ್ಕರಾಜ್ ಸೆಣಸು


ಐದು ಸೆಟ್‌ಗಳ ಸುದೀರ್ಘ ಸೆಮಿಫೈನಲ್ ಪಂದ್ಯಗಳಲ್ಲಿ ಸಿನ್ನರ್, ಜ್ವರೇವ್‌ಗೆ ಸೋಲು

ಮೆಲ್ಬರ್ನ್ (ಎಎಫ್‌ಪಿ): ಹಾಲಿ ಚಾಂಪಿಯನ್ ಯಾನಿಕ್ ಸಿನ್ನರ್ ಅವರಿಗೆ ಐದು ಸೆಟ್‌ಗಳ ಸುದೀರ್ಘ ಪಂದ್ಯದಲ್ಲಿ ಸೋಲುಣಿಸಿದ ನೊವಾಕ್ ಜೊಕೊವಿಚ್ ಅವರು ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಫೈನಲ್‌ಗೆ ದಾಪುಗಾಲಿಟ್ಟರು. ಇತಿಹಾಸ ನಿರ್ಮಾಣದ ಹೊಸ್ತಿಲಲ್ಲಿರುವ ಜೊಕೊವಿಚ್ ಭಾನುವಾರ ನಡೆಯುವ ಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಕಾರ್ಲೋಸ್ ಅಲ್ಕರಾಜ್ ಅವರನ್ನು ಎದುರಿಸಲಿದ್ದಾರೆ.

ಸರ್ಬಿಯಾದ 38 ವರ್ಷ ವಯಸ್ಸಿನ ಆಟಗಾರ 3-6, 6-3, 4-6, 6-4, 6-4 ರಿಂದ ಇಟಲಿಯ ಎದುರಾಳಿಯನ್ನು ಸೋಲಿಸಿದರು. ಫೈನಲ್‌ನಲ್ಲಿ ಅವರು ತಮಗಿಂತ 16 ವರ್ಷ ಕಿರಿಯ ಆಟಗಾರನ್ನು ಸೋಲಿಸಿದರೆ ಸಾರ್ವಕಾಲಿಕ ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಕಿರೀಟ ಮುಡಿಗೇರಿಸುವ ಅವಕಾಶ ಪಡೆಯಲಿದ್ದಾರೆ.

ಆಸ್ಟ್ರೇಲಿಯಾ ಮಾರ್ಗರೇಟ್ ಕೋರ್ಟ್ ಅವರೂ 24 ಗ್ರ್ಯಾನ್‌ಸ್ಲಾಮ್ ಸಿಂಗಲ್ಸ್ ಪ್ರಶಸ್ತಿ ಜಯಿಸಿದ ದಾಖಲೆ ಹೊಂದಿದ್ದಾರೆ. ವಿಶೇಷವೆಂದರೆ ಶನಿವಾರ ಬೆಳಿಗ್ಗಿನ ಜಾವದವರೆಗೆ ನಡೆದ ಪಂದ್ಯಕ್ಕೆ ಅವರು ಸಾಕ್ಷಿಯಾದರು.

ಇನ್ನೊಂದು ಸುದೀರ್ಘ ಸೆಮಿಫೈನಲ್ ನಲ್ಲಿ ಸ್ನಾಯುಸೆಳೆತ, ಬಳಲಿಕೆಯನ್ನು ನಿಭಾಯಿಸಿದ ಸ್ಪೇನ್‌ನ ಆಟಗಾರ ಅಲ್ಕರಾಜ್ 6-4, 7-6 (7-5), 6-7 (3-7), 6-7 (4-7), 7-5 ರಿಂದ ಮೂರನೇ ಶ್ರೇಯಾಂಕದ ಅಲೆಕ್ಸಾಂಡರ್ ಜ್ವರೇವ್ ಅವರನ್ನು ಸೋಲಿಸಿದರು. ಸುದೀರ್ಘ 5 ಗಂಟೆ 27 ನಿಮಿಷಗಳ ಹೋರಾಟದಲ್ಲಿ ಯಶಸ್ಸು ಪಡೆದ ಅಲ್ಕರಾಜ್ ಇಲ್ಲಿ ಮೊದಲ ಬಾರಿ ಫೈನಲ್ ತಲುಪಿದರು.



ಕಾರ್ಲೋಸ್ ಅಲ್ಕರಾಜ್

ಇತರ ಮೂರು ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಚಾಂಪಿಯನ್ ಆಗಿರುವ ಅವರು ಇಲ್ಲಿ ಮೊದಲ ಪ್ರಶಸ್ತಿ ಗೆದ್ದು 'ಕ್ಯಾರೀರ್ ಗ್ರ್ಯಾನ್‌ಸ್ಲಾಮ್' ಸಾಧಿಸಿದ ಅತಿ ಕಿರಿಯ ಆಟಗಾರ ಎನಿಸುವ ಹಾದಿಯಲ್ಲಿದ್ದಾರೆ. ಈ ದಾಖಲೆ ಸ್ಪೇನ್‌ನವರೇ ಆದ ರಫೆಲ್ ನಡಾಲ್ (24ನೇ ವಯಸ್ಸಿನಲ್ಲಿ) ಹೆಸರಿನಲ್ಲಿದೆ.



ಗೆಲುವಿನ ಸಂಭ್ರಮದಲ್ಲಿ ನೊವಾಕ್ ಜೊಕೊವಿಚ್ ಎಎಫ್‌ಪಿ ಚಿತ್ರಗಳು

ಜೊಕೊವಿಚ್ 2023ರ ಅಮೆರಿಕ ಓಪನ್‌ನಲ್ಲಿ ತಮ್ಮ ಕೊನೆಯ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಜಯಿಸಿದ್ದರು. ಅಂದಿನಿಂದ ಅಲ್ಕರಾಜ್ ಮತ್ತು ಸಿನ್ನರ್ ಅವರೇ ವಿಶ್ವ ಟೆನಿಸ್‌ನಲ್ಲಿ ಪ್ರಾಬಲ್ಯ ಮೆರೆದಿದ್ದಾರೆ. 2025ರಲ್ಲಿ ಅವರು ನಾಲ್ಕೂ ಗ್ರ್ಯಾನ್‌ಸ್ಲಾಮ್ ಟೂರ್ನಿಗಳ ಸೆಮಿಫೈನಲ್ ತಲುಪಿದ್ದರು. ಆದರೆ ಶುಕ್ರವಾರ ಆಡಿದ ರೀತಿ ನೋಡಿದರೆ, ಅವರಲ್ಲಿ ಇನ್ನೂ ಸಾಕಷ್ಟು ಆಟ ಉಳಿದಿರುವಂತೆ ಕಂಡಿತು.

4 ಗಂಟೆ 9 ನಿಮಿಷಗಳವರೆಗೆ ನಡೆದ ಈ ಪಂದ್ಯದ ನಿರ್ಣಾಯಕ ಸೆಟ್‌ನಲ್ಲಿ ಅನೇಕ ತಪ್ಪುಗಳನ್ನು ಎಸಗುವ ಮೂಲಕ 24 ವರ್ಷ ವಯಸ್ಸಿನ ಸಿನ್ನರ್ ಎದುರಾಳಿಯ ಸರ್ವ್ ಮುರಿಯುವ ಉತ್ತಮ ಅವಕಾಶಗಳನ್ನು ಕೈಚೆಲ್ಲಿದರು. ಇದರೊಂದಿಗೆ ಇಲ್ಲಿ ಹ್ಯಾಟ್ರಿಕ್ ಪ್ರಶಸ್ತಿಗೆ ಮುತ್ತಿಕ್ಕುವ ಸಿನ್ನರ್ ಕನಸು ಭಗ್ನಗೊಂಡಿತು.

ದಾಖಲೆಯ ಹತ್ತು ಪ್ರಶಸ್ತಿ ಗೆದ್ದು 'ಮೆಲ್ಬರ್ನ್ ಪಾರ್ಕ್‌ನ ನಿರ್ವಿವಾದ ಚಕ್ರವರ್ತಿ' ಎನಿಸಿರುವ ಮಾಜಿ ಅಗ್ರಮಾನ್ಯ ಆಟಗಾರನಿಗೆ ಈ ಬಾರಿ ಅದೃಷ್ಟದ ಬಲವೂ ಜೊತೆ ನೀಡಿದೆ. ಅವರು ಕ್ವಾರ್ಟರ್‌ಫೈನಲ್‌ನಲ್ಲಿ ಎರಡು ಸೆಟ್ ಹಿನ್ನಡೆಯಲ್ಲಿದ್ದಾಗ ಇಟಲಿಯ ಎದುರಾಳಿ ಲೊರೆಂಜೊ ಮುಸೆಟ್ಟಿ ಕಾಲುನೋವಿನಿಂದ ಪಂದ್ಯ ಬಿಟ್ಟು ಕೊಟ್ಟಿದ್ದರು. ನಾಲ್ಕನೇ ಸುತ್ತಿನಲ್ಲೂ ಅವರ ಎದುರಾಳಿ ಯಾಕುಬ್ ಮೆನ್ಸಿಕ್ ಗಾಯದ ಸಮಸ್ಯೆಯಿಂದ ಹಿಂದೆ ಸರಿದಿದ್ದರು. ಸಿನ್ನರ್ ಎದುರೂ ಅವರು ನೆಚ್ಚಿನ ಆಟಗಾರ ಎನಿಸಿರಲಿಲ್ಲ. ಆದರೆ ಅಚ್ಚುಮೆಚ್ಚಿನ ಮೈದಾನದಲ್ಲಿ ಅವರ ಕೆಚ್ಚಿನ ಆಟ ಯಶ ಕಂಡಿತು.

ದಣಿದ ಅಲ್ಕರಾಜ್: ಅಲ್ಕರಾಜ್ ಸೆಮಿಫೈನಲ್ ಪಂದ್ಯದ ಮೂರನೇ ಸೆಟ್‌ನಲ್ಲಿ 4-4 ಸಮ ಮಾಡಿಕೊಂಡಿದ್ದರು. ಈ ವೇಳೆ ಸ್ನಾಯುಸೆಳೆತ ಅವರನ್ನು ಬಾಧಿಸಿದಂತೆ ಕಂಡಿತು. ಅವರಿಗೆ 'ವೈದ್ಯಕೀಯ ಟೈಮ್‌ಔಟ್' ನೀಡಲಾಯಿತು. ಇದು ಮೂರನೇ ಶ್ರೇಯಾಂಕದ ಜ್ವರೇವ್ ಅವರನ್ನು ಕೆರಳಿಸಿತು. ಇದನ್ನು ಅವರು ರೆಫ್ರಿ ಜೊತೆ ಪ್ರಶ್ನಿಸಿದರು.

ಪೂರ್ಣ ಸಾಮರ್ಥ್ಯದಿಂದ ಆಡಲಾಗದಿದ್ದರೂ ಅಲ್ಕರಾಜ್ ಪಂದ್ಯ ಗೆಲ್ಲುವಲ್ಲಿ ಯಶಸ್ವಿಯಾದರು. 'ಯಾವ ಹಂತದಲ್ಲೂ ನಾನು ಸಾಮರ್ಥ್ಯದ ಮೇಲೆ ನಂಬಿಕೆ ಕಳೆದುಕೊಳ್ಳಲಿಲ್ಲ' ಎಂದು ಆರು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳ ಒಡೆಯ ಪ್ರತಿಕ್ರಿಯಿಸಿದರು. ಹಾಲಿ ರನ್ನರ್ ಅಪ್ ಆಗಿರುವ ಜರ್ಮನಿಯ ಜ್ವರೇವ್ ಮತ್ತೊಮ್ಮೆ ನಿರಾಶೆ ಅನುಭವಿಸಿದರು.

ಮಹಿಳಾ ಸಿಂಗಲ್ಸ್ ಫೈನಲ್ ಇಂದು

ವಿಶ್ವದ ಅಗ್ರಮಾನ್ಯ ಆಟಗಾರ್ತಿ ಅರಿನಾ ಸಬಲೆಂಕಾ ಅವರು ಶನಿವಾರ ಮಹಿಳಾ ಸಿಂಗಲ್ಸ್ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಕಜಾಕಸ್ತಾನದ ಎಲಿನಾ ರಿಬಾಕಿನಾ ಅವರನ್ನು ಎದುರಿಸಲಿದ್ದಾರೆ.

2023 ಮತ್ತು 2024ರ ಚಾಂಪಿಯನ್ ಸಬಲೆಂಕಾ ಅವರು ಇಲ್ಲಿ ಮೂರನೇ ಬಾರಿ ಪ್ರಶಸ್ತಿ ಗೆಲ್ಲುವ ನಿರೀಕ್ಷೆಯಲ್ಲಿದ್ದಾರೆ. ಐದನೇ ಶ್ರೇಯಾಂಕದ ರಿಬಾಕಿನಾ 2022ರ ವಿಂಬಲ್ಡನ್ ಕಿರೀಟದ ಬಳಿಕ ಎರಡನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆಲ್ಲುವ ಛಲದಲ್ಲಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 2, **ನೇರಪ್ರಸಾರ:** ಸೋನಿ ಸ್ಪೋರ್ಟ್ಸ್

ರಣಜಿ ಟ್ರೋಫಿ: ಇನಿಂಗ್ಸ್ ಹಿನ್ನಡೆ ಆತಂಕದಲ್ಲಿ ಕರ್ನಾಟಕ

ಶ್ರೇಯಸ್, ಪಾಟೀಲ ಮೇಲೆ ನಿರೀಕ್ಷೆ

ಪ್ರಜಾವಾಣಿ ವಾರ್ತೆ/ಪಿಟಿಐ

ಮೊಹಾಲಿ: ನಾಯಕ ದೇವದತ್ತ ಪಡಿಕ್ಕಲ್ ಸೇರಿ ಮಧ್ಯಮಕ್ರಮಾಂಕದ ಬ್ಯಾಟರ್‌ಗಳ ವೈಫಲ್ಯವು ಇಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ಕರ್ನಾಟಕ ತಂಡವನ್ನು ಕಾಡಿತು. ಇದರಿಂದಾಗಿ ಪಂಜಾಬ್ ಎದುರು ಮೊದಲ ಇನಿಂಗ್ಸ್ ಮುನ್ನಡೆಗಾಗಿ ತಂಡವು ಕಠಿಣ ಹೋರಾಟ ನಡೆಸುವಂತಾಗಿದೆ.

ಪಂಜಾಬ್ ತಂಡವು ಗಳಿಸಿರುವ 309 ರನ್‌ಗಳಿಗೆ ಉತ್ತರವಾಗಿ ಎರಡನೇ ದಿನದಾಟದ ಮುಕ್ತಾಯಕ್ಕೆ ಕರ್ನಾಟಕವು 87 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 255 ರನ್ ಗಳಿಸಿದೆ. ಇನಿಂಗ್ಸ್ ಮುನ್ನಡೆಗೆ ಇನ್ನೂ 54 ರನ್‌ಗಳು ಬೇಕು.

ಸ್ಪಿನ್ ಆಲ್‌ರೌಂಡರ್ ಶ್ರೇಯಸ್ ಗೋಪಾಲ್ (ಬ್ಯಾಟಿಂಗ್ 42; 124ಎ, 4X3) ಮಧ್ಯಮವೇಗಿ ಆಲ್‌ರೌಂಡರ್ ವಿದ್ಯಾಧರ್ ಪಾಟೀಲ (ಬ್ಯಾಟಿಂಗ್ 23; 56ಎ, 4X4) ಕ್ರೀಸ್‌ನಲ್ಲಿದ್ದಾರೆ. ಅವರಿಬ್ಬರ ಮೇಲೆಯೇ ಈಗ ಕರ್ನಾಟಕ ತಂಡಕ್ಕೆ ಇನಿಂಗ್ಸ್ ಮುನ್ನಡೆ ಕೊಡಿಸುವ ಹೊಣೆ ಇದೆ. ಈ ಪಂದ್ಯದಲ್ಲಿ ಪೂರ್ಣ ಅಂಕಗಳೊಂದಿಗೆ ಗೆದ್ದರೆ ಮಾತ್ರ ಕರ್ನಾಟಕ ತಂಡಕ್ಕೆ ನಾಕೌಟ್ ಪ್ರವೇಶಿಸುವ ಅವಕಾಶ ಸಿಗಬಹುದು.

ಆರಂಭಿಕ ಜೋಡಿ ಕೆ.ಎಲ್. ರಾಹುಲ್ (59; 87ಎ, 4X9) ಮತ್ತು ಮಯಂಕ್ ಅಗರವಾಲ್ (46; 64ಎ, 4X6) ಮೊದಲ ವಿಕೆಟ್ ಜೊತೆಯಾಟದಲ್ಲಿ 102 ರನ್ ಸೇರಿಸಿದರು. ಈ ಉತ್ತಮ ಅಡಿಪಾಯದ ಮೇಲೆ ಚೆಂದದ ಇನಿಂಗ್ಸ್ ಕಟ್ಟುವ ಅವಕಾಶವನ್ನು ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಕೈಚೆಲ್ಲಿದರು. ಎಡಗೈ ಸ್ಪಿನ್ನರ್ ಹರಪ್ರೀತ್ ಬ್ರಾರ್ (101ಕ್ಕೆ4) ಅವರ ಮೋಡಿಗೆ ವಿಕೆಟ್ ಪತನವಾದವು.

ಮೊದಲ ದಿನದಾಟದಲ್ಲಿ ಪಂಜಾಬ್ ತಂಡವು 9 ವಿಕೆಟ್‌ಗಳಿಗೆ 303 ರನ್ ಗಳಿಸಿತ್ತು. ಅರ್ಧಶತಕ ಗಳಿಸಿದ್ದ ಇಮಾನ್ಜೋತ್ ಸಿಂಗ್ (83) ಕ್ರೀಸ್‌ನಲ್ಲಿದ್ದರು. ಶುಕ್ರವಾರ ಬೆಳಿಗ್ಗೆ ಈ ಮೊತ್ತಕ್ಕೆ ಕೇವಲ ಆರು ರನ್ ಸೇರಿಸಿದ ಬ್ಯಾಟರ್‌ಗಳು ಔಟಾದರು. ವಿದ್ಯಾಧರ್ ಪಾಟೀಲ ಅವರು ಇಮಾನ್ಜೋತ್ ಅವರನ್ನು ಔಟ್ ಮಾಡಿದರು.



ಅರ್ಧಶತಕ ಗಳಿಸಿದ ಕೆ.ಎಲ್.ರಾಹುಲ್ ಸಂಗ್ರಹ ಚಿತ್ರ



ಹರಪ್ರೀತ್ ಬ್ರಾರ್

ಭಾರತ ತಂಡದಲ್ಲಿ ಟೆಸ್ಟ್ ಕ್ರಿಕೆಟ್ ಪಂದ್ಯಗಳನ್ನು ಆಡಿರುವ ಅನುಭವಿ ಜೋಡಿ ರಾಹುಲ್ ಮತ್ತು ಮಯಂಕ್ ಕರ್ನಾಟಕ ತಂಡಕ್ಕೆ ಅಮೋಘ ಆರಂಭ ನೀಡಿದರು.

ಆದರೆ 22ನೇ ಓವರ್‌ನಲ್ಲಿ ಚಾಹಲ್ ಅವರು ಮಯಂಕ್ ವಿಕೆಟ್ ಗಳಿಸುವ ಮೂಲಕ ಜೊತೆಯಾಟ ಮುರಿದರು. ಐದು ಓವರ್‌ಗಳ ನಂತರ ಬ್ರಾರ್ ಬೌಲಿಂಗ್‌ನಲ್ಲಿ ರಾಹುಲ್ ಕ್ಲೀನ್‌ಬೌಲ್ಡ್ ಆದರು. ಕಳೆದ ಪಂದ್ಯದಲ್ಲಿ ಚೆಂದದ ಬ್ಯಾಟಿಂಗ್ ಮಾಡಿದ್ದ ಕೆ.ವಿ.ಅನೀಶ್ (32; 75ಎ, 4X3) ಇಲ್ಲಿಯೂ ಭರವಸೆ ಮೂಡಿಸಿದ್ದರು. ಆದರೆ ದೇವದತ್ತ ಮತ್ತು ಸ್ಮರಣ್ ರವಿಚಂದ್ರನ್ ತಲಾ 9 ರನ್ ಗಳಿಸಿದರು. ಇಬ್ಬರ ವಿಕೆಟ್ ಕೂಡ ಬ್ರಾರ್ ಖಾತೆ ಸೇರಿದವು. 48ನೇ ಓವರ್‌ನಲ್ಲಿ ಅನೀಶ್ ವಿಕೆಟ್ ಕೂಡ ಬ್ರಾರ್ ಪಾಲಾಯಿತು.

ಈ ಹಂತದಲ್ಲಿ ಜೊತೆಗೂಡಿದ ಶ್ರೇಯಸ್ ಮತ್ತು ಪದಾರ್ಪಣೆ ಪಂದ್ಯ ಆಡುತ್ತಿರುವ ಕೃತಿಕ್ ಕೃಷ್ಣ (28; 83ಎ, 4X2, 6X1) ಅವರು ಆರನೇ ವಿಕೆಟ್ ಜೊತೆಯಾಟದಲ್ಲಿ 153 ಎಸೆತಗಳಲ್ಲಿ 47 ರನ್ ಸೇರಿಸಿದರು. ಸುಖದೀಪ್ ಬೀಸಿದ ಎಲ್‌ಬಿಡಬ್ಲ್ಯು ಬಲೆಯಲ್ಲಿ ಕೃತಿಕ್ ಬಿದ್ದರು. ಆದರೆ, ಶ್ರೇಯಸ್ ಅವರೊಂದಿಗೆ ಸೇರಿಕೊಂಡ ರಾಯಚೂರಿನ ವಿದ್ಯಾಧರ್ ಮುರಿಯದ ಏಳನೇ ವಿಕೆಟ್ ಜತೆಯಾಟದಲ್ಲಿ 42 ರನ್ ಸೇರಿಸಿದರು. ಇದರಿಂದಾಗಿ ಇನ್ನೂ ಆಸೆ ಜೀವಂತವಾಗಿದೆ.

ಸಂಕ್ಷಿಪ್ತ ಸ್ಕೋರು: ಪಂಜಾಬ್: 92 ಓವರ್‌ಗಳಲ್ಲಿ 309 (ಇಮಾನ್ಜೋತ್ ಸಿಂಗ್ ಚಾಹಲ್ 83, ಆಯುಷ್ ಗೋಯಲ್ 23, ಸುಖದೀಪ್ ಭಜ್ವಾ 20, ವಿದ್ಯಾಧರ್ ಪಾಟೀಲ 52ಕ್ಕೆ4, ಮೊಹ್ಸಿನ್ ಖಾನ್ 85ಕ್ಕೆ2, ಶ್ರೇಯಸ್ ಗೋಪಾಲ್ 48ಕ್ಕೆ3) ಕರ್ನಾಟಕ: 87 ಓವರ್‌ಗಳಲ್ಲಿ 6ಕ್ಕೆ255 (ಕೆ.ಎಲ್. ರಾಹುಲ್ 59, ಮಯಂಕ್ ಅಗರವಾಲ್ 46, ಕೆ.ವಿ. ಅನೀಶ್ 32, ಶ್ರೇಯಸ್ ಗೋಪಾಲ್ ಬ್ಯಾಟಿಂಗ್ 42, ಕೃತಿಕ್ ಕೃಷ್ಣ 28, ವಿದ್ಯಾಧರ್ ಪಾಟೀಲ ಬ್ಯಾಟಿಂಗ್ 23, ಹರಪ್ರೀತ್ ಬ್ರಾರ್ 101ಕ್ಕೆ4, ಸುಖದೀಪ್ ಭಜ್ವಾ 22ಕ್ಕೆ1, ಇಮಾನ್ಜೋತ್ ಸಿಂಗ್ ಚಾಹಲ್ 60ಕ್ಕೆ1).

ಕುಸ್ತಿಪಟು 'ಟೈಗರ್' ಬಾಲಾಜಿ ಇನ್ನಿಲ್ಲ

ಪ್ರಜಾವಾಣಿ ವಾರ್ತೆ

ಮೈಸೂರು: ಕುಸ್ತಿಪಟು, ಸುಣ್ಣದಕೇರಿ ನಿವಾಸಿ 'ಟೈಗರ್' ಬಾಲಾಜಿ ಜೆಟ್ಟಿ (68) ಅನಾರೋಗ್ಯದಿಂದ ಇಲ್ಲಿನ ಆಸ್ಪತ್ರೆಯಲ್ಲಿ ಶುಕ್ರವಾರ ನಿಧನರಾದರು.



ಅವರಿಗೆ ಪುತ್ರ ಇದ್ದಾರೆ. ಕೆಲ ವರ್ಷದ ಹಿಂದೆ ಪತ್ನಿ ಮತ್ತು ಮತ್ತೊಬ್ಬ ಪುತ್ರ ಮೃತಪಟ್ಟಿದ್ದರು.

ಆಕ್ರಮಣ ಶೈಲಿಯ ಪಟ್ಟು, ಆಟದಿಂದ ನಾಡಕುಸ್ತಿ ಪ್ರಿಯರಲ್ಲಿ 'ಟೈಗರ್' ಎಂದೇ ಖ್ಯಾತರಾಗಿದ್ದ ಅವರು, ರಾಜ್ಯ ಮತ್ತು ರಾಷ್ಟ್ರ ಮಟ್ಟದ 350ಕ್ಕೂ ಹೆಚ್ಚು ಸ್ಪರ್ಧೆಗಳಲ್ಲಿ ಗೆದ್ದಿದ್ದರು. ಮೈಸೂರಿನ ಕುಸ್ತಿ ಪರಂಪರೆಯಲ್ಲಿ ಅಚ್ಚಳಿಯದ ಹೆಸರು ಮಾಡಿದ್ದರು.

ಅಂಬಾವಿಲಾಸ ಅರಮನೆಯಲ್ಲಿ ನಾಡಹಬ್ಬ ದಸರಾ ಮಹೋತ್ಸವದ ವಿಜಯದಶಮಿಯಂದು ನಡೆಯುವ ವಜ್ರಮುಷ್ಟಿ ಕಾಳಗದ ಉಸ್ತಾದ್ ಆಗಿದ್ದರು. ದಶಕಗಳಿಂದ ನೂರಾರು ಪೈಲ್ವಾನರಿಗೆ ತರಬೇತಿ ನೀಡಿದ್ದರು. ಅವರ ತಾತ ರಾಮಜೆಟ್ಟಪ್ಪ ಅಗರಬತ್ತಿ ಉದ್ಯಮಿಯಾಗಿದ್ದರೆ, ತಂದೆ ಎಂ.ಆರ್. ಸುದರ್ಶನ್ ಕೂಡ ಕುಸ್ತಿಪಟುವಾಗಿದ್ದರು. ಚಾಮುಂಡಿ ಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ಶನಿವಾರ (ಜ.31) ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬವು ತಿಳಿಸಿದೆ.

ಪಾಕಿಸ್ತಾನಕ್ಕೆ ಮಣಿದ ಆಸ್ಟ್ರೇಲಿಯಾ

ಲಾಹೋರ್ (ಎಪಿ): ಸಾಂಘಿಕ ಆಟ ಪ್ರದರ್ಶಿಸಿದ ಪಾಕಿಸ್ತಾನ ತಂಡವು ಎಂಟು ವರ್ಷಗಳ ಬಳಿಕ ಮೊದಲ ಬಾರಿಗೆ ಆಸ್ಟ್ರೇಲಿಯಾ ತಂಡವನ್ನು ಟಿ20 ಪಂದ್ಯದಲ್ಲಿ ಸೋಲಿಸಿತು.

ಗುರುವಾರ ನಡೆದ ಪಂದ್ಯದಲ್ಲಿ ಪಾಕ್ ತಂಡವು 22 ರನ್‌ಗಳ ಗೆಲುವು ಸಾಧಿಸಿತು. ಇದರೊಂದಿಗೆ ಮೂರು ಪಂದ್ಯಗಳ ಸರಣಿಯಲ್ಲಿ 1-0 ಮುನ್ನಡೆ ಸಾಧಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಆತಿಥೇಯ ತಂಡವು ಸೈಮ್ ಅಯೂಬ್ (40) ಮತ್ತು ನಾಯಕ ಸಲ್ಮಾನ್ ಆಘಾ (39) ಅವರ ಆಟದ ನೆರವಿನಿಂದ 8 ವಿಕೆಟ್‌ಗೆ 168 ರನ್ ಗಳಿಸಿತು. ಟ್ರಾವಿಸ್ ಹೆಡ್ ನಾಯಕತ್ವದ ತಂಡವು 8 ವಿಕೆಟ್‌ಗೆ 146 ರನ್ ಗಳಿಸಲಷ್ಟೇ ಶಕ್ತವಾಯಿತು.

ಭಾರತ–ನ್ಯೂಜಿಲೆಂಡ್ ಕೊನೆಯ ಟಿ20 ಪಂದ್ಯ ಇಂದು

ತವರಿನಲ್ಲಿ ಲಯಕ್ಕೆ ಮರಳುವರೇ ಸಂಜು

ತಿರುವನಂತಪುರ (ಪಿಟಿಐ): ವಿಕೆಟ್‌ಕೀಪರ್–ಬ್ಯಾಟರ್ ಸಂಜು ಸ್ಯಾಮ್ಸನ್ ತಮ್ಮ ತವರಿನ ಅಂಗಳದಲ್ಲಿ ಲಯಕ್ಕೆ ಮರಳುವರೇ? ಆಲ್‌ರೌಂಡರ್ ಅಕ್ಷರ್ ಪಟೇಲ್ ಪೂರ್ಣಪ್ರಮಾಣದಲ್ಲಿ ಫಿಟ್ ಆಗಿ ಕಣಕ್ಕಿಳಿಯುವರೇ?

ಶನಿವಾರ ಇಲ್ಲಿ ನಡೆಯಲಿರುವ ನ್ಯೂಜಿಲೆಂಡ್ ಎದುರಿನ ಟಿ20 ಕ್ರಿಕೆಟ್ ಸರಣಿಯ ಐದನೇ ಮತ್ತು ಅಂತಿಮ ಪಂದ್ಯದಲ್ಲಿ ಭಾರತ ತಂಡವು ಉತ್ತರ ಹುಡುಕುತ್ತಿರುವ ಪ್ರಮುಖ ಪ್ರಶ್ನೆಗಳು ಇವು. ಮುಂದಿನ ತಿಂಗಳು ಆರಂಭವಾಗಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಲಿರುವ ಆಟಗಾರರಿಗೆ ಪೂರ್ವಭಾವಿ ಸಿದ್ಧತೆಗಾಗಿ ಸಿಗಲಿರುವ ಕೊನೆಯ ಪಂದ್ಯ ಇದಾಗಿದೆ. ಆದ್ದರಿಂದ ಮಹತ್ವ ಪಡೆದಿದೆ.

ಸದ್ಯ ಸರಣಿಯನ್ನು 3-1ರಿಂದ ಕೈವಶ ಮಾಡಿಕೊಂಡಿರುವ ಆತಿಥೇಯ ತಂಡವು ಕೊನೆಯ ಪಂದ್ಯದಲ್ಲಿಯೂ ಗೆಲುವಿನೊಂದಿಗೆ ಸಂಭ್ರಮಿಸುವ ಛಲದಲ್ಲಿದೆ. ಅದಕ್ಕಾಗಿ ಕಳೆದ ಪಂದ್ಯದಲ್ಲಿ ಆಗಿರುವ ಲೋಪಗಳನ್ನು ತಿದ್ದಿಕೊಳ್ಳಲು ಒಂದು ಅವಕಾಶವೂ ಇದಾಗಿದೆ.

ಇನಿಂಗ್ಸ್ ಆರಂಭಿಸುವ ಸಂಜು ಮತ್ತು ಅಭಿಷೇಕ್ ಶರ್ಮಾ ಅವರು ಹೆಚ್ಚು ರನ್ ಕಲೆಹಾಕಿದರೆ ಮುಂದೆ ಬರುವ ಬ್ಯಾಟರ್‌ಗಳಿಗೆ ಒತ್ತಡ ಕಡಿಮೆಯಾಗುತ್ತದೆ. ಚೇಸಿಂಗ್ ಮಾಡುವಾಗಲಂತೂ ಉತ್ತಮ ಮತ್ತು ವೇಗದ ರನ್ ಗಳಿಕೆಯ ಆರಂಭ ಮುಖ್ಯವಾಗುತ್ತದೆ. ಸರಣಿಯ ನಾಲ್ಕನೇ ಪಂದ್ಯದಲ್ಲಿ ದೊಡ್ಡ ಮೊತ್ತ ಬೆನ್ನಟ್ಟಿದ್ದ ಆತಿಥೇಯ ತಂಡಕ್ಕೆ ಪೆಟ್ಟು ಬಿದ್ದಿದ್ದು ಇದೇ ವಿಷಯದಲ್ಲಿ. ಅಭಿಷೇಕ್ 'ಗೋಲ್ಡನ್ ಡಕ್' ಆದರು. ಆದರೆ ಸಂಜು ಸತತ ನಾಲ್ಕನೇ ಪಂದ್ಯದಲ್ಲಿಯೂ ತಮ್ಮ ಸಾಮರ್ಥ್ಯ ತೋರಲಿಲ್ಲ. ಸೂರ್ಯಕುಮಾರ್ ಯಾದವ್ ಕೂಡ ಬೇಗನೆ ನಿರ್ಗಮಿಸಿದರು. ಇಶಾನ್ ಕಿಶನ್ ಇರಲಿಲ್ಲ. ಆದರೆ ಶಿವಂ ದುಬೆ ಏಕಾಂಗಿ ಹೋರಾಟದಿಂದಾಗಿ ತಂಡವು ಅಲ್ಪಮೊತ್ತಕ್ಕೆ ಆಲೌಟ್ ಆಗಲಿಲ್ಲ. ದುಬೆ ಅವರು ಕ್ರೀಸ್‌ನಲ್ಲಿದ್ದಷ್ಟು ಹೊತ್ತು ಗೆಲುವಿನ ಆಶಾಕಿರಣ ಇತ್ತು.



ಭಾರತ ತಂಡದ ಸಂಜು ಸ್ಯಾಮ್ಸನ್, ಸೂರ್ಯಕುಮಾರ್ ಯಾದವ್, ವರುಣ್ ಚಕ್ರವರ್ತಿ ತಿರುವನಂತಪುರ ವಿಮಾನ ನಿಲ್ದಾಣದಲ್ಲಿ ಬಂದಿಳಿದರು ಪಿಟಿಐ ಚಿತ್ರ

ಈ ಪಂದ್ಯದಲ್ಲಿ ಇಶಾನ್ ಕಿಶನ್ ಕಣಕ್ಕಿಳಿಯುವುದು ಬಹುತೇಕ ಖಚಿತ. ಅದರೊಂದಿಗೆ ಅಕ್ಷರ್ ಪಟೇಲ್ ಅವರ ಫಿಟ್‌ನೆಸ್ ಪರೀಕ್ಷೆ ಕೂಡ ಇದೆ.

ಕಳೆದ ಪಂದ್ಯದಲ್ಲಿ ಸ್ಪಿನ್ನರ್ ವರುಣ್ ಚಕ್ರವರ್ತಿ ಅವರಿಗೆ ವಿಶ್ರಾಂತಿ ನೀಡಲಾಗಿತ್ತು. ಅದರಿಂದಾಗಿ ಬೌಲಿಂಗ್ ವಿಭಾಗದಲ್ಲಿ ಕೊರತೆ ಕಂಡಿತು. ವೇಗಿ ಹರ್ಷಿತ್ ರಾಣಾ ದುಬಾರಿಯಾಗಿದ್ದರು. ವಿಕೆಟ್ ಕೂಡ ಪಡೆಯಲಿಲ್ಲ.

ಕುಲದೀಪ್ ಯಾದವ್ ಮತ್ತು ವೇಗಿ ಅರ್ಷದೀಪ್ ಸಿಂಗ್ ಅವರು ತಲಾ 2 ವಿಕೆಟ್ ಗಳಿಸಿದ್ದರು. ಆದರೆ ಟಿಮ್ ಸೀಫರ್ಟ್ ಮತ್ತು ಡೆವಾನ್ ಕಾನ್ವೆ ಅವರನ್ನು ಕಟ್ಟಿಹಾಕುವಲ್ಲಿ ಬೌಲರ್‌ಗಳು ಯಶಸ್ವಿಯಾಗಲಿಲ್ಲ. ಈ ಪಂದ್ಯಕ್ಕೆ ವರುಣ್ ಮರಳುವ ನಿರೀಕ್ಷೆ ಇದೆ.

ಇಲ್ಲಿಯ ಪಿಚ್ ಕೂಡ ಸ್ಪಿನ್ನರ್‌ಗಳಿಗೆ ಹೆಚ್ಚು ನೆರವು ನೀಡುವ ಸಾಧ್ಯತೆ ಇದೆ. ಆದ್ದರಿಂದ ಟಾಸ್ ಗೆದ್ದವರು ತೆಗೆದುಕೊಳ್ಳುವ ತೀರ್ಮಾನವೂ ಮುಖ್ಯವಾಗಲಿದೆ.

ಪಂದ್ಯ ಆರಂಭ: ರಾತ್ರಿ 7
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ವಿಶ್ವಕಪ್ ಟೂರ್ನಿಗೆ ತೆರಳಲಿರುವ ಪಾಕ್?

ಲಾಹೋರ್ (ಪಿಟಿಐ): ಪಾಕಿಸ್ತಾನ ಕ್ರಿಕೆಟ್ ತಂಡವು ಮುಂಬರುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡಲು ಫೆಬ್ರುವರಿ 2ರಂದು ಶ್ರೀಲಂಕೆಗೆ ತೆರಳಲಿದೆ ಎಂದು ಮೂಲಗಳು ಖಚಿತಪಡಿಸಿವೆ. ಇದರಿಂದಾಗಿ ಪಾಕಿಸ್ತಾನವು ವಿಶ್ವಕಪ್ ಟೂರ್ನಿಯನ್ನು ಬಹಿಷ್ಕರಿಸುವ ನಿರ್ಧಾರ ಕೈಬಿಟ್ಟಿದೆ ಎಂದು ಹೇಳಲಾಗಿದೆ.

ಈಚೆಗೆ ಬಾಂಗ್ಲಾದೇಶ ತಂಡವನ್ನು ಟೂರ್ನಿಯಿಂದ ಐಸಿಸಿಯು ಹೊರ ಹಾಕಿತ್ತು. ಐಸಿಸಿಯ ಈ ನಿರ್ಣಯವನ್ನು ಖಂಡಿಸಿದ್ದ ಪಾಕ್ ತಂಡವು ಟೂರ್ನಿಯನ್ನು ಬಹಿಷ್ಕರಿಸುವುದಾಗಿ ಹೇಳಿತ್ತು.

'ಪಾಕ್ ಕ್ರಿಕೆಟ್ ಮಂಡಳಿಯುವ ಆಟಗಾರರ ಪ್ರಯಾಣಕ್ಕೆ ಈಗಾಗಲೇ ಎಲ್ಲ ವ್ಯವಸ್ಥೆಗಳನ್ನು ಮಾಡಿದೆ. ಕೊಲಂಬೊಗೆ ಫೆ.2ರಂದು ತಂಡವು ತೆರಳಿದೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಫೆ. 15ರಂದು ಪಾಕ್ ತಂಡವು ಭಾರತ ತಂಡದ ಎದುರು ಆಡಲಿದೆ.

ಎಲಿಮಿನೇಟರ್‌ಗೆ ಗುಜರಾತ್ ಜೈಂಟ್ಸ್

ವಡೋದರ (ಪಿಟಿಐ): ಗುಜರಾತ್ ಜೈಂಟ್ಸ್ ತಂಡವು ಶುಕ್ರವಾರ ಮಹಿಳಾ ಪ್ರೀಮಿಯರ್ ಲೀಗ್‌ನ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡವನ್ನು 11 ರನ್‌ಗಳಿಂದ ಮಣಿಸಿ, ಮಂಗಳವಾರ ನಡೆಯುವ ಎಲಿಮಿನೇಟರ್‌ಗೆ ಅರ್ಹತೆ ಪಡೆಯಿತು.

ಮಹಿಳಾ ಪ್ರೀಮಿಯರ್ ಲೀಗ್

ಕೋತಂಬಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 168 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಮುಂಬೈ ತಂಡವು 7 ವಿಕೆಟ್‌ಗೆ 156 ರನ್ ಗಳಿಸಲಷ್ಟೇ ಶಕ್ತವಾಯಿತು. ನಾಯಕಿ ಹರ್ಮನ್‌ಪ್ರೀತ್ ಕೌರ್ (ಔಟಾಗದೇ 82; 48ಎ, 4x8, 6x4) ಅವರ ಹೋರಾಟಕ್ಕೆ ಫಲ ಸಿಗಲಿಲ್ಲ. ಮುಂಬೈ ವಿರುದ್ಧ ಸತತ ಎಂಟು ಸೋಲುಗಳ ನಂತರ ಗುಜರಾತ್ ತಂಡಕ್ಕೆ (10 ಅಂಕ) ದೊರೆತ ಮೊದಲ ಗೆಲುವು ಇದಾಗಿದೆ.

ಎರಡು ಬಾರಿಯ ಚಾಂಪಿಯನ್ ಮುಂಬೈ (6 ಅಂಕ) ತಂಡದ ಪ್ಲೇ ಆಫ್ ಭವಿಷ್ಯ ಭಾನುವಾರ ನಡೆಯುವ ಡೆಲ್ಲಿ ಕ್ಯಾಪಿಟಲ್ಸ್ (6 ಅಂಕ) ಮತ್ತು ಯು.ಪಿ ವಾರಿಯರ್ಸ್ (4 ಅಂಕ) ಪಂದ್ಯದ ಮೇಲೆ ನಿಂತಿದೆ. ಆ ಪಂದ್ಯದಲ್ಲಿ ವಾರಿಯರ್ಸ್ ಗೆದ್ದರೆ ಮುಂಬೈ ತಂಡಕ್ಕೆ 'ಅದೃಷ್ಟ'ದ ಬಾಗಿಲು ತೆರೆಯಲಿದೆ.



ಜಾರ್ಜಿಯಾ ವೆರ್ಹ್ಯಾಮ್ ಪಿಟಿಐ ಚಿತ್ರ

ಮುಂಬೈ ತಂಡದ ಆರಂಭ ಉತ್ತಮವಾಗಿರಲಿಲ್ಲ. 37 ರನ್ ಗಳಿಸುವಷ್ಟರಲ್ಲಿ ಪ್ರಮುಖ ಮೂರು ಬ್ಯಾಟರ್‌ಗಳು ಪೆವಿಲಿಯನ್ ಸೇರಿದ್ದರು. ಹರ್ಮನ್‌ಪ್ರೀತ್ ಮತ್ತು ಅಮೆಲಿಯಾ ಕೆರ್ (20) ಅವರೊಂದಿಗೆ ನಾಲ್ಕನೇ ವಿಕೆಟ್‌ಗೆ 45 ರನ್ ಸೇರಿಸಿದರು. ಒಂದೆಡೆ ವಿಕೆಟ್‌ಗಳು ಉರುಳುತ್ತಿದ್ದರೆ, ಮತ್ತೊಂದೆಡೆ ಹರ್ಮನ್‌ಪ್ರೀತ್ ಜವಾಬ್ದಾರಿಯುತ ಆಟ ಪ್ರದರ್ಶಿಸಿದರು. ಆದರೆ, ಅವರಿಗೆ ಇನ್ನೊಂದು ಕಡೆಯಿಂದ ಬೆಂಬಲ ಸಿಗಲಿಲ್ಲ.



ಹರ್ಮನ್‌ಪ್ರೀತ್

ಇದಕ್ಕೂ ಮೊದಲು ಟಾಸ್ ಗೆದ್ದ ಜೈಂಟ್ಸ್ ಬ್ಯಾಟಿಂಗ್ ಆಯ್ದುಕೊಂಡಿತು. ನಾಯಕಿ ಆ್ಯಷ್ಲೆ ಗಾರ್ಡನರ್ (46;28ಎ) ಮತ್ತು ಜಾರ್ಜಿಯಾ ವೆರ್ಹ್ಯಾಮ್ (ಔಟಾಗದೇ 44;26ಎ) ಅವರ ಬ್ಯಾಟಿಂಗ್ ಬಲದಿಂದ ಗುಜರಾತ್ ಸ್ಪರ್ಧಾತ್ಮಕ ಮೊತ್ತ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಗುಜರಾತ್ ಜೈಂಟ್ಸ್: 20 ಓವರ್‌ಗಳಲ್ಲಿ 4ಕ್ಕೆ167 (ಸೋಫಿ ಡಿವೈನ್ 25, ಅನುಷ್ಕಾ ಶರ್ಮಾ 33, ಆ್ಯಷ್ಲೆ ಗಾರ್ಡನರ್ 46, ಜಾರ್ಜಿಯಾ ವೆರ್ಹ್ಯಾಮ್ ಔಟಾಗದೇ 44, ಅಮೆಲಿಯಾ ಕೆರ್ 26ಕ್ಕೆ2). ಮುಂಬೈ ಇಂಡಿಯನ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 156 (ಸಂಜೀವನ ಸಂಜನಾ 26, ಹರ್ಮನ್‌ಪ್ರೀತ್ ಕೌರ್ ಔಟಾಗದೇ 82; ಸೋಫಿ 23ಕ್ಕೆ 2, ಜಾರ್ಜಿಯಾ 26ಕ್ಕೆ 2). ಪಂದ್ಯದ ಆಟಗಾರ್ತಿ: ಜಾರ್ಜಿಯಾ

ತಂಡದ ಮೂಲಗಳಿಂದ ಮಾಹಿತಿ • ಶಿಬಿರಕ್ಕೆ ಮೂವರು ಆಟಗಾರರ ಕೈಬಿಟ್ಟ ಹಾಕಿ ಇಂಡಿಯಾ

ಮನ್‌ಪ್ರೀತ್ ತಲೆದಂಡಕ್ಕೆ ಅಶಿಸ್ತು ಕಾರಣ?

ನವದೆಹಲಿ (ಪಿಟಿಐ): ಡಿಸೆಂಬರ್‌ನಲ್ಲಿ ಭಾರತ ತಂಡದ ದಕ್ಷಿಣ ಆಫ್ರಿಕಾ ಪ್ರವಾಸದ ವೇಳೆ ಅನುಭವಿ ಮನ್‌ಪ್ರೀತ್ ಸಿಂಗ್ ಸೇರಿದಂತೆ ಮೂವರು ಆಟಗಾರರು ಗಂಭೀರ ಸ್ವರೂಪದ ಅಶಿಸ್ತಿನ ನಡವಳಿಕೆ ತೋರಿದ್ದರಿಂದ, ಹಾಕಿ ಇಂಡಿಯಾವು ಪ್ರೊ ಲೀಗ್ ಟೂರ್ನಿಯ ಸಂಭವನೀಯರ ಪಟ್ಟಿಯಿಂದ ಅವರನ್ನು ಕೈಬಿಟ್ಟಿದೆ ಎಂಬ ಮಾತುಗಳು ಕೇಳಿಬಂದಿವೆ.

ಮುಂಬರುವ ಪ್ರೊ ಲೀಗ್ ಋತುವಿಗೆ ಮೊದಲು ಫೆಬ್ರುವರಿ 1 ರಿಂದ 7ರವರೆಗೆ ರೂರ್ಕೆಲಾದಲ್ಲಿ ನಡೆಯಲಿರುವ ಸಂಭವನೀಯರ ಶಿಬಿರಕ್ಕೆ ಹಾಕಿ ಇಂಡಿಯಾ 33 ಆಟಗಾರರ ಪಟ್ಟಿಯನ್ನು ಗುರುವಾರ ಪ್ರಕಟಿಸಿತ್ತು. ಇದರಲ್ಲಿ ಹಿರಿಯ ಮಿಡ್‌ಫೀಲ್ಡರ್ ಮನ್‌ಪ್ರೀತ್ ಸಿಂಗ್, ದಿಲ್‌ಪ್ರೀತ್ ಸಿಂಗ್ ಮತ್ತು ಗೋಲ್ ಕೀಪರ್ ಕೃಷನ್ ಬಹಾದ್ದೂರ್ ಪಾಠಕ್ ಅವರಿಗೆ ಸ್ಥಾನ ಕಲ್ಪಿಸದಿರುವುದು ಅಚ್ಚರಿಗೆ ಕಾರಣವಾಗಿತ್ತು.



ಮನ್‌ಪ್ರೀತ್ ಸಿಂಗ್

ಭಾರತ ತಂಡವು ಡಿಸೆಂಬರ್ 2ರಿಂದ 16ರ ಅವಧಿಯಲ್ಲಿ ಟೆಸ್ಟ್ ಸರಣಿ ಆಡಲು ದಕ್ಷಿಣ ಆಫ್ರಿಕಾ ಪ್ರವಾಸ ಕೈಗೊಂಡಿತ್ತು. ಇದರಲ್ಲಿ ಮೊದಲ ಎರಡು ಪಂದ್ಯಗಳಲ್ಲಿ ಸೋಲು ಅನುಭವಿಸಿದ್ದ ತಂಡವು, ಅಂತಿಮ ಪಂದ್ಯವನ್ನು ಡ್ರಾ ಮಾಡಿಕೊಂಡಿತ್ತು.

'ಈ ವೇಳೆಯೇ ಅಶಿಸ್ತಿನ ನಡವಳಿಕೆ ನಡೆದಿರುವುದು ಬಯಲಿಗೆ ಬಂದಿದೆ. ತಂಡದ ಸಭೆಗೆ ಆಟಗಾರರೊಬ್ಬರು ಗೈರು ಹಾಜರಾಗಿದ್ದರು. ಈ ಆಟಗಾರನಿಗೆ ಮನ್‌ಪ್ರೀತ್, ದಿಲ್‌ಪ್ರೀತ್ ಮತ್ತು ಪಾಠಕ್ ಅವರು ನಿಷೇಧಿತ ಮಾದಕವಸ್ತುವನ್ನು ಮಿಶ್ರಣ ಮಾಡಿದ ಚ್ಯುಯಿಂಗ್ ಗಮ್ ನೀಡಿದ್ದಾರೆನ್ನಲಾಗಿದೆ. ಅದನ್ನು ಸೇವಿಸಿದ ಆ ಆಟಗಾರ ಪ್ರಜ್ಞೆ ಕಳೆದುಕೊಂಡಿದ್ದಾರೆ' ಎಂದು ಮೂಲವೊಂದು ಪಿಟಿಐಗೆ ತಿಳಿಸಿದೆ.

ರಾಜೀನಾಮೆಗೆ ಮುಂದಾಗಿದ್ದ ಫುಲ್ಟನ್

ಪ್ರೊ ಲೀಗ್ ಹಾಕಿ ಶಿಬಿರಕ್ಕೆ ಸಂಭವನೀಯರ ಪಟ್ಟಿಯಿಂದ ಅನುಭವಿ ಆಟಗಾರ ಮನ್‌ಪ್ರೀತ್ ಸಿಂಗ್ ಅವರನ್ನು ಕೈಬಿಟ್ಟಿದ್ದನ್ನು ವಿರೋಧಿಸಿದ ಚೀಫ್ ಕೋಚ್ ಕ್ರೇಗ್ ಫುಲ್ಟನ್ ಅವರು ತಮ್ಮ ಸ್ಥಾನ ತ್ಯಜಿಸಲು ಮುಂದಾಗಿದ್ದರು. ಆದರೆ ಸ್ಥಾನದಲ್ಲಿ ಮುಂದುವರಿಯಂತೆ ಹಾಕಿ ಇಂಡಿಯಾ ಅವರ ಮನವೊಲಿಸಿತು ಎಂದು ಮೂಲವೊಂದು ಪಿಟಿಐಗೆ ಶುಕ್ರವಾರ ತಿಳಿಸಿದೆ.

ಅಶಿಸ್ತಿನ ವರದಿ ತಳ್ಳಿಹಾಕಿದ ಮನ್‌ಪ್ರೀತ್: 'ವಿಶ್ರಾಂತಿ ಪಡೆಯಲು ಮತ್ತು ಕುಟುಂಬದ ಜೊತೆ ಕಳೆಯಲು ತಾವು ಆಟದಿಂದ ಕೆಲ ಸಮಯ ಬಿಡುವು ಕೇಳಿದ್ದಾಗಿ' ಭಾರತ ಹಾಕಿ ತಂಡದ ಮಾಜಿ ನಾಯಕ ಮನ್‌ಪ್ರೀತ್ ಸಿಂಗ್ ಶುಕ್ರವಾರ ತಿಳಿಸಿದ್ದಾರೆ.

ಅಶಿಸ್ತಿನ ಕಾರಣ ತಮ್ಮನ್ನು ತಂಡದಿಂದ ಕೈಬಿಡಲಾಗಿದೆ ಎಂಬ ವರದಿಗಳನ್ನು ಅವರು ತಳ್ಳಿಹಾಕಿದ್ದಾರೆ. ಲವಲವಿಕೆಯಿಂದ ಮರಳಲು ಅವಕಾಶವಾಗುವಂತೆ ಕೆಲಕಾಲ ಬಿಡುವು ಪಡೆದಿರುವುದಾಗಿ ಅವರು ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ.

'ಪ್ಯಾರಿಸ್ ಒಲಿಂಪಿಕ್ಸ್ ನಂತರ ನನಗೆ ಬಿಡುವೇ ದೊರೆತಿರಲಿಲ್ಲ. ಒಂದರ ನಂತರ ಒಂದು ಟೂರ್ನಿಗಳು. ಏಷ್ಯಾ, ಯುರೋಪ್, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ..' ಎಂದು ಮನ್‌ಪ್ರೀತ್ ಎಕ್ಸ್‌ನಲ್ಲಿ ಪೋಸ್ಟ್ ಹಾಕಿದ್ದಾರೆ.

'ಚ್ಯುಯಿಂಗ್ ಗಮ್ ಅಗಿದ ಆಟಗಾರನಿಗೆ ನಂತರ ಅಮಲು ಹಾಗೂ ವಾಕರಿಕೆಯಾಗಿದೆ. ಈ ವಿಷಯ ನಂತರ ತರಬೇತಿ ಸಿಬ್ಬಂದಿ ಗಮನಕ್ಕೆ ಬಂದಿದೆ. ಆಟಗಾರನ ಮೇಲೆ ಅಂದು ರಾತ್ರಿಯಿಡೀ ನಿಗಾ ವಹಿಸಲಾಯಿತು. ಮರುದಿನದ ತಂಡದ ಸಭೆಗೆ ಹೋಗಲೂ ಅವರಿಗೆ ಆಗಲಿಲ್ಲ. ಆಟಗಾರನಿಗೆ ಇದನ್ನು ಪೂರೈಸಿದ್ದು ಈ ಮೂವರು ಆಟಗಾರರೆಂದು ತಿಳಿದುಬಂದಿತ್ತು' ಎಂದೂ ತಿಳಿಸಿದೆ.

ಈ ಮೂವರು ಆಟಗಾರರು ನಂತರ ಕ್ಷಮೆಯಾಚಿಸಿದ್ದಾರೆ. ಆದರೆ, ತಂಡದ ಆಡಳಿತ ಈ ಬಗ್ಗೆ ಬಲವಾದ ಆಕ್ಷೇಪ ವ್ಯಕ್ತಪಡಿಸಿತು. ಪರಿಣಾಮ ಅವರಿಗೆ ಸಂಭವನೀಯರ ಪಟ್ಟಿಯಿಂದ ಕೊಕ್ ನೀಡಲಾಯಿತು ಎಂದು ವಿವರಿಸಿದೆ.

ಆದರೆ ಕೋಚ್ ಕ್ರೇಗ್ ಫುಲ್ಟನ್ ಅವರು ಹಾಕಿ ಇಂಡಿಯಾಕ್ಕೆ ಈ ಬಗ್ಗೆ ಯಾವುದೇ ಲಿಖಿತ ವರದಿ ಸಲ್ಲಿಸಿರಲಿಲ್ಲ ಎನ್ನಲಾಗಿದೆ.